ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ನೋಟಿಫಿಕೇಶನ್ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಪ್ರೋಸೆಷನ್‌ನಲ್ಲಿ ಇರುವ ಹಾಗೇ ಇಲ್ಲ.

ಶ್ರೀ ಕೆ.ಹೆಚ್.ರಂಗನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎನ್. ಸುಬ್ಬಾರೆಡ್ಡಿಯವರು ಈ ಪ್ರಶ್ನೆಯನ್ನು ಎತ್ತುವುದಕ್ಕೆ ಮುಂಚೆ ಈ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕಾಗಿತ್ತು. ರೂಲ್ಸ್ ಆಫ್ ಪ್ರೋಸೀಜರ್ ಪ್ರಕಾರ ನಿನ್ನೆ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ ನಂತರ ಮತ್ತೆ ನಮ್ಮ ಸಭೆ ಇಲ್ಲಿ ಸೇರಿದ ಮೇಲೆಯೇ ತಾವು ಸಭೆಯನ್ನು ಮುಂದೂಡಿದ್ದೀರಿ. ಆ ಫಾರ್ಮಾಲಿಟೀಸ್ ಅಬ್ಸರ್ವ್ ಆಗಿದೆ. It is very bad on the part of the Hon'ble Member... ಅಧ್ಯಕ್ಷರ ಮೇಲೆ ರಿಫ್ಲೆಕ್ಷನ್ ಆಗುವಂತಹ ರೀತಿಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಒಳ್ಳೆಯದಲ್ಲ. ದಯಮಾಡಿ ತಾವು ಈ ಬಗ್ಗೆ ಒಂದು ರೂಲಿಂಗ್ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಇಂತಹ ಸಣ್ಣಪುಟ್ಟ ವಿಚಾರಕ್ಕೆಲ್ಲಾ ಗೊಂದಲಮಯ ವಾತಾವರಣ ನಿರ್ಮಾಣ ಮಾಡುವಂಥಾದ್ದು ಒಂದು ಹವ್ಯಾಸವಾಗಿ ಬಿಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಹೇಳುತ್ತಾ ಇಲ್ಲ, ಇದನ್ನು ವಿಷಯಾಂತರ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣವಾದ ಮೇಲೆ ಪ್ರತ್ಯೇಕವಾಗಿ ಸಭೆ ಸೇರಿ ಬಿಸಿನೆಸ್ ಟ್ರಾನ್‌ಸ್ಯಾಕ್ಷನ್ ಆಗಿದೆ, ತದನಂತರ ತಾವು ಸಭೆಯನ್ನು ಅಡ್‌ಜರ್ನ್ ಮಾಡಿದ್ದೀರಿ. It is a very sad reflection on the Chair. Hon'ble Member will have to remember all these things.

ಅಧ್ಯಕ್ಷರು: ಅದರ ಬಗ್ಗೆ ನಾಳೆ ನಾನು ರೂಲಿಂಗ್ ಕೊಡುತ್ತೇನೆ.

8. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಎಸ್.ಜಿ.ನಂಜಯ್ಯನ ಮಠ್(ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಪ್ರಸ್ತಾಪಿಸಿರುವಂತಹ ಭಾಷಣವನ್ನು ನಾನು ಸಮರ್ಥಿಸುತ್ತಾ, ತಮ್ಮನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ಎರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಶ್ರೀ ಹೆಚ್.ಸಿದ್ದಯ್ಯನವರಿಂದ ಪ್ರಾರಂಭವಾದ ಒಂದು ಒಳ್ಳೆಯ ಪರಂಪರೆಯಾಗಿದ್ದು ಈ ಅಧ್ಯಕ್ಷ ಸ್ಥಾನದ ಘನತೆ, ಗೌರವ ಏನಿದೆ- ಇದು ಶ್ರೀಮಾನ್ ಎಸ್.ಆರ್.ಕಂಠಿ, ಶ್ರೀ ಕೊರಾವಳ್, ಶ್ರೀಮತಿ ಕೆ.ಎಸ್.ನಾಗರತ್ನಮ್ಮ, ಶ್ರೀ ಬಣಕಾರ್, ಶ್ರೀ ಡಿ.ಬಿ.ಚಂದ್ರೇಗೌಡ, ಶ್ರೀ ಕೆ.ಹೆಚ್.ರಂಗನಾಥ್, ಇವರುಗಳು ಮತ್ತು ಇವತ್ತಿನ ಮುಖ್ಯಮಂತ್ರಿಯಾಗಿರುವಂತಹ ಶ್ರೀ ಎಸ್.ಎಂ.ಕೃಷ್ಣರವರು ಮತ್ತು ಈ ಹಿಂದಿನ ಸರ್ಕಾರದಲ್ಲಿ ಅಧ್ಯಕ್ಷರಾಗಿದ್ದಂತಹ ಮಾನ್ಯ ರಮೇಶ್ ಕುಮಾರ್‌ರವರು ಇವರೆಲ್ಲರ ಅವಧಿಯಲ್ಲಿ ಆ ಒಂದು ಘನತೆ, ಗೌರವ, ಗಾಂಭೀರ್ಯವನ್ನು ಹೆಚ್ಚಿಸಿಕೊಂಡು ಬಂದಿರುವಂತಹ ಇತಿಹಾಸವಿದೆ. ಈ ವಿಚಾರದಲ್ಲಿ ತಾವು ಕೂಡ

ಅನುಭವಶಾಲಿಗಳು, ಸಂಸದೀಯ ವ್ಯವಸ್ಥೆಯನ್ನು ಅಭ್ಯಾಸ ಮಾಡಿರುವಂಥವರಾಗಿದ್ದೀರಿ. ತಾವು ಈ ಹಿಂದೆ ಈ ವ್ಯವಸ್ಥೆಯಲ್ಲಿ ಕೆಲಸ ಮಾಡಿದಂತಹ ದಕ್ಷರು, ನಿಷ್ಠೆಯುಳ್ಳವರಾಗಿದ್ದೀರಿ, ನಾನು ತಮ್ಮನ್ನು ಮೆಚ್ಚುತ್ತೇನೆ. ತಾವು ಕೇವಲ ಅಧ್ಯಕ್ಷರಾಗಿದ್ದೀರಿ ಎನ್ನುವಂತಹ ಉದ್ದೇಶದಿಂದ ಮಾತನ್ನು ನಾನು ಹೇಳುವುದಿಲ್ಲ. ಸುಮಾರು ಆರು ವರ್ಷಗಳ ಕಾಲ ಈ ರಾಜಕೀಯ ವ್ಯವಸ್ಥೆಯಲ್ಲಿ ನಿಮ್ಮ ಕೈ ಕೆಳಗೆ ಕೆಲಸ ಮಾಡಿರುವಂತಹ ಅನುಭವದಿಂದ ತಾವು ದಕ್ಷರು, ನಿಷ್ಠಾವಂತರು ಎನ್ನುವಂತಹ ಮಾತನ್ನು ಹೇಳುತ್ತಾ ತಮ್ಮನ್ನು ಅಭಿನಂದಿಸುತ್ತೇನೆ. ಇನ್ನು ಮಾನ್ಯ ರಾಜ್ಯಪಾಲರ ಭಾಷಣವನ್ನು ಸಮರ್ಥನೆ ಮಾಡುತ್ತಾ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ಕರ್ನಾಟಕ ರಾಜ್ಯದ ಮತದಾರ ಪ್ರಬುದ್ಧ, ಪ್ರಜ್ಞಾವಂತ, ಮತ್ತು ವಿವೇಚನಾಪೂರ್ಣವಾಗಿ ಮತದಾನವನ್ನು ಮಾಡುವಂತಹ ಮತದಾರ ಎನ್ನುವಂಥಾದ್ದನ್ನು ತೋರಿಸಿಕೊಟ್ಟಿದ್ದಾನೆ. ಇವತ್ತು ಕೇವಲ ಮತದಾರ ಇದನ್ನು ತೋರಿಸಿಕೊಟ್ಟಿದ್ದಾನೆಂದು ಮತ್ತೆ ನಾನು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ನಡೆದಿರತಕ್ಕಂಥ ಕಳೆದ ಐದು ಚುನಾವಣೆಗಳಲ್ಲಿ ಭಿನ್ನ ಭಿನ್ನವಾದಂತಹ ನಿರ್ಣಯವನ್ನು ತೆಗೆದುಕೊಂಡು ಬಂದಿರುವಂತಹ ಇತಿಹಾಸವಿದೆ. ಅದು 1983, 1985, 1989,1994, ಹಾಗೂ ಈಗ 1999ರಲ್ಲಿ ಈ ಎಲ್ಲಾ ಅವಧಿಗಳಲ್ಲೂ ಮತದಾರ ತನ್ನ ನಿರ್ಣಯವನ್ನು ಭಿನ್ನ ಭಿನ್ನವಾಗಿ ಮಾಡಿ ಯಾರ್ಯಾರನ್ನು ಎಲ್ಲೆಲ್ಲಿ ಕೂಡಿಸಬೇಕೆಂದು ನಿರ್ಣಯ ಅವನೇ ಸಮರ್ಥವಾಗಿ ತೆಗೆದುಕೊಂಡು ಬಂದಿರುವಂತಹ ಉದಾಹರಣೆಗಳು ಇವತ್ತು ನಮ್ಮ ಮುಂದೆ ಇದೆ. ಇಲ್ಲಿ ಮಾನ್ಯ ವಿರೋಧಪಕ್ಷದವರಿಗೆ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಈ ಸೋಲು ಆಗಿದ್ದರೆ, ಆಡಳಿತ ಪಕ್ಷದವರಿಗೆ ಜನತೆಗೆ ಕೆಲಸ ಮಾಡುವುದಕ್ಕಾಗಿ ಈ ಗೆಲುವು ಆಗಿದೆ, ಎನ್ನುವಂತಹ ಎಚ್ಚರಿಕೆಗೆ ನಾವು ಬರಬೇಕಾಗಿದೆ. ಈ ಐದು ಚುನಾವಣೆಗಳಲ್ಲಿ ಬೇರೆ ಬೇರೆ ನಿರ್ಣಯುವನ್ನು ಅದೇ ಮತದಾರರು ತೆಗೆದುಕೊಳ್ಳುವಂಥಾದ್ದು ನಮ್ಮ ಮುಂದೆ ಇವತ್ತು ಇದೆ. ಇವತ್ತು ವಿರೋಧಿ ಸ್ಥಾನದಲ್ಲಿ ಕುಳಿತಿರುವಂತಹ ಹಿಂದಿನ ಸರ್ಕಾರದ ನಮ್ಮ ಮಾನ್ಯ ಸ್ನೇಹಿತರು ಕೆಲಸವನ್ನು ಮಾಡದೇ ಇವರುವುದಕ್ಕೆ ಸೋತಿದ್ದಾರೆನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಸಾಧ್ಯವಾದಷ್ಟು ಕೆಲಸವನ್ನು ಮಾಡಿರಬಹುದು, ಮೊದಲೇ ಬೇಕಾದಷ್ಟು ಕೆಲಸವನ್ನು ಮಾಡದೆ ಇರಬಹುದು, ಇಲ್ಲ ಅಷ್ಟು ಕೆಲಸವನ್ನು ಮಾಡದೇ ಇದ್ದರೆನ್ನುವಂತಹ ಮಾತನ್ನು ನಾನು ಹೇಳವುದಕ್ಕೆ ಹೋಗುವುದಿಲ್ಲ. ಅವರು ಸಾಧ್ಯವಾದಷ್ಟು ಕೆಲಸವನ್ನು ಮಾಡಿದ್ದಾರೆ. ಆದರೆ ಕೆಲಸ ಹೆಚ್ಚಿಗೆ ಆಗಲಿ, ಕಡಿಮೆಯಾಗಲಿ, ಸರ್ಕಾರದಲ್ಲಿರುವಂತಹ ಒಗ್ಗಟ್ಟು, ಸಾಮರಸ್ಯ, ರಾಜಕೀಯ ಸ್ಥಿರತೆಯನ್ನು ಜನತೆ ಬಯಸುವಂಥಾದ್ದು ಆಗಿದೆ. ಆ ಒಂದು ರಾಜಕೀಯ ಅಸ್ಥಿರತೆ, ಒಳಜಗಳ, ಸಾಮರಸ್ಯ ಇಲ್ಲದಿರುವಂತಹ ಪರಿಸ್ಥಿತಿ ಉದ್ಭವವಾದಾಗ ನಾವು ಮಾಡಿರುವಂತಹ ಕೆಲಸಗಳು, ಅಲ್ಪಸ್ವಲ್ಪ ಪುಣ್ಯ ಕಾರ್ಯಗಳು ಪಾಪದಲ್ಲಿ ಕೊಚ್ಚಿ ಹೋಗುತ್ತದೆನ್ನುವಂಥಾದ್ದು ಇವತ್ತಿನ ಈ ಚುನಾವಣೆಯೇ ನಮ್ಮ ಎದುರಿಗೆ ಸಾಕ್ಷಿಯಾಗಿ ಇದೆ. ಇಂತಹ ಪರಿಸ್ಥಿತಿ 1983ರಿಂದ ಪುನರಾವರ್ತನೆಯಾಗುತ್ತಾ ಬಂದಿದೆ. ಆ ದಿಶೆಯಲ್ಲಿ ಇವತ್ತು ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಂದಿರುವಂತಹ ಅಂಶಗಳ ಕಡೆ ಗಮನಹರಿಸಿ ಆ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತದೆನ್ನುವಂಥ ಅಂಶ ಈ ಭಾಷಣದಿಂದ ತಿಳಿದು ಬರುತ್ತದೆ. ಇದರಲ್ಲಿ ಬರುವಂತಹ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಿ ಅದನ್ನು ಬಲಪಡಿಸುವಂತಹ ವಿಚಾರವೂ ಸಹ ಮೂಲತಃ ಪ್ರಸ್ತಾವನೆಯಾಗಿದೆ. ಇನ್ನು ದಿವಂಗತ ಮಾನ್ಯ ನಜೀರ್‌ಸಾಬ್ ಅವರನ್ನು ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಹಾಗೂ

ಜಿಲ್ಲಾ ಪಂಚಾಯತ್ ವಿಷಯದಲ್ಲಿ ನೆನಪು ಮಾಡಿಕೊಳ್ಳುವುದರ ಜೊತೆಗೆ ದಿವಂಗತ ಮಾನ್ಯ ರಾಜೀವ್ ಗಾಂಧಿಯವರನ್ನು ಸಹ ಸ್ಮರಣೆ ಮಾಡಿಕೊಳ್ಳುವಂತಹ ಸಂದರ್ಭವಾಗಿದೆ. ಈ ವ್ಯವಸ್ಥೆಯಲ್ಲಿ ಪರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದದವರು, ಮಹಿಳೆಯರು, ಹಾಗೂ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರುವಂತಹ ಜನಾಂಗದವರು ಅಧಿಕಾರದಲ್ಲಿ ಭಾಗಿಯಾಗುವಂತಹ ಅವಕಾಶವನ್ನು ಕಾನೂನು ರೀತಿಯಲ್ಲಿ ತಿದ್ದುಪಡಿ ಮಾಡಿರುವಂತಹ ಕೊಡಿಗೆಯನ್ನು ಮಾನ್ಯ ರಾಜೀವ್ ಗಾಂಧಿಯವರು ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಸಣ್ಣ ಸಣ್ಣ ಪಂಚಾಯತ್ ಇದೆ. ಅವುಗಳಿಗೆ ಇನ್ನು ಆರ್ಥಿಕವಾದಂತಹ ಸುಭದ್ರತೆಯನ್ನು ತಂದು ಕೊಡುವಂತಹ ಪ್ರಸ್ತಾವನೆ ಇವತ್ತಿನ ಮಾನ್ಯ ರಾಜ್ಯಪಾಲರ ಭಾಷಣದಲ್ಲಿದೆ. ಇವತ್ತು ಅವನ್ನು ಬಲಪಡಿಸುವಂತಹ ಗುರಿ ಹಾಗೂ ಪಕ್ಷದ ಮೂಲ ಉದ್ದೇಶ ಇದೆ. ಇದರಲ್ಲಿ ಗ್ರಾಮ ಸ್ವರಾಜ್ಯಕ್ಕೆ ಹೆಚ್ಚು ಒತ್ತನ್ನು ಕೊಡುವಂತಹ ವಿಚಾರವಿದೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ರಾಜ್ಯದ ಜನತೆಗೆ ವ್ಯಕ್ತಪಡಿಸುವಂಥಾದ್ದು; ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವುದರ ಮೂಲಕ ಆಡಳಿತ ನಿರ್ವಹಣೆಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡುವುದೇ ಮೂಲ ಉದ್ದೇಶವಾಗಿದೆ. ಹಿಂದಿನ ಸರ್ಕಾರ ಅವಸರದಲ್ಲಿ ದೊಡ್ಡ ಪಂಚಾಯಿತಿಯನ್ನು ಮಾಡುವುದಕ್ಕೆ ಹೋಯಿತು. ಇದರಿಂದ ಏನಾಯಿತೆಂದರೆ, ಸುಮಾರು 80 ಸಾವಿರ ಗ್ರಾಮ ಪಂಚಾಯತ್ ಸದಸ್ಯರು ಇವತ್ತು ಸಣ್ಣ ಪಂಚಾಯತ್‌ಗಳ ಮುಖಾಂತರ ಆರಿಸಿ ಬಂದರು. ಈ 80 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯತ್ ಸದಸ್ಯರಲ್ಲಿ ಪರಿಶಿಷ್ಟ ಪಂಗಡದವರು ಅಲ್ಪ ಸಂಖ್ಯಾತರು, ಮಹಿಳೆಯರು, ಹಿಂದುಳಿದ ವರ್ಗದವರು, ಮುಂದುವರೆದವರು, ಇವರೆಲ್ಲರಿಗೂ ನಾಯಕತ್ವದ ಅವಕಾಶವನ್ನು ಸಣ್ಣ ಗ್ರಾಮ ಪಂಚಾಯತ್ ಮೂಲಕ ಕೊಡುವಂಥಾದ್ದು ಆಗಿದೆ. ಇವತ್ತಿನ ಗ್ರಾಮ ಪಂಚಾಯತ್ ಸಚಿವರೇ ಗ್ರಾಮ ಪಂಚಾಯತ್ ಹೆಚ್ಚಿಗೆ ಮಾಡಿರುವಂಥಾದ್ದು, ಹೆಚ್ಚಿನ ಸಂಖ್ಯೆಯಲ್ಲಿ ಈ ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಎಲ್ಲರಿಗೂ ಪಾಲು ಕೊಡುವಂತಹ ವ್ಯವಸ್ಥೆಯನ್ನು ಮಾಡಿರುವುದನ್ನು ನೋಡಿದರೆ ಇದನ್ನು ಮುಂದುವರೆಸಿ ಕೊಂಡು ಹೋಗುವಂತಹ ವಿಚಾರ ಇಲ್ಲಿ ವ್ಯಕ್ತವಾಗುತ್ತದೆ. ಇದಕ್ಕೆ ಕಾರಣ ದಿವಂಗತ ಶ್ರೀ ರಾಜೀವ್‌ಗಾಂಧಿಯವರು ಆ ಕಾನೂನು ತಂದ ಮೇಲೆ ಈ ಪಂಚಾಯತ್ ವ್ಯವಸ್ಥೆ ಬಂದ ಮೇಲೆ ಮಾರ್ಪಾಡು ಆಗಿದೆ. ಇವತ್ತು ಸಮಾಜದಲ್ಲಿ ತುಳಿಯಲ್ಪಟ್ಟಿರುವಂತಹ ಜನಾಂಗ ನಾನು ಕೂಡ ಮುನಿಸಿಪಾಲಿಟಿಯ ಸದಸ್ಯನಾಗುವುದಕ್ಕೆ ಸಾಧ್ಯವೇ? ಅಧ್ಯಕ್ಷನಾಗುವುದಕ್ಕೆ ಸಾಧ್ಯವೇ? ನಾನು ಗ್ರಾಮ ಪಂಚಾಯತ್‌ನ ಸದಸ್ಯನಾಗುವುದಕ್ಕೆ ಸಾಧ್ಯವೇ? ಎಂದು ಸುಮಾರು ಐವತ್ತು ವರ್ಷಗಳಿಂದ ಪ್ರಶ್ನೆ ಹಾಕಿಕೊಂಡು ಬಂದಿರುವಂತಹ ಜನಾಂಗ ಇವತ್ತು ಅಧಿಕಾರಕ್ಕೆ ಬಂದು ಕುಳಿತಿದೆ. ಇವತ್ತು ನಾವೇ ನೋಡುತ್ತೇವೆ, ಸುಮಾರು 14 ಸಾವಿರ ಜನಸಂಖ್ಯೆ ಇರತಕ್ಕಂಥ, ಅದರಲ್ಲೂ ಬಹಳಷ್ಟು ಗೌಡರು, ಲಿಂಗಾಯಿತರು, ನೇಕಾರರು ಇರತಕ್ಕಂಥ ನನ್ನ ಸ್ವಂತ ಗ್ರಾಮದಲ್ಲಿ ಮಾದರ ದುರ್ಗಪ್ಪ ಎನ್ನತಕ್ಕಂಥವನನ್ನು ಇವತ್ತು ನಾವು ಗ್ರಾಮ ಪಂಚಾಯಿತಿಯ ಅಧ್ಯಕ್ಷರನ್ನಾಗಿ ನೇಮಿಸಿದ್ದೇವೆ. ಈ ಕಾನೂನು ಇಲ್ಲದೇ ಹೋಗಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ ಎನ್ನತಕ್ಕಂಥಾದ್ದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ನನ್ನ ಮತ ಕ್ಷೇತ್ರದ ಆರು ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿಯ ಜನಾಂಗದವರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದಾರೆ. ಪರಿಶಿಷ್ಟ ಜನಾಂಗದ ಇಬ್ಬರು ಮಹಿಳೆಯರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದಾರೆ. ಈ ಒಂದು ಸಣ್ಣ ಪಂಚಾಯಿತಿಗಳನ್ನು ಮುಂದುವರಿಸಿದಾಗಲೇ ಈ ಎಲ್ಲಾ ಜನಾಂಗಗಳಿಗೆ ಕೂಡ

11.00 ಎ.ಎಂ.

ರಾಜಕೀಯವಾದಂಥ ಒಂದು ಸ್ಥಾನಮಾನ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸಾಮಾಜಿಕ ನ್ಯಾಯ ಬರಬೇಕು ಎನ್ನತಕ್ಕಂಥ ಒಂದು ವಿಚಾರದ ಹಿನ್ನಲೆಯಲ್ಲಿ ರಾಜಕರಣ ಮಾಡತಕ್ಕಂಥ ನಾವು ಅವರಿಗೆ ಸ್ಥಾನಮಾನಗಳನ್ನು ಕೊಡುವುದಕ್ಕೆ ಹಿಂದೇಟು ಹಾಕಿದರೆ, ಸಾಮಾಜಿಕ ನ್ಯಾಯ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವಂಥ ವಿಚಾರ ಇಲ್ಲಿ ಮುಖ್ಯವಾಗಿರತಕ್ಕಂಥಾದ್ದು. ಈ ದಿಸೆಯಲ್ಲಿ ಇವತ್ತಿನ ನಮ್ಮ ಸರ್ಕಾರ ಅದೇ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗತಕ್ಕಂಥ ಒಂದು ವಿವೇಚನೆಯಲ್ಲಿ, ಒಂದು ದೃಢ ನಿರ್ಧಾರವನ್ನು ಹೊಂದಿ ಅವುಗಳಿಗೆ ಒಂದು ಆರ್ಥಿಕವಾದಂಥ ಸಫಲತೆ, ಆಡಳಿತಾತ್ಮಕವಾದಂಥ ಸಫಲತೆ, ಸ್ಥಳೀಯವಾಗಿ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳತಕ್ಕಂಥ ಒಂದು ವ್ಯವಸ್ಥೆಯಸ್ನು ಮಾಡುವಂಥ ಸಂಕಲ್ಪವನ್ನು, ಗ್ರಾಮಮಟ್ಟದಲ್ಲಿ ಯಾವ ರೀತಿಯಾದಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನತಕ್ಕಂಥ ಪರಿಕಲ್ಪನೆಯನ್ನು ಇವತ್ತಿನ ದಿವಸ ಸರ್ಕಾರ ಇಟ್ಟುಕೊಂಡಿದೆ.

ಮಾನ್ಯ ಅಧ್ಯಕ್ಷರೇ, ಶಿಕ್ಷಣ ವಿಷಯದಲ್ಲಿಯೂ ಕೂಡ ಸರ್ಕಾರ ತನ್ನ ದೃಢ ಹೆಜ್ಜೆಯನ್ನು ಇಟ್ಟುಕೊಂಡಿರುವಂಥಾದ್ದು ಕಾಣುತ್ತದೆ. ಎಲ್ಲೆಲ್ಲಿ ಆ ವ್ಯವಸ್ಥೆಯಿಂದ ವಂಚಿತರಾಗಿರತಕ್ಕಂಥವರು ಇದ್ದಾರೆ, ಅವರಿಗೆ ಸ್ಥಾನಮಾನಗಳನ್ನು ಕಲ್ಪಿಸಿ ಕೊಡಬೇಕು ಎನ್ನತಕ್ಕಂಥಾದ್ದು ಮತ್ತು ಎಲ್ಲಿ ಪ್ರಾಥಮಿಕ ಹಂತದ, ಮಾಧ್ಯಮಿಕ ಹಂತದ, ಕಾಲೇಜು ಹಂತಹ ವ್ಯವಸ್ಥೆ ಇಲ್ಲ, ಅಲ್ಲಿ ಆ ವ್ಯವಸ್ಥೆಯನ್ನು ಮಾಡಬೇಕಾಗಿರತಕ್ಕಂಥ ಒಂದು ವಿವೇಚನೆಯಲ್ಲಿ, ವಿವೇಕತೆಯಲ್ಲಿ ಸರ್ಕಾರದ ನಿರ್ಧಾರವನ್ನು ಇವತ್ತು ಈ ಒಂದು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ತಿಳಿಸತಕ್ಕಂಥಾದ್ದು ಆಗಿದೆ. ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಸರ್ಕಾರವನ್ನು ನಡೆಸತಕ್ಕಂಥ ನಾವು, ಅದು ಯಾರೇ ಆಗಿರಲಿ, ಕೆಲವೊಂದು ಪ್ರಕಟಣೆಗಳು ಹೊರಬೀಳುವಾಗ ನೋಡದೇ ಹೋದರೆ ಎಂಥ ಅಪಚಾರವಾಗುತ್ತದೆ ಎನ್ನುವುದಕ್ಕೆ ಕಳೆದ ಸರ್ಕಾರದ ಅವಧಿಯಲ್ಲಿ ಹೊರಟಿರುವ ಒಂದು ಪ್ರಕಟಣೆಯ ಬಗ್ಗೆ ಹೇಳುತ್ತೇನೆ. ತಾರೀಖು 3-6-1999 ರಂದು ಒಂದು ಪ್ರಕಟಣೆ ಹೊರಟಿದೆ. ಅದನ್ನು ನಾನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ, ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡಿರತಕ್ಕಂಥ ಬಿ.ಎ. ಪದವೀಧರರಿಗೆ ಬಿ.ಎಡ್. ಹಾಗೂ ಟಿ.ಸಿ.ಹೆಚ್. ಪದವಿಗಳಿಗೆ ಪ್ರವೇಶವಿಲ್ಲ. ಇದು ಸರ್ಕಾರ ಹೊರಡಿಸಿರತಕ್ಕಂಥ ಸೂಚನೆ. ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಹೊರಡಿಸಿರತಕ್ಕಂಥ ಒಂದು ನೋಟಿಫಿಕೇಷನ್ ಇದು. ಇದು ನಮ್ಮ ಕನ್ನಡ ರಾಜ್ಯ. ಕರ್ನಾಟಕದಲ್ಲಿ ಕನ್ನಡ ಬೆಳೆಯಬೇಕು, ಕರ್ನಾಟಕದಲ್ಲಿ ಕನ್ನಡ ಉಳಿಯಬೇಕು, ಕನ್ನಡ ನಮ್ಮ ತಾಯಿ, ಕನ್ನಡ ನಮ್ಮ ತಂದೆ, ಕನ್ನಡ ನಮ್ಮ ಅಣ್ಣತಮ್ಮ ಹೀಗೆಲ್ಲಾ ನಾವು ಭಾಷಣ ಮಾಡಿಕೊಂಡು ಹೋಗುತ್ತೇವೆ. ಆದರೆ ಇವತ್ತು ಆಡಳಿತಾತ್ಮಕವಾಗಿರತಕ್ಕಂಥ ವ್ಯವಸ್ಥೆ ಎಂದರೆ, ಬಿ.ಎ. ಪದವಿಯಲ್ಲಿ ಕನ್ನಡ ಮುಖ್ಯ ವಿಷಯವನ್ನು ತೆಗೆದುಕೊಂಡಿರತಕ್ಕಂಥವರಿಗೆ ಬಿ.ಎಡ್. ಪ್ರವೇಶಕ್ಕೆ ಅನುಮತಿ ನಿರಾಕರಣೆ ಮಾಡಲಾಗಿದೆ. ಅವರಿಗೆ ಅವಕಾಶವಿಲ್ಲ. ಬಿ.ಎ. ಆದಮೇಲೆ ಬಿ.ಎಡ್. ಮಾಡತಕ್ಕಂಥವರು ಬಿ.ಎ.ನಲ್ಲಿ ಕನ್ನಡ ವಿಷಯವನ್ನು ತೆಗೆದುಕೊಂಡಿರತಕ್ಕಂಥವರಿಗೆ ಬಿ.ಎಡ್.ಗೆ ಪ್ರವೇಶ ನಿರಾಕರಣೆ ಮಾಡಿದರೆ, ಇನ್ನು ಮುಂದೆ ಪ್ರತಿವರ್ಷ ವಿದ್ಯಾರ್ಥಿಗಳು ಕನ್ನಡ ಐಚ್ಛಿಕ ವಿಷಯ ತೆಗೆದುಕೊಳ್ಳುವುದನ್ನೇ

ಬಿಟ್ಟುಬಿಡುತ್ತಾರೆ. ಏಕೆಂದರೆ ಅವರಿಗೆ ಬಿ.ಎಡ್.ಗೆ ಹೋಗಲು ಅವಕಾಶ ಇರುವುದಿಲ್ಲ. ಇದು ಎಂಥ ಅಸಂವಿಧಾನಿಕವಾಗಿರತಕ್ಕಂಥಾದ್ದು ಎನ್ನುವುದನ್ನು ಈ ಸದನದ ಗಮನಕ್ಕೆ ನಾನು ತರುತ್ತಿದ್ದೇನೆ. ಇದು ಯಾವ ಕಾರಣಕ್ಕೋಸ್ಕರ ಆಗಿದೆ ಎನ್ನುವಂಥಾದ್ದನ್ನು ಕೂಡ ನೋಡಬೇಕು; ಇಲ್ಲಿ ಕನ್ನಡವನ್ನು ನೆಲಸಮ ಮಾಡುವಂಥ ವಿಚಾರವಿದೆಯೇ, ಇಲ್ಲಿ ಕನ್ನಡವನ್ನು ತುಳಿಯತಕ್ಕಂಥ ವಿಚಾರವಿದೆಯೇ ಎನ್ನುವುದನ್ನು ನೋಡಬೇಕು. ಯಾವುದೇ ಪದವೀಧರ, ತನ್ನ ಮಾತೃಭಾಷೆಯಲ್ಲಿ ಪದವಿಯನ್ನು ಪಡೆದುಕೊಂಡಿರತಕ್ಕಂಥವನಿಗೆ ಬಿ.ಎಡ್.ಗೆ ಪ್ರವೇಶವಿಲ್ಲ ಎಂದರೆ ಹೇಗೆ? ಅದು ಬೇರೆಲ್ಲೂ ಅಲ್ಲ, ನಮ್ಮ ಕರ್ನಾಟಕದಲ್ಲಿ, ನಮ್ಮ ಕನ್ನಡ ರಾಜ್ಯದಲ್ಲಿ! ಮತ್ತೆ ಅವನಿಗೆ ಮದರಾಸಿನಲ್ಲಿ ಅವಕಾಶ ಕೊಡುತ್ತಾರೆಯೇ? ಬಿಹಾರದಲ್ಲಿ ಅವಕಾಶ ಕೊಡುತ್ತಾರೆಯೇ? ಆಂಧ್ರದಲ್ಲಿ ಅವಕಾಶ ಕೊಡುತ್ತಾರೆಯೇ? ಅಥವಾ ಒರಿಸ್ಸಾದಲ್ಲಿ ಅವಕಾಶ ಕೊಡುತ್ತಾರೆಯೇ? ಕನ್ನಡ ಮುಖ್ಯ ವಿಷಯವನ್ನು ತೆಗೆದುಕೊಂಡು ಪಾಸ್ ಆಗಿರತಕ್ಕಂಥ ಪದವೀಧರರಿಗೆ ಬಿ.ಎಡ್. ಪ್ರವೇಶಕ್ಕೆ ಕರ್ನಾಟಕದಲ್ಲಿ ಅನುಮತಿ ನಿರಾಕರಣೆಯಾದಾಗ ಆತನು ಹೋಗತಕ್ಕಂಥಾದ್ದಾದರೂ ಎಲ್ಲಿಗೆ ಎನ್ನುವಂಥ ಮಾತನ್ನು ಇವತ್ತು ಈ ಸದನದ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ನನಗೆ ವಿಶ್ವಾಸ ಇದೆ, ನಮ್ಮ ಸರ್ಕಾರ ಈ ಕೂಡಲೇ ಇಂಥ ಅಸಂವಿಧಾನವಾಗಿರತಕ್ಕಂಥ ನಿರ್ಣಯವನ್ನು ಕಿತ್ತುಹಾಕಬೇಕು ಎನ್ನತಕ್ಕಂಥಾದ್ದನ್ನು ಕೂಡ ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಐದು ಗ್ರೂಪ್‌ಗಳನ್ನು ಮಾಡಿದ್ದಾರೆ. ಒಂದು ಗ್ರೂಪ್‌ನಲ್ಲಿ ಫಿಸಿಕ್ಸ್, ಕೆಮೆಸ್ಟ್ರಿ, ಮ್ಯಾಥ್‌ಮೆಟಿಕ್ಸ್ ಇದೆ, ಇನ್ನೊಂದು ಗ್ರೂಪ್‌ನಲ್ಲಿ ಕೆಮೆಸ್ಟ್ರಿ, ಬಾಟನಿ, ಜುವಾಲಜಿ ಇದೆ, ಇನ್ನೊಂದು ಗ್ರೂಪ್‌ನಲ್ಲಿ ಹಿಸ್ಟರಿ, ಸೋಷಿಯಾಲಜಿ, ಪೊಲಿಟಿಕಲ್ ಸೈನ್ಸ್ ಇದೆ, ಇನ್ನೊಂದು ಗ್ರೂಪ್‌ನಲ್ಲಿ ಹಿಸ್ಟರಿ, ಎಕನಾಮಿಕ್ಸ್, ಜಿಯಾಗ್ರಫಿ ಇದೆ. ಈ ಸಬ್ಜೆಕ್ಟ್‌ಗಳನ್ನು ತೆಗೆದುಕೊಂಡು ಪದವೀಧರರಾದವರಿಗೆ ಟಿ.ಸಿ.ಹೆಚ್. ಮತ್ತು ಬಿ.ಎಡ್.ಗೆ ಹೋಗಲು ಪ್ರವೇಶಕ್ಕೆ ಅವಕಾಶ ಇದೆ. ಕನ್ನಡ ತೆಗೆದುಕೊಂಡವರಿಗೆ ಅವಕಾಶ ಇಲ್ಲ. ಆದ್ದರಿಂದ ನಮ್ಮ ಮಾನ್ಯ ಉನ್ನತ ಶಿಕ್ಷಣ ಸಚಿವರು ಇದರ ಬಗ್ಗೆ ಗಮನ ಹರಿಸಿ, ಈ ಸಂಬಂಧಪಟ್ಟ ಕಡತವನ್ನು ಆದಷ್ಟು ತೀವ್ರವೇ ತರಿಸಿಕೊಂಡು ಇದನ್ನು ರದ್ದುಪಡಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿ, ಕನ್ನಡ ಪದವೀಧರರಿಗೆ ಬಿ.ಎಡ್.ಗೆ ಪ್ರವೇಶಾವಕಾಶ ಮಾಡಿಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಮತ್ತೊಂದು, ನನಗೆ ಬಹಳಷ್ಟು ಸಂತೋಷ ತಂದಿರತಕ್ಕಂಥ ವಿಚಾರವೆಂದರೆ ನಮ್ಮ ಉತ್ತರ ಕನ್ನಡ ಭಾಗದಿಂದ ಬಂದಿರತಕ್ಕಂಥ ಮಾನ್ಯ ಶಾಸಕರಿಗೆ, ಮಾನ್ಯ ಸಚಿವರಿಗೆ ಸಮಾಧಾನ ತಂದು ಕೊಡತಕ್ಕಂಥ ವಿಚಾರವೆಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ "ಹಲವಾರು ಕಾರಣಗಳಿಂದಾಗಿ ರಾಜ್ಯದಲ್ಲಿ ಪ್ರಾದೇಶಿಕ ತಾರತಮ್ಯಗಳಿರುವುದು ನನ್ನ ಸರ್ಕಾರಕ್ಕೆ ಅರಿವಿದೆ. ಈ ಪ್ರದೇಶಗಳ ಅಭಿವೃದ್ಧಿಯ ಸೂಚಕಗಳನ್ನು ಗುರುತಿಸಲು ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಈ ಸೂಚಕಗಳು ಯಾವುವೆಂದರೆ, ತಲಾವಾರು ಆದಾಯ, ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಹಾಗೂ ವಯಸ್ಕರ ಸಾಕ್ಷರತೆಯಂಥ ಅಳತೆಗೋಲಿನಿಂದ ನಿರ್ಧರಿಸಲಾಗುವ ಶೈಕ್ಷಣಿಕ ಸ್ಥಿತಿಗತಿ ಹಾಗೂ ಆಯುರ್ಮಾನ ಆಧಾರಿತ ಮೂಲ ಆರೋಗ್ಯ ಸ್ಥಿತಿ; ಹಿಂದುಳಿದಿರುವ ಈ ಪ್ರದೇಶಗಳ ಜನರ ಸ್ಥಿತಿಗತಿಗಳನ್ನು ಸುಧಾರಿಸುವ ವಿಷಯದಲ್ಲಿ ನಾವೆಲ್ಲ ಸಕ್ರೀಯವಾಗಿ ದುಡಿದು, ಮುಂಬರುವ

ಶತಮಾನದತ್ತ ಒಟ್ಟಿಗೆ ಮುನ್ನಡೆಯಬೇಕಾಗಿದೆ. ಕಾರ್ಯತಂತ್ರಗಳನ್ನು ರೂಪಿಸುವುದಕ್ಕಾಗಿ ಮತ್ತು ಈ ಪ್ರದೇಶಗಳಲ್ಲಿ ಆಗುವ ಪ್ರಗತಿಯ ನಿಕಟ ಮೇಲ್ವಿಚಾರಣೆಗಾಗಿ ಒಂದು ಉನ್ನತ ಮಟ್ಟದ ಅಂಗವನ್ನುರಚಿಸಲಾಗುವುದು ಎನ್ನತಕ್ಕಂಥ ಮಾತನ್ನು ಇವತ್ತು ನನ್ನ ಸರ್ಕಾರ ಹೇಳಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಈ ವಿಚಾರವನ್ನು ಪ್ರಕಟಿಸಿತ್ತು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾಗಿರತಕ್ಕಂಥ ಶ್ರೀ ಎಸ್.ಎಂ. ಕೃಷ್ಣಾಜಿಯವರು ಉತ್ತರ ಕರ್ನಾಟಕ ಜಿಲ್ಲೆಗಳ ತಮ್ಮ ಪ್ರವಾಸದ ಸಂದರ್ಭದಲ್ಲಿ, ಈ ಭಾಗಕ್ಕೆ ಅನ್ಯಾಯವಾಗಿದೆ, ಈ ಭಾಗಕ್ಕೆ ತಾರತಮ್ಯವಾಗಿದೆ, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ, ತಾವು ಅಧಿಕಾರ ಕೊಟ್ಟರೆ, ನಾವು ಅದನ್ನು ಪಾಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಅವರು ಹಳೆಯ ಮೈಸೂರು ಭಾಗದಿಂದ ಬಂದಿರತಕ್ಕಂಥವರಾದರೂ ಕೂಡ, ಮಂಡ್ಯದ ಮಣ್ಣಿನ ಮಗನಾಗಿದ್ದರೂ ಕೂಡ, ಉತ್ತರ ಕರ್ನಾಟಕದ ಜನಗಳ ಸಮಸ್ಯೆಗೆ ಸ್ಪಂದಿಸಿರುವುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತಮಾಡಿರತಕ್ಕಂಥಾದ್ದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಕಾರಣವೇನೆಂದರೆ, ಈ ಉತ್ತರ ಕರ್ನಾಟಕಕ್ಕೆ ಆಗತಕ್ಕಂಥ ವ್ಯವಸ್ಥೆ, ಹಳೆಯ ಮೈಸೂರಿನಲ್ಲಿ ಆಗತಕ್ಕಂಥ ವ್ಯವಸ್ಥೆ, ಅಲ್ಲಿರತಕ್ಕಂಥ ಸ್ಥಿತಿಗತಿ, ಅಲ್ಲಿರತಕ್ಕಂಥ ಆದಾಯ, ಅಲ್ಲಿ ನಡೆಯತಕ್ಕಂಥ ಅಭಿವೃದ್ಧಿ ಕಾರ್ಯಗಳು, ಇಲ್ಲಿ ನಡೆಯತಕ್ಕಂಥ ಅಭಿವೃದ್ಧಿ ಕಾರ್ಯಗಳು, ಇಲ್ಲಿ ಅವುಗಳಿಗೆ ಬಿಡುಗಡೆಯಾಗತಕ್ಕಂಥ ಹಣಕಾಸು, ಅಲ್ಲಿ ಬಿಡುಗಡೆಯಾಗತಕ್ಕಂಥ ಹಣಕಾಸು, ಅಲ್ಲಿಯ ರಸ್ತೆಗಳ ಸ್ಥಿತಿಗತಿ, ಅಲ್ಲಿಯ ಕುಡಿಯುವ ನೀರಿನ ಸ್ಥಿತಿಗತಿ, ಅಲ್ಲಿಯ ಶಾಲೆಗಳ ಸ್ಥಿತಿಗತಿ, ಅಲ್ಲಿಯ ಕಾಲೇಜುಗಳ ಸ್ಥಿತಿಗತಿ ಇವೆಲ್ಲವುಗಳನ್ನು ನೋಡಿದರೆ ನಾವು ಈ ರಾಜ್ಯದಲ್ಲಿ ಮಲಮಕ್ಕಳೋ, ಹೇಗೆ ಎನ್ನತಕ್ಕಂಥ ಒಂದು ಭಾವನೆ ಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ನಾವೂ ಕೂಡ ತಾಯಿ ಭುವನೇಶ್ವರಿಯ ಮಕ್ಕಳು ಹೌದೋ, ಅಲ್ಲವೋ ಎನ್ನತಕ್ಕಂಥ ಒಂದು ಪ್ರಶ್ನೆ ಬರುವುದರಲ್ಲಿ ಸಂಶಯವಿಲ್ಲ. ನೀಡತಕ್ಕಂಥ ಅನುದಾನಗಳು ಸಂಪೂರ್ಣ ಸದೃಢವಾಗಿದ್ದರೆ ಮಾತ್ರ ಸುಭದ್ರವಾಗಿರತಕ್ಕಂಥ ರಾಜ್ಯವಾಗುತ್ತದೆ, ಭುವನೇಶ್ವರಿ ಭದ್ರವಾಗಿ ಕಾಲು ಊರಿ ನಿಲ್ಲುತ್ತಾಳೆ. ಒಂದು ಕಡೆ ಏನಾದರೂ ಸ್ವಲ್ಪ ಪಾರ್ಶ್ವವಾಯು ಬಡಿದಿರತಕ್ಕಂಥ ಸ್ಥಿತಿ ಬಂದರೆ ಸರಿಯಾಗಿ ಎದ್ದು ನಿಲ್ಲಲ್ಲು ಆಗುವುದಿಲ್ಲ. ಆ ತಾರತಮ್ಯವನ್ನು ಹೋಗಲಾಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ವ್ಯಕ್ತವಾಗಿರತಕ್ಕಂಥಾದ್ದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ.

ಇದೇ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಈ ಸದನದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. 1993-94ರಿಂದ 1995-96ರವರೆಗೆ ರಾಜ್ಯ ಹಾಗೂ ಕೇಂದ್ರದ ಪಾಲು ಸೇರಿ ಜಿಲ್ಲಾ ಪಂಚಾಯಿತಿಗಳಿಗೆ ನೀಡಿದ ಅನುದಾನದ ಬಗ್ಗೆ ಇಲ್ಲಿ ಹೇಳಲು ನಾನು ಇಚ್ಛಿಪಡುತ್ತೇನೆ. 1993-94ರಲ್ಲಿ ಹಳೆಯ ಮೈಸೂರು ಭಾಗಕ್ಕೆ 44,735 ಲಕ್ಷ ರೂ.ಗಳನ್ನು ಕೊಟ್ಟರೆ, ಅದೇ ವರ್ಷ ಉತ್ತರ ಕರ್ನಾಟಕಕ್ಕೆ ಇದೇ ಮೂಲದಿಂದ 35,092 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಅಂದರೆ ಉತ್ತರ ಕರ್ನಾಟಕಕ್ಕೆ 9,143 ಲಕ್ಷ ರೂ.ಗಳಷ್ಟು ಕಡಿಮೆ ಕೊಟ್ಟಿದ್ದಾರೆ. *1994-95*ರಲ್ಲಿ ಹಳೆಯ ಮೈಸೂರಿಗೆ 53,305 ಲಕ್ಷ ರೂ.ಗಳನ್ನು ಕೊಟ್ಟಿದ್ದರೆ, ಉತ್ತರ ಕರ್ನಾಟಕಕ್ಕೆ 43,955 ಲಕ್ಷ

ರೂ.ಗಳನ್ನು ಕೊಡಲಾಗಿದೆ. 1995-96ರಲ್ಲಿ ಹಳೆಯ ಮೈಸೂರಿಗೆ 59,720 ಲಕ್ಷ ರೂ.ಗಳನ್ನು ಕೊಟ್ಟಿದ್ದರೆ, ಉತ್ತರ ಕರ್ನಾಟಕಕ್ಕೆ 50,311 ಲಕ್ಷ ರೂ.ಗಳನ್ನು ಕೊಡಲಾಗಿದೆ. ಈ ರೀತಿ ಸುಮಾರು ಹತ್ತತ್ತು ಕೋಟಿ ರೂಪಾಯಿಗಳಷ್ಟು ಕಡಿಮೆ ಹಣ ನೀಡಿ ತಾರತಮ್ಯ ಮಾಡಿರತಕ್ಕಂಥಾದ್ದು, ಜಿಲ್ಲಾ ಪಂಚಾಯಿತಿಗಳ ಮುಖಾಂತರ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುದಾನ ಮಂಜೂರು ಮಾಡತಕ್ಕಂಥಾದ್ದರಲ್ಲಿ ಅನ್ಯಾಯ ಆಗಿರುವುದು ಎದ್ದು ಕಾಣುತ್ತದೆ.

ನಮ್ಮ ರಾಜ್ಯದಲ್ಲಿ ಒಟ್ಟು 33 ಉದ್ಯೋಗ ವಿನಿಮಯ ಕೇಂದ್ರಗಳು ಇವೆ. ಆ 33 ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 20 ಕೇಂದ್ರಗಳು ಹಳೆಯ ಮೈಸೂರಿನಲ್ಲಿ ಇವೆ, ಉತ್ತರ ಕರ್ನಾಟಕದಲ್ಲಿ 13 ಇವೆ. ಅಂದರೆ, ಅಲ್ಲಿಯವರು ಯಾರೂ ನೌಕರಿ ಪಡೆಯುವುದು ಬೇಡವೇ?, ಅಲ್ಲಿ ಇವತ್ತು ಯಾರೂ ಗ್ರಾಜ್ಯುಯೇಟ್‌ಗಳಾದವರು ಇಲ್ಲವೇ? ಅಲ್ಲಿ ಇವತ್ತು ಯಾರೂ ವಿದ್ಯಾರ್ಥಿಗಳು ಕಲಿಯುತ್ತಿಲ್ಲವೇ? ಅವರ್‍ಯಾರೂ ಮುಂದೆ ಬರಬಾರದೇ? ಅವರ್‍ಯಾರೂ ಈ ರಾಜ್ಯ ಸರ್ಕಾರದಲ್ಲಿ ಉದ್ಯೋಗ ಅವಕಾಶಕ್ಕಾಗಿ ಹೋಗಬಾರದೇ? 20 ಉದ್ಯೋಗ ವಿನಿಮಯ ಕೇಂದ್ರಗಳು ಇಲ್ಲಿ 13 ಉದ್ಯೋಗ ಕೇಂದ್ರಗಳು ಅಲ್ಲಿ ಇವೆ. ಇವತ್ತು ಈ ತಾರತಮ್ಯವನ್ನು ಸರ್ಕಾರ ಹೋಗಲಾಡಿಸಬೇಕಾಗಿದೆ.

ಇನ್ನು ನ್ಯಾಯ ಬೆಲೆ ಅಂಗಡಿಗಳ ವಿಚಾರ. 1996ರಕ ಪ್ರಕಾರ ರಾಜ್ಯದಲ್ಲಿ ಒಟ್ಟು 19,450 ನ್ಯಾಯಬೆಲೆ ಅಂಗಡಿಗಳು ಇದ್ದರೆ, ಅವುಗಳಲ್ಲಿ ಹಳೆಯ ಮೈಸೂರು ಭಾಗದಲ್ಲಿ 11,778 ಇವೆ, ಉತ್ತರ ಕರ್ನಾಟಕದಲ್ಲಿ 8,172 ಇವೆ. ಅಲ್ಲಿ ಜನರು ಇಲ್ಲವೇ? ಅಲ್ಲಿ ಜನಸಂಖ್ಯೆ ಇಲ್ಲವೇ? ಅಲ್ಲಿ ಬಡವರು ಇಲ್ಲವೇ? ಅಲ್ಲಿ ಎಲ್ಲರೂ ಶ್ರೀಮಂತರಾಗಿದ್ದಾರೆಯೇ? ಅಲ್ಲಿ ನೀರಾವರಿ ವ್ಯವಸ್ಥೆ ಇದೆಯೇ? ಕೈಗೆತ್ತಿಕೊಂಡಿರತಕ್ಕಂಥ ನೀರಾವರಿ ವ್ಯವಸ್ಥೆಗಳೇ ಇನ್ನೂ ಪೂರ್ತಿಯಾಗತಕ್ಕಂಥ ವ್ಯವಸ್ಥೆ ಅಲ್ಲಿ ಇಲ್ಲ. ಅಲ್ಲಿ ಯಾವಾಗಲೂ ಬರೆದ ಛಾಯೆ ಸಂಪೂರ್ಣವಾಗಿ ಬಿದ್ದಿರತಕ್ಕಂಥಾದ್ದರ ಬಗ್ಗೆ ಈ ಸದನದಲ್ಲಿ ಸಾಕಷ್ಟು ರೀತಿಯಲ್ಲಿ ಚರ್ಚೆಯಾಗುತ್ತದೆ. ಇಂಥ ನ್ಯಾಯಬೆಲೆ ಅಂಗಡಿಗಳನ್ನು ಕೊಡುವಾಗ 10-10 ಸಾವಿರ ಕಡಿಮೆ ಕೊಡತಕ್ಕಂಥ ಸ್ಥಿತಿಯಾದರೆ ಈ ರಾಜ್ಯದಲ್ಲಿ ಉತ್ತರ ಕರ್ನಾಟಕದವರಾದ ನಾವು ಕೂಡ ಈ ಭುವನೇಶ್ವರಿ ದೇವಿಯ ಮಕ್ಕಳು ಹೌದೋ ಅಥವಾ ಅಲ್ಲವೋ ಎನ್ನುವ ಸಂಶಯ ಬರುತ್ತದೆ. ಒಂದು ಮನೆಯಲ್ಲಿ ಇಬ್ಬರು ದುಡಿದುಕೊಂಡು ಬರತಕ್ಕಂಥ ಮಕ್ಕಳಲ್ಲಿ ಒಬ್ಬ ಮಗನಿಗೆ ಹೋಳಿಗೆ, ಜೇನುತುಪ್ಪ ಕೊಡುವುದು ಮತ್ತೊಬ್ಬ ಮಗನಿಗೆ ಚಟ್ನಿರೊಟ್ಟಿ ಕೊಟ್ಟರೆ ಆ ಮಗ ಎಷ್ಟು ದಿವಸ ಈ ದೌರ್ಜನ್ಯವನ್ನು ತಾಳಿಕೊಳ್ಳುತ್ತಾನೆ ಎನ್ನುವಂಥ ದೃಷ್ಟಿಯಲ್ಲಿ ಈ ವಿಚಾರ ಕೇಳಬೇಕಾಗುತ್ತದೆ. ಒಂದು ದಿವಸ ತಾಳಬಹುದು, ಆದರೆ ನಿರಂತರವಾಗಿ ಒಬ್ಬನಿಗೆ ಹೋಳಿಗೆ ತುಪ್ಪ, ಒಬ್ಬನಿಗೆ ಚಟ್ನಿ ರೊಟ್ಟಿ ಈ ರೀತಿ ಕೊಡುತ್ತಾ ಹೋದರೆ ಆತನ ಮನಸ್ಸಿನ ಭಾವನೆಗಳು, ಆಕ್ರೋಶ ಭುಗಿಲೆದ್ದು ಪ್ರತ್ಯೇಕತೆಯ ಬಗ್ಗೆ ಕೂಗಾಡತಕ್ಕಂಥ ವ್ಯವಸ್ಥೆಯನ್ನು ತಾವೇ ಹುಟ್ಟು ಹಾಕಿದಂತಾದೀತು ಎನ್ನತಕ್ಕಂಥ ವಿಚಾರದಲ್ಲಿ ನಾವು ಎಚ್ಚರಿಕೆ ಕೊಡುತ್ತಿದ್ದೇವೆ. ಈ ಪ್ರತ್ಯೇಕತೆಯ ಹುಟ್ಟನ್ನು ನಾವು ಯಾರೂ ಮೆಚ್ಚುವುದಿಲ್ಲ. ಪತ್ರಕರ್ತರಾದಂಥ

ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರು ಈ ವಿಚಾರವನ್ನು ವ್ಯಕ್ತಮಾಡಿದರು. ಈ ಪ್ರತ್ಯೇಕತೆಯ ಬಗ್ಗೆ ಕೂಗು ಆರಂಭವಾದಾಗ ಮುತ್ಸದ್ದಿಯಾದ ಶ್ರೀಮಾನ್ ನಿಜಲಿಂಗಪ್ಪನವರು ಮಾತನಾಡುತ್ತಾ "ಈ ಕರ್ನಾಟಕ ರಾಜ್ಯ ಒಗ್ಗಟ್ಟಾಗಿ ಇರತಕ್ಕಂಥ ಕರ್ನಾಟಕವಾಗಿರಬೇಕು, ಸಮಗ್ರವಾಗಿ ಇರತಕ್ಕಂಥ ಕರ್ನಾಟಕ ಇರಬೇಕು, ಏನಾದರೂ ತಪ್ಪಾಗಿದ್ದರೆ ತಿದ್ದಿಕೊಳ್ಳೋಣ, ಪ್ರತ್ಯೇಕತೆ ಬೇಡ" ಎನ್ನತಕ್ಕಂಥ ಮಾತನ್ನು ಅವರಿಗೆ ಅಷ್ಟೊಂದು ವಯಸ್ಸು ಆಗಿದ್ದರೂ ಕೂಡ ಅವರು ಹೇಳಿದರು. ಕರ್ನಾಟಕ ಇಬ್ಭಾಗವಾಗಬಾರದು ಎನ್ನುವಂಥದ್ದು ಅವರ ತುಡಿತ ಆಗಿತ್ತು. ಈ ರೀತಿ ತಿದ್ದಿಕೊಳ್ಳಬೇಕಾಗಿರತಕ್ಕಂಥ ಪರ್ವಕಾಲ ಇವತ್ತು ಇದೆ ಎನ್ನತಕ್ಕಂಥ ಮಾತನ್ನು ನಾನು ಒತ್ತಿ ಹೇಳುತ್ತೇನೆ.

ಇನ್ನು ಪಶು ವೈದ್ಯಕೀಯ ಶಾಲೆಗಳ ಬಗ್ಗೆ ಹೇಳುವುದಾದರೆ, 1996ರ ಪ್ರಕಾರ ಹಳೆಯ ಮೈಸೂರು ಭಾಗದಲ್ಲಿ 173 ಪಶು ವೈದ್ಯ ಶಾಲೆಗಳಿದ್ದರೆ 94 ಪಶು ವೈದ್ಯ ಶಾಲೆಗಳು ಮಾತ್ರ ಉತ್ತರ ಕರ್ನಾಟಕದಲ್ಲಿ ಇತ್ತು. ಅಲ್ಲಿ ಜಾನುವಾರುಗಳು ಇಲ್ಲವೇ? ಪಶುಗಳು, ಜಾನುವಾರುಗಳು ಜಾಸ್ತಿ ಇರುವುದೇ ಉತ್ತರ ಕರ್ನಾಟಕದಲ್ಲಿ. ಆ ಜಾನುವಾರುಗಳು ಆರೋಗ್ಯಕರವಾಗಿ ಇರಬೇಕಾಗಿಲ್ಲವೇ? ಹೇಗೆ ಸ್ವಾಮಿ, ಇದರ ಬಗ್ಗೆ ತಾವೇ ವಿಚಾರ ಮಾಡಿ ನೋಡಿ. ಪಶು ದವಾಖಾನೆಯನ್ನು ಕೊಡುವುದರಲ್ಲಿಯೇ ತಾರತಮ್ಯ ಮಾಡುವುದಾದರೆ ಇನ್ನು ಮನುಷ್ಯರ ಗತಿ ಏನಾದೀತು ಎನ್ನುವ ವಿಚಾರವು ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ ಜನಸಾಮಾನ್ಯರ ಮಾತಾಗಿರುತ್ತದೆ. ಇನ್ನು ಕೃತಕ ಗರ್ಭಧಾರಣೆ ಕೇಂದ್ರಗಳು ರಾಜ್ಯದಲ್ಲಿ ಒಟ್ಟು 442 ಇದ್ದು ಅದು ಹಳೆಯ ಮೈಸೂರಿನಲ್ಲಿ 240 ಕೇಂದ್ರಗಳು ಇದ್ದರೆ, ಉತ್ತರ ಕರ್ನಾಟಕ ಭಾಗದಲ್ಲಿ 202 ಕೇಂದ್ರಗಳು ಮಾತ್ರ ಇವೆ. ಉತ್ತರ ಕರ್ನಾಟಕದಲ್ಲಿ ಪಶುಗಳ ಸಂಖ್ಯೆ ಬೆಳೆಯುವುದು ಬೇಡವೇ? ಈ ಭಾಗದಲ್ಲಿ ಹೆಚ್ಚು ಕೃತಕ ಗರ್ಭಧಾರಣೆ ಕೇಂದ್ರಗಳನ್ನು ಮಾಡಿದ ಹಾಗೆ ಉತ್ತರ ಕರ್ನಾಟಕದ ಕಡೆ ಮಾಡಿದರೆ ಅಲ್ಲಿಯೂ ಪಶುಗಳ ಸಂಖ್ಯೆ ಜಾಸ್ತಿ ಆಗುವುದಕ್ಕೆ ಸಾಧ್ಯವಿಲ್ಲವೇ?

ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, 1996ರಲ್ಲಿ ರಾಜ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿ 1997 ಕಿ.ಮೀ.ಗಳಷ್ಟು ಇದ್ದು ಅದರಲ್ಲಿ ಹಳೆಯ ಮೈಸೂರು ಭಾಗದಲ್ಲಿ 1044 ಕಿ.ಮೀ.ಗಳಷ್ಟು ಉದ್ದ ರಸ್ತೆ ಇದ್ದರೆ ಉತ್ತರ ಕರ್ನಾಟಕ ಭಾಗದಲ್ಲಿ ಕೇವಲ 953 ಕಿ.ಮೀ.ಗಳಷ್ಟು ಉದ್ದ ರಸ್ತೆ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಇನ್ನೂ ಹೆಚ್ಚು ಉದ್ದದ ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ಜಾಗವಿಲ್ಲವೇ? ಅಥವಾ ಅಲ್ಲಿ ಸಂಚಾರ ಮಾಡುವವರು ಇಲ್ಲವೇ? ಅಲ್ಲಿ ಯಾವ ಸಂಚಾರದ ವ್ಯವಸ್ಥೆ ಇಲ್ಲವೇ? ನಾವು ಸರಿಯಾದ ವ್ಯವಸ್ಥೆ ಮಾಡಿಕೊಟ್ಟ ಹಾಗೆ ಅಲ್ಲಿ ಎಲ್ಲವೂ ಬೆಳೆಯುತ್ತದೆ. ಸರಿಯಾದ ಸಂಚಾರ ವ್ಯವಸ್ಥೆ ಮಾಡಿದಂತೆಲ್ಲ ವ್ಯಾಪಾರ ಅಭಿವೃದ್ಧಿ ಹೊಂದುತ್ತದೆ. ಆಗ ಅಲ್ಲಿಯ ಜನಾಂಗ ಆರ್ಥಿಕವಾಗಿ ಸಬಲರಾಗುತ್ತಾರೆ. ಈ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡುವುದಕ್ಕೆ ಸಿದ್ಧ ಇಲ್ಲದೇ ಇದ್ದಾಗ ಆ ಭಾಗ ಹೇಗೆ ಮುಂದೆ ಬರುವುದಕ್ಕೆ ಸಾಧ್ಯ ಎನ್ನುವುದನ್ನು ಇವತ್ತು ತಾವೆಲ್ಲಾ ಯೋಚನೆ ಮಾಡಬೇಕು. ಇನ್ನು ರಾಜ್ಯ ಹೆದ್ದಾರಿ ರಸ್ತೆಗಳು ಹಳೆಯ ಮೈಸೂರು ಭಾಗದಲ್ಲಿ 11,395 ಕಿ.ಮೀ. ಇದ್ದರೆ, ಉತ್ತರ ಕರ್ನಾಟಕ ಭಾಗದಲ್ಲಿ

ಕೇವಲ 5,902 ಕಿ.ಮಿೀ. ರಸ್ತೆ ಇದೆ. ಮುಖ್ಯವಾಗಿ ಜಿಲ್ಲಾ ರಸ್ತೆಗಳಲ್ಲಿ ಕೂಡ ತಾರತಮ್ಯವಾಗಿದ್ದು 16,196 ಕಿ.ಮಿೀ. ಉದ್ದ ರಸ್ತೆ ದಕ್ಷಿಣ ಕರ್ನಾಟಕ ಭಾಗದಲ್ಲಿ ಇದ್ದರೆ, ಉತ್ತರ ಕರ್ನಾಟಕ ಭಾಗದಲ್ಲಿ 12,098 ಕಿ.ಮಿೀ. ಉದ್ದ ರಸ್ತೆ ಮಾತ್ರ ಇದೆ. ಈ ರೀತಿಯಾದಂಥ ಅವ್ಯವಸ್ಥೆ ಮಾಡಿದಾಗ, ಅಲ್ಲಿರತಕ್ಕಂಥ ನೀರಾವರಿ ವ್ಯವಸ್ಥೆ ಕೂಡ ಕುಸಿದು ಬಿದ್ದಿರತಕ್ಕಂಥ ಸ್ಥಿತಿಯಲ್ಲಿ ಇದ್ದಾಗ ಈ ತಾರತಮ್ಯವನ್ನು ಹೋಗಲಾಡಿಸುತ್ತೇನೆ ಎನ್ನತಕ್ಕಂಥ ಮಾತನ್ನು, ತಾರತಮ್ಯವನ್ನು ಸರಿಪಡಿಸುವುದಕ್ಕೆ ಒಂದು ಅಂಗವನ್ನು ರಚಿಸಲಾಗುವುದು ಎನ್ನತಕ್ಕಂಥ ಒಂದು ದಿಟ್ಟವಾದಂಥ ನಿಲುವನ್ನು ಮತ್ತು ಸಮಾನ ಮನೋಭಾವನೆಯನ್ನು ಕಾಣತಕ್ಕಂಥ ವಿಚಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತವಾಗಿದ್ದಕ್ಕೆ ನಾನು ಇವತ್ತು ಸಂತೋಷ ಪಡುತ್ತೇನೆ. ಹಳೆಯ ಮೈಸೂರು ಮತ್ತು ಉತ್ತರ ಕರ್ನಾಟಕ ಇವೆರೆಡೂ ನನ್ನ ಕಣ್ಣುಗಳು ಎನ್ನತಕ್ಕಂಥ ಧೋರಣೆ ಈ ಭಾಷಣದಿಂದ ವ್ಯಕ್ತವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶಿಕ್ಷಣ ಕ್ಷೇತ್ರದ ವಿಷಯದಲ್ಲಿ ಹೇಳುವುದಾದರೆ, ರಾಜ್ಯದಲ್ಲಿ ಒಟ್ಟು 42,495 ಪ್ರಾಥಮಿಕ ಶಾಲೆಗಳು ಇದ್ದು ಅದರಲ್ಲಿ ಹಳೆಯ ಮೈಸೂರು ಭಾಗಕ್ಕೆ 27,013 ಪ್ರಾಥಮಿಕ ಶಾಲೆಗಳು ಇದ್ದರೆ, ಉತ್ತರ ಕರ್ನಾಟಕದ ಭಾಗಕ್ಕೆ 15,482 ಪ್ರಾಥಮಿಕ ಶಾಲೆಗಳನ್ನು ಮಾತ್ರ ಕೊಟ್ಟಿದ್ದಾರೆ. ಇವತ್ತು ಒಬ್ಬ ಮನುಷ್ಯ ಶಿಕ್ಷಣವಂತನಾದಾಗ ಮಾತ್ರ ಆತನಿಗೆ ಬೆಳಕು ಬರುತ್ತದೆ, ಜ್ಞಾನ ಬರುತ್ತದೆ, ಶಿಕ್ಷಣವೇ ಶಕ್ತಿ ಆಗುತ್ತದೆ, ಶಿಕ್ಷಣ ಮನುಷ್ಯರ ವಿಕಾಸಕ್ಕೆ ನಾಂದಿಯನ್ನು ಹಾಡತಕ್ಕಂಥಾದ್ದು ಆಗಿದೆ. ಉನ್ನತ ಶಿಕ್ಷಣವಿಲ್ಲದೆ ನಾಗರೀಕತೆ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಶಿಕ್ಷಣ ಇಲ್ಲದೆ ಮನುಷ್ಯ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಆದರೆ ಶೈಕ್ಷಣಿಕ ವ್ಯವಸ್ಥೆಯಲ್ಲೂ ಕೂಡ ತಾರತಮ್ಯ ಮಾಡಿದಾಗ ಉತ್ತರ ಕರ್ನಾಟಕ ಭಾಗದವರು ಬೆಳೆಯುವುದು, ಮುಂದುವರೆಯುವುದಾದರೂ ಹೇಗೆ? ಎನ್ನತಕ್ಕಂಥ ಮಾತನ್ನು ನಾನು ತಮ್ಮಲ್ಲಿ ಕೇಳುತ್ತೇನೆ.

ಇನ್ನು ರಾಜ್ಯದಲ್ಲಿರುವ ಒಟ್ಟು ಪ್ರೌಢಶಾಲೆಗಳ ಸಂಖ್ಯೆ 6,171 ಆಗಿದ್ದು ಅದರಲ್ಲಿ ಹಳೆಯ ಮೈಸೂರು ಭಾಗಕ್ಕೆ 3,834 ಪ್ರೌಢಶಾಲೆಗಳನ್ನು ಕೊಟ್ಟಿದ್ದರೆ, ಉತ್ತರ ಕರ್ನಾಟಕದ ಭಾಗಕ್ಕೆ ಕೇವಲ 2337 ಪ್ರೌಢಶಾಲೆಗಳನ್ನು ಕೊಡಲಾಗಿದೆ. ಆದರೂ ಕೂಡ ಈ ಸಮಯದಲ್ಲಿ ಒಬ್ಬರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಒಂದು ವೇಳೆ ಉತ್ತರ ಕರ್ನಾಟಕದ ಭಾಗದಲ್ಲಿ ಸಾಮಾಜಿಕ ಕಾರ್ಯಕರ್ತರು, ಸ್ವಾತಂತ್ರ್ಯ ಹೋರಾಟಗಾರರು, ಪೀಠಾಧೀಶರು, ಮಠಾಧೀಶರು ಈ ಶಿಕ್ಷಣದ ವ್ಯವಸ್ಥೆಯಲ್ಲಿ ಕೈಹಾಕದೇ ಹೋಗಿದ್ದರೆ ಬಹುಶಃ ಉತ್ತರ ಕರ್ನಾಟಕದವರು ಶಿಕ್ಷಣದಲ್ಲೂ ಇನ್ನೂ ಕೂಡ ಯಾವ ಸ್ಥಿತಿಯಲ್ಲಿ ಇರುತ್ತಿದ್ದರೋ, ಎಷ್ಟು ಹಿಂದುಳಿಯುತ್ತಿದ್ದರು ಏನೋ ಎನ್ನುವಂಥಾದನ್ನು ಇವತ್ತು ಯೋಚನೆ ಮಾಡಬೇಕಾಗುತ್ತದೆ. ಅವರ ಒಂದು ಪುಣ್ಯದ ಕೆಲಸದಿಂದ ನಮ್ಮ ನಾಗರೀಕತೆ ಬೆಳೆದಿದೆ, ಶಿಕ್ಷಣವಂತರು ಆಗಿದ್ದಾರೆ. ಬೆಂಗಳೂರು ಎಲ್ಲಿ ಇದೆ. ವಿಧಾನಸೌಧ ಎಲ್ಲಿ ಇದೆ, ನೌಕರಿ ಎಂದರೆ ಏನು ಎನ್ನತಕ್ಕಂಥಾದ್ದನ್ನು ಅಲ್ಪಸ್ವಲ್ಪ ತಿಳಿಯಪಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಠಾಧಿಪತಿಗಳು, ಸಾರ್ವಜನಿಕ ಕಾರ್ಯಕರ್ತರು ಹಿಂದಿನ ಕೆಲವು ಹಿರಿಯರು

ಮಾಡಿಕೊಂಡು ಬಂದಿರತಕ್ಕಂಥದ್ದನ್ನು ಬಿಟ್ಟರೆ ಸರ್ಕಾರದಿಂದ ಮಾಡಿರತಕ್ಕಂಥ ವ್ಯವಸ್ಥೆ ಅರ್ಧಕ್ಕಿಂತಲೂ ಕಡಿಮೆ ಎನ್ನುವಂಥದ್ದನ್ನು ಇವತ್ತು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ರಾಜ್ಯದಲ್ಲಿ ಪದವಿ ಪೂರ್ವ ಕಾಲೇಜುಗಳು ಒಟ್ಟು 1886 ಇದ್ದು ಅದರಲ್ಲಿ ಹಳೆಯ ಮೈಸೂರು ಭಾಗಕ್ಕೆ 1154 ಕಾಲೇಜುಗಳನ್ನು ಕೊಟ್ಟಿದ್ದರೆ, ಉತ್ತರ ಕರ್ನಾಟಕದ ಭಾಗಕ್ಕೆ ಕೇವಲ 732 ಕಾಲೇಜುಗಳನ್ನು ಕೊಡಲಾಗಿದೆ. ಹಾಗೆಯೇ ರಾಜ್ಯದಲ್ಲಿ ಒಟ್ಟು 173 ಪಾಲಿಟೆಕ್ನಿಕ್ ಕಾಲೇಜುಗಳು ಇದ್ದು ಅದರಲ್ಲಿ ಹಳೆಯ ಮೈಸೂರು ಭಾಗಕ್ಕೆ 113 ಕಾಲೇಜುಗಳು ಆಗಿದ್ದರೆ, ಉತ್ತರ ಕರ್ನಾಟಕ ಭಾಗಕ್ಕೆ ಕೇವಲ 60 ಕಾಲೇಜುಗಳು ಆಗಿರುತ್ತವೆ. ಈ ರೀತಿಯ ತಾರತಮ್ಯ ಏಕೆ? ಯಾವ ಕಾರಣಕ್ಕಾಗಿ ಈ ತಾರತಮ್ಯ? ಕಂದಾಯ ನಮ್ಮ ಕಡೆಯಿಂದ ಬೇಕು, ಎಲ್ಲಾ ರಾಜಕೀಯ ಪಕ್ಷಗಳಿಗೆ ಅಲ್ಲಿಂದ ಸಹಾಯ ಬೇಕು, ಆದರೆ ಅಲ್ಲಿಗೆ ಸರಿಯಾದ ವ್ಯವಸ್ಥೆ ಬೇಡವೇ? ಉತ್ತರ ಕರ್ನಾಟಕದವರು ಕಂದಾಯವನ್ನು ಸರ್ಕಾರಕ್ಕೆ ಕೊಡುತ್ತಿಲ್ಲವೇ? ಈ ಕಂದಾಯದ ವಿಚಾರದಲ್ಲಿ ಎಲ್ಲಾ ಇಲಾಖೆಗಳ ಕಡತವನ್ನು ತೆಗೆದು ನೋಡಿದಾಗ ಅದು ಗೊತ್ತಾಗುತ್ತದೆ. ಹಾಗಾದರೆ ಬೆಂಗಳೂರು ಸುತ್ತಮುತ್ತ ಇರುವವರಿಗೆ, ಇದರ ಸುತ್ತಮುತ್ತ ಇರತಕ್ಕಂಥ ಹಳ್ಳಿಗಳಿಗೆ, ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಜಿಲ್ಲೆಗಳಿಗೆ ಮಾತ್ರ ಲಾಭ ಸಿಕ್ಕಿದರೆ ಸಾಕೇ? ಇಲ್ಲಿಂದ 750 ಕಿ.ಮೀ. ದೂರದಲ್ಲಿರುವ, ಬೀದರ್‌ಗೆ, 600 ಕಿ.ಮೀ. ದೂರವಿರುವ ಗುಲ್ಬರ್ಗಾದವರಿಗೆ, ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾವಿ ವಿಭಾಗಕ್ಕೆ ಅನ್ಯಾಯ ಮಾಡುವುದು ಸರಿಯೇ? ಕಾಲೇಜುಗಳು, ಹೈಸ್ಕೂಲ್‌ಗಳು, ರಸ್ತೆಗಳು, ದನದ ದವಾಖಾನೆಗಳನ್ನು ಕೊಡುವುದರಲ್ಲಿ ಹೀಗೆ ಎಲ್ಲಾ ರೀತಿಯಲ್ಲಿ ಕೂಡ ತಾರತಮ್ಯವಾಗಿದೆ. ಇನ್ನು ಮನುಷ್ಯನ ಪರಿಸ್ಥಿತಿ ಹೇಳುವುದೇ ಬೇಡ. ಈ ತಾರತಮ್ಯವನ್ನು ಹೋಗಲಾಡಿಸತಕ್ಕಂಥ ಕ್ರಮವನ್ನು ಕೈಗೊಳ್ಳತಕ್ಕಂಥ ವಿಚಾರದಲ್ಲಿ ಇವತ್ತು ನಮ್ಮ ಸರ್ಕಾರ ಹೆಜ್ಜೆ ಇಡತಕ್ಕಂಥಾದ್ದು ನಿಜವಾಗಿಯೂ ಸ್ತುತ್ಯಾಹವಾದುದು. ರಾಜ್ಯದಲ್ಲಿ ಒಟ್ಟು 51 ಇಂಜಿನಿಯರಿಂಗ್ ಕಾಲೇಜುಗಳು ಇದ್ದು, ಹಳೆಯ ಮೈಸೂರು ಭಾಗಕ್ಕೆ 35 ಕೊಟ್ಟಿದ್ದರೆ, ಉತ್ತರ ಕರ್ನಾಟಕ ಭಾಗಕ್ಕೆ 16 ಇಂಜಿನಿಯರಿಂಗ್ ಕಾಲೇಜುಗಳನ್ನು ಮಾತ್ರ ಕೊಟ್ಟಿದ್ದಾರೆ. 19 ಮೆಡಿಕಲ್ ಕಾಲೇಜುಗಳಲ್ಲಿ 13 ಹಳೆಯ ಮೈಸೂರು ಭಾಗಕ್ಕೆ ಮತ್ತು 6 ಉತ್ತರ ಕರ್ನಾಟಕದ ಭಾಗಕ್ಕೆ ಕೊಡಲಾಗಿದೆ. ಹೀಗೆ ತಾರತಮ್ಯ ಮಾಡಿದರೆ ಅಲ್ಲಿಯ ಭಾಗದವರು ಮುಂದುವರಿಯುವುದಕ್ಕೆ ಹೇಗೆ ಸಾಧ್ಯ? ಖಾಸಗಿ ಸಂಸ್ಥೆಯವರು ಕೂಡ ಉತ್ತರ ಕರ್ನಾಟಕ ಭಾಗದಲ್ಲಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರಲಿಲ್ಲವೇ? ಹೊಸದಾಗಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡಬೇಕೆಂದ ತಕ್ಷಣ ಬೆಂಗಳೂರಿನಲ್ಲಿ ಪ್ರಾರಂಭಿಸುವುದಕ್ಕೆ ನಾಲ್ಕಾರು ಕಾಲೇಜುಗಳಿಗೆ ಅನುಮತಿ ಕೊಡುವುದು, ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಜಿಲ್ಲೆಗಳಿಗೆ ನಾಲ್ಕಾರು ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಅನುಮತಿ ಕೊಟ್ಟುಬಿಡುತ್ತಾರೆ. ಇದೇನು ದೊಡ್ಡ ಸಾಧನೆಯೇ? ಇದು ದೊಡ್ಡ ಕೊಡುಗೆಯೇ? ಬಾಗಲಕೋಟೆಯವರು, ಬಳ್ಳಾರಿಯವರು, ರಾಯಚೂರು ಹೀಗೆ ಬೇರೆ ಯಾರೂ ಮೆಡಿಕಲ್ ಕಾಲೇಜು ಪ್ರಾರಂಭ ಮಾಡುವುದಕ್ಕೆ ಮುಂದೆ

ಬರಲಿಲ್ಲವೇ? ಇವತ್ತು ಇರತಕ್ಕಂಥ ಒಟ್ಟು 19ರಲ್ಲಿ 13 ಮೆಡಿಕಲ್ ಕಾಲೇಜುಗಳು ಹಳೆಯ ಮೈಸೂರಿನಲ್ಲಿ ಮತ್ತು 6 ಮೆಡಿಕಲ್ ಉತ್ತರ ಕರ್ನಾಟಕದ ಭಾಗದಲ್ಲಿ ಇದೆ ಅಂದರೆ ಇದು ಎಂಥ ತಾರತಮ್ಯ ಎನ್ನತಕ್ಕಂಥಾದ್ದನ್ನು ನಾವು ಯೋಚನೆ ಮಾಡಬೇಕು. ಆ ದಿಶೆಯಲ್ಲಿ ಈ ತಾರತಮ್ಯವನ್ನು ನಮ್ಮ ಸರ್ಕಾರ ಹೋಗಲಾಡಿಸುತ್ತದೆ ಎನ್ನುವಂಥದ್ದನ್ನು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ರಾಜ್ಯದಲ್ಲಿ ಡೆಂಟಲ್ ಕಾಲೇಜುಗಳು ಒಟ್ಟು 38 ಇದ್ದು ಅದರಲ್ಲಿ ಹಳೆಯ ಮೈಸೂರು ವಿಭಾಗದಲ್ಲಿ 28 ಕಾಲೇಜುಗಳು ಇವೆ. ಆದರೆ ಉತ್ತರ ಕರ್ನಾಟಕದಲ್ಲಿ ಕೇವಲ 10 ಕಾಲೇಜುಗಳು ಮಾತ್ರ ಇವೆ. ಉತ್ತರ ಕರ್ನಾಟಕದ ಭಾಗದಲ್ಲಿ ಯಾರೂ ಕೂಡ ಡೆಂಟಲ್ ಕಾಲೇಜುಗಳನ್ನು ತೆರೆಯುವುದಕ್ಕೆ ಸರ್ಕಾರವನ್ನು ಹಿಂದೆ ಕೇಳಿರಲಿಲ್ಲವೇ? ಹಾಗೆಯೇ ರಾಜ್ಯದಲ್ಲಿ ಒಟ್ಟು 10 ವಿಶ್ವವಿದ್ಯಾನಿಲಯಗಳು ಇದ್ದು ಅದರಲ್ಲಿ 6 ಹಳೆಯ ಮೈಸೂರು ಭಾಗದಲ್ಲಿದ್ದರೆ, 4 ಉತ್ತರ ಕರ್ನಾಟಕದಲ್ಲಿ ಇದೆ. ಈ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಅಷ್ಟೇ ಅಲ್ಲ ಲೋಕೋಪಯೋಗಿ ಇಲಾಖೆಯ ಕೆಲಸಗಳಲ್ಲಿ ಕೂಡ ಬಹಳಷ್ಟು ತಾರತಮ್ಯವಾಗಿದೆ. ಆದರೆ ಈ ಸಲ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕ ಅಭಿವೃದ್ಧಿಯಾಗಲಿ ಎನ್ನುವ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಬೃಹತ್ ಹಾಗೂ ಮಧ್ಯಮ ನೀರಾವರಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಅವರೇ ಇಟ್ಟುಕೊಂಡಿರತಕ್ಕಂಥ ಹಣಕಾಸಿನ ಇಲಾಖೆ ಹೀಗೆ ಉತ್ತಮವಾದಂಥ ಕೊಡುಗೆಯನ್ನು ಸಚಿವರ ಖಾತೆಗಳಲ್ಲಿ ಕೊಟ್ಟಿದ್ದಾರೆ ಮತ್ತು ಸಂಬಂಧಪಟ್ಟವರು ಉತ್ತರ ಕರ್ನಾಟಕಕ್ಕೆ ದುಡಿಯುತ್ತಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೈಗಾರಿಕೆಯಲ್ಲಿ ಉತ್ತರ ಕರ್ನಾಟಕ ಹೆಚ್ಚು ಬೆಳೆಯಬೇಕು. ಆದರೆ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ತುಮಕೂರಿನಲ್ಲಿಯೇ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಸರ್ಕಾರ ಬದ್ಧಕಂಕಣರಾಗಿ ಹೊರಟಂತಿದೆ. ಈ ರೀತಿ ಹೊರಟಿರುವಾಗ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳು ಬೆಳೆಯುವುದು ಯಾವಾಗ? ಸರ್ಕಾರ ಕೈಗಾರಿಕೆಗೆ ಹೂಡಿರುವ ಬಂಡವಾಳ ಹಳೆಯ ಮೈಸೂರು ಭಾಗಕ್ಕೆ 21,926 ಲಕ್ಷ ರೂ.ಗಳಾದರೆ ಉತ್ತರ ಕರ್ನಾಟಕ ಭಾಗಕ್ಕೆ 20,762 ಲಕ್ಷ ರೂ.ಗಳಾಗಿರುತ್ತದೆ. ಇದರಲ್ಲಿ ಕೂಡ ತಾರತಮ್ಯವಾಗಿದೆ.

ಇನ್ನು ಸಾಂಸ್ಕೃತಿಕ ರಂಗದಲ್ಲಿಯಂತೂ ಉತ್ತರ ಕರ್ನಾಟಕವನ್ನು ತುಂಡು ತುಂಡು ಮಾಡಿ ಒಗೆದು ಬಿಟ್ಟಿದೆ. ಸಾಂಸ್ಕೃತಿಕ ವಿಷಯದಲ್ಲಿ ಸಮಗ್ರ ಕರ್ನಾಟಕದಲ್ಲಿ ಉತ್ತರ ಕರ್ನಾಟಕದ ಕಡೆ ಇರುವವರನ್ನು ಸಾಂಸ್ಕೃತಿಕವಾಗಿ ಎಂದೂ ವಿಶ್ವಾಸಕ್ಕೆ ತೆಗೆದುಕೊಂಡಿರತಕ್ಕಂಥಾದ್ದು ಇಲ್ಲ. ಅವರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಟ್ಟಿರತಕ್ಕಂಥ ಉದಾಹರಣೆಗಳೇ ಇಲ್ಲ. ಸಂಗೀತ ವಿದುಷಿ ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀ ಭೀಮಸೇನ್ ಜೋಶಿ, ಶ್ರೀ ಮಲ್ಲಿಕಾರ್ಜುನ ಮನ್ಸೂರ್, ಶ್ರೀ ಬಸವರಾಜ್ ರಾಜಗುರುರವರು ಹೀಗೆ ಹಲವಾರು ಜನ ಸಂಗೀತ ವಿಭಾಗದಲ್ಲಿ ಇದ್ದಾರೆ. ಹಾಗೆಯೇ ನಾಟಕದ ವಿಭಾಗದಲ್ಲಿ ಶ್ರೀ ಮಹಂತೇಶ್, ಶ್ರೀ ಮಾಂಡ್ರೆ, ಶ್ರೀ ದುತ್ತರಗಿ ಮುಂತಾದ

ದಿಗ್ಗಜಗಳು ಇದ್ದರೂ ಕೂಡ ಅವರಿಗೆ ಸಾಂಸ್ಕೃತಿಕ ವಿಷಯದಲ್ಲಿ ಸೂಕ್ತ ಸ್ಥಾನಮಾನವೇ ಸಿಕ್ಕಿಲ್ಲ. ಈ ಸಂಗೀತ ನೃತ್ಯ ಅಕಾಡೆಮಿ ಪುರಸ್ಕೃತರಾದವರು ಯಾರ್‍ಯಾರು ಇದ್ದಾರೆ ಎಂದರೆ ಶ್ರೀ ಯುತರುಗಳಾದ ದೊರೆಸ್ವಾಮಿ ಅಯ್ಯಂಗಾರ್, ಶ್ರೀಮತಿ ಮಾಯಾರಾವ್, ಪಂಡಿತ ಶೇಷಾದ್ರಿ ಗವಾಯಿ, ಹಾಗೂ ಚಂದ್ರಭಾಗಾ ದೇವಿಯವರು, ಈ ನಾಲ್ವರಲ್ಲಿ ಒಬ್ಬರಾದರೂ ಉತ್ತರ ಕರ್ನಾಟಕದ ಭಾಗದವರು ಸಿಗಲಿಲ್ಲವೇ ಸ್ವಾಮಿ? ಜಾನಪದ ಅಕಾಡೆಮಿಯಲ್ಲಿ ಶ್ರೀ ಹೆಚ್.ಎಲ್.ನಾಗೇಗೌಡರು, ಶ್ರೀ ಕರೀಂಖಾನ್‌ರವರು, ಶ್ರೀ ಪರಮಶಿವಯ್ಯನವರು, ಶ್ರೀ ಹೆಚ್.ವಿ.ಲಕ್ಕಪ್ಪ ಗೌಡ ಅವರು ಇದ್ದಾರೆ. ನಾಟಕ ಅಕಾಡೆಮಿಯಿಂದ ಶ್ರೀ ಬಿ.ವಿ.ವೈಕುಂಠರಾಜು, ಶ್ರೀ ಪರ್ವತ ವಾಣಿ, ಶ್ರೀಮತಿ ಚಿಂದೋಡಿ ಲೀಲಾ, ಶ್ರೀ ಮರುಳಸಿದ್ದಪ್ಪ ಇವರಲ್ಲಿ ಒಬ್ಬರಿಗೂ ಪ್ರಶಸ್ತಿ ಕೊಟ್ಟಿಲ್ಲ. ಸಾಹಿತ್ಯ ಅಕಾಡೆಮಿಯಿಂದ ಶ್ರೀ ಶಿವರಾಮ ಕಾರಂತ, ಶ್ರೀ ಹೆಚ್.ಎಂ. ನಾಯಕ, ಶ್ರೀ ಕೆ.ಎಸ್.ನಿಸಾರ್ ಅಹಮದ್, ಶ್ರೀ ಜಿ.ಎಸ್. ಶಿವರುದ್ರಪ್ಪ, ಶ್ರೀ ಬರಗೂರು ರಾಮಚಂದ್ರಪ್ಪ ಇವರಲ್ಲೊಬ್ಬರಿಗೂ ಪ್ರಶಸ್ತಿ ಕೊಟ್ಟಿಲ್ಲ. ಇದರಲ್ಲಿ ಶ್ರೀ ಶಾಂತರಸರೊಬ್ಬರಿಗೆ ಮಾತ್ರ ಪ್ರಶಸ್ತಿ ಸಿಕ್ಕಿದೆ. ಹಿಂದೆ ಉಚಿತ ಅನ್ನದಾನ ಶಾಲೆಯಲ್ಲಿ ರೊಟ್ಟಿ, ಅನ್ನದಲ್ಲಿ ಸಾಂಬಾರ್ ಹಾಕುತ್ತಿದ್ದರು, ಅದರಲ್ಲಿ ಒಂದು ಬೇಳೆಕಾಳು ಹುಡುಕಿದವರಿಗೆ ಹತ್ತು ರೂಪಾಯಿಗಳನ್ನು ಕೊಡುತ್ತಿದ್ದರು. ಆ ರೀತಿ ಇದೆ ಇದು. ಎಲ್ಲಾದರೊಂದು ಉತ್ತರ ಕರ್ನಾಟಕದ ಹೆಸರು ಇದ್ದರೆ, ಅದು ಶ್ರೀ ಶಾಂತರಸರ ಹೆಸರು ಮಾತ್ರ. ಅವರು ಒಬ್ಬರೇ ಸಮರ್ಥರಿದ್ದಾರೆಯೇ? ಅವರೊಬ್ಬರೇ ಬರವಣಿಗೆಗಾರರಿದ್ದಾರೆಯೇ? ಬೇರೆ ಬರವಣಿಗೆಗಾರರಿಲ್ಲವೆ? ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳನ್ನು ನೇಮಿಸುವಾಗಲೂ ಇಲ್ಲಿಯವರೇ ಬೇಕು. ಅಲ್ಲಿ ಸಮರ್ಥ ಆಡಳಿತಗಾರರು ಇಲ್ಲವೆ? ಆಡಳಿತವನ್ನು ತಿಳಿದವರಿಲ್ಲವೆ? ಇಲ್ಲಿಯವರೇ ಅಲ್ಲಿ ಆಡಳಿತ ಮಾಡಬೇಕೇ? ಅಖಂಡ ಕರ್ನಾಟಕ, ಸಮಗ್ರ ಕರ್ನಾಟಕ, ಸಂಪೂರ್ಣ ಕರ್ನಾಟಕ ಎನ್ನುತ್ತಾರೆ, ಎಲ್ಲಿದೆ ಅದು ಎನ್ನುವುದು ಇಲ್ಲಿಯವರೆಗೆ ಚರ್ಚೆ ಆಗಿರುವ ವಿಚಾರ. ಇನ್ನು ಈ ಪ್ರಶಸ್ತಿಗಳ ಬಗ್ಗೆ ಹೇಳುವುದಾದರೆ, ವಿಧಾನ ಸೌಧದ ಸುತ್ತಮುತ್ತ, ಬೆಂಗಳೂರಿನ ಸುತ್ತಮುತ್ತ ಇರುವವರಿಗೇ ಪ್ರಶಸ್ತಿಗಳು ಸಿಗುತ್ತವೆ. 1995-96ರಲ್ಲಿ ನಾಟಕ ಅಕಾಡೆಮಿಯಿಂದ 46 ಪ್ರಶಸ್ತಿಗಳನ್ನು ಕೊಟ್ಟರೆ, ಅದರಲ್ಲಿ 26 ಪ್ರಶಸ್ತಿಗಳು ಹಳೇ ಮೈಸೂರಿನ ಭಾಗದವರಿಗೆ ಹೋದರೆ, ಉಳಿದ 17 ಪ್ರಶಸ್ತಿಗಳು ಆ ಕಡೆ ಭಾಗದವರಿಗೆ ಸಿಕ್ಕಿದೆ. ನಾಟಕವನ್ನು ಜೀವಂತವಿಟ್ಟಿರುವವರೇ ಉತ್ತರ ಕರ್ನಾಟಕದವರು. ಗುಬ್ಬಿ ಕಂಪನಿಯಲ್ಲಿ ಬಾಡಿಗೆಯನ್ನು ಯಾರು ಹೆಚ್ಚು ಕೊಟ್ಟಿದ್ದಾರೆ ನೋಡಿ? ಯಾರ ನಾಟಕಗಳು ಹೆಚ್ಚು ನಡೆಯುತ್ತಿವೆ ನೋಡಿ. ಉತ್ತರ ಕರ್ನಾಟಕದ ಕಂಪನಿಗಳ ನಾಟಕಗಳೇ ಇವತ್ತು ಹೆಚ್ಚು ನಡೆದಿದ್ದು ಇದೆ. ಹಿಂದೆ ಶ್ರೀಕಂಠಯ್ಯನವರ ಕಾಲದಲ್ಲಿ, ಶ್ರೀ ಕೃಷ್ಣಮೂರ್ತಿ, ಶ್ರೀ ಗುಬ್ಬಿ ವೀರಣ್ಣನವರ ಕಾಲದ ನಂತರ, ನಾಟಕದ ಕಂಪನಿಗಳು ಬಹಳ ಕಡಿಮೆಯಾಗಿವೆ. ಇವತ್ತು ನಾಟಕಗಳು ನಮ್ಮಲ್ಲಿ ಸಾಕಷ್ಟು ಜೀವಂತವಾಗಿವೆ. ಉತ್ತರ ಕರ್ನಾಟಕದ ನಾಟಕ ಕಂಪನಿಗಳೇ ಇವತ್ತು ಬೆಂಗಳೂರಿನಲ್ಲಿ ನಾಟಕ ಪ್ರದರ್ಶನಗಳನ್ನು ನಡೆಸುವ ನಟರು ಇವತ್ತು ಇದ್ದಾಗಲೂ, ಆ ಒಂದು ಪ್ರಶಸ್ತಿಯಲ್ಲಿ ಕೂಡ

ತಾರತಮ್ಯ ಇರುವುದನ್ನು ನಾವು ನೋಡುತ್ತಿದ್ದೇವೆ. ಆ ರೀತಿಯ ತಾರತಮ್ಯವನ್ನು ಹೋಗಲಾಡಿಸುವ ಸಂಕಲ್ಪವನ್ನು ಮಾನ್ಯ ಮುಖ್ಯಮಂತ್ರಿಗಳು ಹೊಂದಿರುವುದನ್ನು ನೋಡಿದರೆ, ಆ ತಾರತಮ್ಯ ಇವರ ಕಾಲದಲ್ಲಿ ಇಲ್ಲವಾಗಿ ಹೋಗುತ್ತದೆನ್ನುವ ವಿಶ್ವಾಸವನ್ನು ಜನತೆ ಮತದಾನದ ಮುಖಾಂತರ ಏನಿಟ್ಟಿದ್ದಾರೆ, ಆ ತಾರತಮ್ಯವನ್ನು ಹೋಗಲಾಡಿಸುವ ವಿಚಾರವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಇದು ಸಂತೋಷದ ವಿಷಯ. ಜಾನಪದ, ಯಕ್ಷಗಾನ ಅಕಾಡೆಮಿಯಲ್ಲಿ 1980ರಿಂದ 1996ರ ಅವಧಿಯಲ್ಲಿ ಒಟ್ಟು 345 ಪ್ರಶಸ್ತಿಗಳನ್ನು ಕೊಟ್ಟಿದ್ದು, ಅದರಲ್ಲಿ 200 ಪ್ರಶಸ್ತಿಗಳು ಈ ಭಾಗದವರಿಗೆ ಸಿಕ್ಕಿದ್ದರೆ, ಕೇವಲ 145 ಪ್ರಶಸ್ತಿಗಳು ಆ ಭಾಗದವರಿಗೆ ಸಿಕ್ಕಿದೆ. ಇನ್ನು, ರಾಜ್ಯೋತ್ಸವ ಪ್ರಶಸ್ತಿಯ ಬಗ್ಗೆ ಹೇಳುವುದಾದರೆ, ಹಣ ಬೇಡ, ರಸ್ತೆ ಬೇಡ, ಬಸ್ಸು ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆಗೆ ಹಣ ಇಲ್ಲ, ಪ್ರಶಸ್ತಿ ಎಂದರೆ, ಒಂದು ಕಾಗದ, ಆ ಕಾಗದಕ್ಕೆ 5-10 ಸಾವಿರ ರೂಪಾಯಿಗಳು, ಇದು ಯಾರಿಗೆ? 1994ರಲ್ಲಿ 39 ಪ್ರಶಸ್ತಿಗಳನ್ನು ನೀಡಿದರು. ಅದರಲ್ಲಿ 32 ಈ ಭಾಗದವರಿಗೆ ದೊರೆತರೆ, ಉಳಿದ 7 ಪ್ರಶಸ್ತಿಗಳು ಆ ಭಾಗದವರಿಗೆ ದೊರೆಯಿತು. ಯಾರೂ ಪ್ರಶಸ್ತಿ ಪಡೆಯಲು ಶಿಫಾರಸ್ಸಿಗಾಗಿ ಹೋಗಬಾರದು. ಇಲ್ಲಿಗೆ 700 ಕಿ.ಮೀ. ದೂರವಿರುವ ಬೀದರ್‌ನಿಂದ ಹಣ ಖರ್ಚು ಮಾಡಿಕೊಂಡು ಬಂದ ಸಾಹಿತಿಗಳು, ನಾಟಕಕಾರರು ಊಟಕ್ಕೆ ಗತಿಯಿಲ್ಲದ ಸ್ಥಿತಿಯಲ್ಲಿರುತ್ತಾರೆ. ಎಲ್ಲಿ ಸರಸ್ವತಿ ನೆಲೆಸಿರುವಳೋ, ಅಲ್ಲಿ ಲಕ್ಷ್ಮಿ ನೆಲೆಸಿರುವುದಿಲ್ಲ. ನಮ್ಮ ಊರಿನಲ್ಲಿ ನನ್ನ ಮನೆಯ ಪಕ್ಕದಲ್ಲಿ , ಶ್ರೀ ಪಿ.ವಿ. ಧುತ್ತರಗಿ ಎನ್ನುವ ನಾಟಕಕಾರನಿದ್ದು, ಆತ ಬರೆದ ಕಥೆಗಳಲ್ಲಿ ಮೂರು ಕಥೆಗಳು ಚಲನಚಿತ್ರವಾದುವು. ಅವು ಯಾವುವೆಂದರೆ, ಸೊಸೆ ತಂದ ಸೌಭಾಗ್ಯ, ಸಂಪತ್ತಿಗೆ ಸವಾಲ್, ಮತ್ತೊಂದರ ಹೆಸರು ನೆನಪಿಲ್ಲ. ಈ ಚಿತ್ರಗಳು ಇಡೀ ರಾಜ್ಯಾದ್ಯಂತ ವರ್ಷಾನುಗಟ್ಟಲೆ ಪ್ರದರ್ಶನ ಕಂಡು, ಕೋಟಿಗಟ್ಟಲೆ ಹಣ ಗಳಿಸಿದರೂ, ಆತನಿಗೆ ಉಡುವುದಕ್ಕೆ ಒಂದು ಪಂಚೆಯೂ ಇಲ್ಲ. ನಾನೇ ಆತನಿಗೆ ವರ್ಷಕೊಮ್ಮೆ ಎರಡು ಪಂಚೆ ಕೊಡಿಸುವ ಸ್ಥಿತಿ ಇದೆ. ಆತ ಬಸ್‌ನಿಲ್ದಾಣದಲ್ಲಿ ಸತ್ತ. ಶ್ರೀ ಮಹಾಂತೇಶಶಾಸ್ತ್ರಿ ಎನ್ನುವವ ಅಲ್ಲಿರುವ ಮಠದಲ್ಲಿ ಸತ್ತ. ಆ ಜನರು ಈ ಒಂದು ಪ್ರಶಸ್ತಿಯಿಂದಲೂ ವಂಚಿತರಾದರೆ ಇದು ಹೇಗೆ ಎಂಬುದರ ಬಗ್ಗೆ ತಾವು ವಿಚಾರ ಮಾಡಿ. 1995ರಲ್ಲಿ 39 ಜನರಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಅದರಲ್ಲಿ 27 ಪ್ರಶಸ್ತಿಗಳು ಈ ಭಾಗದ ಜನರಿಗೂ, 12 ಪ್ರಶಸ್ತಿಗಳು ಆ ಭಾಗದ ಜನರಿಗೂ ದೊರೆತವು. 1996ರಲ್ಲಿ 54 ಪ್ರಶಸ್ತಿಗಳನ್ನು ನೀಡಲಾಗಿದ್ದು, 41 ಪ್ರಶಸ್ತಿಗಳು ಈ ಭಾಗದ ಜನರಿಗೂ, 13 ಪ್ರಶಸ್ತಿಗಳು ಆ ಭಾಗದ ಜನರಿಗೂ ದೊರೆತವು. ಈ ಹಣಕಾಸಿನ ವಿಷಯದಲ್ಲಿ, ಪ್ರಶಸ್ತಿಗಳ ವಿಷಯದಲ್ಲಿ, ಸಾಹಿತ್ಯಾಸಕ್ತರನ್ನು ಆರಿಸುವ ವಿಷಯದಲ್ಲಿ, ಕಲೆ, ಜಾನಪದದ ವಿಷಯಗಳಲ್ಲಿ, ಅದನ್ನೆಲ್ಲಾ ಅಲ್ಲಿನ್ನೂ ಜೀವಂತ ಇಟ್ಟಿರುವ ಸ್ಥಿತಿ ಇದ್ದರೂ ಸಹ, ಅವರಿಗೆ ಪುರಸ್ಕಾರವನ್ನು ನೀಡುವಲ್ಲಿನ ತಾರತಮ್ಯವನ್ನು ಹೋಗಲಾಡಿಸದೇ ಹೋದರೆ, ಎಷ್ಟು ದಿವಸ ಈ ಅನ್ಯಾಯವನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಎಷ್ಟು ದಿವಸ ಜನ ಸುಮ್ಮನೆ ಕುಳಿತಿರುತ್ತಾರೆ? ಈಗ ಜನ ಪ್ರಜ್ಞಾವಂತರಾಗಿದ್ದಾರೆ. ಮೊದಲು ವಿದ್ಯಾವಂತರಿರಲಿಲ್ಲ. ವಿದ್ಯಾವಂತರು ಎಲ್ಲಿ ಇರುವುದಿಲ್ಲವೋ, ಅಲ್ಲಿ ನಾಗರೀಕತೆ ಕಡಿಮೆ ಇರುತ್ತದೆ. ಜೀವನ ಪ್ರಜ್ಞೆ

ಕಡಿಮೆ ಇರುತ್ತದೆ, ನೋಡುವುದು, ಕೇಳುವುದು ಕಡಿಮೆ ಇರುತ್ತದೆ. ಇವತ್ತು ಎಲ್ಲರೂ ವಿದ್ಯಾವಂತರಾಗುತ್ತಿದ್ದಾರೆ. ಖಾಸಗಿ ಸಂಘ-ಸಂಸ್ಥೆಗಳ ಮೂಲಕ ಏನೋ ಕಷ್ಟಪಟ್ಟು ವಿದ್ಯಾವಂತರಾಗುತ್ತಿದ್ದಾರೆ. ನಮಗೇಕೆ ಹೀಗೆ, ಅವರಿಗೇಕೆ ಹಾಗೆ ಎಂದು ವಿಚಾರ ಮಾಡಿ ಒಮ್ಮೆ ಅವರು ಭುಗಿಲೆದ್ದರೆ, ಸಾವಿರಾರು ಅಗ್ನಿಶಾಮಕ ದಳದವರು ಬಂದರೂ ಅದನ್ನು ಶಮನ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಪರಿಹಾರ ಕಾರ್ಯಗಳ ಮುಖಾಂತರ ಮಾತ್ರ ಆ ಆಕ್ರೋಶವನ್ನು ಶಮನಗೊಳಿಸುವುದಕ್ಕೆ ಸಾಧ್ಯವೇ ಹೊರತು ಮತ್ತೊಂದರಿಂದ ಸಾಧ್ಯವಿಲ್ಲ. ಇವತ್ತು ಇಂಥ ಒಂದು ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕಲು ಉನ್ನತ ಮಟ್ಟದ ಅಂಗವನ್ನು ರಚಿಸುತ್ತೇವೆಂದು ಹೇಳಿರುವುದು ನೋಡಿದರೆ, ಉತ್ತರ ಕರ್ನಾಟಕದ ಜನರಿಗೆ ಇವತ್ತು ಹಾಲಿಗೆ ಜೇನು ಸೇರಿಸಿ ಕುಡಿದಂತಾಗಿದೆ. ಅದರ ಬಗ್ಗೆ ಸರ್ಕಾರ ಕಾರ್ಯೋನ್ಮುಖವಾಗುವುದರಲ್ಲಿ ಯಾವುದೇ ಸಂಶಯವಿಲ್ಲ, ಅದಾಗುತ್ತದೆ, ಬೇಗ ಆಗಬೇಕೆನ್ನುವ ಒತ್ತಾಯವನ್ನು ನಾನು ತಮ್ಮ ಮುಖಾಂತರ ಮಾಡುತ್ತೇನೆ.

ಇನ್ನು, ಕಾವೇರಿ ಹಾಗೂ ಕೃಷ್ಣಾ ಮೇಲ್ದಂಡೆ ಕಣಿವೆಯಲ್ಲಿ ಬರುವ ಕಾಮಗಾರಿಗಳ ಸ್ಥಿತಿ ಬಗ್ಗೆ ಹೇಳುವುದಾದರೆ, ಕಾವೇರಿ ಕಣಿವೆಗೆ ಹಣ ಮಂಜೂರಾಗಿರುವುದು, ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣ ಮಂಜೂರಾಗಿರುವುದು, ಇವತ್ತು ಸುಪ್ರೀಂಕೋರ್ಟಿಗೆ ಹೋಗಿರುವ ಸ್ಥಿತಿ ಇದೆ. ಆಂಧ್ರದವರು ಸುಪ್ರೀಂಕೋರ್ಟಿಗೆ ಹೋದರು. ಹಿಂದಿನ ಸರ್ಕಾರದಲ್ಲಿ ನೀರಾವರಿ ಸಚಿವರಾಗಿದ್ದ, ಶ್ರೀ ಕೆ.ಎನ್. ನಾಗೇಗೌಡರವರು ಹೈದರಾಬಾದಿನಲ್ಲಿ ಕ್ರೆಸ್ಟ್ ಗೇಟ್‌ಗಳನ್ನು ಕೂರಿಸಿದ್ದೇವೆಂದು ಮಾಧ್ಯಮಗಳ ಮೂಲಕ ಹೇಳಿದರು. ಅಲ್ಲಿ ಗೇಟೇ ಬಂದಿರಲಿಲ್ಲ. ಇನ್ನು ಕೂರಿಸುವ ಮಾತೆಲ್ಲಿ? ವಿಚಾರ ತಿಳಿದ ಅಲ್ಲಿಯ ಜನರು ಎಚ್ಚೆತ್ತು ಸುಪ್ರೀಂಕೋರ್ಟಿಗೆ ಹೋದರು. ಇವತ್ತು ಅಲ್ಲಿ ಕೆಲಸ ನಿಂತಿದೆ. ದೆಹಲಿಯಿಂದ ಇದಕ್ಕಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತರುತ್ತೇವೆಂದು ಮಾಧ್ಯಮಗಳ ಮೂಲಕ ಮತ್ತು ಈ ಸದನದಲ್ಲಿ ಅವರು ಹೇಳಿದರು. ನಾವು ಅಷ್ಟು ದುಡ್ಡು ತರುತ್ತಾರೆಂದು ಬುತ್ತಿ ಕೊಟ್ಟು ಕಳುಹಿಸಿದೆವು. ಆದರೆ, ಅವರು ಹುಲಿ ಹಿಡಿದುಕೊಂಡು ಬರುತ್ತಾರೆಂದರೆ, ಇಲಿ ಹಿಡಿದುಕೊಂಡು ಬಂದರು. ಕೇವಲ 100 ಕೋಟಿ ರೂಪಾಯಿಗಳನ್ನು ತಂದರು. ಇದನ್ನು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡುವುದು ಸರ್ಕಾರದ ಸಂಕಲ್ಪವಾಗಿದೆ. ಆ ಸಂಕಲ್ಪ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ವ್ಯಕ್ತವಾಗಿರುವುದನ್ನು ನಾವು ನೋಡಬಹುದು. ಅದರ ಜೊತೆಗೆ, ರಾಜ್ಯದ ವಿದ್ಯುತ್ ಉತ್ಪಾದನೆ ಬಗ್ಗೆ ಹೇಳಬೇಕಾದರೆ, 10 ಸಾವಿರ ಮೆಗಾವ್ಯಾಟ್‌ಗಿಂತ ಹೆಚ್ಚು ವಿದ್ಯುತ್ ನಮಗೆ ಬೇಕಾಗಿದ್ದು, ಉತ್ಪಾದನೆಯಾಗುತ್ತಿರುವುದು 3,500 ಎಂ.ಡಬ್ಲ್ಯೂ. ಈ ಅಂತರವನ್ನು ಕಡಿಮೆಗೊಳಿಸಬೇಕಾಗಿದೆ. ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿದಾಗ ಮಾತ್ರ ಆ ಅಂತರವನ್ನು ನೀಗಿಸುವುದಕ್ಕೆ ಸಾಧ್ಯವೆಂದು ಹೇಳಿ, ಈ ಸಂದರ್ಭದಲ್ಲಿ ಸಮಗ್ರ ಕರ್ನಾಟಕದ ಅಭಿವೃದ್ಧಿ, ಅಭ್ಯುದಯಕ್ಕಾಗಿ ಸೂಕ್ತ ವಿಚಾರಗಳನ್ನು, ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಮಂಡಿಸುವ ಈ ಒಂದು ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಭಾರಿ ಕೈಗಾರಿಕೆ, ಸಣ್ಣ ಕೈಗಾರಿಕಾ ಕ್ಷೇತ್ರಗಳಲ್ಲಿಯೂ ಅದರಲ್ಲಿ ಬಂಡವಾಳ ಹೂಡುವಲ್ಲಿಯೂ, ತಾರತಮ್ಯವನ್ನು ಸರಿಪಡಿಸುವ ವಿಷಯದಲ್ಲಿಯೂ ಸರ್ಕಾರ ಬದ್ಧವಾಗಿರುವುದು ಮಾನ್ಯ ರಾಜ್ಯಪಾಲರ ಭಾಷಣದ ವರದಿ ಮೂಲಕ ವ್ಯಕ್ತವಾಗಿದೆ ಎನ್ನುವ ಮಾತನ್ನು ಹೇಳಿ, ಅವರ ಭಾಷಣವನ್ನು ಸ್ವಾಗತಿಸುತ್ತಾ,

ತಾರತಮ್ಯವನ್ನು ಸರಿಪಡಿಸುವಲ್ಲಿ ಸರ್ಕಾರ ಸಂಕಲ್ಪವನ್ನು ಹೊಂದಿದೆ ಎಂಬ ವಿಶ್ವಾಸವನ್ನು ತಾಳುತ್ತಾ, ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಯು.ಆರ್. ಸಭಾಪತಿ(ಉಡುಪಿ):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸಿ ಮಂಡಿಸಿರುವ ಪ್ರಸ್ತಾವಕ್ಕೆ ನನ್ನ ಅನುಮೋದನೆಯನ್ನು ಸೂಚಿಸಿ, ತಮ್ಮ ಅನುಮತಿ ಮೇರೆಗೆ ಒಂದೆರಡು ಮಾತುಗಳನ್ನಾಡಲಿಚ್ಛಿಸುತ್ತೇನೆ.

ರಾಜ್ಯದಲ್ಲಿ ಕಳೆದ 5 ವರ್ಷಗಳ ಆಡಳಿತ ವೈಫಲ್ಯ, ದೋಷಪೂರಿತ ರಾಜಕೀಯ ನೀತಿ-ಧೋರಣೆಗಳು ಇವುಗಳಿಂದ ನೊಂದ ರಾಜ್ಯದ ಮತದಾರ, ಅದರಲ್ಲೂ ಪ್ರಜ್ಞಾವಂತ ಮತದಾರ "ಜನಸೇವೆಯೇ ಜನಾರ್ಧನ ಸೇವೆ" ಎಂದು ಬಿಂಬಿಸಿರುವ ಕಾಂಗ್ರೆಸ್ ಪಕ್ಷವನ್ನು ಮತ್ತೆ ಆರಿಸಿ ಕಳುಹಿಸಿದ್ದಾನೆ. ಈ ಸಂದರ್ಭದಲ್ಲಿ ಚುನಾವಣೆ ಹಂತದಲ್ಲಿ ಕೊಟ್ಟಿರುವ ಆಶ್ವಾಸನೆಗಳಿವೆ, ಅವುಗಳನ್ನು ಇವತ್ತು ನಾವು ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯೊಂದು ಪ್ಯಾರಾದಲ್ಲೂ ಕೂಡ ಕಂಡುಕೊಂಡು ಜನರಿಗೆ ನೀಡಿರುವ ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ ಕಂಕಣಬದ್ಧರಾಗಿದ್ದೇವೆ ಎನ್ನುವ ಮಾತನ್ನು ನಮ್ಮ ಸರ್ಕಾರ ಪ್ರತಿಪಾದಿಸಿದೆ ಎಂದು ಹೇಳಿದರೆ ನಮಗೆ ಬಹಳ ಹೆಮ್ಮೆ ಎನಿಸುತ್ತದೆ. ಇದನ್ನು ಕಾರ್ಯರೂಪದಲ್ಲಿ ತರಲಿಕ್ಕೆ, ಬಹಳಷ್ಟು ಕಷ್ಟ ಸಾಧ್ಯವಾದ ಸವಾಲುಗಳನ್ನು, ಎದುರಿಸಬೇಕಾದ ವಿಚಾರಗಳ ಬಗ್ಗೆ ಸಹ ನಾವು ಯೋಚನೆ ಮಾಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಪ್ರಜಾತಂತ್ರ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಮಹತ್ವಪೂರ್ಣವಾಗಿದೆ. ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಜನರ ಸಮಸ್ಯೆಗಳ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿ ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳುವ ರೂಪದಲ್ಲಿ ನಾವು ನಮ್ಮ ಪ್ರಯತ್ನವನ್ನು ಮಾಡಬೇಕು ಎನ್ನುವ ಫಲವನ್ನು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಂಡುಕೊಂಡಿದ್ದೇವೆ. ಜಾತ್ಯಾತೀತತೆ, ಧರ್ಮನಿರಪೇಕ್ಷತೆ, ಜಾತಿಯ ಆಧಾರ, ಧರ್ಮದ ಆಧಾರದ ಮೇಲೆ ಈ ಸಮಾಜವನ್ನು ಎರಡು ಭಾಗಗಳಾಗಿ ಒಡೆದು ಆಳುವ ನೀತಿಗೆ ಕೆಲವೊಂದು ಪಕ್ಷಗಳು ಬದ್ಧರಾಗಿದ್ದು, ಆ ಮೂಲಕವಾಗಿ ಪ್ರಜಾತಂತ್ರದ ಏಣಿಯನ್ನು ಏರಿ ಅಧಿಕಾರಕ್ಕೆ ಬರತಕ್ಕಂಥ ಒಂದು ಪ್ರಯತ್ನ ನಡೆದಿದೆ. ಇವತ್ತು ಜಾತ್ಯಾತೀತತೆ ಎನ್ನುವ ಯಾವ ವಿಚಾರಧಾರೆ ಏನಿದೆ ಅದಕ್ಕೆ ನಮ್ಮ ಸರ್ಕಾರ ಕಟಿಬದ್ಧವಾಗಿ ಹೇಳಿದೆ. ಈ ಹಿಂದಿನ ಇನ್ನಿತರ ರಾಜಕೀಯ ಪಕ್ಷಗಳ ಧೋರಣೆಗಳು, ಜಾತಿಯವಾದದ, ಕೋಮುವಾದದ, ಯಾವ ಸಂದೇಶಗಳನ್ನು ಭಿತ್ತರಿಸತಕ್ಕಂಥ ಜನ ಯಾರಿದ್ದಾರೆ ಅವರಿಗೆ ಸೂಕ್ತವಾದಂಥ ಉತ್ತರವನ್ನು ಜನ ಕೊಟ್ಟು ನಮ್ಮನ್ನು ಇಲ್ಲಿಗೆ ಕಳುಹಿಸಿದಾಗ ಅದನ್ನು ನಾವು ಎತ್ತಿ ಹಿಡಿಯಬೇಕಾದಂಥ ಸನ್ನಿವೇಶದಲ್ಲಿ ನಾವು ಅದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದೇವೆ. ಧರ್ಮ ಮತ್ತು ಜಾತಿ ಇದು ಮಾನವ ಸೃಷ್ಟಿ. ತಾಯಿ ಎನ್ನುವುದು ಸತ್ಯ, ತಂದೆ ಎನ್ನುವುದು ನಂಬಿಕೆ, ಪ್ರಕೃತಿ ಎನ್ನುವುದು ಸತ್ಯ, ದೇವರು ಮತ್ತು ಧರ್ಮ ಎಲ್ಲಾ ನಂಬಿಕೆ. ಒಬ್ಬ ಹೆಣ್ಣುಮಗಳು ಒಂಬತ್ತು ತಿಂಗಳು ಕಾಲ ಗರ್ಭವನ್ನು ಹೊತ್ತುಕೊಂಡು ಒಂಬತ್ತು ತಿಂಗಳಾದ ಮೇಲೆ ಭೂಮಿಗೆ ಒಂದು ಮಗುವನ್ನು ಕೊಡುತ್ತಾಳೆ. ಆ ಮಗು ಸ್ವಲ್ಪ ಮಾನಸಿಕವಾಗಿ ಬುದ್ಧಿಮತ್ತೆಗೆ ಬರುವಾಗ ಆ ಮಹಾ ತಾಯಿ ತನ್ನ ಗಂಡನನ್ನು ತೋರಿಸಿ 'ಇದು ಅಪ್ಪ' ಎಂದು ಹೇಳುತ್ತಾಳೆ. ಆಗ ಆ ಮಗು ಕೂಡ ಅವನನ್ನು 'ಅಪ್ಪ, ಅಪ್ಪ' ಎಂದು ಕರೆಯುತ್ತದೆ. ಆ ಮಹಾತಾಯಿ ಹಿಂದೂ ಧರ್ಮದವಳಾಗಿದ್ದರೆ ಆ ಮಗುವಿಗೆ ಕೃಷ್ಣ ದೇವರ, ರಾಮ ದೇವರ,

11.30 ಎ.ಎಂ.

ವೆಂಕಟರಮಣ ಸ್ವಾಮಿಯ ಭಾವಚಿತ್ರವನ್ನು ತೋರಿಸಿ, 'ಇದು ನಿನ್ನ ದೇವರು, ಇದಕ್ಕೆ ನೀನು ಈ ರೀತಿ ಸಾಷ್ಟಾಂಗ ನಮಸ್ಕಾರ ಮಾಡಬೇಕು' ಎಂದು ಕಲಿಸಿಕೊಡುತ್ತಾಳೆ. ಆ ತಾಯಿ ಕ್ರೈಸ್ತ ಧರ್ಮದವಳಾಗಿದ್ದರೆ, ಶಿಲುಬಿಗೇರಿದ ಯೇಸುಕ್ರಿಸ್ತನನ್ನು ತೋರಿಸಿ, 'ಇದು ನಿನ್ನ ದೇವರು, ಇದಕ್ಕೆ ಈ ರೀತಿ ನಮಸ್ಕಾರ ಮಾಡಬೇಕು.' ಎಂದು ಕಲಿಸಿ ಕೊಡುತ್ತಾಳೆ. ಆ ಮಹಾತಾಯಿ ಮುಸ್ಲಿಂ ಧರ್ಮದವಳಾಗಿದ್ದರೆ, ಆಕಾಶವನ್ನು ತೋರಿಸಿ, 'ಅಲ್ಲಾ-ಒ-ಅಕ್ಬರ್' ಎಂದು ಹೇಳಿ, 'ಅದೃಶ್ಯವಾಗಿರುವ ದೇವರನ್ನು ಸ್ಮರಿಸು' ಎಂದು ತನ್ನ ಮಗನಿಗೆ ಕಲಿಸಿ ಕೊಡುತ್ತಾಳೆ. ಈ ರೀತಿಯಾಗಿ ತಾಯಿ ಕೊಟ್ಟಿರತಕ್ಕಂಥ ವಿಚಾರಧಾರೆಗಳ ಮೂಲಕ ಆ ಮಗು 'ಓಹೋ, ಇದು ನನ್ನ ತಂದೆ, ಇದು ನನ್ನ ದೇವರು, ಇದು ನನ್ನ ಧರ್ಮ, ಇದು ನನ್ನ ನಂಬಿಕೆ ' ಎಂದು ತಿಳಿದುಕೊಳ್ಳುವುದಕ್ಕೆ ತಾಯಿ ನೆರವಾಗುತ್ತಾಳೆ. ಪ್ರಕೃತಿಯ ಸೃಷ್ಟಿಯಲ್ಲಿ ಮಾನವ ಜನ್ಮ ಒಂದು ರೀತಿಯಲ್ಲಿ ಅನಿರೀಕ್ಷಿತವಾದಂಥ ಜನ್ಮ. ಅನಿರೀಕ್ಷಿತವಾಗಿ ನಾವು ಮಾನವರಾಗಿ ಜನ್ಮವೆತ್ತಿದ ಮೇಲೆ ಸಮಾನವಾಗಿ ಕೊಡತಕ್ಕಂಥ ಪ್ರಕೃತಿಯ ನೀರು, ಗಾಳಿ, ಬೆಳಕು, ಇವುಗಳನ್ನು ಸಮಾನವಾಗಿ ಸ್ವೀಕರಿಸುವ ನಾವು ಇಂದು ದೇವರ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಒಂದು ಸಮಾಜದ ವಿರುದ್ಧ ಮತ್ತೊಂದು ಸಮಾಜವನ್ನು ಎತ್ತಿ ಕಟ್ಟುವುದು, ಒಂದು ಸಮಾಜದ ಪ್ರಾರ್ಥನಾ ಮಂದಿರವನ್ನು ಮತ್ತೊಂದು ಸಮಾಜಕ್ಕೆ ಸಂಬಂಧಪಟ್ಟವರು ಅದನ್ನು ಬೀಳಿಸುವುದು. ಅಥವಾ ಒಂದು ಸಮಾಜದ ಜನರಿಗೆ ಮತ್ತೊಂದು ಸಮಾಜದ ಜನರು ಹೊಟ್ಟೆಗೆ ಚೂರಿ ಹಾಕುವುದು, ಈ ರೀತಿಯಾದಂಥ ವೈಚಿತ್ರವಾದಂಥ ಧರ್ಮನಿರಪೇಕ್ಷಿತೆಯ ಹೆಸರಿನಲ್ಲಿ ಜಾತಿಯ ವಾದವನ್ನು ಪ್ರೋತ್ಸಾಹಿಸಿ ಆ ಮೂಲಕವಾಗಿ ಪ್ರಜಾಪ್ರಭುತ್ವದಲ್ಲಿ ಅಧಿಕಾರಕ್ಕೆ ಬರಬೇಕು ಎನ್ನತಕ್ಕಂಥ ಪ್ರಯತ್ನಕ್ಕೆ ಕರ್ನಾಟಕ ರಾಜ್ಯದಲ್ಲಿ ಜನರು ಇದಕ್ಕೆ ಉತ್ತರವನ್ನು ಕೊಟ್ಟು, ಅವರನ್ನು ಸಂಪೂರ್ಣವಾಗಿ ಹೊರಗೆ ದೂಡಿದ್ದಾರೆ. ಯಾವ ಜನ ಅಧಿಕಾರಕ್ಕೆ ಬಂದು ಇಲ್ಲಿ ಐದು ವರ್ಷಗಳ ಕಾಲ ತಮ್ಮ ಕರ್ತವ್ಯದ ಪ್ರಜ್ಞೆಯನ್ನು ಮರೆತು, ನಾವು ಏತಕ್ಕಾಗಿ ಅಧಿಕಾರಕ್ಕೆ ಬಂದಿದ್ದೇವೆ ಎನ್ನುವುದನ್ನು ಮರೆತು, ಅಧಿಕಾರಕ್ಕೆ ಬಂದ ತಕ್ಷಣ ಪ್ರಥಮವಾಗಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಮಾಡುವಂಥ ಸಂದರ್ಭದಲ್ಲಿ, ನಾವು ಆ ಕಡೆ ಕುಳಿತ್ತಿದ್ದಾಗ ನಮ್ಮನ್ನು ತೋರಿಸಿ ಹೇಳಿದಂಥ ಮಾತುಗಳು ಏನಿದ್ದವು ಕೊನೆಯ ದಿನಗಳವರೆವಿಗೂ ಅವು ಯಾವುವೂ ಉಳಿಯಲಿಲ್ಲ. ಇವತ್ತು ಪ್ರಜ್ಞಾವಂತನಾದ ಮತದಾರ ಸಂಪೂರ್ಣವಾದ ಜ್ಞಾನ ನಮಗೆ ಇದೆ, ನಾವು ಪ್ರಜ್ಞಾವಂತರಿದ್ದೇವೆ ಎನ್ನುವುದನ್ನು ಸೂಚಿಸಿ, ಇವತ್ತು ರಾಜಕೀಯ ಇತಿಹಾಸದಲ್ಲಿಯೇ ಒಂದು ಮಹಾ ಪರಿವರ್ತನೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿ ಆ ಮೂಲಕವಾಗಿ ನಮಗೆ ದೊಡ್ಡ ಜವಾಬ್ದಾರಿಯನ್ನು ಮತ್ತು ಸವಾಲನ್ನು ಹಾಕಿದ್ದಾನೆ. ನಮ್ಮ ಮೇಲೆ ಹೊರಿಸಿರುವ ಜವಾಬ್ದಾರಿಯ ಅರಿವು ನಮಗೆ ಸಂಪೂರ್ಣವಾಗಿ ಇದೆ. ಇದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತವಾಗಿದೆ. ಇದರ ಜೊತೆಗೆ ಹಿಂದಿನ ಸರ್ಕಾರ ಮಾಡಿದಂಥ ಅನೇಕ ಸಮಸ್ಯೆಗಳಿಗೆ ನಾವು ಪರಿಹಾರವನ್ನು ಕಂಡು ಕೊಳ್ಳಬೇಕಾಗಿದೆ. ಮತ್ತು ಮುಂದಿನ ಸವಾಲುಗಳನ್ನು ಎದುರಿಸಲು ನಾವು ಸರ್ವಶಕ್ತರಾಗಬೇಕು. ನಮ್ಮಲ್ಲಿರುವ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಆಡಾಳಿತಾತ್ಮಕವಾದಂಥ ನ್ಯೂನತೆಗಳನ್ನು ಎದುರಿಸಿ ಅದರ ಕುಂದು ಕೊರತೆಗಳನ್ನು ನೀಗಿಸತಕ್ಕಂಥ ಸರ್ವ ಪ್ರಯತ್ನವನ್ನು ಮಾಡಬೇಕು ಎನ್ನುವ ದೃಷ್ಟಿ ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾದ ಚಿತ್ರಣ ಕೊಟ್ಟಿದೆ. ನಮ್ಮ ಪಕ್ಷದ ಅನೇಕ ಕಟಿಬದ್ಧವಾದ ವಿಚಾರಧಾರೆಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೊಡುವುದರೊಂದಿಗೆ, ಸಾಮಾಜಿಕ ನ್ಯಾಯ, ಸಾಮಾಜಿಕ ಅಸಮತೋಲನೆ,

ಪ್ರಾದೇಶಿಕ ಅಸಮಾತೋಲನೆ, ಇವುಗಳ ಬಗ್ಗೆ ಮಾನ್ಯ ಸದಸ್ಯರಾದ ನಂಜಯ್ಯಮಠ್‌ರವರು ಬಹಳ ವಿಚಾರತ್ಮಾಕವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಆಗಿರತಕ್ಕಂಥ ಪ್ರಾದೇಶಿಕ ಅಸಮತೋಲನೆಯನ್ನು ಕೂಡ ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗದಿದ್ದರೂ ಕೂಡ ಅದರ ಬಗ್ಗೆ ಒಂದು ಸಣ್ಣ ಪ್ರಯತ್ನ ಇದೆ ಎನ್ನುವಂಥ ನಿರ್ಧಿಷ್ಟ ನಿಲುವನ್ನು ಸರ್ಕಾರ ಪ್ರಕಟಿಸಿದ್ದು ರಾಜ್ಯದ ಎಲ್ಲಾ ಮೂಲೆ ಮೂಲೆಯಲ್ಲಿರುವ ಜನಗಳಿಗೆ ಇದು ಒಂದು ಸಂತೋಷದ ವಿಚಾರವಾಗಿದೆ. ಇದಲ್ಲದೇ ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದಿರತಕ್ಕಂಥ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ ಎನ್ನುವಂಥ ಮಾತನ್ನು ಕೂಡ ಹೇಳಿರುವುದನ್ನು ನೋಡಿದರೆ ಮಹಿಳೆಯರ ಬಗ್ಗೆ ಅಪಾರವಾದ ಕಳಕಳಿ ಈ ಸರ್ಕಾರಕ್ಕೆ ಇದೆ ಎನ್ನುವುದನ್ನು ಈ ಭಾಷಣದಲ್ಲಿ ತೋರಿಸಲಾಗಿದೆ. ಶಿಕ್ಷಣ ರಂಗದಲ್ಲಾಗಲಿ, ಉದ್ಯೋಗ ರಂಗದಲ್ಲಾಗಲಿ, ಪರಿಶಿಷ್ಟಜಾತಿ ಮತ್ತು ವರ್ಗಕ್ಕೆ, ಹಿಂದುಳಿದವರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿಕೊಂಡು ಅವರಿಗೆ ಬೇಕು ಬೇಕಾದ ರೀತಿಯಲ್ಲಿ ನೀತಿ ನಿಯಮಗಳನ್ನು ಸೃಷ್ಟಿಸಿ ಆ ಮೂಲಕ ಅವರಿಗೆ ಕೂಡ ರಕ್ಷಣೆಯನ್ನು ನೀಡುವ ವಿಚಾರಧಾರೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಯುಕ್ತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ನೀರು ಪೂರೈಕೆಯ ವಿಚಾರವನ್ನು ಬಹಳ ಮಹತ್ವಪೂರ್ಣವಾಗಿ ಈ ಸರ್ಕಾರ ಈ ಸದನದ ಮುಂದೆ ಇಟ್ಟಿದೆ. ಒಂದೂವರೆ ಲಕ್ಷ, ಎರಡು ಲಕ್ಷದ ಜನ ಪ್ರತಿನಿಧಿಗಳಾದ ನಮಗೆ ಎಲ್ಲಾ ರೀತಿಯ ಸೌಕರ್ಯಗಳು ಇವೆ. ಆದರೆ ನಮ್ಮನ್ನು ಕಳುಹಿಸಿಕೊಟ್ಟಿರತಕ್ಕಂಥ ಮತದಾರ ಎಲ್ಲೋ ಒಂದು ಗ್ರಾಮದಲ್ಲಿ ನೀರಿಗಾಗಿ ಪರದಾಡುವಾಗ, ಹೆಣ್ಣುಮಕ್ಕಳು ನಲ್ಲಿಯ ಮುಂದೆ ಕೊಡ ಹಿಡಿದುಕೊಂಡು ಗಂಟೆಗಟ್ಟಲೆ ನಿಂತುಕೊಂಡಿರುವ ಚಿತ್ರಣ ನಮ್ಮ ಸರ್ಕಾರ ನಡೆಸುವವರ ನೇತರಾರಿಗೆ ಆ ಚಿತ್ರಣ ಮನವರಿಕೆ ಆದರೆ, ಆ ನೀರು ಪೂರೈಕೆಯ ಆದ್ಯತೆಯ ಬಗ್ಗೆ ಖಂಡಿತವಾಗಿ ನಮ್ಮ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಛಲವನ್ನು ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತೋರಿಸಿಕೊಡಲಾಗಿದೆ. ಇದರ ಜೊತೆಗೆ ಸಾಕ್ಷರತೆ ಪ್ರಗತಿಗೆ ತನ್ನ ಎಲ್ಲಾ ಪ್ರಯತ್ನವನ್ನು ಮಾಡುವಂಥ ವಿಚಾರವನ್ನು ಈ ಭಾಷಣದಲ್ಲಿ ತೋರಿಸಲಾಗಿದೆ. ರಾಜ್ಯದಲ್ಲಿ ಅನಕ್ಷರತೆಯ ಪ್ರಮಾಣ ಸುಮಾರು 25 ರಿಂದ 65 ಇದ್ದರೂ ಕೂಡ ಕೆಲವೊಂದು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಇಲ್ಲಿ ಸಂಪೂರ್ಣವಾದ ಸಾಕ್ಷರತೆ ಇದೆ. ಇದೇ ರೀತಿ ಕರ್ನಾಟಕದ ಎಲ್ಲಾ ಜಿಲ್ಲೆಗಳು ಕೂಡ ಈ ಸಾಕ್ಷರತಾ ಕ್ರಾಂತಿಯನ್ನು ಮಾಡುವಂಥ ಪ್ರಯತ್ನ ಈ ಸರ್ಕಾರದ ಮುಂದೆ ಇಟ್ಟಿದೆ ಎನ್ನುವುದನ್ನು ನಾವು ಬಹಳ ಹೆಮ್ಮೆಯಿಂದ ತಿಳಿಸಬೇಕಾಗಿದೆ. ಇನ್ನು ರೈತರು ಕೃಷಿ ಕಾರ್ಮಿಕರಿಗೆ ಆಧುನಿಕ ತಂತ್ರಜ್ಞಾನದ ಮೂಲಕ ಕೃಷಿ ಮಾಹಿತಿಯನ್ನು ಕೊಡುವಲ್ಲಿ ಕ್ರಾಂತಿಕಾರಕ ಬದಲಾವಣೆ ತರತಕ್ಕಂಥ ಅಂಶವನ್ನು ಕೂಡ ಇಲ್ಲಿ ಮಂಡಿಸಲಾಗಿದೆ. ಕೃಷ್ಣಾ ಮತ್ತು ಕಾವೇರಿ ವಿವಾದವನ್ನು ಎಲ್ಲಾ ರೀತಿಯಿಂದ ಹಾಗೂ ಮಾತುಕತೆಯಿಂದ ಪರಿಹಾರವನ್ನು ಮಾಡುವುದರೊಂದಿಗೆ, ಕೈಗಾರಿಕೆಗೂ ಕೂಡ ಮೂಲಭೂತವಾದ ಬಂಡವಾಳವನ್ನು ಒದಗಿಸುವ ನಿಟ್ಟಿನಲ್ಲಿ ಹೇಳುವುದಾದರೆ, ಈ ಕೈಗಾರಿಕೆಗಳಲ್ಲಿ ಬೃಹತ್ ಕೈಗಾರಿಕೆ ಇರಬಹುದು, ಸಣ್ಣ ಕೈಗಾರಿಕೆ ಇರಬಹುದು; ಬೃಹತ್ ಕೈಗಾರಿಕೆಗೆ ವಿದೇಶಿ ಬಂಡವಾಳವನ್ನು ನಾವು ಆಕರ್ಷಿಸುವುದರ ಜೊತೆಗೆ ಅವರಿಗೆ ಕೊಡುವಂಥ ಮೂಲಭೂತ ಸೌಕರ್ಯಗಳ ಜೊತೆಗೆ, ಆ ಕೈಗಾರಿಕೆಗಳು ಬಂದಾಗ ಮುಂದೆ ಜನರಿಗೆ ಉಂಟಾಗುವ ಪರಿಸರ ಮಾಲಿನ್ಯದ ತೊಂದರೆಗಳ ಬಗ್ಗೆ ಕೂಡ ನಾವು ಕಾಳಜಿಯನ್ನು ಮುಂದುವರಿಸಬೇಕಾಗಿದೆ. ಇವತ್ತು ಬೃಹತ್ ಕೈಗಾರಿಕೆಗಳನ್ನು ವಿದೇಶಿ ಬಂಡವಾಳದೊಂದಿಗೆ ಆಕರ್ಷಿಸಿ ಅವರಿಗೆ ಬೇಕು ಬೇಕಾದಂಥ ಯಾವುದೇ

ನಿಯಾಮಾವಳಿಗಳಲ್ಲಿ ಅವರಿಗೆ ಸೌಲಭ್ಯಗಳನ್ನು ಕೊಡುವುದರೊಂದಿಗೆ ಆ ಕೈಗಾರಿಕೆ ಸ್ಥಾಪನೆಗೆ ಬೇಕಾಗಿರತಕ್ಕ ಕಟ್ಟುನಿಟ್ಟಿನ ನಿಯಾಮಾವಳಿಗಳಲ್ಲಿ ಕೂಡ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕಾಗಿದೆ. ಏಕೆಂದರೆ, ಎಷ್ಟೋ ಬೃಹತ್ ಕೈಗಾರಿಕೆ ಸ್ಥಾಪನೆಗೆ ಬಂದಂಥ ಸ್ವದೇಶಿ ಅಥವಾ ವಿದೇಶಿ ಕಂಪನಿಯವರು, ತಾವು ಬರುವಾಗ ನಮ್ಮ ಮುಂದೆ ಬಂದು ಮೂರು ಸಾವಿರ ಕೋಟಿ, ಆರು ಸಾವಿರ ಕೋಟಿ ಯೋಜನೆಯನ್ನು ತರುತ್ತೇವೆ ಹಾಗೂ ಸಾವಿರಾರು ಉದ್ಯೋಗವನ್ನು ನೀಡುತ್ತೇವೆ ಮತ್ತು ರಫ್ತು ಮಾಡುತ್ತೇವೆ ಎಂದು ಹೇಳುತ್ತಾರೆ. ಇವರು ಬರುವಾಗ ಮಾತ್ರ ಎಲ್ಲಾ ನಿಯಮಗಳನ್ನು ಒಪ್ಪಿಕೊಂಡು ಬರುತ್ತಾರೆ. ಆದರೆ ಒಂದು ಸಲ ಕೈಗಾರಿಕೆ ಸ್ಥಾಪನೆಯಾದ ಮೇಲೆ ಇವರನ್ನು ಮತ್ತೆ ಯಾರು ಕೇಳದಂಥ ಪರಿಸ್ಥಿತಿ ಉಂಟಾಗುತ್ತದೆ. ಬೃಹತ್ ಕೈಗಾರಿಕೆಗಳಿಂದ ಪರಿಸರದ ಮೇಲೆ ಉಂಟಾಗುತ್ತಿರುವ ಹಾನಿ ಅಪಾರವಾಗಿರುತ್ತದೆ. ಇದು ಬೀದರ್‌ನಲ್ಲಿ ಇರಬಹುದು. ದಕ್ಷಿಣ ಕನ್ನಡದಲ್ಲಿ ಇರಬಹುದು. ಎಲ್ಲೆಲ್ಲಿ ಪರಿಸರದ ಮೇಲೆ ಹಾನಿಯಾಗುತ್ತದೆ ಎಂಬುದರ ಬಗ್ಗೆ ವಿಚಾರವನ್ನು ನಾವು ಸರ್ಕಾರದ ಮುಂದೆ ಅನೇಕ ಸಾರಿ ಇಟ್ಟಿದ್ದೆವು. ಈ ಪರಿಸರ ಮಾಲಿನ್ಯವನ್ನು ನಿಯಂತ್ರಣಗೊಳಿಸುವುದರಲ್ಲಿ ನಮ್ಮ ಪ್ರಾಧಾನ್ಯತೆ ಹೆಚ್ಚಿದೆ ಎನ್ನುವ ಕರ್ತವ್ಯ ಪ್ರಜ್ಞೆ ನಮ್ಮ ಸರ್ಕಾರಕ್ಕೆ ಇದೆ. ಇದರ ಜೊತೆಗೆ ದೊಡ್ಡ ದೊಡ್ಡ ವಿದೇಶಿ ಬಂಡವಾಳಶಾಹಿಗಳು, ಇಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅವರನ್ನು ಆಹ್ವಾನ ಮಾಡುವುದರ ಜೊತೆಗೆ ನಮ್ಮ ರಾಜ್ಯದಲ್ಲಿರತಕ್ಕಂಥ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವಂತಹ ಜವಾಬ್ದಾರಿ ನಮ್ಮ ಸರ್ಕಾರಕ್ಕೆ ಇದೆ. ಇವತ್ತು ಈ ಸಣ್ಣ ಕೈಗಾರಿಕೆಗಳಲ್ಲಿ ಲಕ್ಷಗಟ್ಟಲೆ ಜನ ಉದ್ಯೋಗಸ್ಥರಾಗಿದ್ದಾರೆ. ಆದರೆ ಬೃಹತ್ ಕೈಗಾರಿಕೆಗಳಲ್ಲಿ ಸಾವಿರಾರು ಜನರು ಮಾತ್ರ ಉದ್ಯೋಗದಲ್ಲಿ ಸೀಮಿತರಾಗಿದ್ದಾರೆ. ಆದ್ದರಿಂದ ಈ ಸಣ್ಣ ಕೈಗಾರಿಕೆಗಳನ್ನು ಪ್ರಮುಖವಾಗಿ ಮತ್ತು ದೂರದೃಷ್ಟಿಯನ್ನು ಇಟ್ಟುಕೊಂಡು ಇದನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಮೂಲಭೂತವಾಗಿ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಸರ್ಕಾರ ಒದಗಿಸಿಕೊಡಬೇಕು. ಇದರಲ್ಲಿ ಬಹಳ ಮುಖ್ಯವಾದಂಥದು ವಿದ್ಯುಚ್ಛಕ್ತಿ. ಇವತ್ತಿನ ದಿವಸಗಳಲ್ಲಿ ವಿದ್ಯುಚ್ಛಕ್ತಿ ಕೈಗಾರಿಕೆಯಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ಹೊಂದಿದೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಬಹಳ ಕುಂಠಿತವಾದಂಥ ಪರಿಸ್ಥಿತಿ ಇದೆ. ನಮ್ಮಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್‌ಚ್ಛಕ್ತಿ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳಿಗೆ ಯಾವುದೇ ರೀತಿಯಿಂದಲೂ ಸಾಲದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇವತ್ತಿನ ದಿವಸ ಬೃಹತ್ ಕೈಗಾರಿಕೆಗಳಲ್ಲಿ ಅವರದೇ ಆದಂಥ ವಿದ್ಯುತ್ ಉತ್ಪಾದನಾ ಘಟಕಗಳನ್ನು ನಿರ್ಮಾಣ ಮಾಡುವುದಕ್ಕೆ ನಮ್ಮ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಆದರೆ, ಸಣ್ಣ ಕೈಗಾರಿಕೆಗಳಿಗೆ ಸ್ವಂತ ವಿದ್ಯುತ್ ಉತ್ಪಾದನಾ ಘಟಕಗಳು ಇಲ್ಲದೇ ಇರುವುದರಿಂದ ಅವರಿಗೆ ತುಂಬಾ ಹಾನಿಯಾಗುತ್ತಿದೆ. ಇವತ್ತಿನ ದಿವಸ ವಿದ್ಯಾವಂತ ನಿರುದ್ಯೋಗಿ ತನ್ನ ಜೀವನದಲ್ಲಿ ಒಳ್ಳೆಯ ಸಾಧನೆ ಮಾಡಬೇಕೆಂದು ಈ ಸಣ್ಣ ಕೈಗಾರಿಕಾ ಉದ್ಯಮವನ್ನು ಪ್ರಾರಂಭ ಮಾಡಿ ಅದನ್ನು ಲಾಭದಾಯಕವಾಗಿ ಮಾಡಬೇಕೆಂದು ಆತ 20 ವರ್ಷ ಪಡತಕ್ಕಂಥ ಶ್ರಮಕ್ಕೆ ಸರ್ಕಾರದ ಕೊಡುಗೆ ಬಹಳ ಮಹತ್ವಪೂರ್ಣವಾದದು. ಇದಕ್ಕಾಗಿ ಆಡಳಿತದಲ್ಲಿ ಅನೇಕ ನಿಯಮ, ಅಧಿನಿಯಮಗಳನ್ನು ಸರಳೀಕರಣ ಮಾಡುತ್ತೇವೆ ಎಂಬ ಮಾತನ್ನು ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಂಡನೆ ಮಾಡಿದೆ, ಇದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಆಡಳಿತ ವಿಧಾನಗಳಲ್ಲಿ ನಿಯಮಾವಳಿಗಳನ್ನು ಅತ್ಯಂತ-ಸರಳೀಕರಣ ಮಾಡಿದಾಗ ಅಧಿಕಾರ ಶಾಹಿಗಳಿಂದ ಆಗತಕ್ಕಂಥ ಕಿರುಕುಳವನ್ನು ಸಣ್ಣ ಕೈಗಾರಿಕೆಗಳಿಗಾಗಲೀ ಅಥವಾ ಜನಸಾಮಾನ್ಯರಿಗೆ ಆಗಲೀ ಇದರಿಂದ

ಆಗತಕ್ಕಂಥ ತೊಂದರೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂಬುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಿವರವಾಗಿ ನೀಡಿದೆ. ಈ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸತಕ್ಕಂಥಾದ್ದು ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳಲ್ಲಿ ಇದೊಂದು ಪ್ರಧಾನ ಹೆಜ್ಜೆ ಎಂದು ಹೇಳಬಹುದು. ಇದಕ್ಕೆ ಹೆಚ್ಚಿನ ಇಚ್ಛಾ ಶಕ್ತಿ ಸರ್ಕಾರ ಕೊಡಬೇಕು. ವಿದ್ಯುತ್ ಉತ್ಪಾದನೆ ಹೆಚ್ಚಳದಲ್ಲಿ ಯಾವರೀತಿ ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡಬೇಕು. ವಿದ್ಯುತ್ ಉತ್ಪಾದನೆ ಮಾಡುವುದನ್ನು ಖಾಸಗಿಯವರಿಗೆ ಕೊಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಹೆಚ್ಚಳ ಮಾಡತಕ್ಕಂಥ ಪ್ರಯತ್ನ ಮಾಡಬೇಕು. ಆದರೆ ಇದನ್ನು ನಿಯಮಾವಳಿಗಳ ವಿರುದ್ಧವಾಗಿ ಖಾಸಗಿಯವರಿಗೆ ಕೊಟ್ಟು ಆ ಮೂಲಕ ಪರಿಸರಕ್ಕೆ ಹಾನಿ ಉಂಟು ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಬಾರದೆಂಬ ಜನರ ಅಪೇಕ್ಷೆ ಏನಿದೆ ಅದನ್ನು ಕೂಡ ಸರ್ಕಾರ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಈಗ ಇರತಕ್ಕಂಥ ವಿದ್ಯುತ್ ಉತ್ಪಾದನೆ ವ್ಯವಸ್ಥೆಗೆ ಸಾಧ್ಯವಾದಷ್ಟು ಹೆಚ್ಚಿಗೆ ಪ್ರೋತ್ಸಹವನ್ನು ನೀಡಿ, ಸಂಪೂರ್ಣವಾದಂಥ ಜವಾಬ್ದಾರಿಯಿಂದ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಪ್ರಾಧಾನ್ಯತೆ ನೀಡಿದಾಗ ಮಾತ್ರ ಬಹುಶಃ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸಾಮರಸ್ಯವನ್ನು ತಂದು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ.

ಇನ್ನು ರಸ್ತೆಯ ಸುವ್ಯವಸ್ಥೆ ಕಾಯಕಲ್ಪ ವಿಚಾರಧಾರೆಯನ್ನು ಕೂಡ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ಕಂಡಿದ್ದೇವೆ. ರಸ್ತೆ ಕಾಮಗಾರಿಕೆಗಳ ಸುವ್ಯವಸ್ಥೆ ಬಗ್ಗೆ ನಾವು ಬಹಳವಾದ, ಒಂದು ಕ್ರಾಂತಿಕಾರಿ ಆಧುನಿಕ ವಿಶ್ಲೇಷಣೆ ಮಾಡತಕ್ಕಂಥಾದಕ್ಕೆ ನಾವು ಮನಸ್ಸು ಮಾಡಬೇಕಾಗಿದೆ. ಏಕೆಂದರೆ, ಇವತ್ತು ಯಾವುದೇ ಒಂದು ರಸ್ತೆಯಲ್ಲಿರತಕ್ಕಂಥ ಡಾಂಬರೀಕರಣವನ್ನು ನಾಲ್ಕೈದು ತಿಂಗಳು ನೋಡುವಂತಹ ಪರಿಸ್ಥಿತಿ ಖಂಡಿತ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಕರಾವಳಿ ಪ್ರದೇಶಗಳಲ್ಲಿ ಧಾರಕಾರವಾಗಿ ಬರತಕ್ಕಂಥ ಮಳೆಯಿಂದ ರಸ್ತೆಗೆ ಹಾಕತಕ್ಕಂಥ ಡಾಂಬರೀಕರಣವನ್ನು ಬಿಟ್ಟು ಕಾಂಕ್ರೀಟ್ ರಸ್ತೆಯ ಯುಗಕ್ಕೆ ನಾವು ಬಂದಿದ್ದೇವೆ. ಈಗಾಗಲೇ ಕಾಂಕ್ರೀಟ್‌ಕರಣದ ಕೆಲಸವನ್ನು ಪ್ರಾರಂಭಿಸಿದ್ದೇವೆ. ಆದರೆ ಕಾಂಕ್ರೀಟ್ ರಸ್ತೆಯನ್ನು ಎಲ್ಲಾ ಕಡೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ರಸ್ತೆಯ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಲೋಕೋಪಯೋಗಿ ಇಲಾಖೆ ಒಂದು ರೀತಿ ಸಂಶಯ ಬರತಕ್ಕಂಥ ವಿಚಾರಧಾರೆ ಅಲ್ಲಿ ನಡೆಯುತ್ತಿದೆ ಎನ್ನುವ ಮಾತನ್ನು ನಾನು ಕಳೆದ ಐದು ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ. ಡಾಂಬರೀಕರಣದಲ್ಲಿ ಆಗತಕ್ಕಂಥ ಮಿಶ್ರಣ ಸರಿಯಾಗಿ ಮಾಡುತ್ತಿಲ್ಲವೋ? ಅಥವಾ ಇಂಜಿನಿಯರ್ ಸರಿಯಾಗಿ ಸೂಪರ್‌ವಿಜನ್ ಮಾಡುತ್ತಿಲ್ಲವೋ? ಅಥವಾ ಈ ಕಾಮಗಾರಿಗಳಿಗೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕೇವಲ 20 ಲಕ್ಷ ರೂಪಾಯಿಗಳನ್ನು ಮಾತ್ರ ಕೆಲಸಕ್ಕೆ ಉಪಯೋಗಿಸಿಕೊಂಡು ಈ ರೀತಿ ಕಳಪೆ ಕಾಮಗಾರಿಯನ್ನು ಮಾಡಿರಬಹುದು. ಇಂಥದನ್ನೆಲ್ಲಾ ಸರಿಪಡಿಸತಕ್ಕಂಥ ಜವಾಬ್ದಾರಿ ನಮ್ಮಲ್ಲಿದೆ. ಈ ಡಾಂಬರೀಕರಣದಲ್ಲಿ ಮಿಶ್ರ ಮಾಡತಕ್ಕಂಥ ಕೆಮಿಕಲ್ಸ್‌ನ್ನು ಆಧುನಿಕ ತಂತ್ರಜ್ಞಾನದಲ್ಲಿ ಬಳಸಿಕೊಂಡು ಇದನ್ನು ಒಂದು ವಿಶೇಷ ರೀತಿಯಲ್ಲಿ ಉಪಯೋಗಿಸಬೇಕಾಗುತ್ತದೆ. ಏಕೆಂದರೆ, ಈಗ ಇರತಕ್ಕಂಥ ರಸ್ತೆ ಡಾಂಬರೀಕರಣ ಎಷ್ಟೋ ವರ್ಷಗಳ ಹಿಂದಿನ ತತ್ವ ಆಧಾರಗಳ ಮೇಲೆ ಡಾಂಬರೀಕರಣದ ಮಿಶ್ರಣವನ್ನು ಅಳವಡಿಸಲಾಗಿದೆ. ಹಿಂದೆ 25 ರಿಂದ 30 ಜನರು ಕುಳಿತುಕೊಳ್ಳತಕ್ಕಂಥ ಬಸ್‌ಗಳು ಇದ್ದವು, ಆದರೆ ಈಗಿನ ತಂತ್ರಜ್ಞಾನದ ಮುನ್ನಡೆಯಿಂದ 4

ಚಕ್ರಗಳಿಂದ ಹಿಡಿದು 40 ಚಕ್ರಗಳನ್ನು ಒಳಗೊಂಡ ಭಾರಿ ಟ್ರಕ್‌ಗಳು ರಸ್ತೆಯ ಮೇಲೆ ಒಡಾಡುತ್ತವೆ. ಹಿಂದೆ 6 ಚಕ್ರಗಳ ಟ್ರಕ್‌ಗಳು ಒಡಾಡತಕ್ಕಂಥ ಕಾಲದಲ್ಲಿದ್ದ ಡಾಂಬರೀಕರಣ ಮಿಶ್ರಣ ಏನಿತ್ತು ಅದೇ ಮಿಶ್ರಣ ಇವತ್ತು 40 ಗಾಲಿಗಳನ್ನು ಒಳಗೊಂಡು ಟ್ರಕ್‌ಗಳು ಒಡಾಡತಕ್ಕಂಥ ಸಂದರ್ಭದಲ್ಲಿಯೂ ಇದೆ. ಆದ್ದರಿಂದ, ಲೋಕೋಪಯೋಗಿ ಇಲಾಖೆ ಕೂಡ ಇದರಲ್ಲಿ ಸರ್ವ ರೀತಿಯ ಕ್ರಾಂತಿಯನ್ನು ಮಾಡಬೇಕಾದಂಥ ಅವಶ್ಯಕತೆ ಇದೆ. ರಸ್ತೆಯ ಸುವ್ಯವಸ್ಥೆ ಕಾಯಕಲ್ಪ ಎನ್ನುವ ಮಾತನ್ನು ಇಲ್ಲಿ ಏನು ಬಳಸಿದ್ದಾರೆಯೋ ಅದೇ ರೀತಿ ಜವಾಬ್ದಾರಿಯುತವಾಗಿ ಕೆಲಸ ಮಾಡತಕ್ಕಂಥ ಅಗತ್ಯ ಇದೆ.

ಇನ್ನು ಮಾಹಿತಿ ತಂತ್ರಜ್ಞಾನದ ಮೂಲಕ ಆಡಳಿತ ಸುಧಾರಣೆ, ಒಳ್ಳೆಯ ಮಹತ್ವಪೂರ್ಣವಾದಂಥ ಒಂದು ಕ್ರಾಂತಿಕಾರವಾದ ವ್ಯವಸ್ಥೆಯನ್ನು ತರಬೇಕೆಂಬ ಇಚ್ಛಾ ಶಕ್ತಿಯನ್ನು ಸರ್ಕಾರ ಹೊಂದಿದೆ ಎಂಬ ವಿಚಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಂಡುಬಂದಿದೆ. ಬಹುಶಃ ಕಂಪ್ಯೂಟರೀಕರಣ ಜಾಲವನ್ನು ಆಳವಡಿಸುವುದರ ಮೂಲಕ ಇಡೀ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ನಮ್ಮನ್ನು ನಾವೇ ತೊಡಗಿಸಿಕೊಳ್ಳಬೇಕಾದಂತಹ ಒಂದು ಆಧುನಿಕ ಆಡಳಿತ ವ್ಯವಸ್ಥೆಗೆ ಈ ಸರ್ಕಾರ ಮತ್ತು ಈ ಸದನ ಬದ್ಧವಾಗಿರಬೇಕು. ಹಾಗೆಯೇ ಎಲ್ಲಾ ಶಾಸಕರ ಬೆಂಬಲ ಬೇಕು ಮತ್ತು ಸರ್ಕಾರದ ಸಚಿವಾಲಯದ ಬೆಂಬಲ ಬೇಕು. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಹಾಗೂ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಮತ್ತು ಸಚಿವಾಲಯದ ಕಾರ್ಯಾಲಯಗಳಲ್ಲಿ ಕಂಪ್ಯೂಟರೀಕರಣ ಜಾಲವನ್ನು ತಂದರೆ ಸಂಪೂರ್ಣವಾಗಿ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸುವ ಮಹತ್ವಪೂರ್ಣ ಹೆಜ್ಜೆ ಇಡಬೇಕೆಂದು ಕೊಂಡಿದ್ದೇವೆ. ಅದೂ ಅಲ್ಲದೇ ಸಂಶಯ ಬರತಕ್ಕಂಥ ವಿಷಯಗಳನ್ನು ಮತ್ತು ಬದಲಾವಣೆ ಆಗಿರತಕ್ಕಂಥ ಕಾಯಿದೆ ಬಗ್ಗೆ ಮಾಹಿತಿ ತರಿಸಿಕೊಳ್ಳ ಬಹುದು, ಇದರಿಂದ ವಿಳಂಬ ಆಗುವುದನ್ನು ತಡೆಗಟ್ಟಬಹುದು, ಮತ್ತು ಸರ್ಕಾರದ ಆಡಳಿತ ವ್ಯವಸ್ಥೆ ಕುಸಿಯುವಂತಹ ಪರಿಸ್ಥಿತಿಯನ್ನು ನಾವು ತಪ್ಪಿಸಬಹುದಾಗಿದೆ. ನಾನು ಶಾಸಕನಾಗಿ ಕಳೆದ 5 ವರ್ಷಗಳ ಕೊನೆಯ ಎರಡು ವರ್ಷದಲ್ಲಿ ಕಂಪ್ಯೂಟರ್ ಅಳವಡಿಸಿಕೊಂಡು ನನ್ನ ಕ್ಷೇತ್ರದಲ್ಲಿರತಕ್ಕಂಥ ತಾಲ್ಲೂಕು ಪಂಚಾಯತ್ ರಸ್ತೆ, ಗ್ರಾಮ ಪಂಚಾಯತ್ ರಸ್ತೆ, ಜಿಲ್ಲಾ ಪಂಚಾಯತ್ ರಸ್ತೆ ಹಾಗೂ ಸ್ಟೇಟ್ ಹೈವೆ ಮತ್ತು ನ್ಯಾಷನಲ್ ಹೈವೆ ರಸ್ತೆಗಳಿಗೆ ಎಷ್ಟು ಕಿ.ಮೀ.ವರೆಗೆ ಡಾಂಬರೀಕರಣ ಹಾಕಲಾಗಿದೆ ಎಂಬುದನ್ನು ಮತ್ತು ಎಷ್ಟು ಕಿ.ಮೀ. ರಸ್ತೆಗಳು ಯಾವ ವ್ಯವಸ್ಥೆಯಲ್ಲಿದೆ? ಹಾಗೂ ಯಾವ ಶಾಲೆಗಳಿಗೆ ಕೊಠಡಿಗಳನ್ನು ಕಟ್ಟಿಸಿಕೊಡಬೇಕೆಂಬುದನ್ನು ಮತ್ತು ನಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಶಾಲೆಗಳಿವೆ ಮತ್ತು ಎಷ್ಟು ಅಂಗನವಾಡಿ ಶಾಲೆಗಳಿವೆ ಎಂಬುದನ್ನು ಮತ್ತು ಈ ಅಂಗನವಾಡಿ ಶಾಲೆಗಳು ನಮ್ಮ ಜಾಗದಲ್ಲಿವೆಯೋ ಅಥವಾ ಬಾಡಿಗೆ ಜಾಗದಲ್ಲಿವೆಯೋ ಎಂಬುದನ್ನು ಮತ್ತು ಈ ಅಂಗನವಾಡಿ ಶಾಲೆಗಳಿಗೆ ಎಲ್ಲೆಲ್ಲಿ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕೆಂಬ ಮಾಹಿತಿ ಹಾಗೂ ಅಂಗನವಾಡಿ ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂಬ ಎಲ್ಲಾ ಮಾಹಿತಿಗಳು ನನ್ನ ಹತ್ತಿರ ಇದೆ. ಈ ಎಲ್ಲಾ ವಿಷಯಗಳನ್ನು ನಾವು ಇಲಾಖೆಗಳ ಮೂಲಕ ತರಬೇಕಾಗುವ ಅವಶ್ಯಕತೆ ಇರುವುದಿಲ್ಲ. ಕಂಪ್ಯೂಟರೀಕರಣವನ್ನು ನಮ್ಮಲ್ಲಿ ಅಳವಡಿಸಿಕೊಂಡು ಅದರಲ್ಲಿಯೇ ಎಲ್ಲಾ ವಿಷಯುವನ್ನು ಸಂಗ್ರಹಿಸಿ ನಿಮಿಷಾರ್ಧದಲ್ಲಿ ಯಾವುದೇ ವಿಷಯದಲ್ಲಿ ಮಾಹಿತಿ ಪಡೆದುಕೊಳ್ಳಬಹುದು. ಕಂಪ್ಯೂಟರ್ ಮೂಲಕ ತಾಲ್ಲೂಕು ಕಛೇರಿ ಬಿ.ಡಿ.ಒ. ಕಛೇರಿಯಿಂದ

ಮತ್ತು ಜಿಲ್ಲಾ ಕಛೇರಿಗಳಿಂದ ಅಥವಾ ಸಚಿವಾಲಯದ ಕಛೇರಿಗಳಿಂದ ಅಧಿಕಾರಿಗಳನ್ನು ಕಂಪ್ಯೂಟರ್ ಮೂಲಕ ನೇರವಾಗಿ ಸಂಪರ್ಕಿಸಬಹುದು. ಹಾಗೆಯೇ ಸಚಿವರನ್ನು ನಾವು ಕಂಪ್ಯೂಟರ್ ಮೂಲಕ ಸಂಪರ್ಕಿಸಬಹುದು. ಈ ತಂತ್ರಜ್ಞಾನದ ಆಧುನಿಕತೆಯನ್ನು ನಾವೆಲ್ಲಾ ಬಳಸಿಕೊಂಡು ಆಡಳಿತ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಕಾರಿ ಧೋರಣೆಯನ್ನು ನಾವು ಪಡೆಯಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಈ ವಿಚಾರಧಾರೆಯಲ್ಲಿ ಸರ್ಕಾರ ಈ ಒಂದು ಯೋಜನೆಯನ್ನು ತರಬೇಕೆಂದು ತನ್ನ ಇಚ್ಛಾ ಶಕ್ತಿಯನ್ನು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ನೋಡಿದ್ದೇವೆ. ಇನ್ನು ಹತ್ತು ಹಲವಾರು ಕಾರ್ಯಗಳ ಬಗ್ಗೆ ನಿರ್ದಿಷ್ಟವಾದ ಸರ್ಕಾರದ ನಿಯಮಾವಳಿಗಳನ್ನು ಸರಳೀಕರಣಗೊಳಿಸುವುದರೊಂದಿಗೆ ಮತ್ತು ಎಲ್ಲಾ ಜನರ ಅಪೇಕ್ಷೆಗಳ ಮೇರೆಗೆ ನಮ್ಮನ್ನು ಆಡಳಿತ ಸ್ಥಾನದಲ್ಲಿ ಕೂರಿಸಿದ್ದಾರೆ. ಇದರ ಜೊತೆಗೆ ಹಿಂದಿನ ಸರ್ಕಾರದಿಂದ ಆಗಿರತಕ್ಕಂಥ ತಪ್ಪುಗಳನ್ನು ಸಮತೋಲನ ಚಿತ್ತತೆಯಿಂದ ನೋಡಬೇಕು. ವಿರೋಧಕ್ಕಾಗಿ ವಿರೋಧವಾಗದೆ, ಆ ವಿರೋಧದಲ್ಲಿ ನಾವು ಕಂಡುಕೊಂಡ ಸತ್ಯಾಸತ್ಯತೆಯನ್ನು ಪರಾಮರ್ಶಿಸಿಕೊಂಡು, ಹಿಂದೆ ಆಗಿರತಕ್ಕಂಥ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಹೋಗುವಂಥ ಒಂದು ದೊಡ್ಡ ಮನೋಭಾವನೆ, ಹಾಗೂ ವಿಚಾರಧಾರೆಯನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ನಮ್ಮ ಸರ್ಕಾರ ಈ ಸದನದ ಮುಂದಿಟ್ಟಿದೆ. 27ನೇ ತಾರೀಖು ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ತಮ್ಮ ಭಾಷಣ ಮಾಡಿದ್ದಾರೆ. ಆ ಭಾಷಣಕ್ಕೆ ಮಾಡಿದ ಪ್ರಸ್ತಾವನೆಯನ್ನು ನಾನು ಅನುಮೋದನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ವಿರೋಧ ಪಕ್ಷದ ನಾಯಕನಾಗಿ ಕಾರ್ಯನಿರ್ವಹಣೆ ಮಾಡುವಂಥ ಜವಾಬ್ದಾರಿ, ಆ ಒಂದು ಅವಕಾಶ ನನಗೆ ಒದಗಿ ಬಂದಿದೆ. ಈ ಸಂದರ್ಭದಲ್ಲಿ ಈ ಒಂದು ಸ್ಥಾನದಲ್ಲಿದ್ದುಕೊಂಡು, ಒಂದು ರಚನಾತ್ಮಕವಾಗಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುತ್ತೇನೆ ಎನ್ನುವಂಥ ಭರವಸೆ ನನಗೆ ಇದೆ. ಈ ಒಂದು ಸದನದಲ್ಲಿ ವಿರೋಧ ಪಕ್ಷದ ನಾಯಕರುಗಳಾಗಿ ಹಲವಾರು ಮುತ್ಸದ್ದಿ ರಾಜಕಾರಣಿಗಳು ತಮ್ಮ ಕೆಲಸವನ್ನು ನಿರ್ವಹಣೆ ಮಾಡಿದ್ದನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಈ ಒಂದು ಸದನದಲ್ಲಿ ಸನ್ಮಾನ್ಯ ಎಸ್.ಶಿವಪ್ಪನವರು, ಶ್ರೀ ಸಿದ್ದ ವೀರಪ್ಪನವರು, ಶ್ರೀ ಹೆಚ್.ಡಿ.ದೇವೇಗೌಡರು, ಶ್ರೀ ಹೆಚ್.ಡಿ.ಕೃಷ್ಣಪ್ಪನವರು, ಶ್ರೀ ಎಸ್.ಆರ್.ಬೊಮ್ಮಯ್ಯನವರು, ಶ್ರೀ ಎ.ಲಕ್ಷ್ಮಿಸಾಗರ್‌ವರು, ಶ್ರೀ ದೇವರಾಜ್ ಅರಸ್‌ರವರು, ಶ್ರೀ ಬಂಗಾರಪ್ಪನವರು, ಶ್ರೀ ಡಿ.ಬಿ. ಚಂದ್ರೇಗೌಡರು, ಶ್ರೀ ಬಿ.ಎಸ್.ಯಡಿಯೂರಪ್ಪನವರು, ಶ್ರೀ ದೇಶಪಾಂಡೆಯವರು, ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ಮುಖ್ಯ ಮಂತ್ರಿಗಳಾದ ಎಸ್.ಎಂ.ಕೃಷ್ಣಾರವರು, ಹೀಗೆ ಹಲವಾರು ಈ ರೀತಿಯಾಗಿ ಗುರುತರವಾದಂಥ ಸ್ಥಾನದಲ್ಲಿ ಜವಾಬ್ದಾರಿಯುತವಾಗಿ ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಣೆ ಮಾಡಿದ್ದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ. ಅದೇ ರೀತಿ ಈ ಒಂದು ಸದನದಲ್ಲಿ ಸಮಾಜವಾದಿಗಳಾದಂಥ ಸನ್ಮಾನ್ಯ ಶಾಂತವೇರಿ ಗೋಪಾಲಗೌಡರು ಬಡವರ ಬಗ್ಗೆ ಮತ್ತು ಸಮಾಜದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿ ವಿರೋಧ ಪಕ್ಷದಲ್ಲಿದ್ದುಕೊಂಡು ಅತ್ಯಂತ ಒಳ್ಳೆಯ ರೀತಿಯಿಂದ ಕಾರ್ಯನಿರ್ವಹಣೆ ಮಾಡಿದ್ದನ್ನು ನಾವು ನೋಡಿದ್ದೇವೆ. ಇವತ್ತು ಆಡಳಿತ ಪಕ್ಷದ ಪರವಾಗಿ ಮಾನ್ಯ ರಾಜ್ಯಪಾಲರು ಸರ್ಕಾರದ ಕಾರ್ಯವೈಖರಿ ಅದರ ಗುರಿ, ಮುಂದಿನ ನೋಟ

ಇದರ ಬಗ್ಗೆ ತಮ್ಮ ಭಾಷಣದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಜನತೆಯ ತೀರ್ಪಿನ ಪ್ರಕಾರ ಈ ಒಂದು ಕಾಂಗ್ರೆಸ್ ಪಕ್ಷದ ನಾಯಕರಾಗಿ ಮಾನ್ಯ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿರುತ್ತಾರೆ. ನಾವು ಅಂದು ಕೊಂಡಿದ್ದೆವು, ಅವತ್ತು ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಜೊತೆಜೊತೆಗೆ ತಮ್ಮ ಸಂಪುಟದ ಸದಸ್ಯರು ಕೂಡ ಪ್ರಮಾಣ ವಚನವನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ ಅವತ್ತು ಕೇವಲ ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು. ಅವರ ನಂತರ ಅಥವಾ ಮರುದಿವಸ ಇನ್ನಿತರ ಮಾನ್ಯ ಸದಸ್ಯರು ಪ್ರಮಾಣ ವಚನವನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೆವು, ಅದು ಆಗಲಿಲ್ಲ. ಅವರು ದೆಹಲಿಗೆ ಹೋದರು, ಒಂದು ವಾರದ ನಂತರ ಪಟ್ಟಿಯನ್ನು ತಯಾರು ಮಾಡಿದರು 42 ಜನರ ಒಂದು ಗಜಗಾತ್ರದ ಸಚಿವ ಸಂಪುಟವನ್ನು ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ನೀಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ಸೇರಿಸಿಕೊಂಡು ಸಂಪುಟ ಸದಸ್ಯರ ಸಂಖ್ಯೆ 43 ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ ನಂತರ ಒಂದು ವಾರದ ಕಾಲ ಯಾವುದೇ ಮಂತ್ರಿಮಂಡಲ ಈ ರಾಜ್ಯದಲ್ಲಿ ಇರಲಿಲ್ಲ; ಇದು ಎಂತಹ ಪರಿಸ್ಥಿತಿ; ನನಗೆ ಅನಿಸುತ್ತದೆ, ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಈ ರೀತಿಯಾದ ಒಂದು ಅನುಭವ ಎಲ್ಲೂ ಆಗಿರಲಿಕ್ಕಿಲ್ಲ ಎನ್ನುವಂಥಾದ್ದು ನನ್ನ ಅನುಭವ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನವನ್ನು ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಎಷ್ಟೋ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಅತಿವೃಷ್ಟಿಯಾಗಿ ರೈತರು ಮನೆ ಮಠಗಳನ್ನು ಕಳೆದುಕೊಂಡು ಬೆಳೆ ನಾಶವಾಗಿ ಪರಿತಪಿಸುವಂಥ ಸಂದರ್ಭದಲ್ಲಿ ಅವರು ಈ ರಾಜ್ಯದ ಮುಖ್ಯಮಂತ್ರಿಗಳಾದ ತಕ್ಷಣ ಕೆಲವೊಂದು ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಭೇಟಿಯನ್ನು ಕೊಡಬೇಕಾಗಿತ್ತು. ಅಲ್ಲಿ ನೊಂದಂತಹ ಜನರಿಗೆ ಸಂತಾಪವನ್ನು ವ್ಯಕ್ತ ಮಾಡಬೇಕಾಗಿತ್ತು. ಆದರೆ ಅವರು ಈ ಮಂತ್ರಿಮಂಡಲದ ಪಟ್ಟಿಯನ್ನು ತಯಾರು ಮಾಡಲಿಕ್ಕೆ ದೆಹಲಿಗೆ ಹೋದರು. ಇವತ್ತಿನವರೆಗೂ ಅವರು ಬೇರೆ ಕಡೆಗೆ ಪ್ರವಾಸ ಮಾಡಿಲ್ಲ. ಅದಕ್ಕಾಗಿ ನಾನು ಹೇಳುತ್ತೇನೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಒತ್ತಡದಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ ತಕ್ಷಣ ಒಂದು ಮಾತನ್ನು ಹೇಳಿದ್ದರು; ನನ್ನ ಮಂತ್ರಿಮಂಡಲ ಅತ್ಯಂತ ಚಿಕ್ಕ ಮಂತ್ರಿಮಂಡಲವಾಗಿ ಇರುತ್ತದೆ ಎಂದು ಇವತ್ತು ಆಡಳಿತ ಸುಧಾರಣೆಯ ಆಯೋಗ ಏನು ಇದೆ, ಆ ಆಯೋಗದ ಗೈಡಲೆನ್ಸ್ ಪ್ರಕಾರ ನಾನು ಮಂತ್ರಿಮಂಡಲವನ್ನು ರಚನೆ ಮಾಡುತ್ತೇನೆ. ಆಡಳಿತ ಸುಧಾರಣೆಯ ಆಯೋಗದಲ್ಲಿ ಏನು ಶಿಫಾರಸ್ಸು ಇದೆ ಎಂದರೆ, ಮೇಲ್ಮನೆ ಮತ್ತು ಕೆಳಮನೆ ಇದ್ದರೆ, ಅದರ ಒಟ್ಟು ಸಂಖ್ಯೆಯ ಶೇಕಡಾ 10ರಷ್ಟು ಮಾತ್ರ ಮಂತ್ರಿಮಂಡಲ ಮಾಡುವುದಕ್ಕೆ ಅವಕಾಶ ಇದೆ.

ಅಧ್ಯಕ್ಷರು: ವಿಧಾನಸಭೆ ಇದ್ದರೆ ಶೇಕಡಾ 10ರಷ್ಟು, ಎರಡು ಹೌಸ್ ಇದ್ದರೆ ಶೇಕಡಾ 11 ಪರ್ಸೆಂಟ್ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಜಗದೀಶ್ ಶೆಟ್ಟರ್ ಹೌದು, ವಿಧಾನಸಭೆ ಇದ್ದರೆ ಶೇಕಡಾ 10 ರಷ್ಟು ಹಾಗೂ ಎರಡು ಹೌಸ್ ಇದ್ದರೆ ಶೇಕಡಾ 11 ರಷ್ಟು ಮಾಡುವುದಕ್ಕೆ ಅವಕಾಶ ಇದೆ. ಅದರಂತೆ ಲೋಕಸಭೆ ಮತ್ತು ರಾಜ್ಯಸಭೆ ಅದಕ್ಕೂ ಇದು ಅನ್ವಯವಾಗುತ್ತದೆ. ಈ ರೀತಿ ಇದ್ದಾಗ ನಾವು ವಿಧಾನಸಭೆಯನ್ನು ಲೆಕ್ಕಕ್ಕೆ ತೆಗೆದುಕೊಂಡಾಗ 23 ಜನರ ಮಂತ್ರಿಮಂಡಲ ಇರಬೇಕಾಗಿತ್ತು.

ನಾವು ಎರಡನ್ನು ಲೆಕ್ಕಕ್ಕೆ ತೆಗೆದುಕೊಂಡರೆ 32-33 ಜನರ ಮಂತ್ರಿಮಂಡಲದ ಒಂದು ಸಚಿವರ ಸಂಪುಟವನ್ನು ಅವರು ರಚನೆ ಮಾಡಿದ್ದಾರೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ವಾಜಪೇಯಿಯವರ ಮಾರ್ಗದರ್ಶನದಲ್ಲಿ ನಾವೂ ಮಾಡಿದ್ದೇವೆ. ಬೇರೆಯವರ ಬಗ್ಗೆ ಹೇಳಬೇಡಿ, ನಿಮ್ಮ ಹಿತವಚನವನ್ನು ಹೇಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ದೆಹಲಿಯ ಲೋಕಸಭೆಯಲ್ಲಿ ಏನಾಗಿದೆ ನೋಡಿ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಅವರು ಏನಾದರೂ ಹೇಳಬೇಕಾದರೆ ಅವರಲ್ಲಿ ಒಂದು ನೈತಿಕತೆ ಇರಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ನಾನು ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸಚಿವ ಸಂಪುಟದ ಬಗ್ಗೆಯೂ ಕೂಡ ಉತ್ತರವನ್ನು ಕೊಡುತ್ತೇನೆ. ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರ ಒಟ್ಟು ಸಂಖ್ಯೆ 790 ಆಗುತ್ತದೆ. ನಾವು ಶೇಕಡಾ 11 ರಷ್ಟು ಲೆಕ್ಕಾಚಾರವನ್ನು ಮಾಡಿದರೆ 70 ಜನರ ಸಚಿವ ಸಂಪುಟದ ಸದಸ್ಯರಿರುತ್ತಾರೆ, ಅದು ಆ ಆಡಳಿತ ಸುಧಾರಣೆ ಆಯೋಗದ ಪ್ರಕಾರವೇ ಇರುತ್ತದೆ. ಅದರಲ್ಲಿ ಯಾವುದು ಏನು ತಪ್ಪು ಇರುವುದಿಲ್ಲ. ಅದಕ್ಕಾಗಿ ನಾವು ವಿಚಾರ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಮಾಲಿಕಯ್ಯ ಗುತ್ತೇದಾರ್:- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಪೂರ್ಣ ಅವಕಾಶ ಕೊಡಬೇಕು. ಇದೇ ಸಂಪ್ರದಾಯ ಬೆಳೆದುಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು: ಉತ್ತರ ಪ್ರದೇಶದಲ್ಲಿ ಮಾಡಿದಂತೆ ದೇಶದಲ್ಲೆಲ್ಲಾ ಮಾಡಬೇಕೆಂದು ಹೇಳಿ.

ಶ್ರೀ ಡಿ.ವಿ.ಸದಾನಂದಗೌಡ: ಕಾಂಗ್ರೆಸ್ ಪಕ್ಷದ ಸದಸ್ಯರು ಮಾತನಾಡುವಾಗ ನಾವು ಅವಕಾಶವನ್ನು ಕೊಟ್ಟಿದ್ದೇವೆ. ಅದೇರೀತಿ ನಮ್ಮ ನಾಯಕರು ಮಾತನಾಡುವಾಗ ದಯಮಾಡಿ ಅವಕಾಶವನ್ನು ಕೊಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇವತ್ತು ಏಕೆ ಈ ರೀತಿ ಮಾನ್ಯ ಸದಸ್ಯರುಗಳು ಪ್ರತಿಭಟನೆ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಇದು ನನ್ನ ಪ್ರಸ್ತಾಪ ಅಲ್ಲ, ಯಾವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು, ಅದೇ ದಿವಸ ಅವರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ನನ್ನದು ಚಿಕ್ಕ ಗಾತ್ರದ ಮಂತ್ರಿ ಮಂಡಲ ಇರುತ್ತದೆ. ಆಡಳಿತ ಸುಧಾರಣೆ ಆಯೋಗದ ಸೂತ್ರ ಏನು ಹಾಕಿದ್ದಾರೆ ಅದರ ಪ್ರಕಾರವೇ ಇರುತ್ತದೆಂದು ಅವರು ಹೇಳಿದ್ದರು. ಅವರು ಆ ಮಾತನ್ನು ನಡೆಸಿಕೊಳ್ಳಲಿಲ್ಲ.

12.00 ಪಿ.ಎಂ.

ಏಕೆಂದರೆ, ದೆಹಲಿಯ ಒತ್ತಡ ಹಾಗೂ ಇನ್ನಿತರ ರಾಜಕೀಯ ಒತ್ತಡಗಳಿಂದ ಅದು ಆಗಲಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಏನೊಂದು ಒಳ್ಳೆಯ ವಿಚಾರ ಹಾಗೂ ಒಳ್ಳೆಯ ಯೋಜನೆ ಹಾಕಿಕೊಂಡಿದ್ದರು; ಅದು ಆಗಲಿಲ್ಲ. ಅಷ್ಟೇ ಅಲ್ಲ, ನಾನು ನಿನ್ನೆ ಮೊನ್ನೆಯ ಪತ್ರಿಕೆಯನ್ನು ನೋಡಿದಾಗ, ಇನ್ನೂ ರಾಜಕೀಯ ಒತ್ತಡ ಬಹಳ ಇದೆ, ಇನ್ನು ನನ್ನನ್ನು ಮಂತ್ರಿಯನ್ನಾಗಿ ಮಾಡಿ ಎಂದು ಕೆಲವು ಮಾನ್ಯ ಸದಸ್ಯರು ಕೇಳತಕ್ಕಂಥಾದ್ದು ನಡೆದಿದೆ. ಇನ್ನೊಂದು ಸುದ್ದಿ ಬರುತ್ತಿದೆ, ಇನ್ನು 5 ಜನರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳುತ್ತಿದ್ದಾರೆಂದು. ಮಾನ್ಯ ಮುಖ್ಯಮಂತ್ರಿಗಳು 42 ಜನರನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡಾಗ, 'ಇನ್ನು ವಿಸ್ತರಣೆ ಇಲ್ಲ'ವೆಂದು ಹೇಳಿದ್ದರು. ನಂತರ ರಾಜಕೀಯ ಒತ್ತಡ ಬಂದಾಗ, 'ನಾನು ವಿಸ್ತರಣೆ ಮಾಡುತ್ತೇನೆ ' ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಮೊದಲೇ ಯಾವ ಹಂತದಲ್ಲಿ ಸರ್ಕಾರ ಇವತ್ತು ಸಾಗುತ್ತಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಂತ್ರಿ ಮಂಡಲದ ರಚನೆ ಮಾಡಿದ್ದು ಅಷ್ಟೇ ಅಲ್ಲದೆ, 42 ಜನರ ಒಂದು ಗಜಗಾತ್ರದ ಸಚಿವ ಸಂಪುಟವನ್ನು ಮಾಡಿ ಅದರಲ್ಲಿ ಎಲ್ಲ ಜಿಲ್ಲೆಗಳಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆಯೇ? ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ, ಅವರು ಅದನ್ನು ಮಾಡಲಿಲ್ಲ. ಇವತ್ತು 31.5 ಲಕ್ಷ ಜನಸಂಖ್ಯೆಯಿರುವ ಗುಲ್ಬರ್ಗಾ ಜಿಲ್ಲೆಗೆ 6 ಜನ ಮಂತ್ರಿಗಳಿದ್ದಾರೆ. ಆದರೆ 41 ಲಕ್ಷ ಜನಸಂಖ್ಯೆಯಿರುವ ಬೆಳಗಾವಿ ಜಿಲ್ಲೆಗೆ ಒಬ್ಬರು ಸ್ಟೇಟ್ ಮಿನಿಸ್ಟರ್ ಇದ್ದಾರೆ. ಕೊಡಗು ಜಿಲ್ಲೆಯು 3 ತಾಲ್ಲೂಕುಗಳನ್ನು ಹೊಂದಿದ್ದ ಸಣ್ಣ ಜಿಲ್ಲೆಗೆ 3 ಜನ ಸಚಿವರು ಇದ್ದಾರೆ. ಇದು ಯಾವ ರೀತಿಯ ತಾರತಮ್ಯ? ಇವತ್ತು ರಾಯಚೂರು, ಬಿಜಾಪುರ, ಹಾವೇರಿ, ಉಡುಪಿ, ಬೀದರ್, ಹಾಗೂ ಚಾಮರಾಜನಗರಗಳ ಕಡೆಗೆ ಒಬ್ಬರು ಮಂತ್ರಿಗಳಿಲ್ಲ. ಅಂದರೆ ಈ ಕಡೆಗೆ 42 ಜನ ಮಂತ್ರಿಗಳನ್ನು ಹೊಂದಿರುವ ಗಜಗಾತ್ರದ ಮಂತ್ರಿಮಂಡಲ, ಮತ್ತು ಸಾಕಷ್ಟು ದೊಡ್ಡ ಜಿಲ್ಲೆಗಳಿಗೆ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಯಾವ ರೀತಿಯ ರಾಜಕೀಯ ಒತ್ತಡ? ಇನ್ನಿತರ ಒತ್ತಡಗಳಿಗೆ ಒಳಗಾಗಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಅವರ ವಿವೇಚನೆಗೆ ಬಿಟ್ಟಿರುವುದು. ಇವತ್ತು ಮಂತ್ರಿಮಂಡಲವನ್ನು ಮಾಡುವಂಥದ್ದು, ಮಂತ್ರಿಗಳ ಸಂಖ್ಯೆ ಎಷ್ಟಿರಬೇಕು, ಎಷ್ಟು ಇರಬಾರದು, ಎಂಬುದು ಅವರಿಗೇ ಬಿಟ್ಟಿರುವ ವಿಚಾರವಾಗಿದೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮೊದಲು ಏನು ಹೇಳಿದ್ದರು, ತದನಂತರ ಯಾವ ರೀತಿ ನಡೆದುಕೊಂಡರು, ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ಮಂಜೂರು ಮಾಡಿದ್ದೇನೆ ಎಂದು ಘೋಷಣೆಯನ್ನು ಮಾಡಿದರು. ನಮ್ಮ ರಾಜ್ಯದ ಒಟ್ಟು ಬಜೆಟ್ ಅಂದಾಜು 14,000 ಕೋಟಿ ರೂಪಾಯಿಗಳು ಇದೆ. ಅದರಲ್ಲಿ 3,300 ಕೋಟಿ ರೂಗಳ ಯೋಜನೆಗಳನ್ನು ಒಂದು ಜಿಲ್ಲೆಗೆ ಇವತ್ತು ಕೊಡುತ್ತಾರೆ.

ಅಧ್ಯಕ್ಷರು: ನಿಗಧಿಪಡಿಸಿರುವ ಒಟ್ಟು ಹಣವನ್ನು 20 ವರ್ಷಕ್ಕೆ ಕೊಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟಗೆ ತಾವು ಅಮೆಂಡ್‌ಮೆಂಟ್ ಮಾಡಿರುವುದು: ನಮಗೆ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಅಭಿನಂದನೆಗಳು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯಮಂತ್ರಿಗಳಿಗೆ ಬಳ್ಳಾರಿ ಜಿಲ್ಲೆಯ ಮೇಲೆ ಇಷ್ಟೊಂದು ಕಾಳಜಿ ಹೇಗೆ ಬಂತು ಎಂದು ನನಗನಿಸುತ್ತದೆ. ಇವತ್ತು ಕಾಂಗ್ರೆಸ್ ಪಕ್ಷದ ನಾಯಕಿಯಾದಂತಹ ಶ್ರೀಮತಿ ಸೋನಿಯಾ ಗಾಂಧಿಯವರು ಬಳ್ಳಾರಿ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಅಲ್ಲಿಂದ ಆರಿಸಿ ಬಂದಿದ್ದರು. ನಂತರ ಅಮೇಥಿ ಕ್ಷೇತ್ರವನ್ನು ಉಳಿಸಿಕೊಂಡು ಬಳ್ಳಾರಿ ಕ್ಷೇತ್ರಕ್ಕೆ ರಾಜೀನಾಮೆಯನ್ನು ಕೊಟ್ಟರು. ಅವರು ಬಳ್ಳಾರಿ ಕ್ಷೇತ್ರಕ್ಕೆ ರಾಜೀನಾಮೆ ಕೊಡುವುದಕ್ಕಿಂತ ಮುಂಚೆ ಒಂದು ಸಲ ಅಲ್ಲಿಗೆ ಹೋಗಿ ಮತದಾರರಿಗೆ ಧನ್ಯವಾದಗಳನ್ನು ಹೇಳಲಿಲ್ಲ. ಇಷ್ಟೇ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು ಸಹ ಬಳ್ಳಾರಿ ಜಿಲ್ಲೆಗೆ ಹೋಗಿ ಜನತೆಗೆ ಧನ್ಯವಾದಗಳನ್ನು ಹೇಳಲಿಲ್ಲ. ಆದರೆ ಮತ್ತೇ ಬಳ್ಳಾರಿಯಲ್ಲಿ ಉಪ ಚುನಾವಣೆಯು ಬರುತ್ತಿದೆ. ಅಲ್ಲಿಂದ ಮತ್ತೆ ನಾವು ಆರಿಸಿ ಬರಬೇಕೆನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಅಥವಾ ಶ್ರೀಮತಿ ಸೋನಿಯಾ ಗಾಂಧಿಯವರು ಇಲ್ಲಿ ಸ್ಪರ್ಧೆ ಮಾಡಿ ಗೆದ್ದಿದ್ದರು ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಇವತ್ತು ಬಳ್ಳಾರಿ ಜಿಲ್ಲೆಗೆ ಏನು 3,300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ತಾವು ಕೊಡಿ, ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಬೇರೆ ಜಿಲ್ಲೆಯವರು ಏನಾದರೂ ತಪ್ಪು ಮಾಡಿದ್ದಾರೆಯೇ ಹೇಗೆ? ಇದನ್ನು ತಾವು ವಿಚಾರ ಮಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು: ಸಾಮಾನ್ಯವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನು ವಿಷಯಗಳು ಇವೆ ಆದರ ಬಗ್ಗೆ ಮಾತನಾಡಿ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವೆಂದರೆ ಇಡೀ ರಾಜ್ಯದ ಮೇಲೆ ಎಲ್ಲ ವಿಚಾರಗಳ ಕಡೆಗೆ ಗಮನಕೊಡುವ ಕೇಂದ್ರಬಿಂದು. ರಾಜ್ಯದ ಎಲ್ಲಾ ವಿಚಾರಗಳ ಬಗ್ಗೆ ರೀತಿ ನೀತಿಗಳ ವ್ಯವಸ್ಥೆಯೇ ಈ ಒಂದು ಮಾನ್ಯ ರಾಜ್ಯಪಾಲರ ಭಾಷಣ. ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಮಧ್ಯದಲ್ಲಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದರ ಮೂಲಕ ಈ ಸರ್ಕಾರ ನಿರ್ದಿಷ್ಟವಾದ ದಿಕ್ಕಿನ ಕಡೆಗೆ ಹೋಗಬೇಕು, ಒಳ್ಳೆಯ ಆಡಳಿತವನ್ನು ಕೊಡಬೇಕು ಎನ್ನುವ ಭಾವನೆಯಿಂದ ಇಡೀ ರಾಜ್ಯದ ಸಮಗ್ರ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿರುವುದರ ಅವಶ್ಯಕತೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿದೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಡೆದಂತಹ ರೀತಿ, ಅದು ಸರಿಯಾಗಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನೀವು ನಡೆಯುವಂತಹ ದಾರಿಗಳು ಸರಿಯಾಗಿರಬೇಕು ಎಂದು ಹೇಳುವಂತಹ ಮಹತ್ತರವಾದ ಜವಾಬ್ದಾರಿ ವಿರೋಧಪಕ್ಷಕ್ಕೆ ಇದ್ದ ಕಾರಣ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ.

ಶ್ರೀ ಡಿ.ಬಿ. ಚಂದ್ರೇಗೌಡ(ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ನಮ್ಮ ನಿಯಮಗಳಲ್ಲಾಗಲಿ, ನಮ್ಮ ವ್ಯವಹಾರದಲ್ಲಾಗಲಿ, ಈ ಸದನದ ಸದಸ್ಯರಲ್ಲದವರ ಹೆಸರನ್ನು ಪ್ರಸ್ತಾಪ ಮಾಡುವಂತಹ ಸಂಪ್ರದಾಯವಿಲ್ಲ. ಆದಕ್ಕಾಗಿ ಮಾನ್ಯ ವಿರೋಧಪಕ್ಷದ ನಾಯಕರು ಈ ಸದನದ ಸದಸ್ಯರಲ್ಲದವರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಒಳ್ಳೆಯ ದೃಷ್ಟಿಯಿಂದಲೋ, ಕೆಟ್ಟ ದೃಷ್ಟಿಯಿಂದಲೋ ಟೀಕೆಯನ್ನಾದರು ಮಾಡಲಿ ಇದು ಸಂಪ್ರದಾಯವಲ್ಲ. ಆ ಸಂಪ್ರದಾಯಗಳನ್ನು ಮುರಿಯುವುದು ಬೇಡ ಎಂದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನದೊಂದು ಮನವಿ. ಮಾನ್ಯ ವಿರೋಧಪಕ್ಷದ ನಾಯಕರು ಮೊದಲನೆಯ ಬಾರಿಗೆ ಅವರು ವಿಪಕ್ಷದ ನಾಯಕರಾಗಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಮಾನ್ಯ ಶಾಸಕರಲ್ಲಿ ತಮ್ಮ ಮೂಲಕವಾಗಿ ವಿನಂತಿಮಾಡಿಕೊಳ್ಳುವುದೇನೆಂದರೆ, ಅವರು ಅಂತಹ ಅಪರಾಧವನ್ನು ಅಥವಾ ತಪ್ಪನ್ನು ಏನು ಸಹಿತ ಮಾಡಿಲ್ಲ. ಈ ಸದನದಲ್ಲಿ 1960ನೇ ಇಸವಿಯಲ್ಲಿದ್ದಂತಹ ಗೌರವಾನ್ವಿತ ಸದಸ್ಯರುಗಳಿದ್ದಾರೆ. ಮಾನ್ಯ ಶ್ರೀ ಡಿ.ಬಿ.ಚಂದ್ರೇಗೌಡರು, ಸಂಸದೀಯ ಪಟುಗಳು, ವ್ಯವಹಾರಗಳ ಮಂತ್ರಿಗಳಾಗಿರುವುದು ನಮಗೆಲ್ಲಾ ಸಂತೋಷ. ತಾವೇ ಇಲ್ಲಿ ವಿರೋಧಪಕ್ಷದ ನಾಯಕರಾಗಿ ಈ ಸದನದಲ್ಲಿ ಕುಳಿತುಕೊಂಡಾಗ ನಾವು ಏನೆಲ್ಲಾ ಹೆಸರುಗಳನ್ನು ಪ್ರಸ್ತಾಪ ಮಾಡಿದಾಗ ಅವರು ಎಷ್ಟೊಂದು ಅಬ್ಜಕ್ಷನ್ಸ್ ಮಾಡಿದ್ದಾರೆಂದು ನನಗೆ ಗೊತ್ತಿದೆ. ನಾನೇ ಇಲ್ಲಿ ಪಕ್ಷಕ್ಕೆ ಉಪನಾಯಕನಾಗಿದ್ದು, ನಾನು ಈಗಲೂ ಮಾನ್ಯ ಚಂದ್ರೇಗೌಡರಿಗೆ ನಮ್ಮ ನಾಯಕರು ಎಂದು ಕರೆಯುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಿಂಧ್ಯಾರವರು ಈ ಕಡೆ ನಿಂತಾಗ ಮಾತನಾಡುವ ಧಾಟಿಯೇ ಬೇರೆ ಇತ್ತು. ಈಗ ಆ ಕಡೆಗೆ ಹೋದಾಗ ಬೇರೆ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಮತ್ತು ಮಾನ್ಯ ಸಭಾನಾಯಕರಲ್ಲಿ ವಿಶೇಷವಾಗಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಆಡಳಿತ ಪಕ್ಷದ ಸದಸ್ಯರುಗಳಿಗೆ ತಾವು ಹೇಳಬೇಕು; ಸಾಮಾನ್ಯವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಅವರು ಬಹಳ ತೀರಾ ಆತಂಕಕಾರಿಯಾದಂತಹ, ದೊಡ್ಡ ಸಮಸ್ಯೆಯನ್ನು ಉದ್ಭವ ಮಾಡುವಂತಹ ರೂಲ್ಸ್ ಆಫ್ ಪ್ರೊಸೀಜರ್ ವಿರುದ್ಧ ಹೋದಂಥ ಸಂದರ್ಭದಲ್ಲಿ ಮಾತ್ರ ಇಂಟರ್‌ಫಿಯರ್ ಆಗಲಿ ಇಲ್ಲದಿದ್ದರೆ ಅವರ ಭಾಷಣಕ್ಕೆ ಅಡ್ಡಿಯನ್ನುಂಟುಮಾಡುವುದು ಬೇಡ. ಮಾನ್ಯ ವಿರೋಧಪಕ್ಷದ ನಾಯಕರು ಮೊದಲನೆಯ ಬಾರಿಗೆ ಭಾಷಣವನ್ನು ಮಾಡುತ್ತಿದ್ದಾರೆ. ನಾವು ಅವರ ಭಾಷಣವನ್ನು ಕೇಳೋಣ ಎಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಲಿಂಗಪ್ಪ(ರಾಮನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಒಂದು ರೂಲಿಂಗ್‌ಯೋಪಾದಿಯಲ್ಲಿ ಒಂದು ಮಾತನ್ನು ಹೇಳಿದರು. ನಾನು ಕೂಡ ಇಲ್ಲಿ 8-9 ಸಲ ಮಾನ್ಯ ರಾಜ್ಯಪಾಲರ ಭಾಷಣವನ್ನು ಆಲಿಸುವಂತದ್ದು ಮತ್ತು ಚರ್ಚೆಯಲ್ಲಿ ಭಾಗವಹಿಸುವಂತಹ ಕೆಲಸವನ್ನು ಮಾಡಿದ್ದೇನೆ. ವಿರೋಧ ಪಕ್ಷಗಳಿಗೆ ಎರಡು ಸಂದರ್ಭದಲ್ಲಿ ವ್ಯಾಪಕವಾಗಿ ಆಡಳಿತಪಕ್ಷಕ್ಕೆ ಟೀಕೆ ಮಾಡುವಂತಹ ಮತ್ತು ಸಲಹೆಯನ್ನು ಕೊಡತಕ್ಕಂತಹ ಅವಕಾಶಗಳು ಇದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಲ್ಲಿ ಭಾಗವಹಿಸಿದಾಗ ಹಾಗೂ ಬಜೆಟ್ ಮೇಲೆ ಚರ್ಚೆಯಲ್ಲಿ ಭಾಗವಹಿಸಿದಾಗ ಮಾತ್ರ ಅದಕ್ಕೆ ಅವಕಾಶವಿದೆ. ಈಗ ತಾವು ಏನು ಹೇಳಿದ್ದೀರಿ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಏನು ಇದೆ ಅದಕ್ಕೆ ಮಿತಿಪಟ್ಟಂತೆ ನೀವು ಮಾತನಾಡಿ ಎನ್ನುವಂತಹ ಮಾತು; ಇದು ಬಹುಶಃ ಈ ಸಭೆಯ ಒಂದು ರೂಲಿಂಗ್ ಆಗುತ್ತದೆ. ಇದನ್ನು ತಾವು ಪುನರ್‌ವಿಮರ್ಶೆ ಮಾಡಿ, ಹಿಂದೆ ಏನು ನಡವಳಿಕೆಗಳು ಆಗಿದೆ, ಅದನ್ನು ತಾವು ಗಮನದಲ್ಲಿಟ್ಟುಕೊಂಡು ಆದೇಶವನ್ನು ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಬಳ್ಳಾರಿ ಜಿಲ್ಲೆಗೆ 3,300 ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದ್ದೇನೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೋ ಅದರಲ್ಲಿ 2,500 ಕೋಟಿ ರೂಪಾಯಿಗಳು ವಿಜಯನಗರ ಥರ್ಮಲ್ ಪ್ಲಾಂಟ್‌ಗೆ ಸೇರಿದೆ. ಹಿಂದಿನ ಸರ್ಕಾರ ಈ ಯೋಜನೆಯನ್ನು ಮಂಜೂರು ಮಾಡಿತ್ತು. 1999-2000ನೇ ವಾರ್ಷಿಕ ಯೋಜನೆಯಲ್ಲಿ 5000 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯನ್ನು ರಾಜ್ಯ ಸರ್ಕಾರವೇ ಪ್ರಕಟಿಸಿತ್ತು. ಮೊದಲ ಹಂತದ ಈ ಯೋಜನೆಯ ವೆಚ್ಚ 1,768 ಕೋಟಿ ರೂಪಾಯಿಗಳು. ವಾರ್ಷಿಕ ಯೋಜನೆಯಲ್ಲಿ ಕೇವಲ 169 ಕೋಟಿ ರೂಪಾಯಿಗಳು ಈ ಯೋಜನೆಗಾಗಿ ನಮೂದಿಸಿದೆ. ಈಗ ಇವರು ಹೊಸದಾಗಿ ಈ ಯೋಜನೆಯನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಹಣವನ್ನು ಎಲ್ಲಿಂದ ಮೊಬಿಲೈಜೇಷನ್ ಮಾಡುತ್ತೇವೆ ಎಂದು ಎಲ್ಲೂ ಹೇಳಲಿಲ್ಲ. ಇದನ್ನು ಯಾವ ರೀತಿ ಅನುಷ್ಠಾನ ಮಾಡುತ್ತೇವೆಂದು ಹೇಳಲಿಲ್ಲ. ಈ ಯೋಜನೆಯು ಅನುಷ್ಠಾನವಾದಾಗ ಇದು ಇಡೀ ರಾಜ್ಯಕ್ಕೆ ಲಾಭವಾಗುವಂತದ್ದು, ಕೇವಲ ಬಳ್ಳಾರಿ ಜಿಲ್ಲೆಗಲ್ಲ. ಅಂದರೆ ಬಳ್ಳಾರಿ ಜನತೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಈ ಯೋಜನೆಯನ್ನು ಪ್ರಕಟಿಸಿದ್ದಾರೆ ಎನ್ನುವ ತಪ್ಪುದಾರಿಗೆ ಎಳೆಯುವುದಕ್ಕೆ ಈ ಯೋಜನೆಯನ್ನು ಪ್ರಕಟಿಸಿದ್ದಾರೆ ಎನ್ನುವ ಮಾತನ್ನು ನಾನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರೆ ಮಾನ್ಯ ಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಈ ರಾಜ್ಯದ ಖಜಾನೆಯು ಖಾಲಿಯಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಇವತ್ತು ಏನಾಗಿದೆ? ಇವತ್ತಿನ ಅದರ ಸ್ಥಿತಿಗತಿಯೇನು? ಇದರ ಬಗ್ಗೆ ಏನಾದರೂ ಶ್ವೇತಪತ್ರವನ್ನು ಹೊರಡಿಸುತ್ತಾರೋ ಹೇಗೆ? ಅದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಬೇಕೆಂದು ನಾನು ಅವರಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಈ ಒಂದು ಮಾನ್ಯ ರಾಜ್ಯಪಾಲರ ಭಾಷಣವನ್ನು ನಾವು ಕೂಲಂಕುಷವಾಗಿ ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಏಕೆಂದರೆ ಮೊನ್ನೆ ನಡೆದಂತಹ ಚುನಾವಣೆ ಕೇವಲ ವಿಧಾನಸಭೆಗೆ ನಡೆದ ಚುನಾವಣೆಯಲ್ಲ. ಲೋಕಸಭೆ ಮತ್ತು ವಿಧಾನಸಭೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆದಿದೆ. ಬಹುಶಃ ಬಹಳ ವರ್ಷಗಳ ನಂತರ ಅಂದರೆ ಸುಮಾರು 10ವರ್ಷಗಳ ನಂತರ ಈ ರೀತಿ ಲೋಕಸಭೆ ಮತ್ತು ವಿಧಾನಸಭೆಗೆ ಚುನಾವಣೆ ನಡೆದಿದ್ದು ಇದೆ. ಹೀಗಾಗಿ ಇವತ್ತು ನಮ್ಮ ಕರ್ನಾಟಕದ ಜನತೆ ಏನು ತೀರ್ಪು ಕೊಟ್ಟಿದ್ದಾರೆಂದರೆ, ಈ ರಾಜ್ಯಸರ್ಕಾರಕ್ಕೆ ಒಂದು ತೀರ್ಪು ಕೊಟ್ಟಿದ್ದಾರೆ, ಇಡೀ ರಾಷ್ಟ್ರ ಜನತೆ ಕೇಂದ್ರ ಸರ್ಕಾರಕ್ಕೆ ಏನು ತೀರ್ಪು ಕೊಟ್ಟಿದ್ದಾರೆ ಇದರ ಬಗ್ಗೆ ಪ್ರಸ್ತಾಪ ಇಲ್ಲ. ಶ್ರೀಮಾನ್ ಅಟಲ್‌ಬಿಹಾರಿ ವಾಜಪೇಯಿಯವರ ನೇತೃತ್ವದ ಸಂಯುಕ್ತರಂಗ ಸರ್ಕಾರಕ್ಕೆ ಇಡೀ ರಾಷ್ಟ್ರದ ಜನತೆ ತೀರ್ಪು ಕೊಟ್ಟಿದ್ದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಏಕೆಂದರೆ ನಾನೊಂದು ಮಾತು ಹೇಳುತ್ತಿದ್ದೇನೆ, ಹಿಂದೆ 1992ರಲ್ಲಿ ಶ್ರೀಮಾನ್ ಬಂಗಾರಪ್ಪನವರು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿದ್ದರು. ಆಗ ಚುನಾವಣೆ ನಡೆದಂತಹ ಸಂದರ್ಭದಲ್ಲಿ ಆಗ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಇತ್ತು ಎಂದರೆ ಆಗ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಶ್ರೀಮಾನ್ ನರಸಿಂಹರಾವ್ ಸರ್ಕಾರ ಕೇಂದ್ರದಲ್ಲಿ ಆಡಳಿತಕ್ಕೆ ಬಂದಿದ್ದನ್ನು ಪ್ರಸ್ತಾಪ ಮಾಡಿದ್ದರು.

"The general elections to the 10th Lok Sabha were held by and large in a very peaceful atmosphere and we have presently

a stable government under the able leadership of Sri P.V. Narasimha Rao."

ಅಂದರೆ ಈ ರೀತಿ ಜನತೆಯ ತೀರ್ಮಾನವಿತ್ತು ಎಂದು ಪ್ರಸ್ತಾಪ ಮಾಡಿದ್ದರು. ಆದರೆ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸನ್ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರ ಸರ್ಕಾರದ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಅದು ಹೋಗಲಿ, ಮತ್ತೊಂದು ವಿಷಯ ಕೇಂದ್ರ ಸರ್ಕಾರದ ಬಗ್ಗೆ ಏನೇನೂ ಪ್ರಸ್ತಾಪವಿಲ್ಲ. ಇವತ್ತು ವಿವಿಧ ಯೋಜನೆಗಳಿಗೆ ಸಾಕಷ್ಟು ಹಣ ಕೇಂದ್ರ ಸರ್ಕಾರದಿಂದ ಬರುತ್ತದೆ. ಕೇಂದ್ರಸರ್ಕಾರದ ಯೋಜನೆಗಳ ಮುಖಾಂತರ ಬರುತ್ತದೆ. ಅದು ಯೋಜನೆಗಳು ಇರಬಹುದು, ಅಥವಾ ಇನ್ನಿತರ ನೆರವು ಇರಬಹುದು. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಪ್ರಸ್ತಾಪವಿಲ್ಲ. ಈ ರೀತಿ ತಾರತಮ್ಯ ಏಕೆ ಸರ್ಕಾರದವರು ಮಾಡಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ಇನ್ನೊಂದು ಬಹು ಮುಖ್ಯವಾದ ವಿಷಯ. ಇತ್ತೀಚಿಗೆ ನಡೆದಂತಹ ಕಾರ್ಗಿಲ್ ಯುದ್ಧದಲ್ಲಿ ನಮ್ಮ ರಾಜ್ಯದ 18ಜನ ಯೋಧರು ಯುದ್ಧದಲ್ಲಿ ಮೃತಪಟ್ಟರು. ಅವರ ನೆನಪನ್ನು ಮಾಡಿಕೊಳ್ಳುವಂತಹದ್ದು, ಅವರಿಗೆ ಶ್ರದ್ಧಾಂಜಲಿ ಅರ್ಪಣೆ ಮಾಡುವಂತಹದ್ದು ಇದೆ. ಏಕೆಂದರೆ ಹೊಸ ಸರ್ಕಾರ ಬಂದಿದೆ; ಅವೊಂದು ಸಂದರ್ಭದಲ್ಲಿ ಅವರ ನೆನಪನ್ನು ಮಾಡಿಕೊಳ್ಳುವಂತಹದ್ದು, ಅವರ ಸ್ಫೂರ್ತಿಯನ್ನು ಎಲ್ಲರಿಗೂ ಹಂಚುವಂತಹ ಕೆಲಸವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾಡಬೇಕಾಗಿತ್ತು. ಏಕೆಂದರೆ ಇದೆ ಸಂದರ್ಭದಲ್ಲಿ ಸನ್ಮಾನ್ಯ ರಾಷ್ಟ್ರಪತಿಯವರು ಲೋಕಸಭೆಯಲ್ಲಿ ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದಂತಹ ಸಂದರ್ಭದಲ್ಲಿ ಮೊಟ್ಟಮೊದಲು ಕಾರ್ಗಿಲ್ ಯುದ್ಧದಲ್ಲಿ ಮಡಿದಂತಹ ಯೋಧರ ನೆನಪನ್ನು ಮಾಡಿಕೊಂಡು ಆ ಮೃತರಿಗೆ ಒಂದು ಗೌರವವನ್ನು ಸಲ್ಲಿಸುವಂತಹ ವಿಚಾರವನ್ನು ತಮ್ಮ ಭಾಷಣದಲ್ಲಿ ಹೇಳಿದರು. ಅದು ಇವತ್ತು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಲೋಪ ಆಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಇವತ್ತು ಬಹುಮುಖ್ಯವಾಗಿ ನಾವು ಚಿಂತನೆ ಮಾಡುವಂತಹದ್ದು ಈವೊಂದು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ. ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ನಮ್ಮ ಹಿರಿಯರಾದಂತಹ ಸನ್ಮಾನ್ಯ ಘೋರ್ಪಡೆಯವರು ಅದರ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದಾರೆ. ಒಬ್ಬ ಮೇಧಾವಿ ಮತ್ತು ಗೌರವಾನ್ವಿತ ಹಿರಿಯ ಮುತ್ಸದ್ಧಿ ರಾಜಕಾರಣಿ ಅವರ ನೇತೃತ್ವದಲ್ಲಿ ಬಹುಶಃ ಈವೊಂದು ಪಂಚಾಯತ್ ರಾಜ್ ವ್ಯವಸ್ಥೆ ಇನ್ನು ಹೆಚ್ಚಿನ ರೀತಿಯಲ್ಲಿ ಸಫಲವಾಗುತ್ತದೆ ಎನ್ನುವಂತಹ ಆ ವಿಚಾರವನ್ನು ನಾನು ಪ್ರಸ್ತಾಪ ಮಾಡಿ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈವೊಂದು ಪಂಚಾಯತ್ ರಾಜ್ ವ್ಯವಸ್ಥೆಗೆ ಯಾವ ಒಂದು ನಿರ್ದಿಷ್ಟ ಗುರಿಯಿದೆ, ಯಾವ ವ್ಯವಸ್ಥೆಯನ್ನು ತೆಗೆದುಕೊಂಡು ಬರುತ್ತೇವೆನ್ನುವ ವಿಚಾರವನ್ನು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಏಕೆ ಮಾಡಲಿಲ್ಲವೆನ್ನುವ ವಿಷಯ ಗೊತ್ತಾಗುತ್ತಿಲ್ಲ. ಏಕೆಂದರೆ ಕಳೆದ ಸದನದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇನ್ನಿತರ ಹಿರಿಯ ಸದಸ್ಯರು ಇದರ ಬಗ್ಗೆ ಬಹಳಷ್ಟು ಹೋರಾಟವನ್ನು ಮಾಡಿದ್ದಾರೆ. ಅಂದರೆ ಹಳೆಯ ವ್ಯವಸ್ಥೆ, ಅಂದರೆ ಗ್ರಾಮಾಪಂಚಾಯತಿ ವ್ಯವಸ್ಥೆಯೇ ಮುಂದುವರಿಯಬೇಕೋ ಅಥವಾ ಹೋದಸಲ ಜನತಾದಳ ಸರ್ಕಾರವೇನು ಅಮೆಂಡ್‌ಮೆಂಟ್ ಮಾಡಿ ತಂದಂತಹ ಮಂಡಲ ಪಂಚಾಯತಿ ವ್ಯವಸ್ಥೆ ಏನಿದೆ

ಅದನ್ನು ತರಬೇಕೋ ಎನ್ನತಕ್ಕಂತಹ ಆವೊಂದು ವಿಚಾರದ ಹಂತದಲ್ಲಿ ನಾವಿದ್ದೇವೆ. ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನೀತಿಯನ್ನು ಹೇಳಬೇಕಾಗಿತ್ತು. ಏಕೆಂದರೆ ಆ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ತೆಗೆದುಕೊಂಡು ಬಂದಾಗ ಕೆಲವು ನಾಗರೀಕರು ಹೈಕೋರ್ಟಿಗೆ ಹೋದರು. ಹೈಕೋರ್ಟ್‌ನಲ್ಲಿ ಅದರ ತೀರ್ಪು ಆಗಿದೆ. ಗ್ರಾಮಾ ಪಂಚಾಯಿತಿ ವ್ಯವಸ್ಥೆಯ ಬಗ್ಗೆ ರಾಜ್ಯಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸ್ಪೆಷಲ್ ರಿಟ್‌ಪಿಟಿಷನ್ ಫೈಲ್ ಮಾಡಿ ಚಾಲೆಂಜ್ ಮಾಡಿ ಅದು ಇವತ್ತು ಚಾಲ್ತಿಯಲ್ಲಿದೆ; ಇವತ್ತು ಸುಪ್ರೀಂಕೋರ್ಟ್ ಮುಂದಿರುವ ಸ್ಪೆಷಲ್ ರಿಟ್‌ಪಿಟಿಷನ್ ಏನಿದೆ ಅದನ್ನು ವಿತ್‌ಡ್ರಾ ಮಾಡಿಕೊಂಡು ಮತ್ತೆ ತಾವು ಗ್ರಾಮ ಪಂಚಾಯಿತಿ ವ್ಯವಸ್ಥೆಯನ್ನು ಮುಂದುವರಿಸುತ್ತಿರೋ ಹೇಗೋ ಅಥವಾ ಸುಪ್ರೀಂಕೋರ್ಟ್ ತೀರ್ಪು ಬರುವವರೆಗೆ ಕಾಯುತ್ತಿರೋ ಏನೋ ಅದರ ಬಗ್ಗೆ ಒಂದು ಪಾಲಿಸಿ ಡಿಸೀಷನ್ ಇಲ್ಲಿ ಆಗಬೇಕಾಗಿದೆ. ಇದು ಏಕೆ ಆಗಲಿಲ್ಲ? ಇದರ ಬಗ್ಗೆ ಏಕೆ ಇನ್ನೂ ನಿರ್ಣಯ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ? ಏಕೆಂದರೆ ನಾವು ಇಲ್ಲಿ ರಾಜಕೀಯ ವಿಕೇಂದ್ರಿಕರಣದ ಬಗ್ಗೆ ಮಾತನಾಡುತ್ತೇವೆ. ಗ್ರಾಮಪಂಚಾಯಿತಿ ಮಟ್ಟದವರೆಗೆ ನಾವು ಅಧಿಕಾರವನ್ನು ಕೊಟಬೇಕೆಂದು ಹೇಳುತ್ತಿದ್ದೇವೆ. ಅಲ್ಲಿ ಗ್ರಾಮಸಭೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಹೇಳುತ್ತಿದ್ದೇವೆ. ಆದರೆ ಈ ವಿಕೇಂದ್ರಿಕರಣದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಕೆಳಹಂತದ ದೀನದಲಿತರಿಗೆ, ಮಹಿಳೆಯರಿಗೆ, ಶೋಷಿತರಿಗೆ ನಾವೊಂದು ಅಧಿಕಾರವನ್ನು ಕೊಡಬೇಕೆಂದು ಮಾತನಾಡುವಾಗ, ನಾವು ಇವತ್ತು ಈವೊಂದು ಪಂಚಾಯತ್‌ರಾಜ್ ಸುಧಾರಣೆಯ ಬಗ್ಗೆ ಅದರ ಬಗ್ಗೆ ಪಾಲಿಸಿ ಡಿಸಿಷನ್ ತೆಗೆದುಕೊಳ್ಳುವ ಬಗ್ಗೆ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಬೇಕಾಗಿತ್ತು. ಅದರ ಬಗ್ಗೆ ಪ್ರಸ್ತಾಪನೆ ಮಾಡಬೇಕಾಗಿತ್ತು ಇದು ಏಕೆ ಆಗಲಿಲ್ಲ? ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ವಿವರಣೆ ಕೊಡಬೇಕಾಗುತ್ತದೆ. ಇವತ್ತು ಗ್ರಾಮಮಟ್ಟದಲ್ಲಿ ಗ್ರಾಮಸಭೆಗಳನ್ನು ತೆಗೆದುಕೊಂಡರೆ, ಅಲ್ಲಿ ಏನಾಗುತ್ತಿದೆ, ಇವತ್ತು ಆ ಗ್ರಾಮಸಭೆಗಳಿಗೆ ಮಹತ್ವವಿಲ್ಲ. ಏನೋ ಒಂದು ನಾಲ್ಕು ಜನ ಕೊಡುತ್ತಾರೆ, ಅಲ್ಲಿ ಯಾರು ಬಲವಂತರು ಇರುತ್ತಾರೆ ಅವರು ಏನೋ ಒಂದು ನಿರ್ಣಯಗಳನ್ನು ಪಾಸ್ ಮಾಡಿಕೊಂಡು ಅದನ್ನು ಅನುಷ್ಠಾನ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ನಿಜವಾಗಿ ಗ್ರಾಮಸಭೆಗಳು ನಮ್ಮ ಹಿಂದಿನ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರಾದಂತಹ ಮಾನ್ಯ ಬಾಬಾಗೌಡ ಪಾಟೀಲ್‌ರು ಇದರ ಬಗ್ಗೆ ಬಹಳ ಮಹತ್ವ ಕೊಡುತ್ತಿದ್ದರು. ಗ್ರಾಮಸಭೆಗಳಿಗೆ ನಾವು ಹೆಚ್ಚು ಒತ್ತು ಕೊಡಬೇಕು ಅವುಗಳನ್ನು ಬೆಳೆಸಬೇಕು ಅಲ್ಲಿ ಆ ಗ್ರಾಮದಲ್ಲಿರುವಂತಹ ಎಲ್ಲರ ಧ್ವನಿ ಅಲ್ಲಿ ಕಾಣಿಸಿಕೊಳ್ಳಬೇಕು ಮತ್ತು ಅವರ ಪರವಾದಂತಹ ನಿರ್ಣಯವಾಗಬೇಕು ಎನ್ನುವಂತಹ ಮಾತನ್ನು ಬಹಳಷ್ಟು ಒತ್ತು ಕೊಟ್ಟು ಹೇಳುತ್ತಿದ್ದರು. ಅದಕ್ಕಾಗಿ ಇವತ್ತು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಗ್ರಾಮ ಪಂಚಾಯತಿಯ ಬಗ್ಗೆ ಮಾತನಾಡುತ್ತಿದ್ದಾರೆ, ಅಲ್ಲಿರುವಂತಹ ಕೆಳವರ್ಗದ ಜನರ ಬಗ್ಗೆ ಮಾತನಾಡುತ್ತಿದ್ದಾರೆ, ಆದರೆ ಅದರ ಬಗ್ಗೆ ಇವತ್ತು ಏನೊಂದು ನಿರ್ಣಯ ಕೈಗೊಂಡಿದ್ದೀರಿ? ಅದರ ಬಗ್ಗೆ ನಿಮ್ಮ ಪಾಲಿಸಿ ಏನು? ಇದರ ಬಗ್ಗೆ ಸ್ಪಷ್ಟತೆಯನ್ನು ಅವರು ನೀಡಬೇಕಾಗುತ್ತದೆ. ಮತ್ತೆ ಇವತ್ತು ಅದಕ್ಕನುಗುಣವಾಗಿ ಗ್ರಾಮಪಂಚಾಯಿತಿ ಚುನಾವಣೆ ಒಂದು ವರ್ಷಕ್ಕೆ ಮೇಲ್ಪಟ್ಟಾಯಿತು ನಡೆಯಲಿಲ್ಲ. ಈ ವ್ಯವಸ್ಥೆಯನ್ನು ಹಾಗೆಯೇ ಮುಂದು ಹಾಕಿಕೊಳ್ಳುತ್ತಾ ಬಂದರು. ಅದಕ್ಕೆ ಇವತ್ತು ಗ್ರಾಮಪಂಚಾಯಿತಿ ಚುನಾವಣೆಯನ್ನು ಇವತ್ತಿನ ಸರ್ಕಾರ ಯಾವಾಗ ಮಾಡುತ್ತಾರೆನ್ನುವುದು ಅದು ಬಹುಮುಖ್ಯ.

ಅದರ ಬಗ್ಗೆ ನೀವು ಏನೂ ಹೇಳಿಲ್ಲ. ಏಕೆಂದರೆ ಹಿಂದೆ ಕೇಳುತ್ತಿದ್ದರು; ಅಮೆಂಡ್‌ಮೆಂಟ್ ಮಾಡಿದಾಗ, ಚುನಾವಣೆ ಮುಂದಕ್ಕೆ ಹಾಕಿದಾಗ ಇದೇ ಕಾಂಗ್ರೆಸ್ ಪಕ್ಷದವರು ಈ ಕಡೆಗೆ ಕುಳಿತಾಗ ಬಹಳ ಒತ್ತು ಕೊಟ್ಟು ಹೇಳುತ್ತಿದ್ದರು. ನೀವು ಚುನಾವಣೆಯನ್ನು ಮಾಡುವುದಿಲ್ಲ, ಅಧಿಕಾರಿಗಳನ್ನು ಉಳಿಸಿಕೊಳ್ಳುತ್ತೀರಿ, ಅದನ್ನು ಮಾಡುತ್ತೀರಿ, ಇದನ್ನು ಮಾಡುತ್ತೀರಿ ಎಂದು ಬಹಳ ಹೇಳುತ್ತಿದ್ದರು. ಆದರೆ ಇವತ್ತು ನೀವೇನು ಮಾಡುತ್ತಿದ್ದೀರಿ? ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಚುನಾವಣೆಯನ್ನು ಘೋಷಣೆ ಮಾಡಬೇಕಾಗಿತ್ತು. ನೀವು ಹೇಳಬಹುದು ಇದರಲ್ಲಿ ತಾಂತ್ರಿಕ ದೋಷವಿದೆ, ಇದರ ಬಗ್ಗೆ ಕೋರ್ಟ್‌ನಲ್ಲಿ ಪೆಂಡಿಂಗ್ ಕೇಸು ಇದೆ; ಕೋರ್ಟ್‌ನಲ್ಲಿ ಈ ಬಗ್ಗೆ ನಿರ್ಣಯ ಆದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಆದರೆ ಇದರ ಬಗ್ಗೆ ಪರಿಹಾರ ನಿಮ್ಮ ಕಡೆ ಇದೆ. ಸುಪ್ರೀಂಕೋರ್ಟ್‌ನಲ್ಲಿದ್ದಂತಹ ಕೇಸನ್ನು ಅದರ ಬಗ್ಗೆ ನೀವು ಒಂದು ನಿರ್ಣಯವನ್ನು ತೆಗೆದುಕೊಂಡರೆ, ಕೇಸನ್ನು ನೀವು ವಿತ್‌ಡ್ರಾ ಮಾಡಿಕೊಂಡರೆ, ನಾಳೆ ನೀವೇ ಒಂದು ಒಳ್ಳೆಯ ನಿರ್ಣಯ ತೆಗೆದುಕೊಂಡು ಗ್ರಾಮಪಂಚಾಯಿತಿ ಚುನಾವಣೆಯನ್ನು ಮಾಡುವುದಕ್ಕೆ ದಾರಿ ಸುಗಮವಾಗುತ್ತದೆ. ಇವತ್ತು ಅದರ ಬಗ್ಗೆ ಚಿಂತನೆಯನ್ನು ಸರ್ಕಾರ ಮಾಡಿಲ್ಲ. ಇದು ಬಹು ಮುಖ್ಯವಾದ ಚಿಂತನೆ. ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸುಧಾರಣೆ ಮಾಡಲಿಕ್ಕೆ ಆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕೆಳಮಟ್ಟದಲ್ಲಿ ಒಂದು ಬಲಯುತವಾಗಿ ಮಾಡಲಿಕ್ಕೆ ಸ್ಪಷ್ಟವಾದ ನೀತಿಯನ್ನು ಸರ್ಕಾರ ಅನುಕರಣೆ ಮಾಡಬೇಕಾಗಿತ್ತು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ಹಂತದಲ್ಲಿಯೇ ಮಾಡಬೇಕಾಗಿತ್ತು. ಆದರೆ ಅದನ್ನು ಸರ್ಕಾರ ಮಾಡಲಿಕ್ಕೆ ವಿಫಲವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈವೊಂದು ಗ್ರಾಮೀಣಾಭಿವೃದ್ಧಿ ಬಗ್ಗೆ ಅಲ್ಲಿನ ಸುಧಾರಣೆಯ ಬಗ್ಗೆ ಕೇವಲ ನಾಲ್ಕು ಮಾತನ್ನು ಹೇಳಿದ್ದಾರೆ. ಆದರೆ ನಿಜವಾಗಿ ಗ್ರಾಮೀಣಾಭಿವೃದ್ಧಿಯನ್ನು ಯಾವ ದಿಸೆಯಲ್ಲಿ ನಾವು ಮಾಡುತ್ತೇವೆ? ಯಾವ ದಿಕ್ಕಿನಲ್ಲಿ ಮಾಡುತ್ತೇವೆ? ಅದಕ್ಕೆ ಆರಿಸಿಕೊಂಡಿರುವ ಮಾರ್ಗಗಳು, ದಿಕ್ಕುದೆಸೆಗಳೇನು ಎಂದು ಏನೂ ಹೇಳಿಲ್ಲ. ಅದಕ್ಕೆ ಎಷ್ಟು ಹಣವನ್ನು ವೆಚ್ಚ ಮಾಡುತ್ತೇವೆನ್ನುವ ಸ್ಪಷ್ಟತೆಯಿಲ್ಲ. ಮತ್ತು ಅಲ್ಲಿ ಆರೋಗ್ಯ ಸುಧಾರಣೆ, ಅಲ್ಲಿನ ಆಸ್ಪತ್ರೆಗಳ ಸುಧಾರಣೆ, ಅಲ್ಲಿ ಡಾಕ್ಟರುಗಳು ಇರುವುದಿಲ್ಲ ಸಿಬ್ಬಂದಿ ಇರುವುದಿಲ್ಲ ಸುಮ್ಮನೆ ಒಂದು ತೋರಿಕೆಗೋಸ್ಕರ ಅಲ್ಲೊಂದು ಆರೋಗ್ಯಕೇಂದ್ರ ಇರುತ್ತದೆ, ಅದಕ್ಕೆ ಯಾವುದೇ ಒಂದು ವ್ಯವಸ್ಥೆಯಿಲ್ಲ. ಇದನ್ನು ಸುಧಾರಣೆ ಮಾಡಲಿಕ್ಕೆ ಏನು ಪರಿಹಾರ ಇದೆ? ಅಷ್ಟೇ ಅಲ್ಲ, ಇವತ್ತು ಗ್ರಾಮೀಣ ಭಾಗದಲ್ಲಿರುವಂತಹ ರಸ್ತೆಗಳ ಸುಧಾರಣೆ, ಅಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಪ್ರತಿದಿನ ಕನಿಷ್ಟ ಪಕ್ಷ ತಲಾ 55 ಲೀಟರ್‌ನಷ್ಟು ಸುರಕ್ಷಿತ ಕುಡಿಯುವ ನೀರು ದೊರೆಯುವಂತೆ ಮಾಡುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಸನ್ಮಾನ್ಯ ಅಧ್ಯಕ್ಷರೇ, ಕಳೆದ ಐವತ್ತು ವರ್ಷಗಳಿಂದ, ಈ ನಡುವೆ ಕೆಲವು ವರ್ಷಗಳನ್ನು ಬಿಟ್ಟರೆ ಕಾಂಗ್ರೆಸ್ ಪಕ್ಷದವರೇ ಈ ರಾಜ್ಯದಲ್ಲಿ ಸರ್ಕಾರವನ್ನು ನಡೆಸಿದರು. ಇವತ್ತಿನವರೆಗೂ ನಾವು ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಪ್ರತಿಯೊಬ್ಬರಿಗೂ 55 ಲೀಟರ್‌ನಷ್ಟು ನೀರನ್ನು ಕೊಡಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇವೆ. ಆದರೆ ಇದರಲ್ಲಿ ನಿಮ್ಮ ಕೊಡುಗೆ ಏನು? ಏಕೆ ಹಿಂದೆ ಮಾಡಲಿಕ್ಕೆ ಆಗಲಿಲ್ಲ? ಇವತ್ತು ಯಾವರೀತಿ ಮಾಡುತ್ತೀರಿ? ಪ್ರತಿಯೊಬ್ಬರಿಗೂ ನೀವು 55 ಲೀಟರ್‌ನಷ್ಟು ಕುಡಿಯುವ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡುವುದು

ಒಳ್ಳೆಯದು. ಆದರೆ ಇದನ್ನು ಮಾಡುವುದಕ್ಕೆ ಏನು ಯೋಜನೆ ಇದೆ? ಯಾವರೀತಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆ? ಇವತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಎಲ್ಲಾ ಗ್ರಾಮಗಳಿಗೆ ಮಾಡುತ್ತೇವೆ ಎಂದು ಮುಗುಮ್ಮಾಗಿ ಹೇಳುವುದು ಬೇಡ. ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತದೆ. ಆದ್ದರಿಂದ ಇದನ್ನು ಯಾವರೀತಿ ಅನುಷ್ಠಾನ ಮಾಡುತ್ತೀರಿ? ಎಷ್ಟೋಗ್ರಾಮಗಳಲ್ಲಿ ನಾನು ಅಡ್ಡಾಡಿ ನೋಡಿದ್ದೇನೆ. ಕೇವಲ ಕೆರೆ ನೀರನ್ನು ಆಧರಿಸಿ ಅವರು ಜೀವನ ಮಾಡುತ್ತಾರೆ. ಕೆರೆ ಬತ್ತಿಹೋದರೆ 10-15 ಕಿಲೋಮೀಟರ್ ದೂರದ ಪಟ್ಟಣಕ್ಕೆ ಹೋಗಿ ನೀರನ್ನು ತೆಗೆದುಕೊಂಡು ಬರತಕ್ಕದ್ದನ್ನು, ಬಸ್ಸಿನಲ್ಲಿ ಕೊಡಗಳನ್ನು ಇಟ್ಟುಕೊಂಡು ನೀರು ತರತಕ್ಕದ್ದನ್ನು ಎಷ್ಟೋ ಗ್ರಾಮಗಳಲ್ಲಿ ನಾನು ನೋಡಿದ್ದೇನೆ. ಇವತ್ತು ಎಷ್ಟೋ ಗ್ರಾಮಗಳಲ್ಲಿ ಕುಡಿಯುವ ನೀರಿನ ಬವಣೆಯಿಂದ ಜನ ತತ್ತರಿಸುತ್ತಿದ್ದಾರೆ. ಕಳೆದ 50 ವರ್ಷಗಳ ಇತಿಹಾಸವನ್ನು ನೋಡಿದರೆ ಇವತ್ತಿನವರೆಗೂ ಕೂಡ ಈ ಮೂಲಭೂತ ಸೌಕರ್ಯವನ್ನು ಕೊಡುವುದಕ್ಕೆ ಆಗಿಲ್ಲ. ಇದನ್ನು ಅನುಷ್ಠಾನ ಮಾಡುವುದಕ್ಕೆ ಯಾವರೀತಿ ಯೋಜನೆ ಕೈಗೊಳ್ಳುತ್ತೇವೆ ಎಂದು ಅದರ ಬಗ್ಗೆ ಸ್ಪಷ್ಟತೆ ಇರಬೇಕಿತ್ತು. ಆ ಸ್ಪಷ್ಟತೆ ಇಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಮತ್ತೆ ಈ ಪ್ರಾದೇಶಿಕ ತಾರತಮ್ಯಗಳ ಬಗ್ಗೆ ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ವಿಚಾರ ಇದೆ; ಆದರೆ ಇಲ್ಲಿ ವಿಷಯ ಪ್ರಸ್ತಾಪ ಈ ರೀತಿ ಇದೆ-

> '.... ಹಲವಾರು ಕಾರಣಗಳಿಂದಾಗಿ ರಾಜ್ಯದಲ್ಲಿ ಪ್ರಾದೇಶಿಕ ತಾರತಮ್ಯ ಗಳಿರುವುದು ನನ್ನ ಸರ್ಕಾರಕ್ಕೆ ಅರಿವಿದೆ. ಈ ಪ್ರದೇಶಗಳ ಅಭಿವೃದ್ಧಿಯ ಸೂಚಕಗಳನ್ನು ಗುರುತಿಸಲು ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಈ ಸೂಚಕಗಳು ಯಾವುವೆಂದರೆ, ತಲಾವಾರು ಆದಾಯ, ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಹಾಗೂ ವಯಸ್ಕರ ಸಾಕ್ಷರತೆಯಂಥ ಅಳತೆಗೋಲಿ ನಿಂದ ನಿರ್ಧರಿಸಲಾಗುವ ಶೈಕ್ಷಣಿಕ ಸ್ಥಿತಿಗತಿ ಹಾಗೂ ಆಯುರ್ಮಾನ ಆಧರಿತ ಮೂಲ ಆರೋಗ್ಯ ಸ್ಥಿತಿ. ಹಿಂದುಳಿದಿರುವ ಈ ಪ್ರದೇಶಗಳ ಜನರ ಸ್ಥಿತಿಗತಿಗಳನ್ನು ಸುಧಾರಿಸುವ ವಿಷಯದಲ್ಲಿ ನಾವೆಲ್ಲ ಸಕ್ರಿಯವಾಗಿ ದುಡಿದು, ಮುಂಬರುವ ಶತಮಾನದತ್ತ ಒಟ್ಟಿಗೆ ಮುನ್ನಡೆಯಬೇಕಾಗಿದೆ....'

ಇದು ಪ್ರಾದೇಶಿಕ ಅಸಮಾನತೆ ಬಗ್ಗೆ ಇರುವಂಥಾದ್ದು. ಈ ಪ್ರಾದೇಶಿಕ ಅಸಮಾನತೆ ಬಗ್ಗೆ ಅಳತೆಗೋಲು ಯಾವುದೆಂಬುದನ್ನು ಇಲ್ಲಿ ಹೇಳಿದ್ದಾರೆ. ಆದರೆ ಗೌರವಾನ್ವಿತ ಸದಸ್ಯರಾದಂಥ ಸನ್ಮಾನ್ಯ ನಂಜಯ್ಯನಮಠ ಅವರು ತಮ್ಮ ವಂದನಾ ನಿರ್ಣಯದ ಪರವಾಗಿ ಮಾತನಾಡುವಂಥ ಸಂದರ್ಭದಲ್ಲಿ ಅವರು ಹೇಳಿದರು; ಪ್ರಾದೇಶಿಕ ತಾರತಮ್ಯದ ಬಗ್ಗೆ ಹೇಳುತ್ತಾ ಉತ್ತರ ಕರ್ನಾಟಕದ ನಿರ್ಲಕ್ಷ್ಯತೆ ಬಗ್ಗೆ ಹೇಳಿದರು. ಹಾಗೆಯೇ ಐವತ್ತು ವರ್ಷಗಳ ಕತೆಯನ್ನು ಸಹ ಅವರು ಹೇಳಿದರು. ಸನ್ಮಾನ್ಯ ಹೆಚ್.ಕೆ.ಪಾಟೀಲರು ಇವತ್ತು ಇದರ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿದ್ದಾರೆ.

ಇದು 45-50 ವರ್ಷಗಳ ಕತೆ, ಕೇವಲ 5ವರ್ಷ 8ವರ್ಷದ ಕತೆಯಲ್ಲ. ಉತ್ತರ ಕರ್ನಾಟಕದ ಬಗ್ಗೆ ನಿರ್ಲಕ್ಷ್ಯವಾಗಿರುವಂಥಾದ್ದನ್ನು ಸನ್ಮಾನ್ಯ ನಂಜಯ್ಯನಮಠ ಅವರು ಏನು ಹೇಳಿದ್ದಾರೆ, ಇದಕ್ಕಾಗಿ ಅವರಿಗೆ ನಾನು ವಂದನೆಗಳನ್ನು ಹೇಳುತ್ತಿದ್ದೇನೆ. ಅವರು ಸರ್ಕಾರದ ಒಂದು ಭಾಗವಾಗಿದ್ದು ಸರ್ಕಾರವನ್ನು ಎಚ್ಚರ ಮಾಡಿದ್ದಾರೆ. ಆದರೆ ಅವರು ಏನು ಅಂಕಿಅಂಶಗಳನ್ನು ಕೊಟ್ಟರು, ಈ ಕಡೆ ಎಷ್ಟು ಶಾಲೆಗಳು ಇವೆ, ಈಕಡೆ ಎಷ್ಟು ಆಸ್ಪತ್ರೆಗಳು ಇವೆ, ಈ ಕಡೆ ಎಷ್ಟು ಮೆಡಿಕಲ್ ಕಾಲೇಜುಗಳು ಇವೆ, ಎಷ್ಟು ಯೂನಿವರ್ಸಿಟಿಗಳು ಇವೆ, ಎಂದು ಹೇಳುತ್ತಾ ಯಾವ ಒಂದು ಪ್ರಾಶಸ್ತ್ಯ ಕೊಟ್ಟಿರುವ ಬಗ್ಗೆ ಹೇಳಿ ಆ ಕಡೆಗೆ ಎಷ್ಟು ಪ್ರಾಶಸ್ತ್ಯ ಕೊಟ್ಟಿದ್ದಾರೆ, ಈ ಕಡೆ ಎಷ್ಟು ಪ್ರಾಶಸ್ತ್ಯ ಕೊಟ್ಟಿದ್ದಾರೆ ಮತ್ತೆ ಈ ಕಡೆ ಎಷ್ಟು ರಸ್ತೆಗಳ ಸುಧಾರಣೆಯಾಗಿದೆ, ಆ ಕಡೆ ಎಷ್ಟು ರಸ್ತೆಗಳ ಸುಧಾರಣೆಯಾಗಿದೆ ಎಂದು ಅದರ ಬಗ್ಗೆ ಅವರು ಹೋಲಿಕೆಯನ್ನು ಮಾಡಿದರು. ಈ ರೀತಿ ನಾವು ಮಾಡಬೇಕಾಗಿದ್ದನ್ನು ಅವರು ಮಾಡಿದ್ದಾರೆ; ಇದನ್ನು ಈ ಸದನದ ಗಮನಕ್ಕೆ ತಂದಿದ್ದಾರೆ ಮತ್ತು ಸರ್ಕಾರದ ಗಮನಕ್ಕೆ ಕೂಡ ತಂದಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಒಂದು ಅಳತೆಗೋಲಿನಿಂದ ಏನು ಹೋಲಿಕೆ ಮಾಡಿದರೂ ಅದು ಸರಿಯಲ್ಲ. ಅಲ್ಲಿ ಶಾಲೆಗಳು ಹೆಚ್ಚು ಇವೆ, ಈ ಕಡೆ ಕಡಿಮೆ ಇವೆ ಎಂದು ಹೇಳಿದರೆ ಇದರ ಬಗ್ಗೆ ಅಳತೆಗೋಲು ಏನಿದೆ? ಅಥವಾ ಇನ್ನಿತರ ಶಿಕ್ಷಣ ಸಂಸ್ಥೆಗಳು ಮತ್ತು ಬೇರೆ ಸೌಲಭ್ಯಗಳ ಕುರಿತು, ರಸ್ತೆಗಳ ಸುಧಾರಣೆ ಬಗ್ಗೆ ಯಾವ ಒಂದು ಅಳತೆಗೋಲಿನಿಂದ ಇವರು ಮಾಡಿದ್ದಾರೆ ಎಂಬ ವಿಚಾರವನ್ನು ನಾವು ಮಾಡಬೇಕಾಗುತ್ತದೆ. ಇವತ್ತು ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ನಾವು ನೋಡಬೇಕು. ಆದರೆ ಅಂಥಾದ್ದರಲ್ಲಿ ಒಂದು ರಾಜಕೀಯವಾಗಿ ಇರಬಹುದು, ಸಾಮಾಜಿಕವಾಗಿ ಇರಬಹುದು ಅಥವಾ ಇನ್ನಿತರ ದೃಷ್ಟಿಕೋನದಿಂದ ಕೆಲವೊಂದು ಪ್ರದೇಶಗಳ ಅಭಿವೃದ್ಧಿ ಕುಂಠಿತವಾಗಿರುತ್ತದೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಸಮಗ್ರ ಕರ್ನಾಟಕದ ದೃಷ್ಟಿಯಿಂದ ಅದು ಉತ್ತರ ಕರ್ನಾಟಕ ಆಗಿರಬಹುದು ಅಥವಾ ದಕ್ಷಿಣ ಕರ್ನಾಟಕ ಆಗಿರಬಹುದು; ದಕ್ಷಿಣ ಕರ್ನಾಟಕ ಎಷ್ಟು ರೀತಿಯಿಂದ ಅಭಿವೃದ್ಧಿಯಾಗಿದೆ, ಅದೇರೀತಿ ಇಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು; ಈ ಮಾತನ್ನು ನಾವು ಇಲ್ಲಿ ಒತ್ತಿ ಹೇಳುತ್ತಿದ್ದೇವೆ. ಅಥವಾ ಉತ್ತರ ಕರ್ನಾಟಕವನ್ನು ಎಲ್ಲ ದೃಷ್ಟಿಯಿಂದ ಅಭಿವೃದ್ಧಿ ಮಾಡಿ ದಕ್ಷಿಣ ಕರ್ನಾಟಕವನ್ನು ಮಾಡಬಾರದು ಎಂದು ನಾವು ಹೇಳುತ್ತಿಲ್ಲ. ಅಲ್ಲಿ ಏನು ನೀವು ಪಾಲು ಕೊಡುತ್ತಿದ್ದೀರಿ, ಉತ್ತರ ಕರ್ನಾಟಕಕ್ಕೂ ಆ ಪಾಲು ಕೊಡಿ ಎಂದು ಅಲ್ಲಿಯ ಜನತೆ ಕೇಳುತ್ತಿದ್ದಾರೆ. ಅದಕ್ಕೆ ನೀವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ? ಈ ವಿಚಾರದಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬೇಕಾದರೆ, ಇವತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಇದೆ, ಬಯಲುಸೀಮೆ ಅಭಿವೃದ್ಧಿ ಮಂಡಲಿ ಇದೆ, ಮಲೆನಾಡು ಅಭಿವೃದ್ಧಿ ಮಂಡಲಿ ಇದೆ; ಅದರಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳು ಬರುತ್ತವೆ. ಆದರೆ ಇವತ್ತು ಸರ್ಕಾರ ಈ ಮಂಡಳಿಗಳನ್ನು ಕೇವಲ ತೋರಿಕೆಗೆ ಮಾಡಿದ್ದಾರೆ. ಸುಮ್ಮನೆ ಏನೋ ಒಂದು ಅಭಿವೃದ್ಧಿ ಮಾಡುತ್ತೇವೆ ಎಂದು ಜನರಿಗೆ ಆಸೆ ತೋರಿಸುವ ಸಲುವಾಗಿ ಆ ಮಂಡಳಿಗಳು ಇವತ್ತು ಇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಅಥವಾ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಬಹುಶಃ ಹಣವನ್ನು ಕೊಡುವುದನ್ನು ನೋಡಿದರೆ ನನಗೆ ಅನುಭವ ಇದೆ. ಬಯಲುಸೀಮೆ ಅಭಿವೃದ್ಧಿ ಮಂಡಲಿಯಲ್ಲಿ ಆ ಕ್ಷೇತ್ರದ ಶಾಸಕನಾಗಿ ನಾನು ಕೆಲಸ ಮಾಡಿದ್ದೇನೆ; ವರ್ಷಕ್ಕೆ ಮೂರು ಲಕ್ಷ, ನಾಲ್ಕು ಲಕ್ಷ ಹೆಚ್ಚೆಂದರೆ ಐದು ಲಕ್ಷವನ್ನು ಒಂದು

ಕ್ಷೇತ್ರಕ್ಕೆ ಕೊಡುತ್ತಾರೆ. ನಾಲ್ಕೈದು ಲಕ್ಷ ರೂಪಾಯಿಗಳಿಂದ ಏನು ಕೆಲಸ ಮಾಡುವುದಕ್ಕೆ ಸಾಧ್ಯವಿದೆ? ಇಂಥಾದ್ದನ್ನು ಸೂಕ್ಷ್ಮವಾಗಿ ವಿಚಾರ ಮಾಡಬೇಕಾಗುತ್ತದೆ. ಅದೇರೀತಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಮೂರು-ನಾಲ್ಕು ಲಕ್ಷ ರೂಪಾಯಿಗಳಲ್ಲಿ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ? ಕನಿಷ್ಟ 50 ಲಕ್ಷ ರೂಪಾಯಿಗಳನ್ನು ಈ ಮಂಡಲಿಯ ಮುಖಾಂತರ ಒಂದೊಂದು ಕ್ಷೇತ್ರಕ್ಕೆ ಕೊಟ್ಟರೆ ಏನಾದರೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಈ ಒಂದು ಪ್ರಾದೇಶಿಕ ಅಸಮಾನತೆ ವಿಚಾರ ಬಂದಾಗ ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಬಹುದಾಗಿತ್ತು. ನಾವು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಅಥವಾ ಬಯಲುಸೀಮೆ ಅಭಿವೃದ್ಧಿ ಮಂಡಲಿ ಅಥವಾ ಮಲೆನಾಡು ಅಭಿವೃದ್ಧಿ ಮಂಡಲಿಗೆ ಹೆಚ್ಚಿಗೆ ಹಣ ಕೊಡುತ್ತೇವೆ, ಇದರ ಮುಖಾಂತರ ಪ್ರತಿಯೊಬ್ಬ ಶಾಸಕನ ಕ್ಷೇತ್ರಕ್ಕೆ ಅಭಿವೃದ್ಧಿ ಸಲುವಾಗಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಬೇಕಾಗಿತ್ತು. ಆದರೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ಅಭಿವೃದ್ಧಿಮಂಡಲಿಗಳಿಗೆ ಹೆಚ್ಚು ಹಣ ಕೊಡಿ ಎಂದು ಅವರು ನಾವು ಕೂಡಿ ಎಲ್ಲರೂ ಹೇಳಿದ್ದೇವೆ. ಆದರೆ ಇದರ ಬಗ್ಗೆ ಇವತ್ತು ಯಾವುದೂ ನಮೂದು ಇಲ್ಲ.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಮಿಷ ಯೀಲ್ಡ್ ಆಗಬೇಕು. ಇಲ್ಲಿರುವ ಕೊನೆಯ ವಾಕ್ಯವನ್ನು ನೀವು ಓದಿದರೆ ಗೊತ್ತಾಗುತ್ತದೆ-ಏನೆಂದರೆ,

"Av apex body will be constituted to evolve strategies

and closely monitor the progress made by this region."

ಅದಕ್ಕೆ ಪರಿಹಾರ ಯಾವರೀತಿ ಎನ್ನತಕ್ಕದ್ದು ಕೂಡ ನಮೂದಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ಸ್ಪಷ್ಟತೆ ಇಲ್ಲ ಎನ್ನುವಂಥಾದ್ದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಜನರಲ್ ಆಗಿ ಒಂದು ವಾಕ್ಯ ಹೇಳಿದರೆ ನಡೆಯುವುದಿಲ್ಲ. ಈ ಮಂಡಲಿಗಳನ್ನು ನಾವು ಬಲಪಡಿಸುತ್ತೇವೆ ಎನ್ನುವಂಥಾದ್ದನ್ನು ಹೇಳಿದರೆ ಅದಕ್ಕೆ ಒಂದು ಸ್ಪಷ್ಟತೆ ಬರುತ್ತದೆ. ಆ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚಿನ ಹಣ ಒದಗಿಸುತ್ತೇವೆ ಎಂದು ಹೇಳಿದ್ದರೆ ಅದಕ್ಕೆ ಸ್ಪಷ್ಟತೆ ಬರುತ್ತಿತ್ತು. ಅದು ಇಲ್ಲ. ಸುಮ್ಮನೆ ಮುಗಮ್ಮಾಗಿ ನಾವು ಪ್ರಾದೇಶಿಕ ತಾರತಮ್ಯವನ್ನು ಸರಿಪಡಿಸುತ್ತೇವೆ ಎನ್ನುವ ಮಾತನ್ನು ಹೇಳಿದರೆ ಇದು ಜನರಿಗೆ ನಂಬಿಕೆಯಾಗುವ ವಿಷಯ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ಇವತ್ತು ಶಿಕ್ಷಣ ರಂಗದಲ್ಲಿ ಈ ಪ್ರಾದೇಶಿಕ ಅಸಮಾನತೆ ಯಾವರೀತಿ ಇದೆ? ಇದರಲ್ಲಿ ಬಹಳ ಮುಖ್ಯವಾಗಿ ನಾವೇನು ಕಾಂಪಿಟೇಟಿವ್ ಎಂಟರೆನ್ಸ್ ಎಕ್ಸಾಮಿನೇಶನ್ಸ್ ನಡೆಸುತ್ತೇವೆ, ಇದು ಸಿ.ಇ.ಟಿ. ಎನಿದೆ, ಇದರ ಬಗ್ಗೆ ಕೂಡ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ವೈಜನಾಥ ಪಾಟೀಲರಂತೂ ಇದರ ಬಗ್ಗೆ ಬಹಳಷ್ಟು ಹಠ ಮಾಡಿದ್ದರು. ಸಿ.ಇ.ಟಿ. ಪರೀಕ್ಷೆ ಏನು ನಡೆಯುತ್ತದೆ ಅದು ವಿಭಾಗವಾರು ಮಾಡಿ ಎಂದು ಹೇಳಿ ಅವರು ಒತ್ತಾಯ ಮಾಡಿದ್ದರು. ಇವತ್ತು ಮಹಾರಾಷ್ಟ್ರದಲ್ಲಿ ಈ ಸಿಸ್ಟಮ್ ಇದೆ. ಅಲ್ಲಿ ಸಿ.ಇ.ಟಿ. ಅಥವಾ ಸ್ಪರ್ಧಾತ್ಮಕ

ಪರೀಕ್ಷೆಗಳನ್ನು ವಿಭಾಗವಾರು ಮಾಡುತ್ತಾರೆ ಅಲ್ಲಿ ಇದ್ದಂಥ ವಿದ್ಯಾರ್ಥಿಗಳು ಆ ವಿಭಾಗದಲ್ಲೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಇವತ್ತು ಏನಾಗಿದೆ ಎಂದರೆ, ಬೆಂಗಳೂರಿನಲ್ಲಿ ಇರತಕ್ಕಂಥ ಶಿಕ್ಷಣ ಮಟ್ಟ ಮತ್ತು ಇನ್ನಿತರ ಭಾಗದಲ್ಲಿ ಇರತಕ್ಕಂಥ ಶಿಕ್ಷಣ ಮಟ್ಟವನ್ನು ನಾವು ಹೋಲಿಕೆ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಇನ್ನಿತರ ಭಾಗಗಳಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪರೀಕ್ಷೆ ಮಾಡಬೇಕಾಗುತ್ತದೆ. ನಾಳೆ ಏನಾಗುತ್ತದೆ ಎಂದರೆ, ಬೆಂಗಳೂರಿನಲ್ಲಿ ಇರತಕ್ಕಂಥ ಶಿಕ್ಷಣ ಮಟ್ಟದಿಂದ ಅಲ್ಲಿಯ ವಿದ್ಯಾರ್ಥಿಗಳು ಹೆಚ್ಚಿನ ಗುಣಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಆದರೆ ಇನ್ನಿತರ ಭಾಗಗಳಿಂದ ಬರತಕ್ಕಂಥ ವಿದ್ಯಾರ್ಥಿಗಳು ಕಡಿಮೆ ಅಂಕಗಳನ್ನು ತೆಗೆದುಕೊಂಡಿದ್ದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ಈ ತಾರತಮ್ಯವನ್ನು ಹೋಗಲಾಡಿಸಬೇಕಾದರೆ ಈ ರೀತಿಯ ಸ್ವರ್ಧಾತ್ಮಕ ಪರೀಕ್ಷೆಗಳನ್ನು ವಿಭಾಗವಾರು ಮಾಡತಕ್ಕಂಥ ಆಲೋಚನೆ ಸರ್ಕಾರದ ಕಡೆಗೆ ಇರಬೇಕು. ಇದರ ಬಗ್ಗೆ ವಿಚಾರ ಮಾಡಬೇಕು ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದ ನಿರ್ಲಕ್ಷ್ಯದ ಬಗ್ಗೆ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ, ಅದು ನಮ್ಮ ಹೈಕೋರ್ಟ್ ಬೆಂಚ್ ಸ್ಥಾಪಿಸುವ ಬಗ್ಗೆ ಇದೆ ಈ ಹೈಕೋರ್ಟ್ ಪೀಠ ಎನ್ನುವುದು ಉತ್ತರ ಕರ್ನಾಟಕದಲ್ಲಿ ಆಗಬೇಕು ಎನ್ನುವಂಥಾದ್ದು ಏನಿದೆ ಅದಕ್ಕಾಗಿ ಕಳೆದ ಮೂವತ್ತು ವರ್ಷಗಳಿಂದ ಅಲ್ಲಿಯ ಜನತೆ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ನಂಜಯ್ಯನಮಠ ಅವರು ಇದನ್ನು ಪ್ರಸ್ತಾಪ ಮಾಡುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಅವರು ಇದರ ಬಗ್ಗೆ ಏಕೋ ಪ್ರಸ್ತಾಪ ಮಾಡಲಿಲ್ಲ. ಇದರ ಬಗ್ಗೆ ಅಲ್ಲಿಯ ಜನತೆ ಕಳೆದ ಮೂವತ್ತುವರ್ಷಗಳಿಂದ ಸತತವಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಕಳೆದವರ್ಷ ಹುಬ್ಬಳ್ಳಿ-ಧಾರವಾಡ ಇರಬಹುದು, ಬೆಳಗಾಮ್ ಇರಬಹುದು, ಗುಲ್ಬರ್ಗಾ ಇರಬಹುದು, ಅಲ್ಲಿ ಇದ್ದಂಥ ಬಾರ್ ಅಸೋಸಿಯೇಶನ್ ಸದಸ್ಯರು ಇರಬಹುದು, ನಾಗರೀಕರು ಇರಬಹುದು ಅವರು ಆಮರಣಾಂತ ಉಪವಾಸವನ್ನು ಕೈಗೊಂಡರು, ನ್ಯಾಯವಾದಿಗಳು ಸತತವಾಗಿ ಧರಣಿ ಸತ್ಯಾಗ್ರಹ ಮಾಡಿದರು. ಅಲ್ಲಿಯ ಶಾಸಕರು ರಾಜೀನಾಮೆ ಕೊಡುವಂಥ ಪ್ರಸಂಗ ಬಂತು. ಈ ರೀತಿ ಒಂದು ಚಳುವಳಿ ನಡೆದಂಥ ಸಂದರ್ಭದಲ್ಲಿ ಅದರ ಬಗ್ಗೆ ಸರ್ಕಾರ ಯಾವರೀತಿ ಗಮನಹರಿಸಿದೆ, ಮತ್ತು ಈ ಒಂದು ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಸರ್ಕಾರ ಯಾವ ಆಲೋಚನೆ ಮಾಡಿದೆ ಎನ್ನುವಂಥ ವಿಚಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿತವಾಗಬೇಕಾಗಿತ್ತು ಎಂಬ ವಿಚಾರವನ್ನು ನಾನು ಹೇಳಬಯಸುತ್ತಿದ್ದೇನೆ. ಆದರೆ ಅದು ಆಗಲಿಲ್ಲ.

12.30 ಪಿ.ಎಂ.

ಏಕೆಂದರೆ, ಇವತ್ತು ನಾವು ಇಂತಹ ಪ್ರಕರಣಗಳ ವಿಲೇವಾರಿ ಬೇಗನೆ ಆಗಬೇಕೆಂದು ಹೇಳುತ್ತೇವೆ. ಮೊನ್ನೆ ಮಾನ್ಯ ಚಂದ್ರೇಗೌಡರು ಕೊಟ್ಟ ಸ್ಟೇಟ್‌ಮೆಂಟನ್ನು ಪತ್ರಿಕೆಯಲ್ಲಿ ನೋಡಿದ್ದೇನೆ. ಅದು ಈ ರೀತಿ ಇದೆ.

> "ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಮೊಕದ್ದಮೆಗಳ ಶೀಘ್ರ ಇತ್ಯರ್ಥಕ್ಕೆ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತರಲಾಗುವುದು. ವಿಕೇಂದ್ರೀಕರಣ ಎಂದರೆ, ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದೂ ಬರುತ್ತದೆ. ಸುಲಭ

ಹಾಗೂ ತ್ವರಿತ ಗತಿಯಲ್ಲಿ ಜನಸಾಮಾನ್ಯರ ಮನೆ ಬಾಗಿಲಿಗೆ ನ್ಯಾಯ ದೊರಕಿಸುವ ದಿಸೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ನ್ಯಾಯ ಪಂಚಾಯಿತ್ತಿಗಳನ್ನು ಪುನರ್‌ಸ್ಥಾಪಿಸುವ ಜೊತೆಗೆ ಲೋಕ ಅದಾಲತ್ ಮತ್ತು ಸಂಚಾರಿ ಕೋರ್ಟುಗಳನ್ನು ಬಲಪಡಿಸಲಾಗುವುದು ಎಂದು ಅವರು ಹೇಳಿದರು." ಈ ರೀತಿಯಲ್ಲಿ ಅವರ ಅಭಿಪ್ರಾಯ.

ಅದೇ ರೀತಿ ಅವರ ಹೇಳಿಕೆಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಬಗ್ಗೆಯೂ ಹೇಳಿದ್ದಾರೆ. ಹೈಕೋರ್ಟ್ ಪೀಠ ಹುಬ್ಬಳ್ಳಿಯಲ್ಲಿಯೇ ಸ್ಥಾಪನೆಯಾಗ ಬೇಕೆಂಬುದು ಸರ್ಕಾರದ ಹೆಬ್ಬಯಕೆ. ಇದು ಮಾನ್ಯ ಚಂದ್ರೇಗೌಡರ ಅಭಿಪ್ರಾಯ. ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತಾ ಇದ್ದೇನೆ. ಆದರೆ, ಇದರ ಬಗ್ಗೆ ಸರ್ಕಾರದ ಮುಂಚೂಣಿ ಕಾರ್ಯಕ್ರಮ ಏನು, ಸರ್ಕಾರದ ತೀವ್ರಗತಿ ಕ್ರಮ ಏನು ಎಂಬುದನ್ನು ನಾನು ಕೇಳಬೇಕಾಗುತ್ತದೆ. ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಾದಂಥ ಎಸ್.ಎಂ.ಕೃಷ್ಣರವರು 1997ನೇ ಇಸವಿಯಲ್ಲಿ ರಾಜ್ಯಸಭೆ ಸದಸ್ಯರಾಗಿದ್ದ ಸಂದರ್ಭದಲ್ಲಿ ಪ್ರೈವೇಟ್ ಮೆಂಬರ್ಸ್ ಬಿಲ್ ಎಂದು ರಾಜ್ಯಸಭೆಯಲ್ಲಿ ಒಂದು ಬಿಲ್ಲನ್ನು ಮಂಡಿಸಿದ್ದರು. ಅದು ಯಾವುದರ ಸಲುವಾಗಿ ಎಂದರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಸಲುವಾಗಿ ಅವರು ಖಾಸಗಿ ವಿಧೇಯಕವನ್ನು ಮಂಡನೆ ಮಾಡಿದರು. ಅದು ಪತ್ರಿಕೆಯಲ್ಲಿ ಬಂದಿದೆ. ಅಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಪರವಾದ ಅಭಿಪ್ರಾಯ ಇದೆ. ಆದಕ್ಕಾಗಿ ಈ ಒಂದು ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ತೀವ್ರಗತಿಯಾದ ನಿರ್ಣಯಗಳನ್ನು ನಾವು ಕೈಗೊಳ್ಳಬೇಕಾಗುತ್ತದೆ. ಪ್ರತಿ ವರ್ಷ ಹೋರಾಟ ಮಾಡುವುದು, ಅದು ಶಾಂತಿ ಸುವ್ಯವಸ್ಥೆಗೆ ಧಕ್ಕೆಯಾಗುವಂಥ ಪ್ರಸಂಗ; ಈ ರೀತಿಯಾಗಿ ಆಗುವಂಥ ವಾತಾವರಣವನ್ನು ತಪ್ಪಿಸುವುದಕ್ಕೆ ಮತ್ತು ಬಡ ಜನತೆಯ ಕಕ್ಷಿದಾರರ ಮನೆ ಬಾಗಿಲಿಗೆ ನಿಜವಾದ ನ್ಯಾಯ ದೊರಕಬೇಕೋ ಹೇಗೆ ಇದರ ಬಗ್ಗೆ ಚಿಂತನೆ ಮಾಡಬೇಕು ಮತ್ತು ಶೀಘ್ರ ಪ್ರಕರಣಗಳು ವಿಲೇವಾರಿಯಾಗಬೇಕಾದರೆ ನಾವು ಹೈಕೋರ್ಟ್ ಪೀಠವನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪನೆ ಮಾಡುವುದು ಅತ್ಯವಶ್ಯಕ. ಇದರ ಬಗ್ಗೆ ಬೇರೆ ಬೇರೆ ಭಾಗದಲ್ಲಿ ಹೋರಾಟ ನಡೆದಿದೆ. ಸರ್ಕಾರ ಮತ್ತು ಹೈಕೋರ್ಟಿನವರು ಒಂದು ನಿರ್ಣಯ ತೆಗೆದುಕೊಳ್ಳಲಿ. ಹುಬ್ಬಳ್ಳಿಯಲ್ಲಿ ಆಗಬೇಕೋ, ಗುಲ್ಬರ್ಗಾದಲ್ಲಿ ಆಗಬೇಕೋ, ಬೆಳಗಾಂನಲ್ಲಿ ಆಗಬೇಕೋ ಎಂಬ ಬಗ್ಗೆ ಅಲ್ಲಿಯ ಫೀಜಿಬಲಿಟಿ ಮೇಲೆ ನಿರ್ಣಯ ತೆಗೆದು ಕೊಳ್ಳಬೇಕಾಗುತ್ತದೆ. ಮತ್ತು ಇದರ ಬಗ್ಗೆ ನಾವು ಧೃಢವಾದ ನಿರ್ಧಾರ ತೆಗೆದು ಕೊಳ್ಳಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗಲೇಬೇಕು. ಇದನ್ನು ನಾವು ಸ್ಥಾಪನೆ ಮಾಡಿದ್ದೇವೆ ಎನ್ನುವಂಥ ಧೃಢ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಕಳೆದಸಾರಿ ಏನೊಂದು ತೀವ್ರಗತಿಯಲ್ಲಿ ಹೋರಾಟ ನಡೆಯಿತು, ಆಗ ಶಾಂತಿ ಸುವ್ಯವಸ್ಥೆಗೆ ಧಕ್ಕೆಯಾದ ಸಂದರ್ಭದಲ್ಲಿ ಸರ್ವಪಕ್ಷಗಳ ನಿಯೋಗ ಹೋಗಿ ಸನ್ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಲಾಯಿತು. ಈ ರೀತಿ ತೀವ್ರಗತಿಯ ಹೋರಾಟ ಮಾಡಿದಾಗ, ಮುಖ್ಯ ನ್ಯಾಯಧೀಶರು ಇದರ ಬಗ್ಗೆ 5 ಜನ ನ್ಯಾಯಧೀಶರ ಒಂದು ಕಮಿಟಿಯನ್ನು ಮಾಡಿದರು. ಆ ಕಮಿಟಿ ಇದರ ಬಗ್ಗೆ ಕೂಲಂಕುಷವಾಗಿ ವಿಚರಣೆ ನಡೆಸುತ್ತಾ ಇದೆ. ಮಾನ್ಯ ಮುಖ್ಯ ನ್ಯಾಯಾಧೀಶರು ನಮಗೆ ಹೇಳಿದ್ದೇನೆಂದರೆ, ಆ ಕಮಿಟಿಯ ವರದಿ ನಮಗೆ ಬಂದನಂತರ ಅದರ ಬಗ್ಗೆ ನಿರ್ಣಯವನ್ನು

ಕೈಗೊಳ್ಳುತ್ತೇವೆಂದು ಹೇಳಿದ್ದರು. ಆ ಕಮಿಟಿ ಕೆಲವು ಸ್ಥಳಗಳಿಗೆ ಭೇಟಿ ಕೊಟ್ಟಿದೆ, ಅಧ್ಯಯನ ಮಾಡುತ್ತಿದೆ ಎನ್ನುವಂಥ ನಂಬಿಕೆ ನನಗಿದೆ. ಈ ಕಮಿಟಿ ರಚನೆಯಾಗಿ ಈಗಾಗಲೇ 5-6 ತಿಂಗಳ ಮೇಲಾಯಿತು. ಆದರೆ, ಇದರ ಬಗ್ಗೆ ಯಾವರೀತಿ ಕಾರ್ಯಗತವಾಗುತ್ತಿದೆ ಎಂಬುದು ಗೊತ್ತಾಗುತ್ತಾ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಇದರ ಬಗ್ಗೆ ತೀವ್ರಗತಿಯಿಂದ ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಭೇಟಿಯಾಗಿ, ಇವತ್ತು ಏನಾಗಿದೆ ಮತ್ತು ಅಲ್ಲಿಯ ಜನರ ಭಾವನೆಗಳನ್ನು ಹೇಳಿ, ಕಳೆದ 30 ವರ್ಷಗಳಿಂದ ಕಾಣುತ್ತಿರುವ ಈ ಒಂದು ಕನಸನ್ನು, ಮತ್ತು ಬೇಡಿಕೆಯನ್ನು ಅವರಿಗೆ ಕನ್‌ವೀನ್ಸ್ ಮಾಡಿ, ಇವತ್ತು ಕರ್ನಾಟಕ ಹೈಕೋರ್ಟ್‌ಮೇಲೆ ಒಂದು ಒತ್ತಡವನ್ನು ತರಬೇಕು ಮತ್ತು ಇದರ ಬಗ್ಗೆ ತೀವ್ರಗತಿಯ ಕ್ರಮವನ್ನು ಕೈಗೊಳ್ಳಬೇಕೆಂಬ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೈಕೋರ್ಟಿನಲ್ಲಿ ರಚನೆಯಾಗಿರುವ 5 ಜನರ ಕಮಿಟಿ ಒಂದು ವರ್ಷದವರೆಗೂ ವರದಿ ಕೊಡಲೇ ಇಲ್ಲವೆಂದರೆ, ಈ ಸಂದರ್ಭದಲ್ಲಿ ನಾವೇನು ಮಾಡಬೇಕು? ಇದನ್ನು ಸರ್ಕಾರ ವಿಚಾರ ಮಾಡಬೇಕಾಗಿದೆ. ಏಕೆಂದರೆ, ಈ ವಿಚಾರದ ಬಗ್ಗೆ ಈ ಭಾಗದಲ್ಲಿ ಜನಪರವಾದ ಬೇಡಿಕೆ ಇದೆ. ಆ ಬೇಡಿಕೆಯನ್ನು ಈಡೇರಿಸಬೇಕಾದರೆ, ಜನಪರವಾದ ಬೇಡಿಕೆಯನ್ನು ನಾವು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಮನವರಿಕೆ ಮಾಡಿಕೊಟ್ಟು ಅವರ ಮೇಲೆ ಒತ್ತಡವನ್ನು ತಂದು ಈ ಕೆಲಸವನ್ನು ಮಾಡಬೇಕಾದಂಥ ಸಂದರ್ಭ ಇದೆ. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ತೀವ್ರವಾದ ಗಮನವನ್ನು ಕೊಡುತ್ತಾರೆನ್ನುವ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಮತ್ತು ಇದರ ಬಗ್ಗೆ ಅವರು ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಭಾಷಣದ ಉದ್ದಕ್ಕೂ ಉತ್ತರ ಕರ್ನಾಟಕ ಎಂಬ ಶಬ್ದವನ್ನು ಬಳಸಿದ್ದಾರೆ. ಆದರೆ ವಿಶಾಲ ಕರ್ನಾಟಕ ಒಂದೇ. ಕರ್ನಾಟಕದ ಉತ್ತರ ಭಾಗದ ಅಭಿವೃದ್ಧಿಗೆ ಪ್ರಯತ್ನ ಮಾಡಿ ಎಂದು ಹೇಳಬಹುದು. ನಾವುಗಳೇ ಕರ್ನಾಟಕಕ್ಕೆ 2-3 ಹೆಸರಿಸುವುದು ಸರಿ ಎಂದು ನನಗೆ ಕಾಣುವುದಿಲ್ಲ. ಕರ್ನಾಟಕದ ಉತ್ತರ ಭಾಗದ ಅಭಿವೃದ್ಧಿ ಕಾರ್ಯಗಳಿಗೆ ಗಮನಹರಿಸಿ ಎಂದು ಹೇಳಬಹುದು.

ಶ್ರೀ ಡಿ.ವಿ.ಸದಾನಂದಗೌಡ: ಸನ್ಮಾನ್ಯ ಅಧ್ಯಕ್ಷರೇ, ಪ್ರಾರಂಭದ ಹಂತದಲ್ಲಿ ನಿಮ್ಮ ಪಕ್ಷದ ಶಾಸಕರೇ ಉತ್ತರ ಕರ್ನಾಟಕ ಎಂದು ಹೇಳಿ ಮಾತನಾಡಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ: ಯಾರೇ ಮಾತನಾಡಿದರೂ 2-3-4 ಹೆಸರುಗಳು ಕರ್ನಾಟಕದಲ್ಲಿ ಇಲ್ಲ. ಒಂದೇ ವಿಶಾಲ ಕರ್ನಾಟಕ ಇರುವುದು. ಆದ್ದರಿಂದ ಉತ್ತರ ಭಾಗದ ಅಭಿವೃದ್ಧಿಗೆ ಹೆಚ್ಚು ಮಹತ್ವ ಕೊಡಬೇಕೆಂದು ಹೇಳಿ.

ಶ್ರೀ ಡಿ.ವಿ.ಸದಾನಂದಗೌಡ: ಇದರ ಬಗ್ಗೆ ನಿಮ್ಮ ಕಡೆಯಿಂದಲೇ ಪ್ರಸ್ತಾಪ ಬಂದುದಕ್ಕಾಗಿ ಅವರು ಆ ಪ್ರಸ್ತಾಪಕ್ಕೆ ಉತ್ತರ ಕೊಡುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆಯೇ ಹೊರತು ಇದು ನಮ್ಮ ಭಾಗದಿಂದ ಬಂದುದಲ್ಲ. ನಿಮ್ಮ ಭಾಗದಿಂದಲೇ ಪ್ರಾರಂಭಿಕ ಹಂತದಿಂದ ಬಂತು. ಈ

ರೀತಿ ನಿಮ್ಮ ಭಾಗದಿಂದಲೇ ಬರಬಾರದು. ಆಡಳಿತ ಪಕ್ಷದ ವತಿಯಿಂದಲೇ ಬರಬಾರದು. ಖಂಡಿತವಾಗಿ ನಿಮ್ಮ ಕಡೆಯಿಂದ ಬರದೇ ಇದ್ದರೆ, ನಮ್ಮ ಕಡೆಯಿಂದಲೂ ಬರದೇ ಇರುವ ಹಾಗೆ ನೋಡಿಕೊಳ್ಳುತ್ತೇವೆ ಮತ್ತು ಸಮಗ್ರ ಕರ್ನಾಟಕದ ಚಿಂತನೆಯನ್ನು ನಮ್ಮ ಪಕ್ಷದ ವತಿಯಿಂದ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಏನು ವಿಚಾರಗಳನ್ನು ಹೇಳಿದರು, ಅದಕ್ಕೆ ನನ್ನ ಸಹಮತ ಇದೆ. ನಾವು ಈ ವಿಚಾರದಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ತಾರತಮ್ಯ ಮಾಡುವುದು ಬೇಡ. ಉತ್ತರ ಭಾಗ ಮತ್ತು ದಕ್ಷಿಣ ಭಾಗ ಎಂದು ಹೇಳೋಣ. ಸಮಗ್ರವಾಗಿ ಇಡೀ ಕರ್ನಾಟಕದ ಅಭಿವೃದ್ಧಿಯಾಗಬೇಕೆಂಬ ಆಸೆ ನನಗೆ. ಒಂದು ಭಾಗದಲ್ಲಿ ಯಾವರೀತಿ ಅಭಿವೃದ್ಧಿಯಾಗುತ್ತದೆ, ಮತ್ತೊಂದು ಭಾಗದಲ್ಲಿ ಅದೇ ರೀತಿಯ ಅಭಿವೃದ್ಧಿಯಾಗಬೇಕನ್ನುವಂಥ ಸ್ವ-ಇಚ್ಚೆ ನನ್ನದು. ಮತ್ತು ನನ್ನಲ್ಲಿ ಬೇರೆ ಯಾವುದೇ ಒಂದು ತಾರತಮ್ಯ ಭಾವನೆ ಇಲ್ಲ.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಶಿಕ್ಷಣದ ಸುಧಾರಣೆ ಬಗ್ಗೆ ಹೇಳಿದ್ದಾರೆ. ಇದು ಮಹತ್ತರವಾದಂಥ ಅಂಗ. ಇವತ್ತು ನಾವು ಎಲ್ಲಾ ಕಡೆ ಕೇಳುತ್ತಾ ಇದ್ದೇವೆ; ಇವತ್ತು ಶಿಕ್ಷಣ ರಂಗದಲ್ಲಿ ಅಮೂಲಾಗ್ರ ಬದಲಾವಣೆಯಾಗಬೇಕು ಸುಧಾರಣೆಯಾಗಬೇಕು ಅನ್ನುವಂತಾದ್ದು. ಮತ್ತು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಬೇಕು ಅನ್ನುವಂತಾದ್ದು; ಇವತ್ತು ಪರಿಸ್ಥಿತಿ ಯಾವರೀತಿ ಇದೆಯೆಂದರೆ ಎಲ್ಲಿ ಒಳ್ಳೆಯ ಪ್ರಾಥಮಿಕ ಶಿಕ್ಷಣ ಕೊಡುವಂಥ ಶಿಕ್ಷಣ ಸಂಸ್ಥೆಗಳಿವೆ, ಅಲ್ಲಿ ಅಡ್ಮಿಷನ್ ಸಲುವಾಗಿ ಹೆಚ್ಚಿನ ಗದ್ದಲ ಇರುತ್ತದೆ. ಆದರೆ, ಯಾವ ಸರ್ಕಾರಿ ಶಾಲೆಗಳಿರುತ್ತವೆ ಮತ್ತು ಎಲ್ಲಿ ಶಿಕ್ಷಣ ಮಟ್ಟ ಇರುವುದಿಲ್ಲವೋ ಅಲ್ಲಿ ಯಾವುದೇ ಒಂದು ಅಡ್ಮಿಷನ್ ಆಗುವುದಿಲ್ಲ. ಈ ತಾರತಮ್ಯವನ್ನು ಹೋಗಲಾಡಿಸಿ ಅಲ್ಲಿ ಸುಧಾರಣೆ ಮಾಡಬೇಕೆಂಬುದು ಆಗಬೇಕಾಗಿದೆ. ಮತ್ತು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಎಲ್ಲಾ ಮಕ್ಕಳಿಗೂ ಒದಗಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ಅದರಲ್ಲಿಯೂ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಮಟ್ಟ ಬಹಳ ಕುಸಿದಿದೆ. ಕೆಲವು ಕಡೆ ಬೇಕಾದಷ್ಟು ಶಿಕ್ಷಕರು ಇರುವುದಿಲ್ಲ. ಮತ್ತೆ ಕೆಲವು ಕಡೆ ಸರಿಯಾದ ಶಿಕ್ಷಣ ಕೊಡುವಂಥ ವ್ಯವಸ್ಥೆ ಇರುವುದಿಲ್ಲ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಚಿಂತನೆಯನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲಿಯವರೆಗೆ ನಮ್ಮ ಜನರಿಗೆ ಶಿಕ್ಷಣ ಸರಿಯಾಗಿ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಸಮಾಜದ ಏಳಿಗೆ ಕಷ್ಟ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಶೇಕಡ 80ರಷ್ಟು ಸಾಕ್ಷರತೆಯನ್ನು ಈ ವರ್ಷದಲ್ಲಿ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆದರೆ, ಅದನ್ನು ಮಾಡಲಿಕ್ಕೆ ಇಚ್ಛಾಶಕ್ತಿ ಬೇಕಾಗುತ್ತದೆ. ಕಳೆದ 40-50 ವರ್ಷಗಳ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಇದು ಏಕೆ ಆಗಲಿಲ್ಲ, ಇನ್ನು 5 ವರ್ಷದಲ್ಲಿ ಆಗುತ್ತದೆಯೇ ಎಂದು ಕೇಳಬೇಕಾಗುತ್ತದೆ. ಏಕೆಂದರೆ, ಯಾವರೀತಿ ಉತ್ತರ ಭಾಗದ ಕಡೆ ನಿರ್ಲಕ್ಷ್ಯವಾಗಿದೆ ಎಂಬ ಬಗ್ಗೆ ಆಗಲೇ ಮಾತು ಬಂತು. ಏಕೆ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಕೇವಲ 5-10 ವರ್ಷದಿಂದ ಉತ್ತರ ಕರ್ನಾಟಕದ ನಿರ್ಲಕ್ಷ್ಯವಾಗಿಲ್ಲ; ಉತ್ತರ ಭಾಗ ನಿರ್ಲಕ್ಷ್ಯವಾಗಿಲ್ಲ. ಕಳೆದ 45-50 ವರ್ಷಗಳಿಂದ ಸರ್ಕಾರ ಮಾಡಿದವರು ಯಾರಿದ್ದಾರೆ, ಇದೇ ಕಾಂಗ್ರೆಸ್ ಪಕ್ಷದವರು; ಕೆಲವು ವರ್ಷಗಳಲ್ಲಿ

ಪ್ರತಿಪಕ್ಷದವರನ್ನು ಬಿಟ್ಟರೆ, 40-45 ವರ್ಷಗಳ ಆಡಳಿತ ಮಾಡಿದವರು ಇದೇ ಕಾಂಗ್ರೆಸ್ ಸರ್ಕಾರದವರು. ಮಾನ್ಯ ನಂಜಯ್ಯನ ಮಠರವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡಿದವರು ಯಾರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇವತ್ತು ಒಂದು ಸ್ಟೇಟ್‌ಮೆಂಟ್ ಕೊಟ್ಟು ಈ ತಾರತಮ್ಯವನ್ನು ನಿವಾರಣೆ ಮಾಡುತ್ತೇವೆಂದು ಹೇಳಿದ ತಕ್ಷಣ ತಾರತಮ್ಯ ನಿವಾರಣೆಯಾಗುವುದಿಲ್ಲ. ಹಿಂದೆ ಯಾರು ತಪ್ಪು ಮಾಡಿದ್ದಾರೆ, ಆ ತಪ್ಪನ್ನು ಸರಿಪಡಿಸುವಂಥ ಕೆಲಸ ಇವತ್ತು ಆಗಬೇಕಾಗಿದೆ. ಯಾವರೀತಿ ಶಿಕ್ಷಣ ರಂಗದಲ್ಲಿ ತಾರತಮ್ಯವಿದೆ ಅದನ್ನು ಸುಧಾರಣೆ ಮಾಡುವಂತಾದ್ದು ಆಗಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂಬುದನ್ನು ಈ ಸಂದರ್ಭದಲ್ಲಿ ಪ್ರಸ್ತಾವನೆ ಮಾಡಬಯಸುತ್ತೇನೆ.

ಇನ್ನೊಂದು ಬಹುಮುಖ್ಯವಾಗಿ ನಾನು ಇಲ್ಲಿ ಪ್ರಸ್ತಾವನೆ ಮಾಡುವಂತಾದ್ದು, ಏನೆಂದರೆ, ಇತ್ತೀಚಿನ ದಿನಗಳಲ್ಲಿ ಹಲವಾರು ಜಿಲ್ಲೆಗಳಲ್ಲಿ ಅತಿವೃಷ್ಟಿಯಾಯಿತು. ಅದರಲ್ಲಿ ಪ್ರಮುಖವಾಗಿ ಮಂಡ್ಯ ಜಿಲ್ಲೆ, ಮೈಸೂರು ಜಿಲ್ಲೆ, ಅದರಲ್ಲಿಯೂ ಹುಣಸೂರು ತಾಲ್ಲೂಕು;

ಅದೇ ರೀತಿಯಲ್ಲಿ ಬೆಂಗಳೂರಿನ ಆನೇಕಲ್, ಕೋಲಾರ, ಹಾಸನ, ರಾಯಚೂರು, ಧಾರವಾಡ ಈ ಜಿಲ್ಲೆಗಳಲ್ಲಿ ಮತ್ತು ಅದರಲ್ಲೂ ಬಹಳ ಪ್ರಮುಖವಾಗಿ ಕೆಲವೊಂದು ತಾಲ್ಲೂಕುಗಳಲ್ಲಿ ಹೆಚ್ಚಿನ ಮಳೆಯಿಂದಾಗಿ ಮತ್ತು ಕೆಲವೊಂದು ಹಳ್ಳಗಳು, ತುಂಬಿ ಅದರಿಂದ ಅತಿವೃಷ್ಟಿಯಾಗಿ ಇವತ್ತು ಸಾಕಷ್ಟು ಬಡಜನ ಮನೆ ಮಠಗಳನ್ನು ಕಳೆದುಕೊಂಡಿರುವುದು ಇದೆ. ಅದೇ ರೀತಿಯಲ್ಲಿ ನೂರಾರು ಕೋಟಿ ರೂಪಾಯಿಗಳ ಬೆಳೆ ಹಾನಿಯಾದಂತಹ ಸಂದರ್ಭಗಳು ಸಹ ಇದೆ. ರೈತರು ದುಃಖದಲ್ಲಿದ್ದಂತಹ ಸಂದರ್ಭದಲ್ಲಿ, ಅವರಿಗೆ ಇವತ್ತಿಗೂ ಸರಿಯಾದ ರೀತಿಯಲ್ಲಿ ಪರಿಹಾರಧನ ಸಿಗದೇ ಇರುವಂತಹ ಸಂದರ್ಭದಲ್ಲಿ, ರೈತರ ಬಗ್ಗೆ ಕಾಳಜಿ ಇರುವಂತಹ ವಿಷಯದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಪ್ರಸ್ತಾಪ ಮಾಡಬೇಕಾಗಿತ್ತು. ಅದು ಆಗಲಿಲ್ಲ, ಇದು ಖೇದನೀಯವಾದಂತಹ ಸಂಗತಿ ಎಂದು ನಾನು ಹೇಳಬಯಸುತ್ತೇನೆ. ಇವತ್ತು ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಬೆಳೆ ಎಲ್ಲಾ ನಾಶವಾಗಿ ಮುಂದೆ ಏನು ಮಾಡಬೇಕೆಂದು ತಲೆಯ ಮೇಲೆ ಕೈ ಹೊತ್ತುಕೊಂಡು ನಿಂತಿದ್ದಾರೆ. ಇವತ್ತು ಅವರಿಗೆ ನೀವೇನು ಪರಿಹಾರ ಕೊಡುತ್ತಿದ್ದೀರಿ? ಮಾನ್ಯ ಮಂತ್ರಿಗಳು ಕೆಲವರು ಕೆಲವೊಂದು ಜಿಲ್ಲೆಗಳಿಗೆ ಹೋಗಿ ನಾವು ಪರಿಹಾರ ಕಾರ್ಯಕ್ಕೆ ಅಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು, ಹೇಳಿದ್ದಾರೆಯೇ ಹೊರತು ಇವತ್ತು ಬೆಳೆ ಹಾನಿಯಾದ ರೈತರಿಗೆ ಎಷ್ಟು ಪರಿಹಾರ ಕೊಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ಸರ್ಕಾರ ಈ ಸದನಕ್ಕೆ ಒದಗಿಸಬೇಕಾಗುತ್ತದೆ. ನಾನು ಹಲವಾರು ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿ ರೈತರು ನನಗೆ ಹೇಳಿದರು, ನಮ್ಮಲ್ಲಿ ಬೆಳೆ ನಾಶವಾಗಿದ್ದು ಅದನ್ನು ಸರ್ವೆ ಮಾಡಲು ಇದುವರೆಗೂ ಯಾವ ಅಧಿಕಾರಿಯೂ ಬಂದಿಲ್ಲ. ಸ್ಥಳೀಯವಾಗಿರತಕ್ಕಂಥ ಗ್ರಾಮ ಲೆಕ್ಕಿಗರು ಇರಬಹುದು, ಕೃಷಿ ಅಧಿಕಾರಿ ಇರಬಹುದು, ಯಾರು ಬಂದಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಇವತ್ತು ನಾವು ರೈತರಿಗೆ ಕೊಡುವಂತಹ ಪರಿಹಾರ ನಾಲ್ಕು ನೂರು, ಐದು ನೂರು ಹೆಚ್ಚು ಅಂದರೆ ಒಂದು ಸಾವಿರ ರೂಪಾಯಿಗಳು ಮಾತ್ರ.

ಶ್ರೀ ವಿ.ಪಾಪಣ್ಣ (ಹುಣಸೂರು): ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರವಾದ ಹುಣಸೂರು ತಾಲ್ಲೂಕಿನಲ್ಲಿ ಅತಿವೃಷ್ಟಿಯಾಗಿದೆ. ಹಿಂದೆ ಎಷ್ಟು ಮಳೆಯಾಗುತ್ತಿತ್ತೋ ಅದರ ಮೂರರಷ್ಟು ಮಳೆಯಾಗುತ್ತಿದೆ. ಇವತ್ತು ಮಳೆ ಬೀಳುತ್ತಿದೆ. ಇದುವರೆಗೂ ಯಾವುದೇ ಪರಿಹಾರ ಕಾರ್ಯವನ್ನು ತೆಗೆದುಕೊಂಡಿಲ್ಲ. ಜೊತೆಗೆ ಹಿಂದೆ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಎನು ಶಾಲೆಗಳನ್ನು ಕಟ್ಟಿದ್ದರು, ಅವು ಪೂರಾ ಕುಸಿದಿವೆ. ಇಡೀ ಹುಣಸೂರು ಪಟ್ಟಣದಲ್ಲಿ ನೀರು ನುಗ್ಗಿ ಬಹಳ ತೊಂದರೆಯಾಗಿದೆ. ಇನ್ನೂ ಪರಿಹಾರ ಕಾರ್ಯಗಳು ಎನೂ ಶುರವಾಗಿಲ್ಲ. ದಯಮಾಡಿ ತಕ್ಷಣದಲ್ಲಿಯೇ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಈ ರೀತಿ ರಾಜ್ಯದಲ್ಲಿ ಹಲವಾರು ಕಡೆ ಸಮಸ್ಯೆಗಳು ಇವೆ. ಈ ಪರಿಹಾರಧನ ನೀಡುವ ವಿಷಯದಲ್ಲಿ ಅಳತೆಗೋಲು ಎನು ಎನ್ನುವುದನ್ನು ನಿರ್ಧಾರ ಮಾಡಬೇಕಾಗಿದೆ. ಹಳೆಯ ಕಾಲದ ನಿಯಮಗಳು ಇವತ್ತಿಗೂ ಇವೆ. ಹಿಂದೆ ಈ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಡೆದಂತಹ ಸಂದರ್ಭದಲ್ಲಿ ಈ ಸದನದ ಮುಖಾಂತರ ಒಂದು ಜಂಟಿ ಸದನದ ಸಮಿತಿಯನ್ನು ನೇಮಕ ಮಾಡಲಾಯಿತು. ಇಂದು ಹಿರಿಯ ಸಚಿವರಾಗಿರುವಂತಹ ಮಾನ್ಯ ಕಾಗೋಡು ತಿಮ್ಮಪ್ಪನವರು ಸಹ ಆ ಸಮಿತಿಯ ಸದಸ್ಯರಾಗಿದ್ದರು. ನಾನು ಸಹ ಆಗ ಸದಸ್ಯನಾಗಿದ್ದೆ. ನಾವು ಸಾಕಷ್ಟು ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಆ ಜಂಟಿ ಸದನದ ಸಮಿತಿಯು ಭೇಟಿ ಕೊಟ್ಟು ರೈತರ ಭವಣೆಯನ್ನು ನೋಡಿದ್ದನ್ನು, ಕೇಳಿದ್ದನ್ನು ನಾವು ಅಭ್ಯಾಸ ಮಾಡಿ ಎಲ್ಲಾ ಸಮಗ್ರ ಚಿತ್ರಣವನ್ನು ಒಳಗೊಂಡ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆವು. ಆದರಲ್ಲಿ ಈ ಪರಿಹಾರಧನವನ್ನು ನೀಡುವಂತಹ ವಿಚಾರದಲ್ಲಿ ನಾವು ಯಾವ ಅಳತೆಗೋಲನ್ನು ಅನುಸರಿಸಬೇಕೆಂದು ಸಹ ತಿಳಿಸಿದ್ದೆವು. ಆ ವರದಿಯನ್ನು ಈ ಸದನದ ಮುಂದೆ ಮಂಡಿಸಿದ್ದೇವೆ. ಆ ವರದಿ ಸದನದ ಮುಂದೆ ಮಂಡನೆಯಾದ ಮೇಲೆ ರೈತರ ಬಗ್ಗೆ ಕಾಳಜಿ ಇದ್ದಂತಹ ಸರ್ಕಾರ ಇದ್ದರೆ ತಕ್ಷಣ ಸರ್ಕಾರ ಎನಾದರೂ ಒಂದು ಕ್ರಮ ಕೈಗೊಳ್ಳಬೇಕಾಗಿತ್ತು. ಅದರ ಬಗ್ಗೆ ಸರ್ಕಾರ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಅತಿವೃಷ್ಟಿಯಾದಂತಹ ಸಂದರ್ಭದಲ್ಲಿ ಮತ್ತು ಅನಾವೃಷ್ಟಿಯಾದಂತಹ ಸಂದರ್ಭದಲ್ಲಿ ರೈತರ ಬೆಳೆ ನಾಶವಾದಂತಹ ಸಂದರ್ಭದಲ್ಲಿ ಸರ್ಕಾರ ತಕ್ಷಣಕ್ಕೆ ಎನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಒಂದು ನೀತಿ ಇರಬೇಕು. ಅಥವಾ ಬೆಳೆ ನಾಶವಾದ ಬಗ್ಗೆ ಅದನ್ನು ಸರ್ವೆ ಮಾಡಿದ ತಕ್ಷಣ ಒಂದು ಎಕರೆಯಲ್ಲಿ ಎಷ್ಟು ಬೆಳೆ ನಾಶವಾಗಿದೆ, ಎಷ್ಟು ಬೆಳೆ ನಾಶವಾದರೆ ಎಷ್ಟು ಪರಿಹಾರ ಹಣ ಕೊಡುತ್ತೇವೆ, ಎನ್ನುವುದು ಸ್ಪಷ್ಟವಾಗಿರಬೇಕು. ಇವತ್ತು ನಾವು ಹಳೆಯ ಕಾಲದ ಪದ್ಧತಿಯನ್ನು ಅನುಕರಣೆ ಮಾಡಿದರೆ ಒಬ್ಬ ರೈತನಿಗೆ ಒಂದು ಎಕರೆಗೆ 20 ಸಾವಿರದಿಂದ 30 ಸಾವಿರ ರೂಪಾಯಿಗಳು ನಷ್ಟವಾಗಿದ್ದರೆ ಅವರಿಗೆ ಮೂರು ನೂರು, ನಾಲ್ಕು ನೂರು ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟರೆ ಅದರಿಂದ ಎನೂ ಪ್ರಯೋಜನವಾಗುವುದಿಲ್ಲ. ಅವನು ಆ ಬೆಳೆಗೆ ಹಾಕಿದ ಗೊಬ್ಬರ ಅವನು ಖರ್ಚು ಮಾಡಿದ ಹಣ ಬರದಿದ್ದರೆ ಅವನು ಮುಂದೆ ಬದುಕುವುದಕ್ಕೆ ಎನೂ ಆಸೆ ಇರುವುದಿಲ್ಲ. ರೈತ ಯಾವಾಗಲೂ ಸಾಲಗಾರ. ರೈತರ ಮನೆಗೆ ಬ್ಯಾಂಕಿನವರು ಪ್ರತಿದಿನ ಅಡ್ಡಾಡುತ್ತಿರುತ್ತಾರೆ. ರೈತರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತಾದ್ದು, ಅವರ ಮನೆಗಳನ್ನು ಜಪ್ತಿ ಮಾಡುವಂತಾದ್ದು, ದಿನನಿತ್ಯ ನಡೆಯುತ್ತಿರುತ್ತದೆ.

ನಾನು ಮೊನ್ನೆ ಒಂದು ಗ್ರಾಮಕ್ಕೆ ಹೋದಾಗ ಇದನ್ನೇ ಹೇಳಿದರು. ಇವತ್ತು ನಮ್ಮ ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ನಮ್ಮ ಹೊಟ್ಟೆಪಾಡಿಗೆ ಏನೂ ಇಲ್ಲ. ನಾವು ಮುಂದೆ ಏನು ಮಾಡಬೇಕು ಎನ್ನುವುದಿಲ್ಲ. ಸರ್ಕಾರ ನಮ್ಮ ನೆರವಿಗೆ ಬರುತ್ತಿಲ್ಲ. ಅಂತಹ ಸಂದರ್ಭದಲ್ಲಿ ಬ್ಯಾಂಕಿನ ಮತ್ತು ಸೊಸೈಟಿ ಅಧಿಕಾರಿಗಳು ಬಂದು ರೈತರ ಸಾಲ ವಸೂಲಿ ಮಾಡುವುದಕ್ಕೆ ನಿಂತಿರುತ್ತಾರೆ. ಅವರಿಗೆ ಮಾನವೀಯತೆ ಸಹ ಇರುವುದಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಯಾವ ತಾಲ್ಲೂಕಿನಲ್ಲಿ, ಯಾವ ಜಿಲ್ಲೆಯಲ್ಲಿ ರೈತರಿಗೆ ಅನ್ಯಾಯವಾಗಿದೆ, ರೈತರ ಬೆಳೆ ಎಲ್ಲಿ ನಾಶವಾಗಿದೆ ಅಲ್ಲಿ ಸರ್ಕಾರ ತಕ್ಷಣ ಏನು ಕ್ರಮ ತೆಗೆದು ಕೊಳ್ಳಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕು. ಕೆಲವು ಕಡೆ ಹಿರಿಯ ಅಧಿಕಾರಿಗಳು ಹೋಗಿ ಬರುತ್ತಾರೆ. ಮಂತ್ರಿಗಳು ಸ್ಥಳಕ್ಕೆ ಭೇಟಿ ಮಾಡಿ ಬರುತ್ತಾರೆ. ಆದರೆ ಕೆಳ ಹಂತಹ ಅಧಿಕಾರಿಗಳು ರೈತರ ಸಮಸ್ಯೆಗಳನ್ನು ಕೇಳುವುದೇ ಇಲ್ಲ. ಬಹಳ ಅಸಡ್ಡೆಯಿಂದ ನಡೆದು ಕೊಳ್ಳುತ್ತಾರೆ. ನಿಮ್ಮ ಬೆಳೆ ಏನೂ ನಾಶವಾಗಿಲ್ಲ. ನಿಮಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ ಅಥವಾ ನಾಳೆ ಬಂದು ನಿಮ್ಮನ್ನು ನೋಡಿಕೊಳ್ಳುತ್ತೇನೆಂದು ಈ ರೀತಿ ಮಾತನಾಡುತ್ತಾರೆ. ರೈತರ ದುಃಖದಲ್ಲಿ ಪಾಲ್ಗೊಳ್ಳುವುದನ್ನು ಬಿಟ್ಟು ಅವರ ದುಃಖವನ್ನು ಮತ್ತಷ್ಟು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಸರ್ಕಾರ ಈ ವಿಷಯದಲ್ಲಿ ಒಂದು ಸ್ಪಷ್ಟ ನೀತಿಯನ್ನು ಹೇಳಬೇಕು. ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಏನಾದರೂ ಪ್ರಸ್ತಾಪವಾಗಬಹುದು ಎಂದು ಆಲೋಚನೆ ಮಾಡಿದ್ದೆ. ಏಕೆಂದರೆ ಕಳೆದ ಕೆಲವು ದಿನಗಳಲ್ಲಿ ಮಳೆಯಿಂದಾಗಿ ಅತಿವೃಷ್ಟಿಯಾಗಿ ಕೋಟ್ಯಾಂತರ ರೂಪಾಯಿಗಳ ಬೆಳೆ ನಾಶವಾಗಿದೆ. ಆದರ ಬಗ್ಗೆ ಸರ್ಕಾರ ತಕ್ಷಣ ತೆಗೆದುಕೊಳ್ಳುವ ಕ್ರಮದ ಬಗ್ಗೆ, ನೀತಿಯ ಬಗ್ಗೆ ಏನಾದರೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತಾರೆ ಎನ್ನುವ ಆಸೆ ಇತ್ತು, ಆದರೆ ಏನೂ ಹೇಳಲಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರ ಸ್ಪಷ್ಟವಾಗಿ ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾಗಿ ಹೇಳುವಂಥಾದ್ದು ಈ ಒಂದು ಆಡಳಿತ ಸುಧಾರಣೆ ಬಗ್ಗೆ; ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಆಡಳಿತ ಸುಧಾರಣೆ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಅದು ಕೆಲವೇ ಶಬ್ದಗಳಲ್ಲಿ ಕೆಲವೇ ವಾಕ್ಯಗಳಲ್ಲಿ ಮುಕ್ತಾಯ ಮಾಡಿದ್ದಾರೆ. ಇವತ್ತು ಒಬ್ಬ ಬಡ, ಮಧ್ಯಮ ಹಾಗೂ ಶೋಷಿತ ವರ್ಗದ ಜನರು ಯಾವುದೇ ಒಂದು ಕಛೇರಿಗೆ ಹೋಗಿ ತಕ್ಷಣ ತನ್ನ ಕೆಲಸವನ್ನು ಮಾಡಿಸಿಕೊಂಡು ಬರುತ್ತಾನೆ ಎನ್ನುವ ನಂಬಿಕೆ ನನಗೆ ಇಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಾಹಿತಿ ಮತ್ತು ತಂತ್ರಜ್ಞಾನದ ಬಗ್ಗೆ ಆಂಧ್ರಪ್ರದೇಶದಲ್ಲಿ ಅಲ್ಲಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರು ಯಾವ ರೀತಿ ಆಡಳಿತ ಸುಧಾರಣೆ ಬಗ್ಗೆ ಮಾಹಿತಿ ಮತ್ತು ತಂತ್ರಜ್ಞಾನವನ್ನು ಅಳವಡಿಕೆ ಮಾಡಿದ್ದಾರೆ ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಸಹ ಅನುಷ್ಠಾನಗೊಳಿಸಬೇಕೆಂದು ಒಂದು ಆಸೆಯನ್ನು ಇಟ್ಟುಕೊಂಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೇವಲ ಈ ಒಂದು ಮಾಹಿತಿ ಮತ್ತು ತಂತ್ರಜ್ಞಾನವನ್ನು ಅಳವಡಿಕೆ ಮಾಡುವುದರಿಂದಲೇ ಆಡಳಿತ ಸುಧಾರಣೆಯಾಗುತ್ತದೆಂದು ನನಗೆ ವಿಶ್ವಾಸ ಇಲ್ಲ. ಎಲ್ಲಿಯವರೆಗೂ ಕೆಳಹಂತದ ಅಧಿಕಾರಿಗಳು ಅಂದರೆ ತಹಶೀಲ್ದಾರ್ ಮಟ್ಟದ ಅಧಿಕಾರಿಗಳು, ಶಿರಸ್ತೆದಾರ್ ಮಟ್ಟದ ಅಧಿಕಾರಿಗಳು, ಸಂಬಂಧಪಟ್ಟ ಕೇಸ್ ವರ್ಕರ್ಸ್‌ನಿಂದ ಹಿಡಿದುಕೊಂಡು ಗ್ರಾಮದಲ್ಲಿ ಒಬ್ಬ ಗ್ರಾಮ ಲೆಕ್ಕಿಗನನ್ನು

ಹಿಡಿದುಕೊಂಡು, ತಾಲ್ಲೂಕಿನಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ನಿಂದ ಹಿಡಿದುಕೊಂಡು ಎಲ್ಲಿಯವರೆಗೂ ಅವರ ಮನಸ್ಸು ಬದಲಾವಣೆ ಆಗುವುದಿಲ್ಲವೋ ಅಲ್ಲಿಯವರೆಗೂ ರಾಜ್ಯ ಸರ್ಕಾರ ಮೇಲಿನ ಹಂತದಲ್ಲಿ ಯಾವುದೇ ಕ್ರಮ ತೆಗೆದುಕೊಂಡರೂ ಆಡಳಿತದಲ್ಲಿ ಏನೂ ಸುಧಾರಣೆಯಾಗುವುದಿಲ್ಲ. ಕೆಳ ಹಂತದಿಂದಲೂ ಅದನ್ನು ಸುಧಾರಣೆ ಮಾಡಬೇಕಾಗಿದೆ. ಅದಕ್ಕೆ ಒಂದು ವಿಲ್ ಪವರ್ ಬೇಕಾಗುತ್ತದೆ. ಅಧಿಕಾರಿಗಳ ಮನಸ್ಸು ಪರಿವರ್ತನೆಯಾಗಬೇಕಾಗುತ್ತದೆ. ನಾವು ಆಡಳಿತದಲ್ಲಿ ಏನಾದರೂ ಒಳ್ಳೆಯ ಸುಧಾರಣೆ ಮಾಡಬೇಕೆಂದು ಹೊರಟರೆ ಅದಕ್ಕೆ ಅಧಿಕಾರಿಗಳು ಅಡ್ಡಗಾಲು ಹಾಕಿದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ನನಗೆ ಈ ಸಂದರ್ಭದಲ್ಲಿ ಒಂದು ಮಾತು ನೆನಪಿಗೆ ಬರುತ್ತದೆ. ನಮ್ಮ ಹಿಂದಿನ ಪ್ರಧಾನ ಮಂತ್ರಿಗಳಾದ ರಾಷ್ಟ್ರ ನಾಯಕರಾದಂತಹ ಶ್ರೀ ಮಾನ್ ಪಂಡಿತ್ ಜವಹಾರಲಾಲ್ ನೆಹರುರವರು ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು; ಆ ಮಾತು ಬಹಳ ವರ್ಷಗಳ ಹಿಂದೆ ಹೇಳಿದ್ದು ಇರಬಹುದು. ಈ ಒಂದು ಆಡಳಿತದ ಬಗ್ಗೆ ಆಗಲಿ ಅಥವಾ ಅಧಿಕಾರಿಶಾಹಿಗಳ ಬಗ್ಗೆ ಆಗಲಿ ಅವರು ಅಂದು ಹೇಳಿದ ಮಾತು ಇವತ್ತು ಕೂಡ ಪ್ರಸ್ತುತ ಅಂತ ನನಗನಿಸುತ್ತಿದೆ. ಅವರು ಅಂದು ಹೇಳಿದ ಮಾತು ಏನು ಅಂದರೆ ``I could not change the administration. It is still a colonial administration." He went on to elaborate his belief that the continuation of the colonial administration was one of the main causes of inability to solve the problem of poverty.' ಎಂದು ಅವತ್ತು ಅವರು ಹೇಳಿದಂತಹ ಮಾತು ಇವತ್ತಿಗೂ ಅನ್ವಯವಾಗುತ್ತದೆಂದು ನನ್ನ ಒಂದು ವಿಚಾರ. ನನ್ನ ಒಂದು ಅನುಭವ. ಇವತ್ತು ನಾವು ಏನೋ ಒಂದು ಆಡಳಿತದಲ್ಲಿ ಸುಧಾರಣೆ ಮಾಡಬೇಕೆಂದು ಹೇಳುತ್ತೇವೆ. ಆದರೆ ಆ ಒಂದು ನಮ್ಮ ವರ್ಗ ಜೊತೆ ಸಹಕಾರ ಮಾಡದಿದ್ದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಒಂದು ಭಾವನೆ ನನ್ನದು. ಅದಕ್ಕೆ ಆ ಒಂದು ವರ್ಗದಲ್ಲಿ ಜನಪರವಾದ ಕಾಳಜಿಯನ್ನು ನಿರ್ಮಾಣ ಮಾಡುವಲ್ಲಿ ರಾಜ್ಯ ಸರ್ಕಾರದ ಅಧಿಕಾರವನ್ನು ಹಿಡಿದುಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿಮಂಡಲದ ಮೇಲೆ ಬಹಳ ಗುರುತರವಾದ ಜವಾಬ್ದಾರಿ ಇದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇವೊತ್ತು ಅಧಿಕಾರದಲ್ಲೆ ನಮ್ಮ ಪಕ್ಷವೇ ಇರಬಹುದು, ಅವರ ಪಕ್ಷವೇ ಇರಬಹುದು; ಅಲ್ಲೆ ಕುಳಿತವರು ಇಲ್ಲಿಗೆ ಬರಬಹುದು, ಇಲ್ಲಿ ಕುಳಿತವರು ಅಲ್ಲಿಗೆ ಹೋಗಬಹುದು. ಎಲ್ಲರ ಮೂಲಭೂತವಾದ ಗುರಿ ಅಂದರೆ ಬಡವರ, ರೈತರ, ದಲಿತರ, ಶೋಷಿತ ವರ್ಗದವರ ಒಟ್ಟಾರೆ ಜನಸಾಮಾನ್ಯರ ಕಲ್ಯಾಣ ಸಾಧಿಸುವುದು ನಮ್ಮ ಗುರಿಯಾಗಿರುತ್ತದೆ. ಇವೊತ್ತು ಒಬ್ಬ ಜನಸಾಮಾನ್ಯನಿಗೆ ಸರಕಾರದಿಂದ ಯಾವುದೇ ಒಂದು ಕೆಲಸವು ನೆರವೇರುತ್ತದೋ ಇಲ್ಲವೋ ಎಂಬುದು ಖಚಿತವಾಗಿ ಆಗಬೇಕು. ಹಾಗೆ ಯಾವುದೇ ಕೆಲಸಕಾರ್ಯಗಳು ಸರಕಾರದಿಂದ ಜನಸಾಮಾನ್ಯರಿಗೆ ಆಗುವ ವಾತಾವರಣವು ನಿರ್ಮಾಣವಾದಲ್ಲಿ ಸರಕಾರಕ್ಕೆ ಒಂದು ಒಳ್ಳೆಯ ಹೆಸರು ಬರುವಂತಾಗುತ್ತದೆ. ಈಗ ತಾವುಗಳು ಹೊಸತಾಗಿ ಸರಕಾರವನ್ನು ರಚಿಸಿದ್ದೀರಿ. ತಾವುಗಳು ಮುಂದೆ ಯಾವ ಕಾರ್ಯಕ್ರಮಗಳನ್ನು ಮಾಡುತ್ತೀರಿ ಎಂಬುದು ನಮಗೆ ಈಗ ಗೊತ್ತಾಗುವುದಿಲ್ಲ. ನಾವು ನಮ್ಮ ಸಲಹೆ ಸೂಚನೆಗಳನ್ನು ಮಾತ್ರ ಕೊಡುತ್ತಾ ಇರುತ್ತೇವೆ. ಅದನ್ನು ಅನುಷ್ಠಾನ ಮಾಡುವ ಹೊಣೆಯನ್ನು ತಮಗೆ ಬಿಟ್ಟಿರುತ್ತೇವೆ.

ಹಾಗಾಗಿ ಆಡಳಿತ ಸುಧಾರಣೆ ಮಾಡುವ ಸಂದರ್ಭದಲ್ಲಿ ಕೆಳಹಂತದಿಂದ ಸುಧಾರಣೆ ಮಾಡಬೇಕೆಂಬುದು ನಮ್ಮ ಅಭಿಲಾಶೆ. ಮತ್ತೊಂದು ಪ್ರಮುಖವಾದ ಅಂಶ ಎಂದರೆ, ಇವೊತ್ತು ರಾಜಕಾರಣಿಗಳ ಬಗ್ಗೆ ಜನರಲ್ಲಿ ಒಂದು ರೀತಿಯಾದಂಥ ಭಾವನೆಯು ಇದೆ. ಅದರಲ್ಲಿ ಆಡಳಿತ ವಿಚಾರವೂ ಸೇರುತ್ತದೆ. ರಾಜಕಾರಣಿಗಳು ಅಂದರೆ, ಕೇವಲ ಹಣ ಮಾಡುವವರು, ಒಮ್ಮೆ ಎಂಎಲ್‌ಎ ಅಥವಾ ಮಂತ್ರಿ ಆದರೆ ಸಾಕು ಬೇಕಾದಷ್ಟು ಹಣವನ್ನು ಮಾಡಿಕೊಂಡು ಬಿಡುತ್ತಾರೆ. ಅವರಲ್ಲಿ ಜನರ ಬಗ್ಗೆ ಕಾಳಜಿಯು ಇಲ್ಲ; ಎಂಬಿತ್ಯಾದಿ ಭಾವನೆಗಳು ಅವರಲ್ಲಿ ಇವೆ. ಇಂಥ ಒಂದು ಭಾವನೆಯನ್ನು ನಾವೆಲ್ಲರೂ ಅವರಲ್ಲಿ ಮಾಡದಂತೆ ನೋಡಿಕೊಳ್ಳಬೇಕಾಗುತ್ತದೆ. ಜನರಿಗೆ ಸ್ಪಂಧಿಸುವ ಜನಹಿತ ಕಾರ್ಯಗಳನ್ನು ಮಾಡಿ ಅವರ ಮೆಚ್ಚುಗೆ ಗಳಿಸಿಕೊಳ್ಳುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಇದು ಕೇವಲ ಯಾರೋ ಒಬ್ಬರ ಕೆಲಸವಲ್ಲ. ಇದು ನಮ್ಮೆಲ್ಲರ ಕೆಲಸವಾಗಿದೆ. ಈ ತೆರನಾದ ಭಾವನೆಯು ಜನರಲ್ಲಿ ಏಕೆ ಬಂತು ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಾನು ಒಂದು ವೈಯಕ್ತಿಕ ವಿಚಾರವನ್ನು ಹೇಳಬಯಸುತ್ತೇನೆ. ಇವೊತ್ತು ನಾನು ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಅಲಂಕಾರ ಮಾಡಿದ್ದೇನೆ. ಒಬ್ಬ ಕ್ಯಾಬಿನೆಟ್ ಮಂತ್ರಿಗೆ ಇರುವಂಥ ಸೌಲಭ್ಯಗಳು ನನಗೆ ಸಿಕ್ಕಿದೆ. ನನಗೆ ನಿನ್ನೆ ಕಾಂಟೆಸ್ಸಾ ಕಾರನ್ನು ಕೊಟ್ಟರು; ಅದು ಕೆಂಪುಗೂಟದ ಕಾರು. ನಾನು ಮೊದಲಿನಿಂದಲೂ ಜನಸಾಮಾನ್ಯರ ನಡುವಿನಿಂದ ಬಂದವನು. ಜನರೊಂದಿಗೆ ಇದ್ದು ನನ್ನ ಜೀವನವನ್ನು ಸಾಗಿಸಿದ್ದೇನೆ. ನಿನ್ನೆ ನಾನು ಆ ಕಾಲದಲ್ಲಿ ಕುಳಿತಾಗ ಒಂದು ಹೊಸ ಅನುಭವವು ಬಂತು. ಇಂಥ ಕಾರಿನಲ್ಲಿ ಕುಳಿತುಕೊಂಡಾಗ ಸಾಮಾನ್ಯ ಮನುಷ್ಯರಿಗೂ ಒಂದು ರೀತಿಯ ಖುಷಿಯಾಗುತ್ತದೆ. ನಾವು ಹೇಗೆ ಇದ್ದವರು ಹೇಗೆ ಆಗಿದ್ದೇವೆ ಎಂಬ ಒಂದು ಸಂತೋಷವಾಗುತ್ತದೆ. ಆದರೆ ನನಗೆ ಆ ಕಾರ್‌ನಲ್ಲಿ ಕುಳಿತಾಗ ಅಷ್ಟು ಖುಷಿಯಾಗಲಿಲ್ಲ. ನನ್ನದ್ದು ಒಂದು ಹಳೆಯ ಅಂಬಾಸೆಡರ್ ಕಾರು ಇತ್ತು. ಅದರಲ್ಲಿ ನನ್ನ ಕ್ಷೇತ್ರದಲ್ಲಿ, ನನ್ನ ಜನರು ಇರುವಲ್ಲಿ ತಿರುಗಾಟ ಮಾಡಿದಾಗ ಸಿಗುತ್ತಿದ್ದ ಆನಂದವು ಈ ಕಾರ್‌ನಲ್ಲಿ ಸಿಗಲಿಲ್ಲ. ಯಾಕೆಂದರೆ ಆ ಕೆಂಪು ಗೂಟದ ಕಾರು, ಸರಕಾರದ ಕಾರು, ಅದರಲ್ಲಿ ರಾಜಕಾರಣಿಯು ಕುಳಿತಿರುತ್ತಾರೆ ಎಂಬ ಒಂದು ಭಾವನೆಯು ಜನರಲ್ಲಿ ಇರುತ್ತದೆ. ಆ ಕಾರಿನಲ್ಲಿ ಎಂಎಲ್‌ಎ, ಮಂತ್ರಿ, ಅಥವಾ ಒಬ್ಬ ರಾಜಕಾರಣಿಯು ಕುಳಿತಿರುತ್ತಾರೆ. ಅಷ್ಟೇ, ಈ ರಾಜಕಾರಣಿಗಳೆಲ್ಲರೂ ಹೀಗೆಯೇ ಎಂಬ ಭಾವನೆ ಇರುತ್ತದೆ. ಇಂತಹ ಒಂದು ಡಿಫರೆನ್ಸ್‌ನಿಂದಾಗಿ ಜನರಿಗೂ ನಮಗೂ ನಡುವೆ ಒಂದು ಕಂದಕವು ಏರ್ಪಡುತ್ತದೆ. ಈ ಸೌಲಭ್ಯಗಳಿಂದಾಗಿ ನಾವು ಜನರೊಂದಿಗೆ ಅಷ್ಟು ನಿಕಟವಾಗಿ ವರ್ತನೆ ಮಾಡುತ್ತಾ ಇಲ್ಲ. ನಾನು ಈ ವಿಚಾರವನ್ನು ಜನರಲ್ ಆಗಿ ಹೇಳುತ್ತಿದ್ದೇನೆ. ಇವೊತ್ತು ರಾಜಕಾರಣಿಗಳು ತಮಗೆ ಸ್ಥಾನಮಾನ, ಅಧಿಕಾರಗಳು ಬಂದಾಗ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳುವುದಿಲ್ಲ. ಜನರೊಂದಿಗೆ ನಮಗೆ ನೇರ ಸಂಪರ್ಕ ಬರುವುದಿಲ್ಲ. ಇವೊತ್ತು ಶಾಸಕರಾದವರು, ಮಂತ್ರಿಗಳಾದವರು, ಮುಖ್ಯಮಂತ್ರಿಗಳಾದವರು, ಮುಂತಾಗಿ ಒಂದೇ ಒಂದು ಕೆಲಸವನ್ನು ಮಾಡಲಿ. ತಮ್ಮ ಮನೆ ಜನರ ಜೊತೆಗೆ ಒಮ್ಮೆ ಮಾರ್ಕೇಟ್‌ಗೆ ಹೋಗಿ ಬರಲಿ. ರಸ್ತೆಯಲ್ಲಿ ಅವರು ತಮ್ಮ ಮನೆಯ ಹೆಣ್ಣುಮಕ್ಕಳೊಂದಿಗೆ ಅಡ್ಡಾಡಲಿ. ಆಗ ಜನರು ತುಂಬಾ ಸಂತೋಷಪಡುತ್ತಾರೆ. ಹೀಗೆ ಜನರು ಇರುವಲ್ಲಿ ಇವರುಗಳು ಕೂಡ ಓಡಾಡುತ್ತಿದ್ದರೆ ಆ ಜನರ ಭಾವನೆಗಳು, ಅವರುಗಳ ಸಮಸ್ಯೆಗಳು, ಅವರಿಗೆ ಇರುವ ತೊಂದರೆಗಳು ಏನು ಎಂದು ಗಮನಕ್ಕೆ ಬರುತ್ತದೆ. ಇಂಥ ಒಂದು ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು.

ಅದರ ಮೂಲಕ ಜನರ ಮತ್ತು ರಾಜಕಾರಣಿಗಳ ಮದ್ಯೆ ಇರುವ ಕಂದಕವನ್ನು ನಿವಾರಣೆ ಮಾಡುವ ಕೆಲಸವನ್ನು, ಅಂಥ ಒಂದು ಹೊಸ ವ್ಯವಸ್ಥೆಯನ್ನು ನಾವು ತರಬೇಕಾಗಿದೆ. ಜನರು ಈಗ ರಾಜಕಾರಣಿಗಳ ಬಗ್ಗೆ ಆಡಿಕೊಳ್ಳುವುದನ್ನು ನಾವು ನಿಲ್ಲಿಸಬೇಕಾಗಿದೆ. ಕೆಲವು ರಾಜಕಾರಣಿಗಳು ಹಣ ಮಾಡಿರಬಹುದು, ತಪ್ಪಾಗಿ ನಡೆದುಕೊಂಡಿರಬಹುದು, ಕೆಟ್ಟ ಹೆಸರನ್ನು ಗಳಿಸಿರಬಹುದು. ಆದರೆ ಎಷ್ಟೋ ಜನ ರಾಜಕಾರಣಿಗಳು ತುಂಬಾ ಪ್ರಾಮಾಣಿಕರಾಗಿ ಇದ್ದಾರೆ. ಎಷ್ಟೋ ಜನ ಶಾಸಕರು ಇವೊತ್ತು ಒಂದು ಸಣ್ಣ ಮನೆಯಲ್ಲೆ, ಆರ್ಥಿಕ ಸ್ಥಿತಿಗತಿಗಳ ಸಂಕಷ್ಟದಲ್ಲಿ ಇರುವುದನ್ನು ನಾವು ನೋಡಿದ್ದೇವೆ. ಅಂಥವರು ಜನರಿಗೆ ಕಾಣುವುದಿಲ್ಲ. ಅದೇ ಯಾರು ಭ್ರಷ್ಟಾಚಾರದ ಮೂಲಕ ಕೋಟಿಗಟ್ಟಲೆ ಹಣವನ್ನು ಮಾಡಿದ್ದಾರೋ ಅವರ ಬಗ್ಗೆ ಒಂದು ಕೆಟ್ಟ ದೃಷ್ಟಿಕೋನ ಇಟ್ಟುಕೊಂಡಿರುತ್ತಾರೆ. ಈ ರಾಜಕಾರಣಿಗಳೆಲ್ಲರೂ ಹೀಗೆಯೇ ಎಂದು ಅಂದುಕೊಳ್ಳುತ್ತಾರೆ. ಇವೊತ್ತು ನಮ್ಮ ಮಾನ್ಯ ಶಾಂತವೇರಿ ಗೋಪಾಲಗೌಡರನ್ನು ನೆನಪಿಸಿಕೊಳ್ಳಬೇಕು. ಅವರು ಕೊನೆಯ ದಿನಗಳಲ್ಲಿ ಯಾವರೀತಿಯಲ್ಲಿ ಆರ್ಥಿಕ ದುಸ್ಥಿತಿಯಲ್ಲಿದ್ದರು ಎಂದು ನಾವು ಕೇಳಿ ತಿಳಿದುಕೊಂಡಿದ್ದೇವೆ. ಅವರ ಬಗ್ಗೆ ನಾವು ಸಾಕಷ್ಟು ಓದಿ ತಿಳಿದುಕೊಂಡಿದ್ದೇವೆ. ನಮ್ಮ ಅನೇಕ ಹಿರಿಯರಿಗೆ ಅವರ ವಿಚಾರವು ಚೆನ್ನಾಗಿ ಗೊತ್ತಿದೆ. ಅವರ ಜೀವನದ ಅನೇಕ ಘಟನೆಗಳನ್ನು ನಾನು ಕೂಡ ಓದಿ ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಶಾಂತವೇರಿ ಗೋಪಾಲಗೌಡರಂಥ ಒಳ್ಳೆಯ ಅನೇಕ ರಾಜಕಾರಣಿಗಳು ಇದ್ದಾರೆ. ಅದಕ್ಕಾಗಿ ಒಂದು ಒಳ್ಳೆಯ ಆಡಳಿತ ಸುಧಾರಣೆಯ ವ್ಯವಸ್ಥೆಯು ಜರೂರು ಆಗಬೇಕಾಗಿದೆ, ಇವೊತ್ತು ಕಾಂಗ್ರೆಸ್ ಸರಕಾರವು ಅಧಿಕಾರದಲ್ಲಿದೆ ಎಂಬ ಕಾರಣಕ್ಕಾಗಿ ನಾನು ಈ ಮಾತನ್ನು ಹೇಳುತ್ತಾ ಇಲ್ಲ. ಈ ಕೆಲಸವನ್ನು ನಾವೆಲ್ಲರೂ ಸೇರಿಕೊಂಡು ಮಾಡಬೇಕು. ಅದರಲ್ಲಿಯೂ ಆಡಳಿತ ಪಕ್ಷದವರ ಮೇಲೆ ಹೆಚ್ಚಿನ ಜವಾಬ್ದಾರಿಯು ಇದೆ ಎಂಬುದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಜನರೊಂದಿಗೆ ಅಧಿಕಾರಸ್ಥರು ಹೆಚ್ಚು ಸಂಪರ್ಕ ಇಟ್ಟುಕೊಳ್ಳಬೇಕಾದುದು ಜರೂರು ವಿಚಾರವಾಗಿದೆ. ಅಂಥ ಒಂದು ವಾತಾವರಣವನ್ನು ನಾವು ಸೃಷ್ಟಿಸಿ ನಡೆದುಕೊಂಡಾಗ ಜನರ ಸಮಸ್ಯೆಗಳು ದೂರವಾಗುವಂತೆ ನೋಡಿಕೊಂಡಾಗ, ಜನರ ಕಷ್ಟ ಸಂಕಷ್ಟಗಳಿಗೆ ನಾವು ಸ್ಪಂಧಿಸಿದಾಗ, ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಾಗ ಮಾತ್ರ ಜನರಲ್ಲಿರುವ ಒಂದು ಹಿಂದಿನ ಕೆಟ್ಟ ಅಭಿಪ್ರಾಯವು ದೂರವಾಗುತ್ತದೆ. ಆಗ ನಾವು ಆಡಳಿತ ಸುಧಾರಣೆಯನ್ನು ಮತ್ತು ಜನಕಲ್ಯಾಣ ಕೆಲಸವನ್ನು ಮಾಡಿಕೊಂಡು ಹೋಗಲು ಹೆಚ್ಚು ಅನುವು ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಸರಕಾರದವರು ಮಾನ್ಯ ಮುಖ್ಯಮಂತ್ರಿಯವರು ಆ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕೆಂದು ಈ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ನಗರಾಭಿವೃದ್ಧಿಯ ಬಗ್ಗೆ ಯಾವುದೇ ಮಾತು ಪ್ರಸ್ತಾಪವಾಗಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವರು ತಮ್ಮ ಭಾಷಣದಲ್ಲಿ ನಾಮಕಾವಸ್ತೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ಕೊಟ್ಟಿಲ್ಲ. ಅದು ಪಟ್ಟಣ ಇರಬಹುದು, ನಗರ ಇರಬಹುದು, ಅವುಗಳ ಬಗ್ಗೆ ಯಾವುದೇ ಒಂದು ಮಾತನ್ನು ಮಾನ್ಯ ರಾಜ್ಯಪಾಲರು ಹೇಳಿದ್ದು ಎಲ್ಲಿಯೂ ಕಂಡು ಬಂದಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ಇವೊತ್ತು ರಾಜ್ಯದಲ್ಲಿ ಹಲವಾರು ಕಾರ್ಪೋರೇಶನ್‌ಗಳು ಇವೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ, ಗುಲ್ಬರ್ಗ, ಮೈಸೂರು ಮುಂತಾಗಿ

ಮಹಾನಗರ ಸಭೆಗಳಿವೆ. ಅನೇಕ ಮುನ್ಸಿಪಾಲಿಟಿಗಳಿವೆ. ಅವುಗಳೆಲ್ಲವುಗಳ ಆರ್ಥಿಕ ಪರಿಸ್ಥಿತಿಯು ತುಂಬಾ ದುಸ್ಥಿತಿಯಲ್ಲಿವೆ ಎಂಬುದನ್ನು ನಾವು ಎಲ್ಲರೂ ತಿಳಿದಿದ್ದೇವೆ. ಮೊದಲು ಆಕ್ಟ್ರಾಯ್ ಪದ್ಧತಿಯು ಇತ್ತು. ಆಕ್ಟ್ರಾಯ್ ಪದ್ಧತಿಯು ಇದ್ದಾಗ ಅವುಗಳ ಆರ್ಥಿಕ ಸ್ಥಿತಿಯು ಹೇಗೆ ಇತ್ತು ಎಂಬುದನ್ನು ಕೂಡ ನಾವು ತಿಳಿದಿದ್ದೇವೆ. ಈ ಆಕ್ಟ್ರಾಯ್ ತೆಗೆದ ಮೇಲೆ ಮಹಾನಗರಸಭೆಗಳ, ಮುನ್ಸಿಪಾಲಿಟಿಗಳ ಪರಿಸ್ಥಿತಿಯು ಏನಾಗಿದೆ ಎಂಬುದು ಸರಕಾರಕ್ಕೆ ಗೊತ್ತಿದೆ. ನಾನು ಆಕ್ಟ್ರಾಯ್‌ನ್ನು ಪುನಃ ಹೇರಿ ಎಂದು ಹೇಳುವುದಿಲ್ಲ. ಆದರೆ ಆಕ್ಟ್ರಾಯ್ ರದ್ಧತಿ ಆದಾಗ ಅದಕ್ಕೆ ಪರ್ಯಾಯವಾಗಿ ಏನು ಮಾಡಿದ್ದೀರಿ? ಎಂಟ್ರಿಟ್ಯಾಕ್ಸ್ ಮುಂತಾಗಿ ನೀವು ಮಾಡಿದ್ದೀರಿ. ಆದರೆ ಆ ಹಣವು ಸರಕಾರಕ್ಕೆ ಜಮಾ ಆಗುತ್ತಾ ಹೋಗುತ್ತಿದೆ. ಹಿಂದೆ ಆಕ್ಟ್ರಾಯ್ ಮೂಲಕ ಮುನ್ಸಿಪಾಲಿಟಿಗಳಿಗೆ ಯಾವ ಆದಾಯದ ರೇಶಿಯೋ ಇತ್ತು ಅದನ್ನು ಇವೊತ್ತು ಎಂಟ್ರಿಟ್ಯಾಕ್ಸ್ ಮೂಲಕ ಬರುವ ಆದಾಯಕ್ಕೆ ಲೆಕ್ಕ ಹಾಕಿದರೆ ಆ ಪ್ರಮಾಣದಲ್ಲಿ ಆದಾಯವು ಬರುತ್ತಾ ಇಲ್ಲ. ಆಕ್ಟ್ರಾಯ್‌ಗೆ ಪರ್ಯಾಯವಾಗಿ ಸರಕಾರದವರು ಸಂಪನ್ಮೂಲದ ಯಾವ ವ್ಯವಸ್ಥೆಯನ್ನು ಮಾಡಿದ್ದಾರೆ, ಅದರಿಂದ ಸೂಕ್ತ ಪ್ರಮಾಣದ ಆದಾಯವನ್ನು, ಹಣವನ್ನು ಸರಕಾರದವರು ಕೊಡುತ್ತಾ ಇಲ್ಲ. ಹಾಗಾಗಿ ರಾಜ್ಯದ ಎಲ್ಲಾ ನಗರ ಸಭೆಗಳು, ಪುರಸಭೆಗಳು, ಮಹಾನಗರ ಸಭೆಗಳು ಆರ್ಥಿಕ ದುಸ್ಥಿತಿಯಲ್ಲಿವೆ. ಸರಕಾರದವರು ಇದನ್ನು ಸುಧಾರಣೆ ಮಾಡಲು ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು, ಗುಲ್ಬರ್ಗ, ಬೆಳಗಾವಿ, ಹೀಗೆ ಯಾವುದೇ ಮಹಾನಗರಸಭೆಗಳು ಕೂಡ ಇವೊತ್ತು ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಇಲ್ಲದೆ ತೊಳಲಾಡುತ್ತಾ ಇವೆ. ಇವೊತ್ತಿಗೂ ಆ ವಿಚಾರದಲ್ಲಿ ಏನೂ ಮಾಡಲು ಸಾಧ್ಯವಾಗುತ್ತಾ ಇಲ್ಲ. ಜನರಿಗೆ 3-4-5 ದಿನಗಳಿಗೊಮ್ಮೆ ನೀರು ಕೊಡಲು ಕೂಡ ಕಷ್ಟವಾಗುತ್ತಾ ಇದೆ. ಅವು ಕುಡಿಯುವ ನೀರಿನ ಸಮಸ್ಯೆಯಿಂದ ತೊಳಲುತ್ತಿವೆ. ಇವತ್ತಿಗೂ ಏನೂ ಮಾಡಲಿಕ್ಕೆ ಆಗುತ್ತಿಲ್ಲ. ಮೂರು ನಾಲ್ಕು ದಿವಸಕ್ಕೊಮ್ಮೆ, ಕೆಲವು ಸಲ ಎಂಟು ದಿವಸವಾದರೂ ನೀರು ಸಿಗುತ್ತಿಲ್ಲ. ಅದಕ್ಕೆ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸುಧಾರಣೆಯಾಗಬೇಕಾಗಿದೆ. ಅದೇರೀತಿ, ರಸ್ತೆಗಳು, ತಾವು ಸ್ವಲ್ಪ ಅಡ್ಡಾಡಿಬಂದರೆ ನಗರ ಪ್ರದೇಶಗಳಲ್ಲಿ ಬಹಳ ಮರುಕಬರುತ್ತದೆ, ವಿಚಿತ್ರ ಪರಿಸ್ಥಿತಿಯಲ್ಲಿದ್ದೇವೆ ನಾವು. ಅಂತಹ ರಸ್ತೆಗಳ ಸುಧಾರಣೆ ಇರಬಹುದು, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು ಇನ್ನಿತರೆ ಮೂಲಭೂತ ಸೌಕರ್ಯಗಳನ್ನಾದರೂ ನಗರ ಪ್ರದೇಶಗಳಿಗೆ ಕೊಡಲಿಕ್ಕೆ ನಮಗೆ ಆಗುತ್ತಿಲ್ಲ; ಇನ್ನು ಯಾವರೀತಿ ಅಭಿವೃದ್ಧಿ ಸಾಧಿಸುವುದು? ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇವತ್ತು ಬೇರೆ ರಾಜ್ಯಗಳಲ್ಲೇನಾದರೂ ಅಡ್ಡಾಡಿದರೆ, ಕರ್ನಾಟಕದಲ್ಲಿ ಎಲ್ಲ ಬಿಟ್ಟು ನಾವು ಬೆಂಗಳೂರನ್ನೇ ಕಾನ್ಸಂಟ್ರೇಟ್ ಮಾಡುತ್ತಿದ್ದೇವೆ, ಇದು ತಪ್ಪಬೇಕು. ಮಾನ್ಯ ರಾಜ್ಯಪಾಲರ ಭಾಷಣದಲ್ಲೇ ಒಂದು ಮಾತನ್ನು ಹೇಳಿರುವ ಬಗ್ಗೆ ನಾನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ: "ಕರ್ನಾಟಕ ರಾಜ್ಯದ ಅಭ್ಯುದಯವು ಬೆಂಗಳೂರಿನ ಪ್ರಗತಿಯನ್ನೇ ಬಹುಮಟ್ಟಿಗೆ ಅವಲಂಬಿಸಿರುವುದರಿಂದ ಈ ನಗರದ ಅಭಿವೃದ್ಧಿಗೆ ನಾವು ಹೆಚ್ಚಿನ ಆದ್ಯತೆ ನೀಡುತ್ತೇವೆ". ಅಂದರೆ ಇದರರ್ಥವೇನು? ರಾಜ್ಯದ ಜನತೆಗೆ ಇದರಿಂದ ಯಾವ ಸಿಗ್ನಲ್ ಹೋಗುತ್ತದೆ? ಬೆಂಗಳೂರನ್ನು ಅಭಿವೃದ್ಧಿಪಡಿಸಿದರೆ ಇಡೀ ರಾಜ್ಯದ ಅಭಿವೃದ್ಧಿ ಮಾಡಿದಂತೆಯೇ? ಇದು ಎಲ್ಲ ಸರ್ಕಾರಗಳ ಭಾವನೆಯಾಗಿದೆ. ಬೆಂಗಳೂರನ್ನು ಬೆಳೆಸಬೇಡಿರಿ, ಅದಕ್ಕೆ ಹೆಚ್ಚಿನ ಹಣ ಕೊಡಬೇಡಿರಿ ಅಂತ ನಾವು ಹೇಳುವುದಿಲ್ಲ; ಆದರೆ ಬೆಂಗಳೂರು ಸಾಕಷ್ಟು ಅಭಿವೃದ್ಧಿಯಾಗಿದೆ, ಬೇರೆ ನಗರಗಳನ್ನೂ ನಾವು ಬೆಳೆಸಬೇಕಲ್ಲ;

1.00 ಪಿ.ಎಂ.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಕಲ್ಬುರ್ಗಿ, ಮೈಸೂರು ಯಾವುದೇ ಇರಬಹುದು ಇವನ್ನು ನಾವು ಬೆಳೆಸಬೇಕಲ್ಲ, ಅಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಬೆಳೆಸಬೇಕಲ್ಲ; ಇನ್‌ಫ್ರಾಸ್ಟ್ರಕ್ಚರ್ಸ್ ನಾವು ಬೆಳೆಸಬೇಕಲ್ಲ; ಇದು ಯಾಕೆ ಆಗುತ್ತಿಲ್ಲ? ಏಕೆಂದರೆ ನಮ್ಮ ಗಮನವೆಲ್ಲ ಯಾವಾಗಲೂ ಬೆಂಗಳೂರಿಗಿದೆ. ಇವತ್ತು ಮಾಹಿತಿ ತಂತ್ರಜ್ಞಾನವೆಲ್ಲ ಬೆಳವಣಿಗೆಯಾಗಿದ್ದು ಕೇವಲ ಬೆಂಗಳೂರಿನಲ್ಲಿ. ಬೇರೆ ನಗರಗಳಲ್ಲಿ ಯಾಕೆ ಆಗುತ್ತಿಲ್ಲ? ಹಿಂದಿನ ಸರ್ಕಾರ ಹುಬ್ಬಳ್ಳಿಗೆ ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್ ಮಂಜೂರು ಮಾಡಿತ್ತು, ಅದಕ್ಕಾಗಿ ಹೆಚ್‌ಡಿಎಂಸಿ ಒಂದು ಕಟ್ಟಡವನ್ನೂ ಖರೀದಿಮಾಡಿದೆ. ಅದಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಲಿಲ್ಲ. ಆರು ತಿಂಗಳಲ್ಲಿ ಆ ಪಾರ್ಕನ್ನು ಉದ್ಘಾಟಿಸುತ್ತೇವೆಂದು. ಹಿಂದಿನ ಸರ್ಕಾರ ಹೇಳಿತ್ತು ಆದರೆ ಅದು ಅವರ ಕೈಲಿ ಆಗಲಿಲ್ಲ. ಅದನ್ನು ನೀವು ಮಾಡುತ್ತೀರೋ ಹೇಗೆ? ಇದನ್ನು ದಯವಿಟ್ಟು ಹೇಳಬೇಕಾಗುತ್ತದೆ. ಕೇವಲ ಬೆಂಗಳೂರನ್ನು ಮಾತ್ರ ಅಭಿವೃದ್ಧಿಪಡಿಸಲು ಹೋಗಬೇಡಿರಿ. ರಾಜ್ಯದ ಇತರ ನಗರಗಳನ್ನೂ ಅಭಿವೃದ್ಧಿ ಮಾಡಿರಿ, ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಿರಿ ನತಕ್ಕಾಂತಹ ಮಾತುಗಳನ್ನು ನಾನು ಹೇಳಬಯಸುತ್ತಿದ್ದೇನೆ.

ಇನ್ನೊಂದು ವಿಚಾರ, ಬಹುಮುಖ್ಯವಾಗಿ ಈ ಕೊಳಚೆ ಪ್ರದೇಶಗಳ ಬಗ್ಗೆ ಹೇಳಬೇಕಾಗುತ್ತದೆ. ಜನಸಂಖ್ಯೆಯ ಶೇಕಡ 20ರಷ್ಟು ಮಂದಿ ಇಂದು ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಈ ಪ್ರದೇಶಗಳು ದಿನನಿತ್ಯ ಬೆಳೆಯುತ್ತಿವೆ, ಅವುಗಳ ಅಭಿವೃದ್ಧಿಗಾಗಿ ನಾವೇನು ಮಾಡಿದ್ದೇವೆ? ಹೆಚ್ಚಿನ ಹಣ ಅದಕ್ಕಾಗಿ ಕೊಟ್ಟಿದ್ದೇವೆಯೋ ಹೇಗೆ? ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುತ್ತೇವೆಂಬ ಪ್ರಸ್ತಾಪವೇನೋ ಇದೆ. ಹಾಗೇ ಹಿಂದಿನ ಸರ್ಕಾರವೂ ಹೇಳಿತ್ತು. ನನ್ನ ಅನುಭವದ ಪ್ರಕಾರ ನನ್ನ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ 30ರಿಂದ 35 ಕೊಳಗೇರಿಗಳಿವೆ. ಅವುಗಳ ಅಭಿವೃದ್ಧಿಗೆ ಎಷ್ಟು ಹಣ ಕೊಡ್ತಾರಪ್ಪ? ಒಂದು ವರ್ಷಕ್ಕೆ 4ರಿಂದ 5 ಲಕ್ಷ ರೂಪಾಯಿಗಳನ್ನು ಏನು ಕೊಡುತ್ತಾರೆ ಅದು ಒಂದು ಬಾಬಿಗೂ ಸಾಲುವುದಿಲ್ಲ. ಅದಕ್ಕೇ ಹೇಳುವುದು, ನಿಜವಾಗಿ ಕೊಳಗೇರಿವಾಸಿಗಳ ಬಗ್ಗೆ ಕಾಳಜಿ ಸರ್ಕಾರಕ್ಕಿದ್ದರೆ ದಯವಿಟ್ಟು ಈ ಪ್ರದೇಶಗಳ ಅಭಿವೃದ್ಧಿ ಸಲುವಾಗಿ ಹೆಚ್ಚಿನ ಹಣವನ್ನು ನಿಗದಿಪಡಿಸಿ. ಆದರೆ ಪ್ರತಿ ಕ್ಷೇತ್ರಕ್ಕೂ ಸಮಾನವಾಗಿ ವಿತರಿಸಲು ಬರುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಎಷ್ಟು ಕೊಳಗೇರಿಗಳಿವೆ ಅವುಗಳ ಪ್ರಮಾಣ ಇತ್ಯಾದಿ ಬೇಡಿಕೆಗಳನ್ನು ಅಧ್ಯಯನ ಮಾಡಿ ಹಿಂದಿನ ಅನುಭವದ ಮೇಲೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಎಲ್ಲ ಕ್ಷೇತ್ರಕ್ಕೂ ಒಂದೇ ತರಹ ಅಲ್ಲ, ಅಲ್ಲಿಯ ಜನಸಂಖ್ಯೆಗೆ ಅನ್ವಯಿಸಿ ಇದನ್ನು ಮಾಡಬೇಕು. ಈ ತರಹದ ಯಾವುದೇ ಯೋಜನೆ ಅಥವಾ ಆಶಯವನ್ನು ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲವೆಂಬುದನ್ನು ನಾನು ಸವಿನಯವಾಗಿ ಹೇಳಬಯಸುತ್ತಿದ್ದೇನೆ.

ಇನ್ನು ನಮ್ಮ ಎಸ್‌ಸಿ ಎಸ್‌ಟಿ ಜನಾಂಗದ ಅಭಿವೃದ್ಧಿ ಬಗ್ಗೆ, ಮಹಿಳೆಯರ ಕಲ್ಯಾಣದ ಬಗ್ಗೆ ಯಾವುದೇ ಹೊಸ ಯೋಜನೆಗಳನ್ನು ಮಾಡಿಲ್ಲ. ಅಥವಾ ಈ ಬಗ್ಗೆ ಕೇಂದ್ರದ ಯೋಜನೆಗಳು ಏನಿವೆ ಅವುಗಳ ಮೂಲಕ ಬರುವ ಧನವಿರಬಹುದು, ಆದರೆ ಹೊಸದು ಯಾವುದೂ ಏನೂ ಇಲ್ಲ. ಹಿಂದಿನ ಇತಿಹಾಸ ನೋಡಿದರೆ ನಾವು ಎಷ್ಟೇ ಮಾತನಾಡಿದರೂ ಇವತ್ತಿಗೂ ಈ ದಲಿತ ಜನಾಂಗ ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ಬಂದಿಲ್ಲ. ಇವತ್ತಿಗೂ ಶೋಷಣೆಯಲ್ಲೇ

ಅವರಿದ್ದಾರೆ, ಅವರ ಸಾಕ್ಷರತೆಯ ಮಟ್ಟ ಹೆಚ್ಚಿನ ರೀತಿಯಲ್ಲಿ ಆಗಿಲ್ಲ. ಅಂತಹ ಶೋಷಿತ ವರ್ಗಕ್ಕೆ ನಾವು ಏನು ಮಾಡುತ್ತೇವೆಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಅದರ ಬಗ್ಗೆಯೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಚಿಂತನೆ ನಡೆಸುವರೇ ಎಂಬ ಮಾತು ಹೇಳಬಯಸುತ್ತೇನೆ.

ಮತ್ತೊಂದು ವಿಚಾರ ಬಹಳ ಮುಖ್ಯವಾಗಿ ಹೇಳುವಂಥಾದ್ದು ಈ ಕಾವೇರಿ ಮತ್ತು ಕೃಷ್ಣೆ ಬಗ್ಗೆ; ಕೃಷ್ಣೆ ಬಗ್ಗೆ ಕೆಲವು ಕಡೆ ಪ್ರಸ್ತಾಪವಿದೆ, ಆದರೆ ಕಾವೇರಿ-ಕೃಷ್ಣ ನದಿಗಳ ಜಲ ವಿವಾದ ಪರಿಹರಿಸುವ ಬಗ್ಗೆ ಸ್ಪಷ್ಟತೆಯನ್ನು ಸರ್ಕಾರ ಕೊಟ್ಟಿಲ್ಲ. ಬರುವ ಮೇ 31ರೊಳಗೆ ಕೃಷ್ಣೆಯ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಕಾಮಗಾರಿ ಕೆಲಸಗಳು ಯಾವ ಹಂತದಲ್ಲಿವೆ, ಅದು ಯಾವಾಗ ಪೂರ್ಣಗೊಳ್ಳುತ್ತದೆ, ಮೇ 31ರೊಳಗೆ ನೀರು ಬಳಸಲು ಸಾಧ್ಯವೋ ಹೇಗೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಮೇ 31ರೊಳಗೆ ಕಾರ್ಯ ಮಾಡಿ ಮುಗಿಸುತ್ತೇವೆ ಎಂಬ ಸ್ಪಷ್ಟತೆ ಇವತ್ತು ಇರಬೇಕಾಗಿತ್ತು, ಆ ದೃಢತೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಅದಕ್ಕಾಗಿ ಸರ್ಕಾರದಲ್ಲಿ ನಾನು ಇವತ್ತು ವಿನಂತಿ ಮಾಡುತ್ತಿದ್ದೇನೆ, ಕಾವೇರಿ ಜಲ ವಿವಾದ ಇರಬಹುದು, ಕೃಷ್ಣೆಯ ಜಲ ವಿವಾದ ಇರಬಹುದು, ಇವುಗಳ ಇವತ್ತಿನ ಪರಿಸ್ಥಿತಿಯೇನಿದೆ, ಮುಂದೆ ಏನು ಮಾಡಬೇಕಾಗಿದೆ ಎಂಬ ಬಗ್ಗೆ ಒಂದು ಶ್ವೇತಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಲಿ ಎಂದು ಅವರಲ್ಲಿ ಕೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲೇನೋ ಹಲವಾರು ಯೋಜನೆಗಳ ಪ್ರಸ್ತಾಪವಿದೆ, ಆದರೆ ಒಂದಕ್ಕೂ ಟೈಂಬೌಂಡ್ ಪ್ರೋಗ್ರಾಂ ಇಲ್ಲ; ಇವತ್ತು ಮಾನ್ಯ ಅಟಲ್‌ಬಿಹಾರಿ ವಾಜಪೇಯಿ ಅವರು ಮೊನ್ನಿನ ರಾಷ್ಟ್ರಪತಿಗಳ ಭಾಷಣದಲ್ಲಿ ಕೆಲವು ಯೋಜನೆಗಳಲ್ಲಿ ಕಾಲಮಿತಿ ವಿಧಿಸಿದ್ದಾರೆ, ಎಲ್ಲ ಸಚಿವರಿಗೆ ನೂರು ದಿವಸದಲ್ಲಿ ಏನು ಮಾಡಬೇಕು ಎಂದು ಒಂದು ಗುರಿ ಕೊಟ್ಟಿದ್ದಾರೆ. ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಅಂತಹ ಕಾಲಮಿತಿ ಕಾರ್ಯಕ್ರಮ ಇರುತ್ತದೇನೋ ಅಂತ ನಾನು ನಿರೀಕ್ಷಿಸಿದ್ದೆ, ಇಂತಹ ಯೋಜನೆಯನ್ನು ಇನ್ನು ನೂರು ದಿವಸದೊಳಗೆ ನಾನು ಮಾಡಿಸುತ್ತೇನೆ, ಮತ್ತೊಂದು ಯೋಜನೆಯಿದೆ, ಅದನ್ನು ಕೂಡ ಇಷ್ಟು ವರ್ಷದಲ್ಲಿ ಮಾಡಿಸುತ್ತೇವೆ ಎಂದು ಹೇಳುವಂಥ ಯಾವುದೇ ಕಾಲಮಿತಿ ಕಾರ್ಯಕ್ರಮ ಇಲ್ಲ, ಬದಲಿಗೆ ಸುಮ್ಮನೆ ತೋರಿಕೆಗೆ ಫಾರ್ಮಲ್ಲಾಗಿ ಸರ್ಕಾರ ಮಾನ್ಯ ರಾಜ್ಯಪಾಲರಿಂದ ಒಂದು ಭಾಷಣ ಮಾಡಿಸಬೇಕು ಅಂತ, ಅದನ್ನು ಮಾಡಿಸಿದ್ದೀರಿಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇಲ್ಲಿ ಮತ್ತೊಂದು ವಿಚಾರವನ್ನು ಪ್ರಸ್ತಾಪಿಸಲು ನಾನು ಇಚ್ಛಿಮಾಡುತ್ತಿದ್ದೇನೆ; ನಮ್ಮ ಆಡಳಿತ ಯಾವರೀತಿ ಇರಬೇಕೆಂಬ ಬಗ್ಗೆ ಒಂದು ಅಧ್ಯಯನ ಸಮಿತಿ ಮಾಡಬೇಕಾಗುತ್ತದೆ. ಪ್ರತಿ ಜಿಲ್ಲೆ, ತಾಲ್ಲೂಕಿನ ಜನಸಂಖ್ಯೆ ಪ್ರಮಾಣ, ವಾತಾವರಣ, ವಿವಿಧವರ್ಗಗಳ ಪ್ರಮಾಣ ಅಲ್ಲಿನ ವಿಶಿಷ್ಟ ಸಮಸ್ಯೆಗಳು-ಇವೆಲ್ಲ ಒಂದರಿಂದ ಇನ್ನೊಂದು ತಾಲ್ಲೂಕಿಗೆ ಬದಲಿಯಾಗುತ್ತಿರುತ್ತವೆ, ಬೇರೆ ಬೇರೆ ಇರುತ್ತವೆ. ಎಲ್ಲವನ್ನೂ ನಾವು ಒಂದೇ ಅಳತೆಗೋಲಿನಿಂದ ಮಾಡುವುದಕ್ಕೆ ಆಗುವುದಿಲ್ಲ. ಆಶ್ರಯಯೋಜನೆ ಅಥವಾ ಆರಾಧನೆ ಯೋಜನೆ ಏನು ಇರುತ್ತದೆ ಅದರ ಮೂಲಕ ಪ್ರತಿ ತಾಲ್ಲೂಕಿಗೂ ನಾವು ಇಂತಿಷ್ಟು ಅಂತ ನಿಗದಿ ಮಾಡುತ್ತೇವೆ. ಆದರೆ ನನ್ನ ಚಿಂತನೆ ಏನೆಂದರೆ, ಪ್ರತಿ ತಾಲ್ಲೂಕಿನ ಪ್ರತಿ ಗ್ರಾಮದ ಸಮಸ್ಯೆಗಳೇನು ಎಂದು ಅಧ್ಯಯನವಾಗಬೇಕು,

ಆದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿರಿ. ಮಹಾರಾಷ್ಟ್ರದಲ್ಲಿ ಶ್ರೀದಾಂಡೇಕರ್ ಎಂಬ ಒಬ್ಬ ದೊಡ್ಡ ಎಕನಾಮಿಸ್ಟ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ಮಾಡಿದ್ದರು, ಅದು ಇಡೀ ಮಹಾರಾಷ್ಟ್ರದ ಎಲ್ಲ ಭಾಗಗಳಲ್ಲಿ ಪ್ರವಾಸ ಮಾಡಿ ಎಲ್ಲ ಅಂಕಿ ಸಂಖ್ಯೆಗಳನ್ನೂ ಸಂಗ್ರಹಿಸಿ ಪ್ರತಿ ತಾಲ್ಲೂಕಿನಲ್ಲಿ, ಗ್ರಾಮದಲ್ಲಿ ಯಾವ್ಯಾವ ಪರಿಸ್ಥಿತಿ ಇದೆ, ಇಂಥ ಗ್ರಾಮದಲ್ಲಿ ನಾವು ಯಾವ ಅಭಿವೃದ್ಧಿ ಕೆಲಸವನ್ನು ಮಾಡಬೇಕು, ಯಾವ ವಿಷಯಕ್ಕೆ ಪ್ರಾಧಾನ್ಯತೆ ಕೊಡಬೇಕು, ಇಲ್ಲಿ ಒಳ ರಸ್ತೆ ಮಾಡಬೇಕೋ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೋ ಅಥವಾ ಹೊರರಸ್ತೆ ಮಾಡಬೇಕೋ ಎಂದು ಪಾಯಿಂಟ್ ಮಾಡಿಕೊಂಡು ಹಣ ಕೊಡುವ ಸಂದರ್ಭದಲ್ಲಿ ಇಷ್ಟು ಹಣ ಕೊಟ್ಟರೆ ಅದನ್ನು ಯಾವುದಕ್ಕೆ ಬಳಸಬೇಕು ಇದರ ಬಗ್ಗೆ ಒಂದು ಸಮಗ್ರವಾದ ವರದಿಯನ್ನು ಆ ಆಯೋಗ ಕೊಟ್ಟಿದೆ. ಇವತ್ತು ಅದು ಎಲ್ಲಾ ರಾಜ್ಯದ ಸರ್ಕಾರಗಳಿಗೂ ಮಾದರಿಯಾಗುತ್ತದೆ. ನಾಳೆ ಯಾವುದೋ ಒಂದು ಸರ್ಕಾರ ಬಂದಾಗ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕು, ಯಾವ ರೀತಿ ಯೋಜನೆಯನ್ನು ಅನುಷ್ಠಾನ ಮಾಡಬೇಕು, ಯಾವ ತಾಲ್ಲೂಕಿಗೆ ಮತ್ತು ಯಾವ ಜಿಲ್ಲೆಗೆ ಮಹತ್ವ ಕೊಡಬೇಕು ಎಂದು ನೋಡಿದಾಗ ಇಂಥ ಆಯೋಗಗಳ ವರದಿಗಳು ಬಹಳ ಮಾದರಿಯಾಗುತ್ತವೆ. ಅದಕ್ಕೆ ಒಂದು ಒಳ್ಳೆಯ ರೀತಿಯ ಆಡಳಿತ ಮತ್ತು ಒಳ್ಳೆಯ ರೀತಿಯಿಂದ ಅಭಿವೃದ್ಧಿ ಕೆಲಸವಾಗಬೇಕಾದರೆ ನಮ್ಮ ರಾಜ್ಯ ಸರ್ಕಾರ ಸಿದ್ಧ ಇರಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯ ಒಂದು ಆಯೋಗವನ್ನು ನೇಮಕಮಾಡಿ, ಸಮಗ್ರವಾಗಿ ಅಭ್ಯಾಸ ಮಾಡುವಂಥ ಒಂದು ಚಿತ್ರಣವನ್ನು ಅವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಕೆಲವೊಂದು ವಿಷಯಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪಾಲಿಸಿ ಮ್ಯಾಟರ್ಸ್ ಬಗ್ಗೆ ಏನಾದರೂ ಪ್ರಸ್ತಾಪ ಮಾಡಿರುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅದನ್ನು ಮಾಡಿಲ್ಲ ಇನ್ನು ಈಗ ನಾಮಕರಣ ವಿಷಯದ ಬಗ್ಗೆ ಹೇಳಬೇಕೆಂದರೆ, ಕಳೆದ ಸರ್ಕಾರ ಹಲವು ಸೊಸೈಟಿಗಳಿಗೆ, ಕೋಆಪರೇಟಿವ್ ಸೊಸೈಟಿ ಇರಬಹುದು, ಟೌನ್ ಪಂಚಾಯಿತಿ ಇರಬಹುದು, ಇದಕ್ಕೆ ನಾಮಿನೇಷನ್ಸ್ ಮಾಡಿದರು. ಈಗ ಬಂದಿರುವ ಸರ್ಕಾರ ಅವುಗಳನ್ನು ನಾವು ರದ್ದುಮಾಡಿದ್ದೇವೆಂದು ಹೇಳಿದರು. ಆಮೇಲೆ ಈ ನಿಗಮ, ಮಂಡಳಿಗಳಿಗೆ ಅಧ್ಯಕ್ಷರನ್ನು, ಅಧಿಕಾರೇತರ ಅಧ್ಯಕ್ಷರನ್ನು ಅಂದರೆ, ಶಾಸಕರನ್ನು, ರಾಜಕೀಯ ವ್ಯಕ್ತಿಗಳನ್ನು ನೇಮಕ ಮಾಡುವುದು ಇರಬಹುದು ಅಥವಾ ವರ್ಗಾವಣೆಯಂಥ ವಿಷಯವಿರಬಹುದು ಅಥವಾ ರಸ್ತೆಗಳ ಅಗಲೀಕರಣ ಇಂಥ ಕೆಲವೊಂದು ವಿಷಯಗಳ ಬಗ್ಗೆ ಏನಾದರೂ ನಾವು ಪಾಲಿಸಿ ಡಿಸಿಷನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇವತ್ತು ನಿಗಮ, ಮಂಡಳಿಗೆ ನೇಮಕವಾಗುವಾಗ ಬಂದು ಸರ್ಕಾರದ ಮೇಲೆ ಒತ್ತಡ ತಂದಾಗ, ಆ ಖುರ್ಚಿ ಅಲ್ಲಾಡುವ ಸಮಯದಲ್ಲಿ ಭಿನ್ನಮತೀಯ ಚಟುವಟಿಕೆಗಳು ಜಾಸ್ತಿಯಾದಾಗ, ನಾವು ಶಾಸಕರನ್ನು ಅಥವಾ ರಾಜಕಾರಣಿಗಳನ್ನು ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ಮಾಡುತ್ತೇವೆ. ಈ ಪದ್ಧತಿ ನಡೆದುಕೊಂಡು ಬಂದಿರುವುದು ಇದೆ. ಈಗ ಮಂತ್ರಿಮಂಡಲದಲ್ಲಿ 42 ಜನರು ಇದ್ದಾರೆ ಮತ್ತು 5 ಜನರನ್ನು ಸೇರಿಸಿ ಅದಾದಮೇಲೆ ಮತ್ಯಾರಾದರೂ ಇದ್ದರೆ ರಾಜಕೀಯ ಒತ್ತಡ ಬಂದಾಗ ಮತ್ತೆ ಈ ನಿಗಮ ಮಂಡಳಿಗೆ ಅಧ್ಯಕ್ಷರನ್ನು ಮಾಡುವಂಥದ್ದು ಆಗಬೇಕೋ ಅಥವಾ ಬೇಡವೋ? ಇದರ ಬಗ್ಗೆ ಏನಾದರೂ ಒಂದು ಪಾಲಿಸಿ ಡಿಸಿಷನ್ ಆಗಬೇಕಲ್ಲ. ಈಗ ವರ್ಗಾವಣೆ ಪ್ರಾರಂಭವಾಗುತ್ತದೆ; ವರ್ಗಾವಣೆ ಮಾರ್ಚಿಯಲ್ಲಿ ಚಾಲೂ ಆಗುತ್ತದೆ. ಅದೊಂದು ಸೀಷನ್ ಇದ್ದಹಾಗೆ. ಆಗ ಎಲ್ಲಾ ಕಡೆ ಇದು ಚಾಲೂ ಆಗಿ, ಎಲ್ಲರೂ ಲೆಟರ್ ಹಿಡಿದುಕೊಂಡು

ಬರುವುದು; ಮಂತ್ರಿಗಳ ಕಡೆಗೆ ಹೋಗುವುದು, ಮಾನ್ಯ ಮುಖ್ಯಮಂತ್ರಿಗಳ ಕಡೆಗೆ ಹೋಗುವುದು; ಸಾವಿರಾರು ಜನರು ಸೇರಿದ ಕಡೆ ಶಾಸಕರಭವನದಲ್ಲಿ ಅದೇ ನಡೆಯುತ್ತಿರುತ್ತೆ; ಎರಡು-ಮೂರು ತಿಂಗಳು ಅದೇ ಇರುತ್ತೆ. ಆ ಅಧಿಕಾರಿಗಳು ಯಾರು ವರ್ಗಾವಣೆಯನ್ನು ಬಯಸಿರುತ್ತಾರೆ, ಯಾರು ಎಲ್ಲಿಗೆ ಹೋಗುತ್ತಾರೆ, ಯಾರು ರದ್ದು ಮಾಡಿಕೊಳ್ಳುವುದಕ್ಕೆ ಬರುತ್ತಾರೆ, ಆ ಮೂರು ತಿಂಗಳು ಯಾವುದು ಅಡ್ಮಿನಿಸ್ಟ್ರೇಷನ್ ನಡೆಯುವುದೇ ಇಲ್ಲ. ಅದಕ್ಕೆ ಏನಾದರೂ ಒಂದು ಅಳತೆಗೋಲು, ಏನಾದರೂ ಪಾಲಿಸಿಯನ್ನು ಈ ವರ್ಗಾವಣೆಯ ಬಗ್ಗೆ ಮಾಡುತ್ತೀರಾ? ಇನ್ನು ರಸ್ತೆಗಳ ಅಗಲೀಕರಣದ ಬಗ್ಗೆ ಹೇಳುವುದಾದರೆ ಇವತ್ತು ಕೆಲವೊಂದು ನಗರ ಪ್ರದೇಶಗಳಲ್ಲಿ ಲ್ಯಾಂಡ್ ಅಕ್ವಿಜಿಷೆನ್ ನಡೆದಿದೆ. ನಾವು ಈ ಬಗ್ಗೆ ಮಾಸ್ಟರ್‌ಪ್ಲಾನ್ ಇಂಪ್ಲಿಮೆಂಟ್ ಮಾಡಬೇಕು, ಅದಕ್ಕೆ ಅಕ್ವೈರ್ ಮಾಡುತ್ತೇವೆ ಎಂದು ಹೇಳುವುದು ಇದೆ. ಸಡನ್‌ಆಗಿ ಯಾವಾಗಲೋ ಒಂದು ಅಕ್ವಿಜಿಷನ್ ಮಾಡುವುದು, ಬಿಲ್ಡಿಂಗ್ ಕೆಡವಿ ಹಾಕುವುದು ಏನಿದೆ ಇದರಿಂದಾಗಿ ಕೆಲವೊಂದು ನಗರದಲ್ಲಿ ಜನರು ಭಯಭೀತರಾಗಿದ್ದಾರೆ. ಯಾವಾಗ ಈ ಮಾಸ್ಟರ್‌ಪ್ಲಾನ್ ಇಂಪ್ಲಿಮೆಂಟ್ ಮಾಡುತ್ತಾರೋ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೆ ನೋಟೀಸ್ ಇರುವುದಿಲ್ಲ; ಏನು ಇಲ್ಲ. ನಗರ ಸೌಂದರೀಕರಣ ಮಾಡಬೇಕು, ನಗರಗಳು ಒಂದು ಒಳ್ಳೆಯ ರೀತಿಯಿಂದ ಬೆಳವಣಿಗೆಯಾಗಬೇಕು, ಅದನ್ನು ನಾವು ಬೇಡ ಎನ್ನುವುದಿಲ್ಲ. ಹಾಗೆ ಮಾಡುವ ಸಂದರ್ಭದಲ್ಲಿ, ಯಾರು ಮಾಲೀಕರು ಇದ್ದಾರೆ, ಅಂಥವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಒಪ್ಪಿಗೆ ತೆಗೆದುಕೊಂಡು ಅವರಿಗೆ ದೊರೆಯತಕ್ಕ ಪರಿಹಾರ ಧನವನ್ನು ಕೊಟ್ಟು ಒಂದು ಒಳ್ಳೆಯ ವಾತಾವರಣದಲ್ಲಿ ಲ್ಯಾಂಡ್ ಅಕ್ವಿಜಿಷನ್ ಮಾಡಿ ರಸ್ತೆಗಳ ಅಗಲೀಕರಣ ಮಾಡಿದರೆ ಅವರಲ್ಲಿ ಭಯಭೀತವಾದ ವಾತಾವರಣ ಹೋಗುತ್ತದೆ. ಅದಕ್ಕೆ ಆ ದಿಸೆಯಲ್ಲಿ ಸರ್ಕಾರ ಗಮನ ಕೊಡಬೇಕು. ನಾನು ಕೆಲವೊಂದು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಂಥ ವಿಷಯಗಳ ಬಗ್ಗೆ ಏನಾದರೂ ಒಂದು ಪಾಲಿಸಿ ಡಿಸಿಷನ್ ಸರ್ಕಾರದ್ದು ಇರಬೇಕು; ಇಲ್ಲದಿದ್ದರೆ ಅದು ಹಂತ ಹಂತವಾಗಿ ಬದಲಿಯಾಗುತ್ತಾ ಹೋಗುತ್ತದೆ. ಇಂಥ ವಿಷಯಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದು ಪ್ರಸ್ತಾಪವಾಗುವಂಥಾದ್ದು ಆಗಬೇಕಾಗಿತ್ತು; ಅದು ಆಗಲಿಲ್ಲ. ನಾನು ಆಗಲೇ ಹೇಳಿದ ಪ್ರಕಾರ ಇವತ್ತು ಪ್ರತಿಯೊಂದು ಕ್ಷೇತ್ರಕ್ಕೆ ಅದು ಬಯಲುಸೀಮೆ ಅಭಿವೃದ್ಧಿಮಂಡಳಿ ಇರಬಹುದು, ಅಥವಾ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಇರಬಹುದು, ಅದರ ಬಗ್ಗೆ ಹೆಚ್ಚಿನ ಹಣ ಬರುತ್ತಿಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಮತ್ತೊಂದು ಪ್ರಮುಖವಾಗಿ ನಾನು ಪ್ರಸ್ತಾಪ ಮಾಡುವ ವಿಚಾರವೆಂದರೆ ಇವತ್ತು ಶಾಸಕರಿಗೆ ಈ ಒಂದು ಕ್ಷೇತ್ರಕ್ಕೆ ಅಭಿವೃದ್ಧಿಯ ಸಲುವಾಗಿ ಅನುದಾನ ಕೊಡುವುದು ಆಗಬೇಕಾಗುತ್ತದೆ. ಕಳೆದ ಸದನದಲ್ಲೂ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ಯಾವ ರೀತಿ ಲೋಕಸಭಾ ಸದಸ್ಯರಿಗೆ ಪ್ರತಿವರ್ಷ ಎರಡು ಕೋಟಿ ರೂಪಾಯಿಗಳನ್ನು ಈ ಅಭಿವೃದ್ಧಿ ಕೆಲಸದ ಸಲುವಾಗಿ ಅನುದಾನವನ್ನು ಕೊಡುತ್ತಾರೆ ಅದೇ ರೀತಿಯಲ್ಲಿ ಶಾಸಕರಿಗೂ ಕೊಡಬೇಕು, ಅಲ್ಲಿ ಲೋಕಸಭಾ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ತುರ್ತು ಕೆಲಸಗಳಾಗಬೇಕು ಅದನ್ನು ಮಾಡಿಸುತ್ತಾರೆ. ಇವತ್ತು ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ, ಕರ್ನಾಟಕ ಸರ್ಕಾರ, ಡಿ.ಸಿ. ಮುಖಾಂತರ ಈ ಒಂದು ಫೈಲ್ ಹೋಗುವುದಾದರೆ ತುರ್ತಾಗಿ ಕೆಲವೊಂದು ಕೆಲಸಗಳಾಗುವುದಿಲ್ಲ. ಆ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ

ಹಣ ಬಿಡುಗಡೆಯಾಗುವುದಿಲ್ಲ. ಜಿಲ್ಲಾ ಪಂಚಾಯಿತಿಯಿಂದಲೂ ಆಗುವುದಿಲ್ಲ. ಕೆಲವು ತುರ್ತು ಕೆಲಸಗಳನ್ನು ಮಾಡುವುದು ಇರುತ್ತವೆ. ತುರ್ತು ಕೆಲಸವಿರುವ ಸಂದರ್ಭದಲ್ಲಿ ಫೈಲ್ ಎರಡು-ಮೂರು ತಿಂಗಳು ಓಡಾಡಿದಮೇಲೆ ಹಣ ಬಿಡುಗಡೆಯಾಗುತ್ತದೆ. ಅದಕ್ಕೆ ಇವತ್ತು ಯಾವ ರೀತಿ ಲೋಕಸಭಾ ಸದಸ್ಯರಿಗೆ ಪ್ರತಿವರ್ಷ ಎರಡು ಕೋಟಿ ರೂಪಾಯಿ ಅನುದಾನವನ್ನು ಕೊಡುತ್ತಾರೋ ಅದೇ ರೀತಿ ಪ್ರತಿಯೊಬ್ಬ ಶಾಸಕರಿಗೂ ತನ್ನ ಕ್ಷೇತ್ರದ ಅಭಿವೃದ್ಧಿ ಸಲುವಾಗಿ ಪ್ರತಿವರ್ಷ ಕನಿಷ್ಠ ಒಂದು ಕೋಟಿ ರೂಪಾಯಿಗಳನ್ನಾದರೂ ಅವರಿಗೆ ಅನುದಾನವೆಂದು ನೀಡಿದರೆ ಅದರಿಂದ ತಕ್ಷಣವೇ ಬೇಕಾದ ಕೆಲಸವನ್ನು ನಾವು ಮಾಡುವುದಕ್ಕೆ ಸಾಧ್ಯ ಇದೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ನಾವು ಶಾಸಕರಿದ್ದೇವೆ ಅಷ್ಟೇ; ಸುಮ್ಮನೆ ಒಂದು ಸ್ಥಾನಮಾನ ಇದೆ. ಆದರೆ ನಿಜವಾಗಿ ನಮ್ಮ ಕಡೆಗೆ ಒಂದು ಪೈಸಾ ಖರ್ಚು ಮಾಡುವಷ್ಟು ಅಧಿಕಾರವಿಲ್ಲ ಏಕೆಂದರೆ ನಾವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನನಗೆ ಗೌರವ ಇದೆ. ಇವತ್ತು ಎಲ್ಲಾ ಅಧಿಕಾರ ಇರುವುದು ಜಿಲ್ಲಾ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ, ನಗರಸಭೆ, ಪುರಸಭೆ, ಕಾರ್ಪೋರೇಷನ್‌ಗಳಿಗೆ ಹಣ ಖರ್ಚು ಮಾಡುವುದು. ಆದರೆ ನಮ್ಮ ಕೈಯಲ್ಲಿ ಏನಿದೆ? ಇವತ್ತು ಯಾವುದೋ ಒಂದು ಕೆಲಸ ಬರುತ್ತದೆ. ನಮ್ಮ ಕಡೆಗೆ ಯಾರೋ ಒಬ್ಬರು ಕೆಲಸ ತೆಗೆದುಕೊಂಡು ಬರುತ್ತಾರೆ. ಇಲ್ಲೊಂದು ರಸ್ತೆ ಮಾಡಿ; ಇಲ್ಲೊಂದು ಹೊಲಕ್ಕೆ ಹೋಗುವ ದಾರಿ ಮಾಡಿಕೊಡಿ ಎಂದು ಕೇಳುತ್ತಾರೆ. ನಾನು ಈ ಬಗ್ಗೆ ಕೇಳುವುದಕ್ಕೆ ಎಲ್ಲಿಗೆ ಹೋಗಬೇಕು? ಅಲ್ಲೇ ತಾಲ್ಲೂಕು ಪಂಚಾಯಿತಿಯವರಿಗೆ ಕೇಳಬೇಕು, ಅಲ್ಲೇ ಕಾರ್ಪೊರೇಷನ್ ಅಧಿಕಾರಿಗಳಿಗೆ ನಾನು ಕೇಳಬೇಕು. ಎಲ್ಲೋ ಒಂದು ಕಡೆ ಬಜೆಟ್‌ನಲ್ಲಿ ಅಡ್ಜಸ್ಟ್ ಮಾಡಿಕೊಡಿ ಎಂದು ಕೇಳಬೇಕು. ಅದಕ್ಕೆ ಇವತ್ತು ಶಾಸಕರಿಗೂ ಏನಾದರೂ ಒಂದು ಅಧಿಕಾರ ಬರಬೇಕೆಂದರೆ ರಾಜ್ಯಸರ್ಕಾರ ಈ ಬಗ್ಗೆ ಮನಸ್ಸು ಮಾಡಬೇಕು, ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಬೇಕು, ಶಾಸಕಾರಿಗೂ ಸಹಾ ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಕೊಡುವ ವಿಚಾರವನ್ನು ಅವರು ಗಂಭೀರವಾಗಿ ಪರಿಶೀಲನೆ ಮಾಡಿ ಅನುಷ್ಠಾನಕ್ಕೆ ತರಬೇಕು. ಅದನ್ನು ಅನುಷ್ಠಾನ ಮಾಡುತ್ತಾರೆ ಎಂದು ನನಗೆ ನಂಬಿಕೆ ಇದೆ. ಏಕೆಂದರೆ ಈ ಪದ್ಧತಿ ಮಹಾರಾಷ್ಟ್ರದಲ್ಲಿ ಇದೆ. ಅಲ್ಲಿ ಒಬ್ಬ ಶಾಸಕರಿಗೆ 60 ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುವ ಪದ್ಧತಿ ಇದೆ. ಅದಕ್ಕೆ ಆ ಮಾದರಿಯಲ್ಲಿ ಇವತ್ತು ರಾಜ್ಯ ಸರ್ಕಾರ ಅದರ ಬಗ್ಗೆ ಒಂದು ನಿರ್ಣಯವನ್ನು ಕೈಗೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಮತ್ತೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುವುದು ಏನೆಂದರೆ ಆರಾಧನಾ ಸಮಿತಿ ಇರಬಹುದು, ಲ್ಯಾಂಡ್ ಟ್ರಿಬ್ಯೂನಲ್ ಸಮಿತಿ ಇರಬಹುದು, ಅಥವಾ ಬಗರ್‌ಹುಕುಂ ಸಮಿತಿ ಇರಬಹುದು ಅಥವಾ ಮತ್ತೊಂದು ಆಶ್ರಯ ಸಮಿತಿ ಇರಬಹುದು, ಇನ್ನಿತರ ಕೆಲವು ಕಮಿಟಿಗಳು ಇರಬಹುದು. ಅದರಲ್ಲಿ ಕೆಲವೊಂದಕ್ಕೆ ಶಾಸಕರುಗಳೇ ಅಧ್ಯಕ್ಷರು ಇರುತ್ತಾರೆ ಅಥವಾ ಸದಸ್ಯರುಗಳು ಇರುತ್ತಾರೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ನಾವು ವಿರೋಧ ಪಕ್ಷದ ಸ್ಥಾನದಲ್ಲಿದ್ದೇವೆ ಆ ಕಡೆ ಆಡಳಿತ ವರ್ಗದವರು ಇದ್ದಾರೆ. ನಾವು ಇವತ್ತು ಯಾವುದೋ ಒಂದು ಕಮಿಟಿಯಲ್ಲಿ ಅಧ್ಯಕ್ಷರು ಇದ್ದೇವೆಂದರೆ ಅಲ್ಲಿ ಇರುವ ಐದು ಜನರೂ ಆಡಳಿತಾರೂಢಾ ಪಕ್ಷದ ಕಾರ್ಯಕರ್ತರು ಇರುತ್ತಾರೆ. ಅಥವಾ ಅವರು ಹೇಳಿದಂಥ ವ್ಯಕ್ತಿಗಳು ಇರುತ್ತಾರೆ. ಆಮೇಲೆ ಮತ್ತೊಂದು ಯಾವುದೋ ಕಮಿಟಿ ಇರುತ್ತದೆ, ನಾನು ಮೆಂಬರ್ ಇರುತ್ತೇನೆ, ನನ್ನ ಜೊತೆಗೆ

ಕೆಲಸ ಮಾಡುವವರು 4 ಜನರು ಆಡಳಿತ ವರ್ಗದವರು ಇರುತ್ತಾರೆ ಏಕೆ ಈ ತರಹ ತಾರತಮ್ಯ ಎಂದು ನಾನು ಕೇಳುತ್ತಿದ್ದೇನೆ. ಇವತ್ತು ನನ್ನ ಕ್ಷೇತ್ರದಿಂದ ನಾನು ಆರಿಸಿ ಬಂದಿದ್ದೇನೆ. ಇವತ್ತು ಜನಪ್ರತಿನಿಧಿಗಳು ನನಗೆ ಮತ ಕೊಟ್ಟು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಇವತ್ತು ನಮಗೆ ಅಷ್ಟು ಅಧಿಕಾರವಿಲ್ಲವೇ? ಇವತ್ತು ನಾನು ಏನು ಅಧ್ಯಕ್ಷನಾಗಿ ಇರುತ್ತೇನೆ, ಆ ನನ್ನ ಅಧ್ಯಕ್ಷತೆಯೊಳಗೆ ನಾನು ಹೇಳುವಂಥ ನಾನು ಚಾಯ್ಸ್ ಮಾಡುವಂಥ, ಒಬ್ಬರೋ ಇಬ್ಬರೋ ಸದಸ್ಯರನ್ನು ನೇಮಕ ಮಾಡುವುದಕ್ಕೆ ನನಗೆ ಅಧಿಕಾರವಿಲ್ಲವೇ? ಅದಕ್ಕೆ ಹಿಂದೆ ಸನ್ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ, ಮಾನ್ಯ ಹನುಮೇಗೌಡರಿಗೆ ಇದು ಗೊತ್ತಿದೆ; ಆ ಸಂದರ್ಭದಲ್ಲಿ ವಿರೋಧಿ ಪಕ್ಷದಲ್ಲಿರುವ ಶಾಸಕರು ತಮ್ಮ ಕ್ಷೇತ್ರದಲ್ಲಿರುವ ಕಮಿಟಿಗಳಿಗೆ ಬೋರ್ಡುಗಳಿಗೆ ನಾಮಿನೇಷನ್ ಮಾಡುವುದು, ನೇಮಕ ಮಾಡುವುದಕ್ಕೆ ಒಬ್ಬರು ಇಬ್ಬರು ಸದಸ್ಯರನ್ನು ಚಾಯ್ಸ್ ಮಾಡುವ ಅವಕಾಶ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿತ್ತು. ಮುಂದೆ ಬಂದ ಸರ್ಕಾರಗಳು ಅದನ್ನು ಮಾಡಲಿಲ್ಲ. ಕೇವಲ ತಮ್ಮ ಅಧಿಕಾರದ ಸಲುವಾಗಿ ತಮ್ಮ ಆಡಳಿತಾರೂಢಾ ಪಕ್ಷದ ಕಾರ್ಯಕರ್ತರೇ ಇರಬಹುದು, ಅಥವಾ ಇನ್ನಿತರರಿಗೆ ಅದನ್ನು ನೇಮಕಾತಿ ಮಾಡುವ ಕೆಲಸವನ್ನು ಮಾಡಿಕೊಂಡು ಬಂದರು. ಅದು ತಪ್ಪು ಸನ್ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬದಲಾವಣೆಗಳನ್ನು ಮಾಡಬೇಕೆಂದು ಹೇಳಿ, ಒಳ್ಳೆಯ ಚಿಂತಕರು ಅನುಭವಿಗಳು ಇದ್ದಾರೆ, ಅದಕ್ಕೆ ನಾನು ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ, ದಯವಿಟ್ಟು ವಿರೋಧಿ ಪಕ್ಷದ ಶಾಸಕರು ಎಲ್ಲೆಲ್ಲಿ ಇದ್ದಾರೆ, ಅದು ಯಾವುದೇ ಒಂದು ಕಮಿಟಿ ಇರಬಹುದು, ಆರಾಧಾನಾ ಇರಬಹುದು, ಆಶ್ರಯ, ಬಗರ್‌ಹುಕುಂ, ಲ್ಯಾಂಡ್ ಟ್ರಿಬ್ಯೂನಲ್ ಇರಬಹುದು ಅಲ್ಲಿ ಇದ್ದಂಥ ಶಾಸಕರು ಯಾರು ಹೇಳುತ್ತಾರೆ, ಕನಿಷ್ಟಪಕ್ಷ ಇಬ್ಬರು ಸದಸ್ಯರನ್ನಾದರೂ ನಮಗೆ ನೇಮಕ ಮಾಡುವುದಕ್ಕೆ ನಮಗೊಂದು ಅಧಿಕಾರವನ್ನು ಕೊಡಿ; ನಾವು ಹೇಳಿದ ಇಬ್ಬರನ್ನು ನೇಮಕ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಂದರೆ ಶಾಸಕರುಗಳಿಗೆ ಏನಾದರೂ ಒಂದು ಸ್ಥಾನಮಾನ, ಅವರಿಗೇನಾದರೂ ಒಂದು ಕಿಮ್ಮತ್ತು ಸಿಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಅದೇ ರೀತಿ ಈ ಒಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗುವಂಥ ಕೆಲಸವಾಗಬೇಕಾಗುತ್ತದೆ. ಯಾವುದೇ ಒಂದು ಸಣ್ಣ ಘಟನೆಗಳಿಗೂ ಸಹಾ ಒಂದು ದೊಡ್ಡ ಪ್ರಮಾಣದಲ್ಲಿ ಗಲಭೆಯಾಗುವುದು, ಮತೀಯ ಗಲಭೆಯಾಗುವುದು, ಅವುಗಳನ್ನು ನಾವು ಹಲವಾರು ಕಡೆ ನೋಡಿದ್ದೇವೆ. ಅದಕ್ಕಾಗಿ ಈ ಒಂದು ಪೊಲೀಸ್ ಡಿಪಾರ್ಟ್‌ಮೆಂಟ್ ಅಲರ್ಟ್ ಆಗಿದ್ದರೆ ಇಂಥ ಒಂದು ತಕ್ಷಣದ ಗಲಭೆ ಅಥವಾ ಇನ್ನಿತರ ದೊಂಬಿ ಇವುಗಳನ್ನು ನಿಲ್ಲಿಸುವುದಕ್ಕೆ ಸಾಧ್ಯ ಇದೆ. ಮತ್ತು ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಾಗಿದೆ. ಇವತ್ತು ಸಾರ್ವಜನಿಕ ಮತ್ತು ಪೊಲೀಸ್ ವ್ಯವಸ್ಥೆ ಇದರ ನಡುವೆ ಸಂಪರ್ಕದ ಕೊರತೆ ಇದೆ. ಯಾವುದೇ ಒಬ್ಬ ಸಾಮಾನ್ಯ ಮನುಷ್ಯ ಪೊಲೀಸ್‌ಸ್ಟೇಷನ್‌ಗೆ ಹೋಗಬೇಕೆಂದರೆ ಒಂದು ಕಂಪ್ಲೇಟನ್ನು ಕೊಡಬೇಕೆಂದರೂ ಬಹಳ ಹೆದರುತ್ತಾನೆ. ಧೈರ್ಯ ಎಲ್ಲಿದೆ?, ಪೊಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೈಂಟ್ ಕೊಡುವುದು ಹೇಗೆ? ಕಂಪ್ಲೈಂಟ್ ಕೊಡುವುದಕ್ಕೆ ಹೋದರೂ ತೆಗೆದುಕೊಳ್ಳುವುದಿಲ್ಲ. ಮತ್ತೆ ನಾಲ್ಕು ಮಂದಿ ರಾಜಕೀಯ ವ್ಯಕ್ತಿಗಳ ಶಿಫಾರಸ್ಸ್ ತೆಗೆದುಕೊಂಡು ಹೋದಾಗ ಕಂಪ್ಲೆಂಟ್ ರಿಜಿಸ್ಟರ್ ಆಗುತ್ತದೆ. ಹೀಗಾಗಿ ಜನಸಾಮಾನ್ಯರಿಗೆ ಯಾರಿಗೆ ಇವತ್ತು ಅನ್ಯಾಯ ಆಗಿದೆ, ಆತ

ಪೊಲೀಸ್ ಸ್ಟೇಷನ್‌ಗೆ ಹೋಗಿ ತನ್ನ ಕಂಪ್ಲೈಂಟ್ ಕೊಡುವಷ್ಟಾದರೂ ಒಂದು ವ್ಯವಸ್ಥೆ ಬದಲಾವಣೆ ಆಗಬೇಕಾಗಿದೆ. ಇದಕ್ಕೆ ಯಾರಾದರೊಬ್ಬರು ಮೀಡಿಯೇಟರ್ ಅವರನ್ನು ಹಿಡಿದುಕೊಂಡು ಪೊಲೀಸ್ ಸ್ಟೇಷನ್‌ಗೆ ಕಂಪ್ಲೈಂಟ್ ಕೊಡುವುದಕ್ಕೆ ಹೋಗಬೇಕಾಗಿದೆ. ಇಲ್ಲದಿದ್ದರೆ ಕಂಪ್ಲೈಂಟ್ ರಿಜಿಸ್ಟರ್ ಆಗುವುದಿಲ್ಲ. ನಾನೇ ಹಲವಾರು ಸಾರಿ ಫೋನ್ ಮಾಡಿ ಹೇಳಿದ್ದೇನೆ. ಅನ್ಯಾಯ ಆಗಿದ್ದವರು ಇಂತಹವರು ಬರುತ್ತಾರೆ, ಕಂಪ್ಲೈಂಟ್ ಕೊಡುತ್ತಾರೆ, ರಿಜಿಸ್ಟರ್ ಮಾಡಿಕೊಳ್ಳಿ ಎಂದು ಹೇಳಿದ್ದೇನೆ. ಅದಕ್ಕಾಗಿ ಈ ಒಂದು ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕಾಗಿದೆ. ಇನ್ನೊಂದು ವಿಚಾರ ಎಂದರೆ, ಇವತ್ತು ಪೊಲೀಸ್ ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಅದು ತಕ್ಷಣ ಭರ್ತಿ ಆಗಬೇಕು ಮತ್ತು ಇನ್ನಿತರ ಹಲವಾರು ಸೌಕರ್ಯಗಳನ್ನು ಅವರಿಗೆ ಕೊಡಬೇಕಾಗಿದೆ. ಇವತ್ತು ನಮ್ಮ ನಗರ ಇರಬಹುದು ಅಥವಾ ಬೇರೆ ನಗರ ಇರಬಹುದು. ಇವತ್ತು ಅಲ್ಲಿನ ಒಂದು ವ್ಯವಸ್ಥೆ, ಸೌಕರ್ಯ ನೋಡಿದರೆ ಆ ವ್ಯವಸ್ಥೆಯಲ್ಲಿ ಬಹಳಷ್ಟು ಕುಂಠಿತ ಇದೆ. ಪೊಲೀಸ್ ಇಲಾಖೆಯಲ್ಲಿ ಯಾವ ವೇಕೆನ್ಸಿಗಳು ಇದೆ ಅವನ್ನು ತಕ್ಷಣ ತುಂಬುವಂಥಾದ್ದು ಆಗಬೇಕಾಗಿದೆ ಮತ್ತು ಆಧುನಿಕವಾದಂತಹ ಸೌಕರ್ಯಗಳನ್ನು ಆ ಪೊಲೀಸ್ ವ್ಯವಸ್ಥೆಗೆ ಕೊಡುವಂಥಾದ್ದು ಆಗಬೇಕಾಗಿದೆ. ಅಂದರೆ ಏನಾದರೂ ಲಾ ಅಂಡ್ ಆರ್ಡರನ್ನು ಸರಿಯಾದ ರೀತಿಯಲ್ಲಿ ಇಡಲಿಕ್ಕೆ ಅದು ಅನುಕೂಲ ಆಗುತ್ತದೆ. ಆ ದಿಸೆಯಲ್ಲಿ ಮಾನ್ಯ ಖರ್ಗೆಯವರು ಹಿರಿಯರಿದ್ದಾರೆ, ಅನುಭವಸ್ಥರು ಇದ್ದಾರೆ; ಆ ಒಂದು ಇಲಾಖೆಯಲ್ಲಿ ಹೆಚ್ಚಿನ ಒಂದು ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ ಎಂಬ ನಂಬಿಕೆ ಇದೆ. ಆದ್ದರಿಂದ ಆ ದಿಸೆಯಲ್ಲಿ ಹೆಚ್ಚಿನ ಒಂದು ಕೆಲಸ ಆಗಬೇಕಾಗಿದೆ ಎನ್ನುವಂತಹ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇನ್ನೊಂದು ಬಹು ಮುಖ್ಯವಾಗಿ ಹೇಳುವಂತಹದು ಎಂದರೆ ಇವತ್ತು 43 ಸಂಪುಟದಲ್ಲಿ ಜನ ಸಚಿವರಿದ್ದಾರೆ. ಅವರನ್ನು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಉಸ್ತುವಾರಿ ಸಚಿವರು ಎಂದು ಮಾಡುತ್ತಾರೆ. ಅದೇನಾಗುತ್ತದೆ ಎಂದರೆ ಉಸ್ತುವಾರಿ ಸಚಿವರು ಎಂದರೆ ಅವರು ಆ ಜಿಲ್ಲೆಗೆ ಮಾತ್ರ ಸೀಮಿತ ಆಗಿಬಿಡುತ್ತಾರೆ. ಅದಕ್ಕೂ ಹೆಚ್ಚಿಗೆ ಎಂದರೆ ಅವರು ಕೇವಲ ತಮ್ಮ ತಾಲ್ಲೂಕಿಗೆ, ತಮ್ಮ ಕ್ಷೇತ್ರಕ್ಕೆ ಮಾತ್ರ ಸಚಿವರಾಗಿ ಕೆಲಸ ಮಾಡಿದ್ದನ್ನೂ ಸಹ ನಾನು ಎಷ್ಟೋ ಸಂದರ್ಭದಲ್ಲಿ ನೋಡಿದ್ದೇನೆ. ಅದಕ್ಕಾಗಿ ಇವತ್ತು ಜಿಲ್ಲಾ ಉಸ್ತುವಾರಿ ಸಚಿವರು ಎಂದರೆ ಕೇವಲ ಅದೊಂದು ಆ ಜಿಲ್ಲೆಯ ಬಗ್ಗೆ ಜನರಲ್ ಅಡ್ಮಿನಿಸ್ಟ್ರೇಷನ್ ಆಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ದಯವಿಟ್ಟು ಗಮನ ಹರಿಸಬೇಕು. ಯಾರು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇರುತ್ತಾರೆ ಅವರು ಕೇವಲ ಆ ಜಿಲ್ಲೆಯಲ್ಲಿ ಉಳಿದುಕೊಳ್ಳಬಾರದು; ಸಮಗ್ರ ಕರ್ನಾಟಕದಲ್ಲಿ ಅವರು ಪ್ರವಾಸ ಮಾಡಿ ಎಲ್ಲಾ ಜಿಲ್ಲೆಗಳ ಸಮಗ್ರ ಚಿತ್ರಣವನ್ನು ತೆಗೆದುಕೊಂಡು ಅವರು ತಮ್ಮ ಇಲಾಖೆಯಲ್ಲಿ ಕೆಲಸ ಮಾಡುವಂತಹ ಪ್ರವೃತ್ತಿಯನ್ನು ಬೆಳೆಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಎಂದರೆ ಬರೇ ಜಿಲ್ಲೆಯ ಮಂತ್ರಿಗಳಾಗಿ ಉಳಿಯಬಾರದು. ಇದು ಹಿಂದೆ ಆಗುತ್ತಿತ್ತು; ಇದು ಮುಂದೆ ಆಗಬಾರದು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದಕ್ಕಾಗಿ ಇಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮತ್ತು ಸರ್ಕಾರ ಒಂದು ಸರಿ ದಾರಿಯಲ್ಲಿ ನಡೆದುಕೊಂಡು ಹೋಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನಾನು ಈ ಸಂದರ್ಭದಲ್ಲಿ ಆ ಆಶಯ ವ್ಯಕ್ತಪಡಿಸುತ್ತಿದ್ದೇನೆ. ಈ ಸಂದರ್ಭದಲ್ಲಿ ಇನ್ನೂ ಒಂದು ವಿಚಾರ ಹೇಳುತ್ತೇನೆ; ಹಿಂದಿನ ನಮ್ಮ ಇತಿಹಾಸ ವಿಚಾರ, ಕೌಟಿಲ್ಯ ಅರ್ಥಶಾಸ್ತ್ರಜ್ಞನ ವಿಚಾರ

ಹೇಳುತ್ತೇನೆ. ಕೌಟಿಲ್ಯ ನಮ್ಮ ಭಾರತದ ಅತ್ಯಂತ ಮೇಧಾವಿ ಅರ್ಥಶಾಸ್ತ್ರಜ್ಞ. ಆತನ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ; ಅಂದರೆ ಆತ 2400 ವರ್ಷಗಳ ಹಿಂದೆ ಹೇಳಿದಂತಹ ಮಾತು. ಇವತ್ತು ರಾಜ ಹೇಗಿರಬೇಕು? ಪ್ರಜೆ ಹೇಗಿರಬೇಕು? ಅವನ ಕಾಳಜಿ ಹೇಗಿರಬೇಕು ಎನ್ನುವಂತಹ ಮಾತು. 2400 ವರ್ಷಗಳ ಹಿಂದೆ ಹೇಳಿದಂತಹ ಆ ಮಾತನ್ನು ನೆನಪಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. "ಪ್ರಜಾಸುಖೇ ಸುಖಂ ರಾಜ್ಯಂ ಪ್ರಜಾ ನಾಮ ಚ ಹಿತೇ ಹಿತಂ, ನಾತ್ಮಪ್ರಿಯಂ ಹಿತಂ ರಾಜ ಪ್ರಜಾ ನಾಮತು ಪ್ರಿಯಂ ಹಿತಂ" ರಾಜನು ತನಗೆ ಪ್ರಿಯವಾದುದನ್ನು ಹಿತ ಎಂದು ಭಾವಿಸದೆ ಪ್ರಜೆಗಳ ಸೌಖ್ಯವೇ ನನ್ನ ಸೌಖ್ಯ; ಅವರ ಹಿತವೇ ನನ್ನ ಹಿತ ಎಂದು ತಿಳಿದಿರಬೇಕು. ಇದು ಅವತ್ತು ಹೇಳಿದಂತಹ ಮಾತು. ಇವತ್ತಿಗೂ ಅದು ಅನ್ವಯ ಆಗುತ್ತದೆ. ಅದಕ್ಕೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಚಿವ ಸಂಪುಟದ ಸದಸ್ಯರು ಇದನ್ನು ನೆನಪಿನಲ್ಲಿ ಇಟ್ಟುಕೊಂಡು ಮುಂದಿನ ದಿನಗಳಲ್ಲಿ ತಮ್ಮ ಸರ್ಕಾರವನ್ನು ಸರಿ ದಾರಿಯಲ್ಲಿ ನಡೆಸಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಈ ಒಂದು ಸಂದರ್ಭದಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಒಂದು ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡುತ್ತಿದ್ದೇನೆ. ಮತ್ತೆ ಈ ಸಭೆಯು 2.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸಭೆಯು 1.24ಕ್ಕೆ ಮುಕ್ತಾಯವಾಗಿ ಮತ್ತೆ 2.30ಕ್ಕೆ ಸೇರಲು ನಿಶ್ಚಯಿಸಿತು

: (ಸಭೆಯು ಪುನಹ 2-40ಕ್ಕೆ ಸಮಾವೇಶಗೊಂಡಿತು) :

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ತಮಗೆ ವಂದನೆ ಸಲ್ಲಿಸುವ ಮೊದಲು ಈ ಸದನದಲ್ಲಿ ಮಾನ್ಯ ಸದಸ್ಯರುಗಳ ಹಾಜರಾತಿಯ ಬಗ್ಗೆ ಹೇಳಿದ್ದೆ. ಈಗ ನೋಡಿ ಮಾನ್ಯ ಮಂತ್ರಿಗಳ, ಮಾನ್ಯ ಸದಸ್ಯರುಗಳ ಸ್ಥಾನ ಖಾಲಿ ಇದೆ. ಕೇವಲ ಕೋರಂ ಆಗಿದೆಯೆಂಬ ಮಾತ್ರಕ್ಕೆ ಸಭೆ ಸೇರಬೇಕಾದ ಪರಿಸ್ಥಿತಿ ಪ್ರಾರಂಭದಲ್ಲೇ ಬಂದಿದೆ. ಮಾನ್ಯ ಖರ್ಗೆಯವರು ಇನ್ನೂ ಬಂದಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ಖರ್ಗೆಯವರು ಮಂತ್ರಿಗಳ ಗೈರುಹಾಜರಾತಿಯ ಬಗ್ಗೆ ಬಹಳ ಬೈಯುತ್ತಿದ್ದರು. ಈಗ ಅವರದ್ದೇ ಸರ್ಕಾರದಲ್ಲಿ ಈ ರೀತಿಯಾಗಿದೆ.

ಶ್ರೀ ಯು.ಆರ್. ಸಭಾಪತಿ: ತಮ್ಮ ವಿರೋಧ ಪಕ್ಷದ ಕಡೆಯಲ್ಲೂ ಹಾಗೆಯೇ ಇದೆ. ತಮ್ಮ ಕಡೆ ಎಷ್ಟು ಸದಸ್ಯರುಗಳು ಇದ್ದಾರೆ ನೋಡಿಕೊಳ್ಳಿ.

ಅಧ್ಯಕ್ಷರು: ಈಗ ಮಾನ್ಯ ಸೋಮಶೇಖರ್‌ರವರು ಮಾತನಾಡುತ್ತಾರೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರು, ಮಾನ್ಯ ಗೃಹ

ಸಚಿವರು ಇಲ್ಲಿ ಬಂದಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಪ್ರಥಮಬಾರಿಗೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಆದ್ದರಿಂದ ಮಾನ್ಯ ಗೃಹ ಸಚಿವರನ್ನು ಇಲ್ಲಿಗೆ ಕರೆಸಿದ್ದರೆ ಚೆನ್ನಾಗಿರುತ್ತಿತ್ತು. ಬೇರೆ ಮಂತ್ರಿಗಳು ಯಾರೂ ಕಾಣಿಸುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮೊದಲನೆಯ ದಿವಸದ ಚರ್ಚೆ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಬಿಟ್ಟರೆ ಬೇರೆ ಸಚಿವರ್ಯಾರು ಕಾಣುತ್ತಿಲ್ಲ. ಮಾನ್ಯ ರಾಜ್ಯಪಾಲರ ಭಾಷಣ ಎಂದ ಮೇಲೆ ಎಲ್ಲಾ ಇಲಾಖೆಗಳ ಮೇಲೆ ಚರ್ಚೆ ನಡೆಯುತ್ತಿರುತ್ತದೆ. ಮಾನ್ಯ ಸಚಿವರುಗಳು, ಅಧಿಕಾರಿಗಳು ಈ ಸದನದಲ್ಲಿ ಇರಬೇಕಾಗುತ್ತದೆ.

ಅಧ್ಯಕ್ಷರು: ಐದು ನಿಮಿಷಗಳಲ್ಲಿ ಅವರು ಬರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಮೂರು ಗಂಟೆಗಳ ಕಾಲ ಸದನದಲ್ಲಿ ಉಪಸ್ಥಿತರಿದ್ದರು. ಈಗ ಮಾನ್ಯ ಸೋಮಶೇಖರ್‌ರವರೆ ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ಹೊಸದಾಗಿ ಹನ್ನೊಂದನೇ ವಿಧಾನಸಭೆಗೆ ಚುನಾವಣೆಯಾಗಿ ನಾವೆಲ್ಲರೂ ಜನರ ಮುಂದೆ ಹೋಗಿ ಅವರ ತೀರ್ಪನ್ನು ಪಡೆದು ಇಲ್ಲಿಗೆ ಬಂದಿದ್ದೇವೆ. ಹತ್ತನೇ ವಿಧಾನಸಭೆಯಲ್ಲಿ ನಮ್ಮ ಸರ್ಕಾರ ಹೆಚ್ಚುಕಮ್ಮಿ ನಾಲ್ಕೂಮುಕ್ಕಾಲು ವರ್ಷಗಳ ಕಾಲ ಆಡಳಿತವನ್ನು ನಡೆಸಿದ್ದೇವೆ. ಇನ್ನೂ ಮೂರು ತಿಂಗಳು ಇರುವಾಗಲೇ ಚುನಾವಣೆ ಬಂದಿದ್ದರಿಂದ ನಾವು ಪೂರ್ಣಾವಧಿ ಆಡಳಿತ ಮಾಡಲು ಆಗಲಿಲ್ಲ. ಜನರು ಏಕೋ ನಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿ, ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ಕೊಟ್ಟು ಬೇರೆ ಯಾವುದೇ ಪಕ್ಷದ ಹಂಗಿನಲ್ಲಿ ಸರ್ಕಾರವನ್ನು ನಡೆಸತಕ್ಕ ಅವಶ್ಯಕತೆ ಇಲ್ಲವೆಂಬುದನ್ನು ತೋರಿಸಿ ಇವತ್ತು ಅವರನ್ನು ಗೆಲ್ಲಿಸಿ ಕಳಿಸಿದ್ದಾರೆ. ಚುನಾವಣೆಯಾದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡರು. ಆ ದಿನದಿಂದಲೇ ಮಾನ್ಯ ಮುಖ್ಯಮಂತ್ರಿಗಳು ಯಾವುದೊ ಅಂಜಿಕೆಯಿಂದಲೆ ಸರ್ಕಾರವನ್ನು ಪ್ರಾರಂಭ ಮಾಡಿದರೇನೊ ಎಂಬ ಭಾವನೆ ನನಗೆ ಬಂತು, ನನಗೆ ಮಾತ್ರವಲ್ಲ ಇಡೀ ರಾಜ್ಯದ ಜನತೆಗೇ ಬಂತು ಎಂದು ಹೇಳಿದರೆ ತಪ್ಪಾಗಲಾರದು. ಅದು ಹೇಗೆ ಎಂದರೆ, ಚಿಕ್ಕದಾದಂಥ, ಚೊಕ್ಕವಾದಂಥ ಸಚಿವ ಸಂಪುಟವನ್ನು ರಚನೆ ಮಾಡುತ್ತೇನೆ ಎಂದು ಅವರು ಮೊದಲೇ ಒಂದು ಹೇಳಿಕೆಯನ್ನು ಕೊಟ್ಟರು, ವಿಧಾನಸಭೆ ಸದಸ್ಯರ ಸಂಖ್ಯೆಯ ಶೇಕಡ ಹತ್ತರಷ್ಟು ಸಚಿವ ಸಂಪುಟವನ್ನು ರಚನೆ ಮಾಡಿ ಒಳ್ಳೆಯ ಆಡಳಿತವನ್ನು ಭ್ರಷ್ಟಾಚಾರ ರಹಿತವಾದ ಆಡಳಿತವನ್ನು ಕೊಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದರು. ಏನೋ ಒಳ್ಳೆಯದನ್ನು ಮಾಡುತ್ತಿದ್ದಾರೆ, ಇಲ್ಲಿಗೆ ಒಳ್ಳೆಯದು ಆಗಲಿ ಎಂದು ನನಗೆ ಆಗ ಸಂತೋಷವಾಯಿತು. ಆದರೆ ಅವರು ಪ್ರಮಾಣವಚನ ಸ್ವೀಕರಿಸಿದ ನಂತರ ಎಂಟು ದಿವಸಗಳವರೆಗೆ ಸಚಿವ ಸಂಪುಟವನ್ನು ರಚನೆ ಮಾಡುವುದಿರಲಿ ಅವರು ಹೇಳಿದಂಥ ಮಾತಿನಂತೆ ನಡೆದುಕೊಳ್ಳಲು ಆಗಲಿಲ್ಲ. ಅದು ಅವರ ದೌರ್ಭಲ್ಯವೆಂದು ನಾನು ಹೇಳುವುದಿಲ್ಲ. ಆ ವ್ಯವಸ್ಥೆಯ, ಆ ಪಕ್ಷದ ವ್ಯವಸ್ಥೆಯ ದೌರ್ಭಲ್ಯವೆಂದು ನನ್ನ ಅನಿಸಿಕೆ. ಇಲ್ಲಿ ಕರ್ನಾಟಕ ಸರ್ಕಾರ ರಚನೆಯಾಗುತ್ತಿದೆಯೆಂದು ತಿಳಿದುಕೊಂಡಿದ್ದೆವು. ಆದರೆ ಈ ವಿದ್ಯಾಮಾನಗಳನ್ನು ನೋಡಿದರೆ ಈ ಕಾಂಗ್ರೆಸ್ ಸರ್ಕಾರವನ್ನು ನಡೆಸುವುದು ದೆಹಲಿಯ ಕಾಂಗ್ರೆಸ್ ಸರ್ಕಾರವೇನೋ ಎಂಬ

ಭಾವನೆ ಬರುತ್ತದೆ. ಏಕೆಂದರೆ ಪ್ರತಿಯೊಂದಕ್ಕೂ ಅವರು ದೆಹಲಿಗೆ ಹೋಗಿ ಮಂತ್ರಿಗಳನ್ನಾಗಿ ಯಾರನ್ನು ತೆಗೆದುಕೊಳ್ಳಬೇಕು, ಯಾವ ಖಾತೆಯನ್ನು ಯಾರಿಗೆ ಕೊಡಬೇಕು ಎಂಬುದನ್ನು ಕೇಳಿ, ಪಾಪಾ ಮುಖ್ಯಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದರೂ ಅದನ್ನು ಉಳಿಸಿಕೊಳ್ಳಲು ಅವರಿಂದ ಸಾಧ್ಯ ಆಗಲಿಲ್ಲ. ಆದ್ದರಿಂದ ಮೊದಲೇ ಕ್ರೆಡಿಬಿಲಿಟಿ ಕ್ರೈಸೀಸ್‌ನ್ನು ಪ್ರದರ್ಶನ ಮಾಡಿದರು ಎಂಬುದು ನನ್ನ ಭಾವನೆ. ಅಷ್ಟೇ ಅಲ್ಲ ಅವರು ಪ್ರಮಾಣ ವಚನ ಸ್ವೀಕಾರ ಮಾಡಿದ ನಂತರ ಎಂಟು ದಿವಸಗಳ ಕಾಲ ಸರ್ಕಾರ ನಡೆಯಲಿಲ್ಲ. ಆಡಳಿತದಲ್ಲಿ ಬಿಗಿ ಇಲ್ಲದೆ ಅಧಿಕಾರಿಗಳು ತಮಗೆ ಬೇಕಾದಂತೆ ಆಡಳಿತವನ್ನು ನಡೆಸಿಕೊಂಡು ಹೋದರು. ರಾಜ್ಯದಲ್ಲಿ ಧಾರಾಕಾರವಾಗಿ ಮಳೆ ಹರಿಯುತ್ತಿದೆ, ಯಾವ ಸಚಿವರು ಸಹ ಅತಿವೃಷ್ಟಿಯಾದಂಥ ಪ್ರದೇಶಕ್ಕೆ ಭೇಟಿ ಕೊಡಲಿಲ್ಲ, ಅಲ್ಲಿ ಏನು ಅನಾಹುತವಾಗಿದೆ, ಎಷ್ಟು ಪರಿಹಾರ ಹಣ ಬೇಕಾಗಿದೆ ಎಂಬ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಪ್ರಪ್ರಥಮಬಾರಿಗೆ ಆ ಕೆಲಸವನ್ನು ಅವರು ಮಾಡಬೇಕಾಗಿತ್ತು. ಆ ಕೆಲಸವನ್ನು ಮಾಡಿಲ್ಲ ಎಂಬುದು ನನ್ನ ದೂರು. ಮಾನ್ಯ ರಾಜ್ಯಪಾಲರ ಭಾಷಣದ ಪುಸ್ತಕವನ್ನು ನಾನು ನೋಡಿದೆ. ಸರ್ಕಾರವನ್ನು ಹೊಸದಾಗಿ ಪ್ರಾರಂಭ ಮಾಡಿದ್ದಾರೆ, ಅನೇಕ ವಿಚಾರಗಳನ್ನು ಜನತೆಯ ಮುಂದೆ ಇಟ್ಟು ಯಾವ್ಯಾವ ಕಾಲಮಿತಿಯೊಳಗೆ, ಯಾವ್ಯಾವ ಯೋಜನೆಗಳನ್ನು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರುತ್ತೇವೆ ಎಂಬ ಬಗೆಗಿನ ಭಾಷಣವನ್ನು ಮುಂದಿಡುತ್ತಾರೆ, ಸವಿಸ್ತಾರವಾದ ಭಾಷಣವನ್ನು ಮಾಡಿಸುತ್ತಾರೆ ಎಂದು ನಾವುಗಳೆಲ್ಲರು ತಿಳಿದು ಕೊಂಡಿದ್ದೆವು. ಆದರೆ ಮಾನ್ಯ ರಾಜ್ಯಪಾಲರ ಭಾಷಣ ಕೇವಲ ಹನ್ನೆರಡು ಪುಟಗಳನ್ನು ಒಳಗೊಂಡಿದ್ದು ಅದರಲ್ಲಿ ಉಪ್ಪು, ಖಾರ ಏನೇನೂ ಇಲ್ಲ. ಅದನ್ನು ಮಾನ್ಯ ರಾಜ್ಯಪಾಲರ ಕೈಯಲ್ಲಿ ಓದಿಸಿದ್ದಾರೆ.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಾಮಾಜಿಕ ನ್ಯಾಯ ಈ ಮೂರು ತತ್ವಗಳ ಆಧಾರದ ಮೇಲೆ ಆಡಳಿತ ನಡೆಸಲು ಸರ್ಕಾರಕ್ಕೆ ಜನರು ಸ್ಪಷ್ಟ ತೀರ್ಪು ನೀಡಿದ್ದಾರೆ ಎಂದು ಹೇಳಿದ್ದೀರಿ. ಡೆಮಾಕ್ರಸಿ, ಸೋಷಿಯಲ್ ಜಸ್ಟೀಸ್ ಮತ್ತು ಸೆಕ್ಯೂಲರ್ ಈ ಮೂರು ಶಬ್ದಗಳನ್ನು ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಧಾರಾಳವಾಗಿ ಉಪಯೋಗಿಸುತ್ತಾ ಬಂದಿವೆ. ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಪಕ್ಷದವರು ನಾವು ದಲಿತರು, ಅಲ್ಪಸಂಖ್ಯಾತರು ಮತ್ತು ಬಡವರ ಪರವಾಗಿ ಇರತಕ್ಕಂಥ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳದ್ದು ಒಂದು ರೀತಿ ಮಾನಸಿಕ ದೌರ್ಬಲ್ಯ ಎಂದು ಹೇಳಲೋ ಅಥವಾ ಸನ್ನಿವೇಶದ ಒತ್ತಡ ಎಂದು ಹೇಳಲೋ ನನಗೆ ಗೊತ್ತಾಗುತ್ತಿಲ್ಲ. ಇನ್ನೊಂದು ಕಡೆ ಮಾನ್ಯ ಖರ್ಗೆಯವರು ಇದ್ದಾರೆ. ಮಾನ್ಯ ಖರ್ಗೆಯವರು ಕಳೆದ ಐದು ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದಂತಹ ಕಾಲದಲ್ಲಿ ಉದ್ದುದ್ದ ಭಾಷಣಗಳನ್ನು ಮಾಡಿದರು, ಹೋರಾಟವನ್ನೂ ಕೂಡ ಮಾಡಿದರು. ಅವರೇ ಮುಖ್ಯಮಂತ್ರಿ ಸ್ಥಾನಕ್ಕೆ ಅಭ್ಯರ್ಥಿ ಎಂದು ದೊಡ್ಡ ಪ್ರಚಾರ ಕೂಡ ನಡೆಯಿತು. ಕಾಂಗ್ರೆಸ್ ಪಕ್ಷ ಪ್ರಥಮ ಬಾರಿಗೆ ದಲಿತರೊಬ್ಬರನ್ನು ಈ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಬಹುದೆಂದು ನಾವು ಅಂದುಕೊಂಡಿದ್ದೆವು. ಅದಕ್ಕಾಗಿಯೇ ಜನರು ಬೆಂಬಲವನ್ನು ಕೊಟ್ಟಿದ್ದಾರೆಂದು ನಾವು ಅಂದುಕೊಂಡಿದ್ದೆವು. ಅದು ಅವರ ಪಕ್ಷಕ್ಕೆ ಬಿಟ್ಟಂತಹ ವಿಚಾರ, ಅವರು ಮಾನ್ಯ ಎಸ್.ಎಂ.ಕೃಷ್ಣರವರನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳನ್ನಾಗಿ ಮಾಡಿಕೊಂಡರು. ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳಾದರು ಎಂದು ನನಗೆ ಒಂದು ಕಡೆ

ಸಂತೋಷವಾಯಿತು. ಮಾನ್ಯ ಖರ್ಗೆಯವರು 'ಕೊನೆಯ ಪಕ್ಷ ನನ್ನನ್ನು ಉಪ ಮುಖ್ಯಮಂತ್ರಿಯನ್ನಾಗಿಯಾದರೂ ಮಾಡದಿದ್ದರೆ ನಾನು ಸಚಿವ ಸಂಪುಟ ಸೇರುವುದಿಲ್ಲ' ಎಂದು ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಯಿತು. ಆ ರೀತಿ ಅವರು ಹೇಳಿದರೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಾವು ಹೊರಗಡೆಯಿಂದ ನೋಡಿದಾಗ ಒಂದು ರೀತಿ ಹೋರಾಟ ನಡೆಯಿತು ಎಂದು ನಮಗನಿಸಿತು. ಮಾನ್ಯ ಖರ್ಗೆಯವರಿಗೆ ಉಪ ಮುಖ್ಯಮಂತ್ರಿಗಳನ್ನಾಗಿ ಮಾಡುವುದು ಇರಲಿ, ಈಗ ಅವರು ಯಾವ ಸ್ಥಾನದಲ್ಲಿ ಕುಳಿತಿದ್ದಾರೆ ಎಂದರೆ, ನನಗೆ ಒಂದು ರೀತಿ ನೋವಾಗುತ್ತದೆ. ಮಾನ್ಯ ಖರ್ಗೆಯವರಿಗೆ ನೋವು ಆಗಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ಮಾನ್ಯ ಖರ್ಗೆಯವರನ್ನು ನೋಡಿದರೆ ಬಹಳ ಕನಿಕರ ಬರುತ್ತಿದೆ....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಮಾನ್ಯ ಸೋಮಶೇಖರ್‌ರವರು ನನ್ನ ಬಗ್ಗೆ ಬಹಳ ಅನುಕಂಪ ತೋರಿಸುತ್ತಿದ್ದಾರೆ. ಆದರೆ ನಾನು ಎಂದೂ ಕೂಡ ಮುಖ್ಯಮಂತ್ರಿ ಪದವಿಗೆ ಆಸೆಪಟ್ಟವನಲ್ಲ...

ಶ್ರೀ ಕೆ.ಹೆಚ್. ಹನುಮೇಗೌಡ : ಅವರು ನೀವೂ ಒಂದೇ ಪಾರ್ಟಿಯಲ್ಲಿ ಇದ್ದದ್ದರೆ, ಆಗಲೂ ಸಹಾ ಅವರು ಇದೇ ತರಹ ಮಾಡುತ್ತಿದ್ರಾ? ಎಂಬುದನ್ನು ಅವರು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಅದು ಒಂದು ಕಡೆ ಇರಲಿ. ನಾನು ಈ ಸದನಕ್ಕೆ ಬಂದು 28 ವರ್ಷಗಳಾಯಿತು. ಗುರುಮಿಠ್‌ಕಲ್ ಮತಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಸತತವಾಗಿ ಏಳು ಬಾರಿ ಅಲ್ಲಿಂದ ವಿಧಾನಸಭಾ ಸದಸ್ಯನಾಗಿ ಆರಿಸಿ ಬಂದಿದ್ದೇನೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿ ಎಂದು ಹೇಳಿದಾಗ ನಾನು ಅಲ್ಲಿ ಕುಳಿತು ಏನು ಕೆಲಸ ಮಾಡಬೇಕೋ ಅದನ್ನು ಪ್ರಾಮಾಣಿಕತೆಯಿಂದ ಮಾಡಿದ್ದೇನೆ. ಆಡಳಿತ ಪಕ್ಷದಲ್ಲಿದ್ದಾಗ ನಮ್ಮ ಪಕ್ಷದವರು ನನಗೆ ಏನು ಕೆಲಸವನ್ನು ವಹಿಸುತ್ತಿದ್ದಾರೋ ಅದನ್ನು ನಾನು ಮಾಡುತ್ತಲೇ ಬಂದಿದ್ದೇನೆ. ಆದರೆ ಯಾವಾಗಲೂ ಕೂಡ ನಾನು ಮುಖ್ಯಮಂತ್ರಿಯಾಗುತ್ತೇನೆ ಅಥವಾ ಉಪ ಮುಖ್ಯಮಂತ್ರಿಯಾಗುತ್ತೇನೆ ಎಂದು ನಾನು ಹೇಳಿಕೊಂಡಿಲ್ಲ. ಆ ರೀತಿ ಮಾಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಕೇಳಲಿಲ್ಲ, ಅವರೂ ನನಗೆ ಏನೂ ಹೇಳಲಿಲ್ಲ. ನಮ್ಮ ಪಕ್ಷದಲ್ಲಿ ಆ ಪೋಸ್ಟ್ ಬಗ್ಗೆ ಚರ್ಚೆಯೇ ಆಗಿಲ್ಲ. ಹೀಗಿದ್ದಾಗ ಪದೇ ಪದೇ ಆ ಮಾತನ್ನು ನಿಮ್ಮ ನಿಮ್ಮಲ್ಲೇ ಮಾತನಾಡಿಕೊಂಡು, ಕೊನೆಗೆ ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ ಎನಿಸುತ್ತದೆ. ಪಾಪ, ಅವರೇನೋ ಮುಖ್ಯಮಂತ್ರಿ ಪದವಿಗೆ ಆಸೆ ಪಟ್ಟಿದ್ದರೇನೋ, ಅವರಿಗೆ ಅದು ಸಿಗಲಿಲ್ಲ ಎಂದು ದೊಡ್ಡ ಅನುಕಂಪ ತೋರಿಸತಕ್ಕಂಥ ಮಾತುಗಳನ್ನೇನು ತಾವು ಆಡುತ್ತಿದ್ದೀರಿ, ದಯವಿಟ್ಟು ಆ ಮಾತುಗಳನ್ನು ಆಡುವುದಕ್ಕೆ ಹೋಗಬೇಡಿ. ನಾನು ಎಂದೂ ಮುಖ್ಯಮಂತ್ರಿ ಪದವಿಗೆ ಅಪೇಕ್ಷೆ ಪಟ್ಟವನಲ್ಲ. ಯಾವ ಕೆಲಸವನ್ನು ನಮ್ಮ ಪಕ್ಷ ಅಥವಾ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೋ ಆ ಕೆಲಸವನ್ನು ಪ್ರಾಮಾಣಿಕತೆಯಿಂದ ನಾನು ಮಾಡಲಿಕ್ಕೆ ಸಿದ್ಧನಿದ್ದೇನೆ. ಪಕ್ಷದ ಒಬ್ಬ ಸಿಪಾಯಿಯಾಗಿ ನಾನು ಆ ಕೆಲಸವನ್ನು ಮುಂದುವರೆಸುತ್ತೇನೆ ಏನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್: ಪಕ್ಷದಲ್ಲಿ ಒಂದು ಹುದ್ದೆಯನ್ನು ಕೊಡತಕ್ಕ ವಿಚಾರ

ಬೇರೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಂತ್ರಿಮಂಡಲ ರಚನೆಯ ಬಗ್ಗೆ ಹೇಳದಿದ್ದರೂ ಸಹಾ ಮಂತ್ರಿಮಂಡಲ ರಚನೆ ವಿಷಯದಲ್ಲಿ ಅವರು ನಡೆದುಕೊಂಡಂತಹ ರೀತಿಯ ಬಗ್ಗೆ ಇಲ್ಲಿ ಮಾತನಾಡಬಹುದು....

ಅಧ್ಯಕ್ಷರು: ದಯವಿಟ್ಟು ಬೇರೆ ಸಬ್ಜೆಕ್ಟ್‌ಗೆ ಬನ್ನಿ.

ಶ್ರೀ ಬಿ. ಸೋಮಶೇಖರ್: ಮಾನ್ಯ ಖರ್ಗೆಯವರು ಒಬ್ಬ ಹಿರಿಯ ದಲಿತ ನಾಯಕರು. ಇಲ್ಲಿ ಆತ್ಮಗೌರವದ ಪ್ರಶ್ನೆ ಬರುತ್ತದೆ. ಒಂದು ಕಡೆ ಪಕ್ಷ ಇರಬಹುದು...

ಅಧ್ಯಕ್ಷರು: ಆಯಿತು ಆ ವಿಷಯ ಬಿಡಿ. ಮಾನ್ಯ ಸೋಮಶೇಖರ್‌ರವರೇ, ಮುಂದಿನ ವಿಷಯಕ್ಕೆ ಬನ್ನಿ.

ಶ್ರೀ ಬಿ. ಸೋಮಶೇಖರ್: ಒಬ್ಬ ಮನುಷ್ಯ ಆತ್ಮಗೌರವವನ್ನು ಕಾಪಾಡಿಕೊಂಡು ಬರತಕ್ಕದ್ದು ತಾನು ನಂಬಿರತಕ್ಕ ಜನರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದೇನೋ ಎನ್ನತಕ್ಕಂಥ ಒಂದು ಭಾವನೆ ನನಗೆ ಬಂದಿತು. ಆದ್ದರಿಂದ ನಾನು ಅದರ ಬಗ್ಗೆ ಹೇಳಿದೆ.

ಅಧ್ಯಕ್ಷರು: ಮುಂದಿನ ವಿಷಯಕ್ಕೆ ಹೋಗಿ.

ಶ್ರೀ ಬಿ. ಸೋಮಶೇಖರ್: ಅವರಿಗೆ ಆತ್ಮಗೌರವ ಇದೆಯೋ ಏನೋ ಎಂಬುದನ್ನು ಅವರು ತಿಳಿದುಕೊಳ್ಳಲಿ. ನನಗೇನೂ ತೊಂದರೆ ಇಲ್ಲ. ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರ ಬಗ್ಗೆ ನಮಗೆ ಬಹಳ ಗೌರವವಿದೆ, ಆದ್ದರಿಂದ ಈ ಮಾತನ್ನು ನಾನು ಹೇಳಬೇಕಾಯಿತು.

ಅಧ್ಯಕ್ಷರು: ಮಾನ್ಯ ಖರ್ಗೆಯವರು ಈಗಾಗಲೇ ಆ ಬಗ್ಗೆ ಉತ್ತರ ಹೇಳಿದ್ದಾರಲ್ಲಾ. ಆದ್ದರಿಂದ ಅದನ್ನು ಬಿಟ್ಟು ಮುಂದಿನ ವಿಷಯಕ್ಕೆ ಹೋಗಿ.

ಶ್ರೀ ಬಿ. ಸೋಮಶೇಖರ್: ನಾವು ನಮ್ಮ ಪಕ್ಷದಲ್ಲಿ ಅದನ್ನು ಮಾಡಿ ತೋರಿಸಿದ್ದೇವೆ. ಜನತಾ ದಳ ಕೇವಲ ಮೇಲ್ವರ್ಗದ ಪಕ್ಷ, ಅದು ಹಾಗೆ, ಹೀಗೆ ಮುಂತಾಗಿ ನೀವು ಹೇಳುತ್ತಿರುತ್ತೀರಿ. ನಾವು ಹಿಂದುಳಿದ ವರ್ಗಗಳಿಗೆ ಸೇರಿದವರನ್ನು ಮೂರೂವರೆ ವರ್ಷಗಳ ಕಾಲ ಉಪ ಮುಖ್ಯಮಂತ್ರಿಯಾಗಿ ಮಾಡಿದ್ದೆವು.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ, ಪಕ್ಷದ ವಿಷಯ ಇಲ್ಲೇಕೆ ಮಾತನಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಅವರೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಹೇಳಿ ಹೇಳಿ ಅವರನ್ನು ನಿರ್ನಾಮ ಮಾಡಿ ನೀವು ಇವತ್ತು ಅವರ ಸಮಾಧಿ ಮೇಲೆ ಕುಳಿತಿದ್ದೀರಿ...

(ಗೊಂದಲ)

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ, ಸಬ್ಜೆಕ್ಟ್ ಚೇಂಜ್ ಮಾಡಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್:ಈ ವಿಷಯ ಪ್ರಸ್ತಾಪಿಸುವುದರಿಂದ ಅವರಿಗೆ ನೋವು ಆಗುವುದಾದರೆ, ನಾನು ಬೇರೆ ವಿಷಯದೆಡೆಗೆ ಹೋಗುತ್ತೇನೆ. ನಮ್ಮ ಕಡೆ ಏನಾಗಿದೆ, ಅದೆಲ್ಲವೂ ಸರಿ ಎಂದು ನಾನು ಹೇಳುವುದಿಲ್ಲ....

ಒಬ್ಬ ಮಾನ್ಯ ಸದಸ್ಯರು : ಜನರು ನಿಮಗೆ ಐದು ವರ್ಷಗಳ ಕಾಲ ಆಡಳಿತ ನಡೆಸಲು ಅವಕಾಶ ಕೊಟ್ಟಿದ್ದರು. ನಿಮಗೆ ಅದನ್ನು ಮಾಡಲಿಕ್ಕೆ ಆಗಲಿಲ್ಲ. ನೀವು ಈಗ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದಾರೆ, ಮಂತ್ರಿಗಳು ಆಡಳಿತ ಮಾಡುತ್ತಿಲ್ಲ ಎಂದು ನಮ್ಮ ಮೇಲೆ ಆಪಾದನೆ ಮಾಡುತ್ತಿದ್ದೀರಿ. ನೀವು ಏನು ಮಾಡಿದ್ದೀರಿ ಎಂಬುದನ್ನು ಸ್ವಲ್ಪ ಆಲೋಚನೆ ಮಾಡಿ. ನೀವು ನಮಗೆ ಅಡ್ವೈಸ್ ಕೊಡುವುದು ಬೇಡ.

ಶ್ರೀ ಬಿ. ಸೋಮಶೇಖರ್: ನಿಮಗೆ ಅಡ್ವೈಸ್‌ಕೊಡುವುದಕ್ಕೆ ನಮಗೆ ಅಧಿಕಾರ ಇದೆ. ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ನಮಗೆ ಆಡಳಿತ ನಡೆಸುವಾಗ ಆಗಿರುವ ಕೆಲವು ಅನುಭವಗಳನ್ನು ಹೇಳುತ್ತಾ, ನೀವು ಸ್ವಲ್ಪ ಎಚ್ಚರಿಕೆ ವಹಿಸಿ ಎಂದು ಹೇಳುತ್ತಿದ್ದೇವೆ. ನೀವು ಒಳ್ಳೆಯ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡಲಿ ಎಂಬುದು ನಮ್ಮ ಹಂಬಲ. ಅದು ಬಿಟ್ಟು ಬೇರೆ ಇನ್ನೇನೂ ಇಲ್ಲ.

ಅಧ್ಯಕ್ಷರು: ಆಯಿತು, ಬೇರೆ ಸಬ್ಜೆಕ್ಟ್‌ಗೆ ಬನ್ನಿ.

ಶ್ರೀ ಬಿ. ಸೋಮಶೇಖರ್: ಅವರು ನಾವು ಹೀಗೆಯೇ ಮಾತನಾಡಬೇಕೆಂದು ಬರೆದು ಕೊಡಲಿ, ನಾವು ಹಾಗೆಯೇ ಮಾತನಾಡುತ್ತೇವೆ; ನನಗೇನೂ ತೊಂದರೆ ಇಲ್ಲ. ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಾಮಾಜಿಕ ನ್ಯಾಯ ಈ ಮೂರು ತತ್ವಗಳ ಆಧಾರದ ಮೇಲೆ ನಾವು ಆಡಳಿತ ನಡೆಸುತ್ತೇವೆ ಎಂದು ನೀವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರಿಂದ ನಾನು ಈ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಯಿತು. ಇಡೀ ಭಾರತದಲ್ಲಿ ಪ್ರಥಮ ಬಾರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮೀಸಲಾತಿ ನೀಡಿ ನಮ್ಮ ಸರ್ಕಾರದವರು ನಡೆಸಿದವು. ಯಾವುದೇ ರಾಜ್ಯದಲ್ಲೂ ಕೂಡ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ಜನಾಂಗದವರಿಗೆ ಮೀಸಲಾತಿ ಒದಗಿಸಿ ಚುನಾವಣೆಗಳನ್ನು ಮಾಡಿಲ್ಲ. ನಾವು ಅವರಿಗೆ ರಾಜಕೀಯ ಮೀಸಲಾತಿ ನೀಡಿದೆವು. ಉದ್ಯೋಗದಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದು ಬೇರೆ ವಿಚಾರ. ಆದರೆ ಕಾಂಗ್ರೆಸ್‌ನವರು ಹಿಂದೆ ಅಧಿಕಾರದಲ್ಲಿ ಇದ್ದಂತಹ ಅವಧಿಯಲ್ಲಿ ಯಾವ ಒಂದು ಪ್ರಜಾಪ್ರಭುತ್ವದ ಸಿದ್ಧಾಂತದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಿದ್ದರು? ಅಧಿಕಾರಿಗಳ ಮುಖಾಂತರ ತಾವು ಚುನಾವಣೆಗಳನ್ನು ನಡೆಸಿದ್ದಿರಿ. ನಾವು ಅಧಿಕಾರಕ್ಕೆ ಬಂದ ತಕ್ಷಣ ರಾಜಕೀಯ ಮೀಸಲಾತಿ ನೀಡಿ ಚುನಾವಣೆಗಳನ್ನು ನಡೆಸಿದೆವು. ರಾಜಕೀಯ ಪ್ರಜ್ಞೆಯೇ ಇಲ್ಲದೇ ಇರತಕ್ಕಂತಹ ಜನರಿಗೆ ನಾವು ಅಧಿಕಾರ ಕೊಟ್ಟು ಕೂರಿಸಿದೆವು. ನಾವು ಅದನ್ನು ಮಾಡಿದ್ದೇವೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಸೋಮಶೇಖರ್‌ರವರೇ, ಒಂದು ನಿಮಿಷ; ನೀವು ಸತತ ಆರನೇ ವರ್ಷ ಈ ರೀತಿಯಾಗಿ ನಾವು ರಾಜಕೀಯ ಮೀಸಲಾತಿಯನ್ನು ಹಿಂದುಳಿದ ವರ್ಗದವರಿಗೆ ನೀಡಿದೆವು ಎಂದು ಸುಳ್ಳು ಹೇಳಿಕೊಂಡು ಬರುತ್ತಿದ್ದೀರಿ. ಕಾಂಗ್ರೆಸ್ ಪಕ್ಷ ಮೊದಲು ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಿತು. ಅದು ನಿಮ್ಮ ನೆನಪಿನಲ್ಲಿ ಇರಲಿ. ಇತಿಹಾಸವನ್ನು ತಿರುಚುವುದು ಬೇಡ. ರಾಜಕೀಯ ಮೀಸಲಾತಿಯನ್ನು ನೀಡಿ ನಮ್ಮ ಕಾಂಗ್ರೆಸ್ ಪಕ್ಷ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ನಡೆಸಿತು. ಅನಂತರ ನೀವು ಅಧಿಕಾರಕ್ಕೆ ಬಂದಾಗ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಿದಿರಿ. ರಾಜಕೀಯ ಮೀಸಲಾತಿಯನ್ನು ಕಲ್ಪಿಸಿದವರು ನಾವು. ಅದನ್ನು ವಿರೋಧಿಸಿದವರು ನೀವು. ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನಿಗಳಾಗಿದ್ದಾಗ ಲೋಕಸಭೆಯಲ್ಲಿ ನಮ್ಮ ಸ್ವಂತ ಶಕ್ತಿಯಿಂದ ನಾವು ಇದಕ್ಕೆ ಸಂಬಂಧಪಟ್ಟ ಮಸೂದೆಗೆ ಅಂಗೀಕಾರ ದೊರಕಿಸಿಕೊಂಡೆವು. ಆದರೆ ರಾಜ್ಯಸಭೆಯಲ್ಲಿ ಅದನ್ನು ಕೇವಲ ಒಂದು ಮತದಿಂದ ನೀವು ಸೋಲಿಸಿದಿರಿ. ಆದ್ದರಿಂದ ಸಾಮಾಜಿಕ ನ್ಯಾಯದ ಬಗ್ಗೆ ದಯವಿಟ್ಟು ನೀವು ಮಾತನಾಡಬೇಡಿ. ನಿಮ್ಮ ವೈಯಕ್ತಿಕ ಸಿದ್ಧಾಂತಗಳು ಇರಬಹುದು, ಆದರೆ ನಿಮ್ಮ ಪಕ್ಷದ ಸಿದ್ಧಾಂತದಲ್ಲಿ ಅದು ಇಲ್ಲ. ಈ ವಿಷಯವನ್ನು ನೀವು ಮರೆಯಬೇಡಿ.

ಶ್ರೀ ಬಿ.ಸೋಮಶೇಖರ್: ಇಲ್ಲಿ ನಮ್ಮ ಪಕ್ಷದ ಒಬ್ಬ ಮುಖಂಡನಾಗಿಯೇ ಮಾತನಾಡುತ್ತಿದ್ದೇನೆ; ಇಲ್ಲಿ ಒಬ್ಬ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ನಾನೂ ಕೂಡ ಸರ್ಕಾರದಲ್ಲಿ ಇದ್ದೆ. ನೀವು ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಎಷ್ಟು ಪರ್ಸೆಂಟ್ ರಾಜಕೀಯ ಮೀಸಲಾತಿ ಕೊಟ್ಟಿರಿ, ಯಾವ್ಯಾವ ಜನಾಂಗದವರಿಗೆ ಕೊಟ್ಟಿರಿ ಎಂಬುದು ಎಲ್ಲರಿಗೂ ಗೊತ್ತು. ನಿಜವಾಗಿ ಯಾರಿಗೆ ಬಾಯಿ ಇರಲಿಲ್ಲ, ಯಾರಿಗೆ ಕಿವಿ ಇರಲಿಲ್ಲ, ಯಾರಿಗೆ ಶಕ್ತಿ ಇರಲಿಲ್ಲ ಅವರನ್ನು ಗುರುತಿಸಿ ನಾವು ಮೀಸಲಾತಿ ನೀಡಿದ್ದೆವು. ನೀವು ಕೊಟ್ಟ ಮೀಸಲಾತಿ ಎಷ್ಟು ಪರ್ಸೆಂಟ್? ಅದು ಎಷ್ಟು ಜನರನ್ನು ಕವರ್ ಮಾಡಿತು?

(ಗೊಂದಲ)

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ, ನೀವು ದಯವಿಟ್ಟು ನನಗೆ ಅಡ್ರೆಸ್ ಮಾಡಿ.

ಶ್ರೀ ಬಿ.ಸೋಮಶೇಖರ್: ಕೆಲವು ಮಾನ್ಯ ಸದಸ್ಯರುಗಳು ಈಗ ತಾನೇ ಹೊಸದಾಗಿ ಆಯ್ಕೆಯಾಗಿ ಬಂದಿರುತ್ತೀರಿ. ಅವರುಗಳು ದಯವಿಟ್ಟು ಸ್ವಲ್ಪ ವಿಷಯವನ್ನು ತಿಳಿದು ಕೊಂಡು ಮಾತನಾಡುವುದು ಉತ್ತಮ. ಅವರು ಕೊಟ್ಟಂತಹ ಮೀಸಲಾತಿ ಯಾವುದು? ಶ್ರೀಮತಿ ಬಸವರಾಜೇಶ್ವರಿಯವರ ಮಗ 'ಹಿಂದುಳಿದವರು' ಎಂದು ಸರ್ಟಿಫಿಕೇಟ್ ತೆಗೆದು ಕೊಂಡು ಚುನಾವಣೆಗೆ ನಿಲ್ಲತಕ್ಕಂತಹ ವ್ಯವಸ್ಥೆ ಏನಿದೆ ನಾವು ಅದನ್ನು ಮಾಡಿದ್ದೇವಾ? ಯಾವ ಮೀಸಲಾತಿ ಕೊಟ್ಟಿರಿ? ಆ ಮೀಸಲಾತಿ ಯಾವ ಲೆಕ್ಕಕ್ಕೆ ಬರುತ್ತದೆ? ಶ್ರೀ ಡಿ.ಆರ್.ಪಾಟೀಲರು, ನಾವು ಪ್ರಥಮ ಬಾರಿಗೆ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಿ ಅಲ್ಲಿ ಮೀಸಲಾತಿ ಕೊಟ್ಟೆವು ಎಂದು ಹೇಳಿದರು. ಆ ಮೀಸಲಾತಿ ಯಾರಿಗೆ, ಶ್ರೀಮತಿ ಬಸವರಾಜೇಶ್ವರಿಯವರ ಮಗನಿಗೆ ಕೊಟ್ಟ ಮೀಸಲಾತಿ. ನಾವು ಒಬ್ಬ ಕುಂಬಾರ, ಅಗಸ, ಗಾಣಿಗ ಯಾವ ಯಾವ ಜಾತಿಯವರು, ಐಚಿ

ಮುಖ ನೋಡದ ಇರತಕ್ಕಂತಹ ಜನ, ಎಮ್‌ಎಲ್‌ಎ ಮುಖ ನೋಡದೆ ಇರತಕ್ಕಂತಹ ಜನರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಮಾಡಿ, ಚುನಾವಣೆಗಳನ್ನು ಮಾಡಿ ಕೂರಿಸಿದ್ದೇವೆ. ಅದು ನಿಮಗೆ ಅನುಭವ ಆಗಿರಬಹುದು.

ಶ್ರೀ ಡಿ.ಆರ್. ಪಾಟೀಲ್: ಮೀಸಲಾತಿಯ ಘಟನಾ ತಿದ್ದುಪಡಿಯನ್ನು ವಿರೋಧ ಮಾಡಿದ ಪಕ್ಷವನ್ನು ನೀವು ಪ್ರತಿನಿಧಿಸುತ್ತಿದ್ದೀರಿ. ಅದು ತಪ್ಪು. ಶ್ರೀ ಸೋಮಶೇಖರ್‌ರವರು ವೈಯುಕ್ತಿಕವಾಗಿ ಪ್ರಸ್ತಾಪ ಮಾಡಿದರೆ ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಬಿ.ಸೋಮಶೇಖರ್: ದಯವಿಟ್ಟು ತಾವು ಸದಸ್ಯರಿಗೆ ಮಾರ್ಗದರ್ಶನ ಕೊಡಬೇಕು. ನಾವು ವಿರೋಧ ಪಕ್ಷದಲ್ಲಿ ಕುಳಿತು ಟೀಕೆ ಮಾಡತಕ್ಕಂತಹ ಹಕ್ಕು ನಮಗೆ ಇದೆಯೋ ಇಲ್ಲವೋ ಎಂದು ಹೇಳಬೇಕು. ನಾವಿಲ್ಲಿ ಟೀಕೆ ಮಾಡುವುದಕ್ಕಾಗುವುದಿಲ್ಲವೆಂದರೆ, ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರ ಪಾತ್ರವೇನು ಎಂದು ಹೇಳಬೇಕಾಗುತ್ತದೆ. ಅವರಿಗೆ ನೋವಾಗುವುದಾದರೆ, ಅವರು ನಮಗೆ ನೋವು ಕೊಟ್ಟಿಲ್ಲವೆ? ನಾವೆಲ್ಲರೂ ಅವರವರ ಪಾತ್ರಗಳನ್ನು ವಹಿಸಬೇಕಾಗುತ್ತದೆ. ಈಗ ಬಂದಿದ್ದೀರಿ, ಇನ್ನು ಎರಡು-ಮೂರು ದಿನಗಳಾಗಿವೆ, ಈಗಲೇ ಇಷ್ಟು ಕೋಪ ಮಾಡಿದರೆ, ಇನ್ನು ಐದು ವರ್ಷ ಹೇಗೆ ಕಳೆಯುವುದು. ಸ್ವಲ್ಪ ತಾಳ್ಮೆ ಇರಬೇಕಾಗುತ್ತದೆ.

ಅಧ್ಯಕ್ಷರು: ನೀವು ನೀವೇ ಕನ್‌ವರ್ಸೇಷನ್ ಮಾಡಬೇಡಿ, ಈ ಕಡೆ ಅಡ್ರೆಸ್ ಮಾಡಿ ಮಾತನಾಡಿ.

ಶ್ರೀ ಯು.ಆರ್.ಸಭಾಪತಿ: ಟೀಕೆ ಎಂದರೆ, ಸದನಕ್ಕೆ ಸುಳ್ಳು ಮಾಹಿತಿ ಕೊಡುವುದು ಅಲ್ಲ. ಈ ಸದನಕ್ಕೆ ನಿಜವಾದ ಮಾಹಿತಿ ಕೊಡಿ.

(ಗೊಂದಲ)

ಶ್ರೀ ಬಿ.ಸೋಮಶೇಖರ್: ಅದನ್ನು ನಾವು ಮಾಡಿದ್ದೇವೆ. ಮತ್ತು ನಾವು ಇಡೀ ದೇಶಕ್ಕೆ ಅದನ್ನು ತೋರಿಸಿಕೊಟ್ಟಿದ್ದೇವೆ. ನಿಜವಾದ ಸಾಮಾಜಿಕ ನ್ಯಾಯವನ್ನು ನಮ್ಮ ಜನತಾದಳ ಸರ್ಕಾರದಲ್ಲಿ, ಸ್ಥಳೀಯ ಚುನಾವಣೆಗಳಲ್ಲಿ ಮಾಡಿ ತೋರಿಸಿಕೊಟ್ಟಿದ್ದೇವೆ. ಅದಕ್ಕೆ ಯಾರಿಂದಲೂ ಏನೂ ಪಾಠವನ್ನು ನಾವು ಕಲಿಯಬೇಕಾಗಿಲ್ಲ. ಆ ಒಂದು ಹಿನ್ನೆಲೆ ಅಡಿಯಲ್ಲಿ ನೀವು ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ನಮ್ಮ ಸಲಹೆ.

ಇನ್ನೊಂದು ವಿಚಾರವೆಂದರೆ ಈ ಶಿಕ್ಷಣ ಮತ್ತು ಉದ್ಯೋಗ ರಂಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳನ್ನು ಬಲಪಡಿಸುತ್ತೇವೆ ಎಂದು ಸುಮ್ಮನೆ ಮುಗುಮ್ಮಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾಲ್ಕು ಲೈನ್ ಬರೆದಿದ್ದಾರೆ. ಅದರ ಬಗ್ಗೆ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ, ಎಷ್ಟು ದಿನಗಳಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಾರೆ, ಅದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಾರೆ. ಇವೆಲ್ಲಾ ವಿಚಾರಗಳು ಅದರಲ್ಲಿ ಇರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ; ಅವರ ಬಗ್ಗೆ ನಿಜವಾದ ಕಳಕಳಿ ನಿಮಗೆ ಇದ್ದಿದ್ದರೆ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶಿಕ್ಷಣ ರಂಗದಲ್ಲಿ ಇರಬಹುದು, ಉದ್ಯೋಗ ರಂಗದಲ್ಲಿ ಇರಬಹುದು, ಆರ್ಥಿಕ ಅಭಿವೃದ್ಧಿಯಲ್ಲಿ ಇರಬಹುದು,

ಈ ಕಾರ್ಯಕ್ರಮಗಳನ್ನು ನಾವು ಹಾಕುತ್ತೇವೆ. ಇಷ್ಟು ಹಣ ನಾವು ಒಂದು ವರ್ಷಕ್ಕೆ ನಿಗಧಿ ಮಾಡುತ್ತೇವೆ, ಎಂದು ನಿರ್ದಿಷ್ಟವಾಗಿ ಹೇಳಬಹುದಾಗಿತ್ತು. ಅಲ್ಲದೆ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಫೈನಾನ್‌ಷಿಯಲ್ ಕಾರ್ಪೊರೇಷನ್ ರೀತಿಯಲ್ಲಿ ನೀವು ಪರಿವರ್ತನೆ ಮಾಡಿ ನೇರವಾಗಿ ದಲಿತರು ಸಬ್ಸಿಡಿಗೋಸ್ಕರ ಬ್ಯಾಂಕುಗಳಿಗೆ ಹೋಗಿ ವರ್ಷಾನುಗಟ್ಟಲೆ ಏನು ಅಲೆಯುತ್ತಾರೆ ಅದನ್ನು ತಪ್ಪಿಸತಕ್ಕಂತಹ ಪ್ರಯತ್ನ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಅದರ ಬಗ್ಗೆ ಹೇಳಲಿಲ್ಲ. ಇನ್ನೊಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಆಧಾರದ ಮೇಲೆ, ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಎಸ್‌ಸಿ/ಎಸ್‌ಟಿ ಕಮಿಷನ್ ಎಂದು ಪ್ರಾರಂಭ ಮಾಡುತ್ತೀರೆಂದು, ಅದರ ಬಗ್ಗೆ ಘೋಷಣೆ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ, ಮಾನ್ಯ ಖರ್ಗೆಯವರು ಇಲ್ಲಿದ್ದಾಗ ಅದರ ಬಗ್ಗೆ ಬಹಳ ಹೇಳುತ್ತಿದ್ದರು; ನಾವು ಮಾಡುವುದಕ್ಕೆ ಆಗದೆ ಇರಬಹುದು, ನೀವೂ ಮಾಡಬೇಡಿ ಎಂದು ಹೇಳುವುದು ಅಲ್ಲ, ಅದನ್ನು ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಅದೂ ಆಗಲಿಲ್ಲ. ಎಸ್‌ಸಿ ಎಸ್‌ಟಿ ಕಮಿಷನ್ ಮಾಡಿ ಜಾತಿಗಳನ್ನು ಸರಿಯಾಗಿ ವಿಂಗಡಣೆ ಮಾಡತಕ್ಕಂಥಾದ್ದು ಮಾಡುತ್ತೀರೆಂದು ತಿಳಿದುಕೊಂಡಿದ್ದೆ, ಅದು ಆಗಲಿಲ್ಲ.

ಇನ್ನು ಈ ವಿದ್ಯುಚ್ಛಕ್ತಿ ಉತ್ಪಾದನೆಯ ವಿಚಾರದಲ್ಲಿ ನಮ್ಮ ಸರ್ಕಾರ ನಾಲ್ಕುವರೆ ವರ್ಷದಲ್ಲಿ ಎಷ್ಟು ವಿದ್ಯುಚ್ಛಕ್ತಿಯನ್ನು ನಾವು ಒದಗಿಸಿಕೊಟ್ಟಿದ್ದೇವೆ, ಹಾಗೆ ಹಿಂದೆ ಇವರು ಬಳುವಳಿ ಕೊಟ್ಟಿದ್ದು ಏನು? ಅದರ ಬಗ್ಗೆ ಚಿಂತನೆ ಮಾಡುವುದಾದರೆ 800 ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ನಾವು ಕೇವಲ ಎರಡು-ಮೂರು ವರ್ಷಗಳಲ್ಲಿ ಉತ್ಪತ್ತಿ ಮಾಡಿದ್ದೇವೆ. ಮತ್ತು ಮಿನಿ ಹೈಡಲ್ ಪ್ರಾಜೆಕ್ಟ್‌ಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ರಾಯಚೂರು ಥರ್ಮಲ್ ಯೂನಿಟ್ ಬಗ್ಗೆ ಕೂಡ ಬೇಗ ಕೆಲಸ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಪವರ್ ಮಿನಿಸ್ಟರ್ ಮತ್ತು ಇರ್ರಿಗೇಷನ್ ಮಿನಿಸ್ಟರ್ ಆಗಿದ್ದರು, ಆಗ ಎಷ್ಟು ಮೆ.ವ್ಯಾ. ವಿದ್ಯುಚ್ಛಕ್ತಿ ಕೊಟ್ಟಿದ್ದರು ಎಂಬುದನ್ನು ಅವರು ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ಹೇಳಿ, ಹೇಳಿ ನೀವು ಸೋತಾಯಿತು. ಮತ್ತೆ ಅದನ್ನೇ ಹೇಳುತ್ತೀರಿ. ಜನ ಅದನ್ನು ಕೇಳಿ ಕೇಳಿ ಸಾಕಾಗಿ ಹೋಗಿದ್ದಾರೆ,. ನೀವು ಹೇಳಿದ್ದೇ ಹೇಳುತ್ತೀರಿ.

ಶ್ರೀ ಬಿ. ಸೋಮಶೇಖರ್: ಜನರು ನಮ್ಮನ್ನು ಸೋಲಿಸಿರತಕ್ಕಂಥಾದ್ದು ನಮ್ಮ ಪರ್‌ಫಾರ್ಮೆನ್ಸ್‌ನಿಂದ ಅಲ್ಲ. ಅವರಷ್ಟು ಕೆಲಸ ಯಾರೂ ಮಾಡಿಲ್ಲ, ಆದರೆ ಅವರು ನಡೆದುಕೊಂಡ ರೀತಿ ಸರಿ ಇಲ್ಲವೆಂದು ಸಾರ್ವಜನಿಕರು ಇವತ್ತಿಗೂ ಮಾತನಾಡುತ್ತಾರೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ನಿಜವಾಗಿ ಕೆಲಸ ಮಾಡದೆ ಸೋತಿಲ್ಲ. ನಾವು ಒಳ್ಳೆಯ ಕೆಲಸ ಮಾಡಿ ಸೋತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು: ಒಳ್ಳೆಯ ಕೆಲಸ ಮಾಡಿದ್ದಕ್ಕೆ ನಿಮ್ಮ ಪಕ್ಷಕ್ಕೆ 12 ಸೀಟ್ ಬಂದಿರುವುದು.

ಒಬ್ಬ ಮಾನ್ಯ ಸದಸ್ಯರು: ದಯಮಾಡಿ ಮಾನ್ಯ ಸದಸ್ಯರು ಸೋಲು ಗೆಲುವಿನ ವೈಯುಕ್ತಿಕ ಚರ್ಚೆ ಕಡಿಮೆ ಮಾಡಿ ಏನಾದರೂ ಒಳ್ಳೆಯ ವಿಚಾರದ ಬಗ್ಗೆ ಚರ್ಚೆ ಮಾಡಲಿ. ಸೋಲು ಗೆಲುವು ಇದ್ದರೆ ಜನಗಳ ಹತ್ತಿರ ಹೋಗಿ ಏತಕ್ಕೆ ಸೋಲಿಸಿದ್ದಾರೆಂದು ಕೇಳೋಣ. ಪ್ರತಿಯೊಬ್ಬರಿಗೂ ಇದು ಪಾಪವೆಂದು ಜನ ತೋರಿಸಿದ್ದಾರೆ. ಕಾಂಗ್ರೆಸ್ ಇರಬಹುದು, ಬಿಜೆಪಿ ಇರಬಹುದು ಮತ್ತು ಜನತಾದಳ ಇರಬಹುದು ಎಲ್ಲರಿಗೂ ಇದು ಗೊತ್ತಾಗಿದೆ. ದಯವಿಟ್ಟು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದಕ್ಕಿಂತ ಒಬ್ಬೊಬ್ಬರಾಗಿ ಮಾತನಾಡಿದರೆ ನಮಗೂ ಅರ್ಥವಾಗುತ್ತದೆ. ನಾವು ಹೊಸಬರಿದ್ದೇವೆ.

ಶ್ರೀ ಬಿ. ಸೋಮಶೇಖರ್: ಆದ್ದರಿಂದ ಚುನಾವಣೆ ಈ ಸಾರಿ ಈ ರೀತಿ ಆಗಿದೆ, ಆದರ ಬಗ್ಗೆ ಚುನಾವಣೆ ಸುಧಾರಣೆಗಳು ಯಾವ ರೀತಿ ಮಾಡಬೇಕಾಗುತ್ತದೆ, ಈ ಚುನಾವಣೆಗಳು ಎಷ್ಟು, ಯಾವ ಮಟ್ಟದಲ್ಲಿ ನಡೆದಿದೆ, ಯಾರಾದರೂ ಯೋಗ್ಯರು, ಪ್ರಾಮಾಣಿಕರು ಈ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಆಗುತ್ತಾ? ಇದರ ಬಗ್ಗೆ ನಾವು ಬೇರೆ ಸಂದರ್ಭದಲ್ಲಿ ಮಾತನಾಡೋಣ. ಏಕೆಂದರೆ, ಈ ಕೆಟ್ಟ ವ್ಯವಸ್ಥೆಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಇದು ಈ ಸದನಕ್ಕೆ ಮಾಡಿದ ಅವಮಾನ. ಯಾರಾದರೂ ಯೋಗ್ಯರು ಈ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಆಗುತ್ತಾ ಎಂದು ಕೇಳುತ್ತಿದ್ದಾರೆ. ಇಲ್ಲಿಗೆ ಆರಿಸಿ ಬಂದವರು ಯಾರೂ ಯೋಗ್ಯರು ಇಲ್ಲವೆಂದು ಅವರ ಭಾವನೆ.

ಶ್ರೀ ಬಿ. ಸೋಮಶೇಖರ್: ನಾವೆಲ್ಲರೂ ಯೋಗ್ಯರಿರುವುದರಿಂದ ಜನರು ನಮಗೆಲ್ಲಾ ಆರಿಸಿ ಕಳುಹಿಸಿರುವುದು.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಅವರು ಚುನಾಯಿತ ಪ್ರತಿನಿಧಿಗಳಿಗೆ ಅವಮಾನವಾಗುವ ಹಾಗೆ ಮಾತನಾಡುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಚುನಾಯಿತರಾಗಬೇಕಾದರೆ, ಅಯೋಗ್ಯರಿದ್ದರೆ ಜನ ನಮಗೆ ಚುನಾಯಿತರನ್ನಾಗಿ ಮಾಡುವುದಕ್ಕೆ ಸಾಧ್ಯವೇ? ಮಾಜಿ ಮಂತ್ರಿಗಳು ಈ ರೀತಿ ಆಪಾದನೆ ಮಾಡುವುದು, ಸರಿಯೇ? ಒಬ್ಬ ಅಯೋಗ್ಯರು ಚುನಾಯಿತರಾಗಿ ಬರುವುದಕ್ಕೆ ಸಾಧ್ಯವೇ?

ಶ್ರೀ ಬಿ. ಎನ್.ಬಚ್ಚೇಗೌಡ: ನಮಗಿಂತ ಒಳ್ಳೆಯವರು ಆಚೆ ಇದ್ದಾರೆ. ಅವರಿಗೆ ಬರುವುದಕ್ಕೆ ಆಗಲಿಲ್ಲ.

ಒಬ್ಬ ಮಾನ್ಯ ಸದಸ್ಯರು: ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯೋಗ್ಯರಿಗೆ ಚುನಾವಣೆ ಮಾಡುವುದಕ್ಕೆ ಹಕ್ಕು ಇರುತ್ತದೆ. ನಾವೆಲ್ಲಾ 136 ಜನ ಅಯೋಗ್ಯರಾಗಿ ಬಂದಿದ್ದೇವಾ? ಯಾರಾದರೂ ಹಾಗೆ ಆಪಾದನೆ ಮಾಡುವುದಾದರೆ ಅದು ಸರಿಯಲ್ಲ. ಈ ಸದನಕ್ಕೆ ಗೌರವ ಬರುವ ರೀತಿಯಲ್ಲಿ ಮಾತನಾಡುವುದಕ್ಕೆ ಅವರಿಗೆ ಹೇಳಬೇಕು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಯಾವುದೇ ಒಂದು ಕ್ಷೇತ್ರದಲ್ಲಿ ತೆಗೆದುಕೊಂಡರೂ ಕೂಡ ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೆವು. ಒಳ್ಳೆಯ ಕೆಲವು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದೇವೆ. ಇನ್ನು ಕೆಲವು ನಾನಾ ಹಂತದಲ್ಲಿವೆ.

3.10 ಪಿ.ಎಂ.

ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಒಳ್ಳೆಯ ಸ್ಟೇಟ್‌ಮೆಂಟ್ ಕೊಟ್ಟರು. ಈ ನಮ್ಮ ರಾಜ್ಯದ ಆಡಳಿತದಲ್ಲಿ ಆಡಳಿತವನ್ನು ಆಧುನೀಕರಣಗೊಳಿಸಬೇಕು ಮತ್ತು ಕಾರ್ಯ ವಿಧಾನಗಳನ್ನು ವ್ಯಾಪಕವಾಗಿ ಗಣಕೀಕರಿಸಬೇಕು. ಇದರಿಂದಾಗಿ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುವುದು ಮತ್ತು ನಿರ್ಧಾರ ತೆಗೆದುಕೊಳ್ಳುವಂತಹ ಪ್ರಕ್ರಿಯೆಗೆ ಸರಳೀಕರಣಗೊಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು ರಾಜ್ಯವ್ಯಾಪ್ತಿ ಕಂಪ್ಯೂಟರ್ ಜಾಲದ ನೆರವಿನಿಂದ ಸಾಧ್ಯವಾಗುತ್ತದೆ ಎಂದು ಹೇಳಿದರು. ಏಕೆಂದರೆ, ಇದು ನಾನು ಒಂದುವರೆ ವರ್ಷ ಕಂದಾಯ ಸಚಿವನಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿ ಅರ್ಧದಲ್ಲಿ ಇರುವುದನ್ನು ಇವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆ ಒಂದು ಅವಶ್ಯಕತೆ ಇದೆ ಎಂದು ನನ್ನ ಮನಸ್ಸಿಗೆ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈ ಸ್ಟೇಟ್‌ಮೆಂಟ್ ಕೊಟ್ಟಿದ್ದಕ್ಕೆ ನನಗೆ ಬಹಳ ಸಂತೋಷವಾಯಿತು. ನಾನು ಹೇಳುವುದು ಇಷ್ಟೆ. ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಇಷ್ಟೊಂದು ಮುಂದುವರೆಯಬೇಕಾದರೆ ಸರಳೀಕರಣವಾಗಬೇಕು. ಮತ್ತು ಕಾಲಮಿತಿಯ ಅಡಿಯಲ್ಲಿ ಕೆಲಸಗಳಾಗಬೇಕು, ಅಧಿಕಾರ ವಿಕೇಂದ್ರೀಕರಣವಾಗಬೇಕು ಹಾಗೂ ಮಾಹಿತಿ ತಂತ್ರಜ್ಞಾನದ ಮುಖಾಂತರ ಕಂಪ್ಯೂಟರೀಕರಣದಿಂದ ನೆಟ್ ವರ್ಕಿಂಗ್ ಮುಖಾಂತರ ಮಾಹಿತಿಗಳನ್ನು ತೆಗೆದುಕೊಳ್ಳಬೇಕು. ಇದೆಲ್ಲಾ ಆಡಳಿತದ ದೃಷ್ಟಿಯಿಂದ ಬಹಳ ಒಳ್ಳೆಯ ಕಾರ್ಯಕ್ರಮಗಳೇ ಆಗಿದೆ. ಆದರೆ ಇದನ್ನು ಎಷ್ಟರಮಟ್ಟಿಗೆ ಮುಂದುವರಿಸಿಕೊಂಡು ಹೋಗುತ್ತೀರಿ ಎಂಬುದರಲ್ಲಿ ನನಗೆ ಸಂಶಯವಿದೆ. ಇದನ್ನು ಆಡಳಿತ ಪಕ್ಷದವರು ಮಾಡಿದರೆ ಅವರಿಗೆ ಒಳ್ಳೆಯದು. ಅವರು ಐದು ವರ್ಷ ಆಡಳಿತದಲ್ಲಿ ಮುಂದುವರಿಯಬೇಕು ಎಂಬುದೇ ನನ್ನ ಆಸೆಯಾಗಿದೆ. ಅವರು ಮಾಡುವ ಒಳ್ಳೆಯ ಕೆಲಸಗಳಿಗೆ ನಾವು ಸಲಹೆಗಳನ್ನು ಕೊಟ್ಟೇ ಕೊಡುತ್ತೇವೆ. ರಾಜಕೀಯವಾಗಿ ನಾವ್ಯಾರೂ ಇಲ್ಲಿ ಚರ್ಚೆ ಮಾಡುವುದಿಲ್ಲ. ಆದರೆ ಮಾನ್ಯ ಎಸ್.ಎಂ.ಕೃಷ್ಣರವರಿಗೆ ಅವರು ಮುಖ್ಯಮಂತ್ರಿಗಳಾಗುವುದಕ್ಕೆ ಮೊದಲೇ ಇದ್ದ ಚಿಯರ್‌ಫುಲ್‌ನೆಸ್ ಈಗ ಕಾಣುತ್ತಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಅವರ ಮನಸ್ಸಿನಲ್ಲಿ ಇನ್-ಸೆಕ್ಯುರಿಟಿಯೋ ಅಥವಾ ಗೊಂದಲವೋ ಆಗಿರುವಂತೆ ಅವರು ಕಾಣಿಸುತ್ತಿದ್ದಾರೆ. ಆದರೆ ನಮ್ಮ ಕಡೆಯಿಂದ ಮಾತ್ರ ಅವರು ಮಾಡತಕ್ಕಂಥ ಒಳ್ಳೆಯ ಕೆಲಸಗಳಿಗೆ ಬೆಂಬಲವನ್ನು ಕೊಡುತ್ತೇವೆ. ಆದರೆ ನಿಮ್ಮ ನಿಮ್ಮಲ್ಲಿಯೇ ಪ್ರಾರಂಭದಲ್ಲಿಯೇ ಮುಜುಗರವಾಗಿದ್ದರೆ ಅದರ ಬಗ್ಗೆ ನೀವು ನೋಡಿಕೊಳ್ಳಬೇಕಾಗುತ್ತದೆ.

ಇನ್ನು ನೆಟ್‌ವರ್ಕಿಂಗ್ ಬಗ್ಗೆ ಹೇಳಬೇಕೆಂದರೆ ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಕಂಪ್ಯೂಟರ್‌ಗಳನ್ನು ಅಳವಡಿಸಿದ್ದೇವೆ. ಪ್ರತಿಯೊಂದು ತಾಲ್ಲೂಕು ಕಛೇರಿಗಳಿಗೆ ಕಂಪ್ಯೂಟರ್‌ನ್ನು ಕೊಟ್ಟಿದ್ದೇವೆ. ಜಿಲ್ಲಾ ಕಛೇರಿಗಳಿಗೆ ಕೊಟ್ಟಿದ್ದೇವೆ. ಇದನ್ನು ನೆಟ್‌ವರ್ಕಿಂಗ್ ಮಾಡಬೇಕೆಂದು ಆದರ ಸಲುವಾಗಿ ಮೊದಲನೇ ಹಂತವಾಗಿ ಎರಡೂವರೆ ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೆವು. ಅಂದರೆ ಇದರರ್ಥ ಕೇವಲ ಟಪಾಲಿನ ಮೂಲಕ ಮಾಹಿತಿಯನ್ನು ತರಿಸಿಕೊಳ್ಳುವುದೇ ಸರಿಯಾದ ವ್ಯವಸ್ಥೆಯಲ್ಲವೆಂದು ಅದಕ್ಕಾಗಿ ತಾಲ್ಲೂಕು ಕಛೇರಿಯಲ್ಲಿ ಕಳುಹಿಸುವ ಮಾಹಿತಿ ತಕ್ಷಣ ಕಂದಾಯ ಮಂತ್ರಿಗಳ ಕಛೇರಿಯಲ್ಲಿ ಅಥವಾ ಕಾರ್ಯದರ್ಶಿಗಳ ಕಛೇರಿಯಲ್ಲಿ ಅಳವಡಿಸಿರುವ ಕಂಪ್ಯೂಟರ್ ಸ್ಕ್ರೀನ್‌ನಲ್ಲಿ ತಕ್ಷಣ ಬರುವಂತಿರಬೇಕು. ಇದರ ಬಗ್ಗೆ ನಾವು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದ್ದೇವೆ, ಆದರೆ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಅದನ್ನು ನೀವು ಮೊದಲು ಮಾಡಿ.

ಇನ್ನು ವಿಡಿಯೋ ಕಾನ್‌ಫರೆನ್ಸ್ ಬಗ್ಗೆ ಈಗಾಗಲೇ ಒಂದು ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು ಈಗ ನಿಮ್ಮ ಬಳಿ ಅದು ಇದೆ. ಎಲ್ಲಾ ಜಿಲ್ಲಾಧಿಕಾರಿಗಳು ಮೀಟಿಂಗ್‌ಗೆ ಪ್ರತಿ ಬಾರಿ ಬರಬೇಕಾದ ಅವಶ್ಯಕತೆ ಇಲ್ಲ. ವಿಡಿಯೋ ಕಾನ್‌ಫರೆನ್ಸ್‌ನಲ್ಲಿಯೇ ನಾವು ಮೀಟಿಂಗ್ ಮಾಡಿ ನಿರ್ದೇಶನಗಳನ್ನು ನಾವು ಕಳುಹಿಸಿಕೊಡಬಹುದು; ಪ್ರೋಸೀಡಿಂಗ್ಸ್ ಮಾಡಬಹುದು. ಇದೆಲ್ಲವನ್ನು ನೀವು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಕೂಡ ಇವೆಲ್ಲವನ್ನೂ ಮಾಡುತ್ತೇವೆಂದು ಏನು ಹೇಳಿದ್ದಾರೆ ಅದನ್ನು ಚಾಚೂ ತಪ್ಪದೇ ಮಾಡಬೇಕು. ಇನ್ನು ಕಂದಾಯ ಇಲಾಖೆಯೊಂದರಲ್ಲಿಯೇ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏನೇನು ಕೆಲಸಗಳಾಗಿದೆ ಎಂಬ ಬಗ್ಗೆ ಇಂದು ಆಡಳಿತ ಚುಕ್ಕಾಣಿ ಹಿಡಿದಿರುವ ನೀವುಗಳು ಮಾಹಿತಿ ತರಿಸಿಕೊಂಡು ನೋಡಿ. ಶಾಖಾಧಿಕಾರಿಯ ಟೇಬಲ್ ಮುಂದೆ ಕಂಪ್ಯೂಟರ್ ವ್ಯವಸ್ಥೆಯನ್ನು ಹೊಂದಿರುವ ಇಲಾಖೆ ಯಾವುದೆಂದರೆ ಈ ಕಂದಾಯ ಇಲಾಖೆಯೇ ಪ್ರಥಮವಾಗಿದೆ. ಅದೇ ರೀತಿ ಅಧೀನ ಕಾರ್ಯದರ್ಶಿಗಳಿಗೂ ಇದರ ವ್ಯಾಪ್ತಿ ಇತ್ತು. ನನ್ನ ಮಂತ್ರಿ ಕಛೇರಿಯಿಂದ ಕಂಪ್ಯೂಟರ್ ಮೂಲಕ 'ಈಮೇಲ್' ಕಳುಹಿಸುತ್ತಿದ್ದೆವು. ನಾವು ನೋಟ್ಸ್ ಆಗಲೀ ಅಥವಾ ಮಿನಿಟ್ಸ್ ಆಗಲೀ ತುರ್ತಾದ ವಿಷಯಕ್ಕೆ ಕಳುಹಿಸುತ್ತಿರಲಿಲ್ಲ. ಸೆಕ್ರೆಟರಿಗಳಿಗೆ ಇಂಥ ಫೈಲ್ಸ್‌ನ್ನು ಪುಟ್-ಅಪ್ ಮಾಡಬೇಕೆಂದು 'ಈಮೇಲ್' ಕಳುಹಿಸಿ ವಿಷಯ ತಿಳಿಸಲಾಗುತ್ತಿತ್ತು. ಎಲ್.ಎ.ಮತ್ತು ಎಲ್.ಸಿ ಪ್ರಶ್ನೆಗಳ ಬಗ್ಗೆ ಅಪ್ರೂವಲ್‌ನ್ನು ಪ್ರಥಮವಾಗಿ ಮಾಡಿರುವುದು ನಮ್ಮ ಕರ್ನಾಟಕ ರಾಜ್ಯದಲ್ಲಿ ಕಂದಾಯ ಇಲಾಖೆಯೇ ಆಗಿದೆ. ತಾವು ಬೇಕಾದರೆ ಈ ಬಗ್ಗೆ ದಾಖಲಾತಿಯನ್ನು ತರಿಸಿ ನೋಡಿ. ನಾನು ಈ ಬಗ್ಗೆ ಒಂದು ಪತ್ರವನ್ನು ಕೂಡ ಅಂದಿನ ಸಭಾಧ್ಯಕ್ಷರಿಗೆ ಬರೆದು ನೀವೂ ಕೂಡ ಇಲಾಖೆಯಲ್ಲಿ ಕಂಪ್ಯೂಟರ್‌ನ್ನು ಅಳವಡಿಸಿದರೆ ನಮ್ಮಲ್ಲಿಗೆ ಲಿಂಕ್ ಮಾಡಿಕೊಂಡು ಪ್ರಶ್ನಾವಳಿಗಳಿಗೆ ಉತ್ತರವನ್ನು ಕಂಪ್ಯೂಟರ್‌ನಲ್ಲಿಯೇ ಕಳುಹಿಸುತ್ತೇವೆ ಎಂದು ಪತ್ರ ಬರೆದಿದ್ದೆ. ಅದನ್ನು ತಾವು ಈಗ ಮಾಡಿ. ಅದೇ ರೀತಿ ಸರ್ಕ್ಯುಲರ್‌ಗಳನ್ನು ಕೂಡ ಹಿಂದಿನ ಸರ್ಕಾರಗಳು ಹೊರಡಿಸಿರುತ್ತವೆ. ಇಲ್ಲಿಂದಲೇ ಹೊರಡಿಸಿದ ಸರ್ಕ್ಯುಲರ್‌ಗಳು ಕೆಲವೊಂದು ಬಾರಿ ಇಲ್ಲಿಯ ಸೆಕ್ರೆಟರಿಯೆಟ್‌ನಲ್ಲಿಯೇ ಸಿಗುವುದಿಲ್ಲ. ಇದನ್ನು ಬೆಳಗಾಂನಿಂದಲೋ ಅಥವಾ ಇನ್ನೆಲ್ಲಿಂದಲೋ ಆ ಸರ್ಕ್ಯುಲರ್‌ನ್ನು ಕಳುಹಿಸಿಕೊಡಿ ಎಂದು ತಿಳಿಸಿ ಅದನ್ನು ತರಿಸಿಕೊಳ್ಳುತ್ತಾರೆ. ಇಂಥ ಒಂದು ಪರಿಸ್ಥಿತಿ ಆಡಳಿತದಲ್ಲಿದೆ. ಆ ಎಲ್ಲಾ ಸರ್ಕ್ಯುಲರ್‌ಗಳನ್ನು ಕಂಪ್ಯೂಟರೀಕರಣದಿಂದ ಫ್ಲಾಪಿಯಲ್ಲಿ ಇರಿಸಿದ್ದೇವೆ. ಸುಮಾರು 12 ಸಾವಿರ ಫೈಲ್ಸ್‌ಗಳ ದಾಖಲೆಯನ್ನು ಕಂಪ್ಯೂಟರ್‌ನಲ್ಲಿ ಇರಿಸಲಾಗಿದೆ. ಇದರಲ್ಲಿ ವಿಚಾರಗಳಲ್ಲದೇ ಯಾವ ಫೈಲ್‌ಗಳು ಅಧೀನ ಕಾರ್ಯದರ್ಶಿಯಿಂದ ಉಪ ಕಾರ್ಯದರ್ಶಿಗೆ ಯಾವ ದಿನಾಂಕದಂದು ಪುಟ್-ಅಪ್ ಆಯಿತು? ಎಷ್ಟು ದಿನ ಆ ಫೈಲ್‌ಗಳು ಅವರ ಬಳಿಯೇ ಪೆಂಡಿಂಗ್‌ನಲ್ಲಿದೆ? ಈ ವಿಚಾರವನ್ನು ಇಲ್ಲಿಂದಲೇ ಕುಳಿತು ಪೆಂಡಿಂಗ್‌ನಲ್ಲಿರುವ ಫೈಲ್ ಬಗ್ಗೆ ನೋಟ್‌ನ್ನು 'ಈಮೇಲ್' ಮುಖಾಂತರ ಕಳುಹಿಸುತ್ತಿದ್ದೆವು. ಆ ನೋಟ್‌ನಲ್ಲಿ ಫೈಲ್ ಕ್ಲಿಯರ್ ಆಗಲು ವಿಳಂಬವಾಗಿರುವುದಕ್ಕೆ ಕಾರಣವನ್ನು ಕೇಳುತ್ತಿದ್ದೆವು. ತಕ್ಷಣ ಅದನ್ನು ಕಳುಹಿಸಿ ಎಂದು ತಿಳಿಸುತ್ತಿದ್ದೆವು. ಇದೇ ರೀತಿಯ ವ್ಯವಸ್ಥೆಯನ್ನು ತಾವು ಎಲ್ಲಾ ಇಲಾಖೆಗಳಲ್ಲಿ ಮಾಡಿ. ಇವೊತ್ತಿನ ಕಾರ್ಯದರ್ಶಿಗಳಲ್ಲಿ ಹಲವಾರು ಜನರಿಗೆ ಕಂಪ್ಯೂಟರ್ ಜ್ಞಾನವನ್ನು ಪಡೆದಿರುವ ಅನುಭವವಿದೆ. ಆದುದರಿಂದ ತಾವು ಪ್ರತಿಯೊಂದು ಇಲಾಖೆಗಳಲ್ಲೂ ಕಂಪ್ಯೂಟರ್‌ನ್ನು ಅಳವಡಿಸಿ. ಆಡಳಿತದಲ್ಲಿ ಇದು ಅನುಕೂಲಕರವಾಗುತ್ತದೆ. ಆದುದರಿಂದ ಇದಕ್ಕೆ ಕಾಲಮಿತಿಯನ್ನು ನಾವು ಇದಕ್ಕೆ ಹಾಕಬೇಕು.

ಇವೊತ್ತು ಪ್ರತಿಯೊಂದು ಇಲಾಖೆಗಳಲ್ಲೂ ಎಷ್ಟು ವಿಳಂಬವಾಗುತ್ತಿದೆಯೆಂದರೆ ನಾವಿಂದು ಏನು ಬೇಕಾದರೂ ಸಂಪಾದನೆ ಮಾಡಬಹುದು, ಕಳೆದುಹೋದ ಸಮಯವನ್ನು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಇಂದು 28ನೇ ತಾರೀಖು, ಇದನ್ನು ನಾವು ಮತ್ತೆ ನಾಳೆ ಪಡೆಯುವುದಕ್ಕೆ ಆಗುವುದಿಲ್ಲ. ಆದರೆ ಇರತಕ್ಕಂಥ ಸಮಯವನ್ನು ನಾವು ಸದುಪಯೋಗಪಡಿಸಿಕೊಳ್ಳಬೇಕು. ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ವಿಧಾನಸಭೆಯಲ್ಲಿ ನೂತನ ಸದಸ್ಯರ ಪ್ರಮಾಣ ವಚನ ಎರಡು ದಿನಗಳವರೆಗೆ ನಡೆಯಿತು. ಆದರೆ ಕ್ಯಾಬಿನೆಟ್ ಸಚಿವರಿಗೆ ಹಾಗೂ ರಾಜ್ಯ ಸಚಿವರಿಗೆ ಪ್ರಮಾಣ ವಚನವನ್ನು ರಾಜ್ಯಪಾಲರು ನಡೆಸಿ ಎಲ್ಲರನ್ನೂ ಸಾಲಾಗಿ ನಿಲ್ಲಿಸಿ ಪ್ರಮಾಣವಚನವನ್ನು ಮಾಡಿಸುತ್ತಾರೆ. ಅದೇ ರೀತಿಯಲ್ಲಿ ವಿಧಾನಸಭೆಯ ನೂತನ ಎಲ್ಲಾ ಸದಸ್ಯರಿಗೂ ತಾವು ಒಂದೇ ಬಾರಿ ನಿಲ್ಲಿಸಿ ಪ್ರಮಾಣ ವಚನವನ್ನು ನೀವು ಮಾಡಿಸಿಬಿಡಬಹುದು. ಕೇವಲ ಐದು ನಿಮಿಷದಲ್ಲಿ ಈ ಕೆಲಸವನ್ನು ಮಾಡಿ ಮುಗಿಸಿ ಉಳಿದ ಸಮಯವನ್ನು ಬೇರೆ ವಿಷಯಗಳ ಚರ್ಚೆಗೆ ಉಪಯೋಗಿಸಿಕೊಳ್ಳಬಹುದು. ಇದೇನೂ ಸಂವಿಧಾನ ಬಾಹಿರವಲ್ಲ. ಇದನ್ನು ಮುಂದಿನ ದಿನಗಳಲ್ಲಾದರೂ ಮಾಡಬೇಕೆಂದು ನಾನು ಸಲಹೆ ಕೊಡಬಯಸುತ್ತೇನೆ. ಇನ್ನು ಆಡಳಿತದಲ್ಲಿ ಅಧಿಕಾರಿಗಳಿಗೆ ವಹಿಸಿದ ಕಾರ್ಯದ ಜವಾಬ್ದಾರಿಯನ್ನು ಇಷ್ಟು ದಿನಗಳಲ್ಲಿ ಮುಗಿಸಬೇಕು ಎಂದು ಸೂಚನೆ ಕೊಡಬೇಕು. ಇನ್ನು ಆಡಳಿತದಲ್ಲಿ ದಕ್ಷತೆ ಹೆಚ್ಚು ಮಾಡುವ ಬಗ್ಗೆ ಮಾತನಾಡಬೇಕೆಂದರೆ ಇಂದು ಅನೇಕ ವಿಚಾರಗಳಲ್ಲಿ ಪ್ರಾದೇಶಿಕ ಅಸಮಾನತೆ ಕಾಣುತ್ತಿದೆ. ಪ್ರಾದೇಶಿಕ ಅಸಮಾನತೆಯನ್ನು ತೆಗೆದುಹಾಕಬೇಕಾದರೆ ಆಡಳಿತದಲ್ಲಿ ಚುರುಕಾದ ಅಧಿಕಾರಿಗಳನ್ನು ಹಾಕಬೇಕಾಗುತ್ತದೆ. ಈ ಭಾಗಕ್ಕೆ ಸಂಬಂಧಿಸಿದವರಾದ ಕೆಲವು ಸಮರ್ಥ ಅಧಿಕಾರಿಗಳಿದ್ದಾರೆ. ಇವರುಗಳು ಈ ಭಾಗದಲ್ಲಿಯೇ ಹುಟ್ಟಿದವರಾಗಿದ್ದು ಇಲ್ಲಿಯೇ ಕೆಲಸ ಮಾಡುತ್ತಿರುವ ಸಮರ್ಥ ಅಧಿಕಾರಿಗಳಿದ್ದಾರೆ. ಈ ಭಾಗದವರನ್ನು ಅಲ್ಲಿಗೆ ಹಾಕಿ. ಗುಲ್ಬರ್ಗಾ ಹಾಗೂ ಬೆಳಗಾಂನನ್ನು ಈ ಕಡೆಗೆ ಹಾಕಿ. ಆಗ ಎಲ್ಲಾ ಕಡೆ ಸಮಾನತೆ ಬರುತ್ತದೆ. ಸಾಮಾಜಿಕ ಸಮಾನತೆ, ಆಡಳಿತದಲ್ಲಿ ಸಮಾನತೆ ಹಾಗೂ ದಕ್ಷತೆ ಎರಡೂ ಕೂಡ ಬರುತ್ತದೆ. ಅದನ್ನು ತಾವು ಮೊದಲು ಮಾಡಿ. ಆಗ ಹತ್ತಿರದಲ್ಲಿಯೇ ರಾಜಕೀಯ ಮಾಡುವುದು ತಪ್ಪುತ್ತದೆ. ಆ ರೀತಿಯಲ್ಲಿ ನೀವು ಅಧಿಕಾರಿಗಳ ಪೋಸ್ಟಿಂಗ್ ಮಾಡಿದರೆ ಆಡಳಿತದಲ್ಲಿ ಸಮಾನತೆ ಬರುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಕೆಲವು ಸುಧಾರಣೆಗಳನ್ನು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಈ ಡ್ರಾಪ್‌ಔಟ್ ರೇಟ್‌ನ್ನು ಕಡಿಮೆ ಮಾಡಬೇಕಾದರೆ, ಬಡ ಜನರ ಮಕ್ಕಳು ಶಾಲೆಗೆ ಹೋಗುತ್ತಿರುವವರು ಅದನ್ನು ಬಿಡದೇ ಮುಂದುವರಿಸಿಕೊಂಡು ಹೋಗಬೇಕಾದರೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ, ಮುಂದೆ ಒಳ್ಳೆಯ ಪ್ರಜೆಗಳನ್ನು ನಿರ್ಮಾಣ ಮಾಡುವ ಸಲುವಾಗಿ ಮೌಲ್ಯಾಧಾರಿತ ಪಠ್ಯಕ್ರಮಗಳನ್ನು ಅಳವಡಿಸುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂದು ನಾನು ತಿಳಿದಿದ್ದೆ. ಆದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅವ್ಯಾವುದನ್ನೂ ಹೇಳಿಯೇ ಇಲ್ಲ. ಪ್ರಾಥಮಿಕ ಶಿಕ್ಷಣ ಹಳ್ಳಿಗಳಲ್ಲಿ ಸಾರ್ವತ್ರೀಕರಣವಾಗಬೇಕಾದರೆ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ಶಾಲೆಗಳ ಗುಣಮಟ್ಟ ಹಾಗೂ ಶಿಕ್ಷಕರ ಗುಣಮಟ್ಟವನ್ನು ನಾವು ಹೆಚ್ಚಿಸಬೇಕಾಗುತ್ತದೆ. ಶಿಕ್ಷಕರ ಗುಣಮಟ್ಟ ಹೆಚ್ಚಿಲ್ಲದಿದ್ದರೆ ಅವರು ಎಂಥ ವಿದ್ಯಾರ್ಥಿಗಳನ್ನು

ತಯಾರು ಮಾಡುತ್ತಾರೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಆದುದರಿಂದ ಮೊದಲು ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ Quality of the nation depends on the quality of people, ಅದೇ ರೀತಿ Quality of people depends on the quality of teacher. ಆ ರೀತಿಯ ಕ್ವಾಲಿಟಿ ಆಫ್ ಟೀಚರ್ಸ್ ಬರಬೇಕಾದರೆ, ನಾವು ಕ್ವಾಲಿಟಿ ಆಫ್ ಎಜುಕೇಶನ್ ಕೊಡಬೇಕಾಗುತ್ತದೆ. ಆದುದರಿಂದ ಇಂದು ಟೀಚರ್ಸ್‌ಗೆ ಒಳ್ಳೆಯ ತರಬೇತಿಯನ್ನು ಕೊಡಬೇಕಾಗಿದೆ. ದೇಶದ ಒಳ್ಳೆಯ ಪ್ರಜೆಯಾಗಿ, ಸಮಯ ಪ್ರಜ್ಞೆ, ರಾಷ್ಟ್ರಪ್ರೇಮ, ಪ್ರಾಮಾಣಿಕತೆ, ಕ್ರಿಯಾಶೀಲತೆಯುಳ್ಳವರಾಗುವುದಕ್ಕೆ ಪೂರಕವಾಗಿರುವಂತೆ ಮೌಲ್ಯಾಧಾರಿತವಾದ ಒಳ್ಳೆಯ ಪಠ್ಯಕ್ರಮಗಳನ್ನು ಬದಲಾವಣೆ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಇಂಥ ಕಾರ್ಯಕ್ರಮಗಳಿಲ್ಲದಿದ್ದರೆ ಯಾವುದೇ ದೇಶ ಉದ್ಧಾರವಾಗುವುದಿಲ್ಲ. ನೀವು ಪಿ.ಹೆಚ್.ಡಿ.ಗಳನ್ನು ಸೃಷ್ಟಿ ಮಾಡಬಹುದು. ಐ.ಎ.ಎಸ್. ಅಧಿಕಾರಿಗಳನ್ನು ನಾವು ಸೃಷ್ಟಿ ಮಾಡಿದ್ದೇವೆ. ಆದರೆ ಆ ಸ್ಥಾನಕ್ಕೆ ಒಳ್ಳೆಯ ಗುಣಮಟ್ಟದ ವ್ಯಕ್ತಿಗಳು ಬರದಿದ್ದರೆ ಆ ಸ್ಥಾನವೇ ನಿಷ್ಪ್ರಯೋಜನಕವಾಗುತ್ತದೆ. ಅದು ಪ್ರಯೋಜನಕಾರಿಯಾಗಬೇಕಾದರೆ ಪ್ರಾಥಮಿಕ ಹಂತದಿಂದಲೇ ಒಳ್ಳೆಯ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕಾಗುತ್ತದೆ. ಇಂಥ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುವ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾಹಿತಿ ಇರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅಂಥ ಕಾರ್ಯಕ್ರಮವೇ ಇದರಲ್ಲಿ ಇಲ್ಲವಾಗಿದೆ. ಅದನ್ನು ನೀವು ಇನ್ನು ಮುಂದಾದರೂ ಮಾಡಬೇಕು. ಇನ್ನು ನ್ಯಾಯಾಂಗದಲ್ಲಿ ತೀರ್ಮಾನವಾಗಬೇಕಾದ ಕೇಸ್‌ಗಳ ಬಗ್ಗೆ ನಮ್ಮ ಸಂಸದೀಯ ಸಚಿವರಾದ ಮಾನ್ಯ ಡಿ.ಬಿ. ಚಂದ್ರೇಗೌಡರು ಒಂದು ಸ್ಟೇಟ್‌ಮೆಂಟ್‌ನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಇವೊತ್ತು ಆಡಳಿತದಲ್ಲಿ ದಕ್ಷತೆ ಇಲ್ಲವೆಂದರೆ, ಇದಕ್ಕೆ ಕಾರಣ ನ್ಯಾಯಾಲಯಗಳಲ್ಲಿ ಯಾವ ಯಾವ ಪ್ರಕರಣಗಳು ಇತ್ಯಾರ್ಥವಾಗದೇ ಇರುವುದಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ಅದಕ್ಕೆ ಸಂಬಂಧಪಟ್ಟ ಫೈಲ್‌ಗಳನ್ನು ಎಲ್ಲೆಲ್ಲಿ ಇರಬೇಕೋ ಅವುಗಳನ್ನು ಅಲ್ಲಿಯೇ ಇರಿಸಿರುವುದಕ್ಕೆ ಆಡಳಿತದಲ್ಲಿ ಇಂದು ದಕ್ಷತೆ ಕಾಣುತ್ತಿಲ್ಲವಾಗಿದೆ. ಆದುದರಿಂದ ನೀವು ನ್ಯಾಯಾಲಯಗಳನ್ನು ಚುರುಕುಗೊಳಿಸುವ ಮತ್ತು ಆ ಮೂಲಕ ಸುಧಾರಣೆ ತರುವ ನಿಟ್ಟಿನಲ್ಲಿ ಅತಿ ಶೀಘ್ರವಾಗಿ ಫೈಲ್‌ಗಳು ವಿಲೇವಾರಿಯಾಗುವುದಕ್ಕೆ ನೀವು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಡಿಸ್‌ಪೋಸಲ್ ಆಫ್ ಕೇಸಸ್‌ನ್ನು ಯಾವ ರೀತಿ ಮಾಡಬೇಕು ಎಂಬುದಕ್ಕೆ ಕೆಲವು ತಿದ್ದುಪಡಿಗಳನ್ನು ತಂದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಒಂದು ದಿನದಲ್ಲಿ ತೀರ್ಮಾನವಾಗತಕ್ಕ ಸಣ್ಣ ಪ್ರಕರಣ ಹತ್ತು ವರ್ಷಗಳವರೆಗೆ ಮುಂದಕ್ಕೆ ಹೋಗಿರುವ ನಿದರ್ಶನಗಳು ಇದೆ. ಅದರ ಬಗ್ಗೆ ನಿರ್ಧಿಷ್ಟವಾದಂಥ ಸ್ಕೀಮನ್ನೇ ನೀವು ತಯಾರು ಮಾಡಬೇಕಾಗುತ್ತದೆ. ನ್ಯಾಯಾಂಗದಲ್ಲಿ ಎಷ್ಟು ಪ್ರಕರಣಗಳು ಈಗಾಗಲೇ ಪೆಂಡಿಂಗ್ ಇದೆ, ಯಾವ್ಯಾವ ಇಲಾಖೆಯಲ್ಲಿ ಎಷ್ಟು ವರ್ಷಗಳಿಂದ ಇದೆ, ಅಧಿಕಾರಿಗಳು ಪ್ಯಾರಾವೈಸ್ ರಿಮಾರ್ಕನ್ನು ಕೊಟ್ಟಿದ್ದಾರೆಯೇ ಇಲ್ಲವೆ, ಅವೆಲ್ಲವನ್ನು ಕಂಪ್ಯೂಟರೀಕರಣ ಮಾಡಬಹುದು; ಇಲ್ಲೇ ಕುಳಿತುಕೊಂಡು ಎಷ್ಟು ಕೇಸುಗಳಿಗೆ ಯಾರ್‍ಯಾರು ಅಪಿಯರ್ ಆಗಿದ್ದಾರೆ, ಎಷ್ಟು ಕೇಸುಗಳಿಗೆ ಕ್ಲಿಯರಿಂಗ್ ಆಗಿದೆ ಎಂಬ ಬಗ್ಗೆ ನಾವು ರಿವ್ಯೂ ಮಾಡಬಹುದು. ಆದರೆ ಇದರ ಬಗ್ಗೆ ನಮ್ಮ ಆಡಳಿತದವರ್‍ಯಾರು ಚಿಂತನೆ ಮಾಡುತ್ತಿಲ್ಲ. ತಾವು ಅದರ ಬಗ್ಗೆ ಕ್ರಮ ತೆಗೆದು ಕೊಳ್ಳಬಹುದು.

ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ನಾವು ಕೆಲವು ಸುಧಾರಣೆಗಳನ್ನು ಹಿಂದೆ ತಂದಿದ್ದೇವೆ. ನಾನು ಹೆಮ್ಮೆಯಿಂದ ಹೇಳಿಕೊಳ್ಳತಕ್ಕದಲ್ಲ, ಒಂದೂಕಾಲು ವರ್ಷದಲ್ಲಿ ನಾವು ತಂದಿರತಕ್ಕ ಸುಧಾರಣೆಗಳು ಬಹುಶಃ ಇಂಡಿಯಾ ದೇಶದ ಬೇರೆ ರಾಜ್ಯಗಳು ಬಾಯಿಯ ಮೇಲೆ ಕೈ ಇಟ್ಟು ಕೊಳ್ಳುವ ರೀತಿಯಲ್ಲಿ ಕೆಲವು ಸುಧಾರಣೆಗಳನ್ನು ತಂದಿದ್ದೇವೆ. ಅದನ್ನು ಮುಂದುವರೆಸಿಕೊಂಡು ಹೋಗಬೇಕು ಎಂಬುದು ನಮ್ಮ ಕಳಕಳಿಯ ಮನವಿ. ಏನೇನು ಸುಧಾರಣೆ ತಂದಿದ್ದೇವೆಂದರೆ, ಸ್ಟ್ಯಾಂಪ್ ಪೇಪರ್‌ನ್ನು ನಾವು ತೆಗೆದು ಹಾಕಿದ್ದೇವೆ, ಯಾವುದೇ ಬಿಳಿ ಹಾಳೆಯ ಮೇಲೂ ನಾವು ನೋಂದಾವಣಿ ಮಾಡಿಸುತ್ತೇವೆ, ಸ್ಟ್ಯಾಂಪ್ ವೆಂಡರ್‌ಗಳಿಗೆ ನಾವೇನು 18-20 ಕೋಟಿ ಕಮೀಷನ್ ಕೊಡಬೇಕಾಗಿತ್ತು ಅದನ್ನು ತೆಗೆದು ಹಾಕಿದ್ದೇವೆ. ಸರ್ಕಾರಕ್ಕೆ ಬರಬೇಕಾಗಿರತಕ್ಕ ಸ್ಟ್ಯಾಂಪ್ ಡ್ಯೂಟಿ ಬಂದರೆ ಸಾಕು, ಕೆಲವರು ಹಳೆ ಸ್ಟ್ಯಾಂಪ್ ಪೇಪರ್‌ಗಳ ಮೂಲಕ ಮಾಡುತ್ತಿದ್ದರು, ಫೇಕ್ ಸ್ಟ್ಯಾಂಪ್ ಪೇಪರ್‌ಗಳ ಮೂಲಕ ಮಾಡುತ್ತಿದ್ದರು, ಬೇರೆ ಬೇರೆ ರೀತಿ ಅವ್ಯವಹಾರಗಳು ಆಗುತ್ತಿತ್ತು, ಅದರ ಬಗ್ಗೆ ಸಿ.ಓ.ಡಿ. ವಿಚಾರಣೆ ನಡೆಯುತ್ತಿದೆ, ಅವೆಲ್ಲದರ ಬಗ್ಗೆ ನಾವು ತಿದ್ದುಪಡಿಯ ಮೂಲಕ ತಂದಿದ್ದೇವೆ, ಅದು ಇನ್ನು ಮುದ್ರಣವಾಗುವುದಕ್ಕೆ ಬಾಕಿ ಇದೆ, ಅದನ್ನು ಮಾಡಿಸಿ. ಸಬ್‌ರಿಜಿಸ್ಟ್ರಾರ್‌ರವರ ಹತ್ತಿರ ಡಿ.ಡಿ. ಯನ್ನು ತೆಗೆದುಕೊಂಡು ಹೋಗುವ ಕಾರ್ಯಕ್ರಮ ಈಗ ಜಾರಿಗೆ ಬಂದಿದೆ. ಎಲ್ಲವನ್ನು ಆಧುನೀಕರಣದ ರೀತ್ಯಾ ಮಾಡಬೇಕಾದರೆ ಇವತ್ತು ಎಲ್ಲಾ ಸಬ್‌ರಿಜಿಸ್ಟ್ರಾರ್ ಕಛೇರಿಗಳಿಗೆ ನಾವು ಕಂಪ್ಯೂಟರ್‌ಗಳನ್ನು ಕೊಟ್ಟಿದ್ದೇವೆ, ಸ್ಕ್ಯಾನಿಂಗ್ ಯಂತ್ರಗಳನ್ನು ಕೊಟ್ಟಿದ್ದೇವೆ. ಇವತ್ತು 'ಆನ್‌ಲೈನ್' ರಿಜಿಸ್ಟ್ರೇಷನ್‌ಗೆ ನಾವು ಪ್ರಸ್ತಾವನೆಯನ್ನು ತಂದಿದ್ದೇವೆ. ಸಬ್‌ರಿಜಿಸ್ಟ್ರಾರ್ ಕಛೇರಿಗಳು ಇಲ್ಲದೆಯೇ ನೋಂದಾವಣೆಯಾಗತಕ್ಕ ಚಿಂತನೆ ನಡೆದಿದೆ. ಅದನ್ನು ತಾವು ಜಾರಿಗೆ ತನ್ನಿ. ಯಾರೂ ಯಾವುದೇ ಕೆಲಸಕ್ಕಾಗಿ ಸಬ್‌ರಿಜಿಸ್ಟ್ರಾರ್ ಕಛೇರಿಗಳಿಗೆ ಹೋಗಬೇಕಾಗಿಲ್ಲ. ಇವತ್ತು ಕೆಲವು ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ನರಕಯಾತ್ರೆಯಾಗಿದೆ; ಅಲ್ಲಿಯ ಆಡಳಿತದಲ್ಲಿ ಭ್ರಷ್ಟಾಚಾರ, ಕಾರ್ಯವಿಳಂಬ ಬಹಳ ಆಗುತ್ತಿದೆ. ನಾವು ಸುಧಾರಣೆಯ ಮೂಲಕ ಅದನ್ನು ತಡೆಯಲು ಪ್ರಯತ್ನ ಮಾಡಿದ್ದೇವೆ. ಅಮೇರಿಕಾದಲ್ಲಿ ಒಂದು ಪದ್ಧತಿ ಇತ್ತು, ಅದರ ಬಗ್ಗೆ ಚಿಂತನೆ ಮಾಡಿದ್ದೇವೆ. ಆದರೆ ನನಗೆ ಸಿಕ್ಕಿದಂಥ ಅವಕಾಶ ಕೇವಲ ಒಂದೂಕಾಲು ವರ್ಷ. ಆ ಪದ್ಧತಿಯನ್ನು ಜಾರಿಗೆ ತರಲು ಆಗಲಿಲ್ಲ. ಆ ಪದ್ಧತಿಯನ್ನು ತಾವು ಜಾರಿಗೆ ತನ್ನಿ. ಅದು ಏನು ಎಂದರೆ, ಓಡ್ ಆ್ಯಕ್ಟ್‌ನಲ್ಲಿ ಯಾರ್‍ಯಾರಿಗೆ ಓಢನ್ನು ಕೊಡತಕ್ಕ ಅಧಿಕಾರ ಇದೆಯೋ ಅವರೆಲ್ಲರೂ ಅಲ್ಲಿಯೇ ರಿಜಿಸ್ಟರ್ ಮಾಡಬಹುದು ಎಂದು ಅಮೇರಿಕಾದಲ್ಲಿ ಕಾನೂನು ಇದೆ. ಇಲ್ಲಿ ಅದನ್ನೇಕೆ ಜಾರಿಗೆ ತರಬಾರದು ಎಂಬ ಬಗ್ಗೆ ಕೂಡ ಒಂದು ಪ್ರಸ್ತಾವನೆ ತಯಾರಾಗಿದೆ. ಅವರು ನೋಟರಿ ಇರಬಹುದು, ಬ್ಯಾಂಕ್ ಮೆನೇಜರ್‌ಗಳು ಇರಬಹುದು, ಬಿ.ಡಿ.ಎ.ನಲ್ಲಿ ಬಿ.ಡಿ.ಎ. ಕಮೀಷನರ್‌ಗಳು ಇರಬಹುದು, ಬಿ.ಡಿ.ಎ. ದಾಖಲೆಗಳನ್ನು ಮಾಡಲು ಅವರಿಗೇ ಅಧಿಕಾರವನ್ನು ಕೊಡಬಹುದು, ಕಾರ್ಪೊರೇಷನ್‌ಗಳಲ್ಲಿ ಅಲ್ಲಿನ ದಾಖಲೆಗಳನ್ನು ಮಾಡಲು ಅಲ್ಲಿನ ಕಮೀಷನರ್‌ಗೇ ಅಧಿಕಾರವನ್ನು ಕೊಡಬಹುದು, ಕಾನೂನಿನಲ್ಲಿ ಇದನ್ನು ತರಬಹುದು. ಇದಕ್ಕೆಲ್ಲಾ ಸಬ್‌ರಿಜಿಸ್ಟ್ರಾರ್ ಕಛೇರಿಗಳಿಗೆ ಏಕೆ ಹೋಗಬೇಕು? ಇದರಿಂದ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಮತ್ತು 'ಆನ್‌ಲೈನ್ ರಿಜಿಸ್ಟ್ರೇಷನ್' ಎಂದು ಎಲ್ಲಿಯದನ್ನು ಎಲ್ಲಿ ಬೇಕಾದರೂ ರಿಜಿಸ್ಟ್ರೇಷನ್ ಮಾಡಿಸಬಹುದು. ಏಕೆಂದರೆ ಎಲ್ಲಾ ಸಬ್‌ರಿಜಿಸ್ಟ್ರಾರ್ ಕಛೇರಿಗಳಿಗೆ ಕಂಪ್ಯೂಟರ್‌ಗಳನ್ನು ಕೊಟ್ಟಿದ್ದೇವೆ. ನೆಟ್‌ವರ್ಕಿಂಗ್ ಮಾಡಲು ವ್ಯವಸ್ಥೆಯನ್ನು ತಂದಿದ್ದೇವೆ. ಆ

ನೆಟ್‌ವರ್ಕಿಂಗ್‌ನಲ್ಲಿ ನಾವು ಮಾಡಿದರೆ ಬೆಳಗಾವಿಯಲ್ಲಿ ಇರತಕ್ಕ ಪ್ರಾಪರ್ಟಿಯ ಎನ್‌ಕಂಬರೆನ್ಸ್‌ನ್ನು ಇಲ್ಲಿ ನಾವು ನೋಡಬಹುದು. ಎನ್‌ಕಂಬರೆನ್ಸ್ ಪತ್ರವನ್ನು ತೆಗೆದುಕೊಂಡು ಹೋಗಲು ತಾಲ್ಲೂಕು ಕಛೇರಿಗಳಿಗೆ ಅಲೆಯಬೇಕಾಗಿಲ್ಲ. ಅದನ್ನು ನೀವು ಮಾಡಬೇಕಾಗುತ್ತದೆ. ಇಂಡಿಯನ್ ರಿಜಿಸ್ಟ್ರೇಷನ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ಈ ಸಲ ತರಲು ನೀವು ಪ್ರಯತ್ನ ಮಾಡಿ. ಅದರ ಬಗ್ಗೆ ಎಲ್ಲಾ ತಯಾರಾಗಿದೆ, ಅದನ್ನು ತಂದು ಜನರಿಗೆ ಸುಲಲಿತವಾಗಿ ಆಸ್ತಿಗಳ ನೋಂದಾವಣೆ ಆಗತಕ್ಕ ವ್ಯವಸ್ಥೆಯನ್ನು ತಾವು ತ್ವರಿತವಾಗಿ ತರಬೇಕು. ಇವೆಲ್ಲವನ್ನು ಮಾಡಬೇಕಾದರೆ, ಆರ್.ಟಿ.ಸಿ. ಯನ್ನು ಕಂಪ್ಯೂಟರೀಕರಣಗೊಳಿಸಲು ತೀವ್ರಗತಿಯಲ್ಲಿ ಈಗಾಗಲೇ ನಾವು ಕಾರ್ಯಗತ ಮಾಡಿದ್ದೇವೆ. ಡೇಟಾ ಎಂಟ್ರಿ ಬಗ್ಗೆ ಕಾರ್ಯಕ್ರಮಗಳು ಆಗಿದೆ. 465 ಲಕ್ಷ ರೂಪಾಯಿಗಳ ಹಣ ಇದಕ್ಕೆ ಬಿಡುಗಡೆ ಮಾಡಬೇಕಾಗಿದೆ; ದೆಹಲಿಯಿಂದ ಆ ಹಣ ಬಂದು ಸುಮಾರು ಒಂದು ತಿಂಗಳು ಆಗಿದೆ, ಆದರೆ ಆ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ನೂರು ಪರ್‌ಸೆಂಟ್ ಹಣ ಭಾರತ ಸರ್ಕಾರದ್ದು. ಆ ಹಣ ಇಲ್ಲಿಗೆ ಬರುತ್ತದೆ, ಆದರೆ ಇವರು ಅದನ್ನು ಬೇರೆಯದಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಆರ್ಥಿಕ ಇಲಾಖೆ ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿದೆ. ತಾವು ಕಂಪ್ಯೂಟರಿಂಗ್‌ಗೆ ಒತ್ತು ಕೊಟ್ಟಿರುವುದರಿಂದ ಗಣಕೀರಣ, ನೆಟ್‌ವರ್ಕಿಂಗ್ ಎನ್ನುವುದಕ್ಕೆ ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಲು ತಾವು ಕ್ರಮ ತೆಗೆದುಕೊಳ್ಳಬೇಕು. ಇವತ್ತು ಎಷ್ಟರಮಟ್ಟಿಗೆ ನಮ್ಮ ಆಡಳಿತಶಾಹಿ ಸ್ಟಂಬ್ಲಿಂಗ್ ಬ್ಲಾಕ್ ಆಗಿದೆಯೆಂದರೆ ಇದು ತಮಗೂ, ಎಲ್ಲರಿಗೂ ಅನುಭವವಾಗಿರಬಹುದು. ಇವತ್ತು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರತಕ್ಕದನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಕೇಂದ್ರ ಸರ್ಕಾರದಿಂದ ನೂರಕ್ಕೆ ನೂರರಷ್ಟು ಹಣ ಬಂದಿದ್ದರೂ ಅದನ್ನು ಬಿಡುಗಡೆ ಮಾಡುತ್ತಿಲ್ಲ. ಅದಕ್ಕೆ ಎರಡು ಮೂರು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಕಾಲದಲ್ಲಿ ಕೃಷಿ ಪಾಸ್ ಪುಸ್ತಕವನ್ನು ತಯಾರು ಮಾಡಿ ಪ್ರಯೋಗಿಕವಾಗಿ ನಾಲ್ಕು ಜಿಲ್ಲೆಗಳಿಗೆ ಜಾರಿಗೆ ತರಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ಮಾಡಿದ್ದರೂ ಸಹ ಅದಕ್ಕೆ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಅಂದರೆ ಆ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದ್ದರೂ ತಮ್ಮ ಇಲಾಖೆಯಲ್ಲಿ ಅದರ ಬಗ್ಗೆ ರೀಅಪ್ರೋಪ್ರಿಯೇಷನ್ ಮಾಡಿಕೊಳ್ಳಿ ಎಂದು ಬರೆಯುತ್ತಾರೆ. ಕ್ಯಾಬಿನೆಟ್‌ನಲ್ಲಾದ ತೀರ್ಮಾನದ ಬಗ್ಗೆ ಒಬ್ಬ ಕಾರ್ಯದರ್ಶಿಯವರು ತಿರುಗಿ ಬರೆಯುವ ಪದ್ಧತಿ ಇದೆಯೇ? ಎಷ್ಟರ ಮಟ್ಟಿಗೆ ಈ ಅಧಿಕಾರಿ ಶಾಹಿಗಳಿದ್ದಾರೆ, ಎಂಬುದರ ಬಗ್ಗೆ ತಾವು ಸ್ವಲ್ಪ ವಿಚಾರ ಮಾಡಿ ಅಧಿಕಾರಿಶಾಹಿಗಳನ್ನು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟು ಕೊಳ್ಳಬೇಕಾಗುತ್ತದೆ. ಇನ್ನು ಈ ವಿಲೇಜ್ ಮ್ಯಾಪ್‌ಗಳನ್ನು ಕಂಪ್ಯೂಟರೈಸ್ ಮಾಡಿಸಬೇಕೆಂದು ಒಂದು ಸ್ಕೀಮ್‌ನ್ನು ನಾವು ಅಪ್ರೂವ್ ಮಾಡಿಸಿದ್ದೇವೆ. ಪ್ರಯೋಗಿಕವಾಗಿ ಎರಡು ತಾಲ್ಲೂಕುಗಳಲ್ಲಿ ಅದನ್ನು ಮಾಡಬೇಕೆಂದು ಆರ್ಡರ್ಸ್ ಮಾಡಿಸಿದ್ದೇವೆ. ಕೇಂದ್ರದಿಂದ ಹಣ ಬಂದು ಒಂದು ತಿಂಗಳು ಆಗಿದೆ; ಹದಿನೈದು ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಬಂದಿದೆ. ತಾವು ಆರ್ಥಿಕ ಇಲಾಖೆಯನ್ನು ತಮ್ಮಲ್ಲೇ ಇಟ್ಟುಕೊಂಡಿರುವುದರಿಂದ ತಾವೇನು ಹೊಸ ಚಿಂತನೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಇದ್ದೀರಿ, ಇದಕ್ಕೆ ಮೊದಲು ಆ ಹಣವನ್ನು ಕೂಡಲೇ ಬಿಡುಗಡೆ ಮಾಡಿಸಿ. ಆಗ ಒಳ್ಳೆಯ ಆಡಳಿತ ವ್ಯವಸ್ಥೆಯಾಗುತ್ತದೆ.

ಇವತ್ತು ರಾಜ್ಯದಲ್ಲಿ ಮಳೆ ಧಾರಾಕಾರವಾಗಿ ಹರಿಯುತ್ತಿದೆ, ಅತಿವೃಷ್ಟಿ ಹಾಗೂ ಅನಾವೃಷ್ಟಿ ಪೀಡಿತ ಜಿಲ್ಲೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಎಷ್ಟು ಹಣಕ್ಕೆ ಬೇಡಿಕೆ ಬಂದಿದೆ, ಎಷ್ಟು ಕಾಮಗಾರಿಗಳು ಪ್ರಾರಂಭವಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹೇಳಬೇಕಾಗುತ್ತದೆ. ನೂರಕ್ಕೆ ಐವತ್ತಕ್ಕಿಂತ ಮೇಲ್ಪಟ್ಟು ಹಣವನ್ನು ಕಾರ್ಪಸ್ ಫಂಡ್‌ನಿಂದ ಬಿಡುಗಡೆ ಮಾಡಬೇಕಾಗಿದೆ. ವರ್ಷಕ್ಕೆ 48 ಕೋಟಿ ರೂಪಾಯಿಗಳಷ್ಟು ಹಣ ಕಾರ್ಪಸ್ ಫಂಡ್‌ನಿಂದ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುತ್ತಿದೆ. ಇದುವರೆಗೆ ಅದಕ್ಕಾಗಿ ಬಿಡುಗಡೆ ಮಾಡಿರತಕ್ಕ ಹಣ ಕೇವಲ 17 ಕೋಟಿಗಳು ಮಾತ್ರ. ಅದು ಸಾಕಾಗುತ್ತಿಲ್ಲ. ಅನೇಕ ಜಿಲ್ಲೆಗಳಲ್ಲಿ ಮಳೆ ಜಾಸ್ತಿಯಾಗಿ ಅಲ್ಲಿ ಏನು ಕಾಮಗಾರಿಗಳು ತುರ್ತಾಗಿ ಆಗಬೇಕಾಗಿದೆ ಅದಕ್ಕೆ ಆ ಹಣ ಸಾಕಾಗುತ್ತಿಲ್ಲ. ಜಿಲ್ಲಾ ಮಂತ್ರಿಗಳಾಗಿಲಿ, ಇತರೆ ಸಚಿವರುಗಳಾಗಲಿ ಯಾವ ಸ್ಥಳಕ್ಕೂ ಭೇಟಿ ಕೊಟ್ಟಿಲ್ಲ. ಇದನ್ನು ಶೀಘ್ರವಾಗಿ ಗಮನಕ್ಕೆ ತೆಗೆದುಕೊಳ್ಳತಕ್ಕ ವಿಚಾರ ಹಾಗೂ ಅತಿವೃಷ್ಟಿಯ ಬಗ್ಗೆ ತೀವ್ರಗತಿಯಲ್ಲಿ ಕೆಲಸ ಮಾಡುವ ವಿಚಾರ ಇದಾಗಿದೆ. ಅದನ್ನು ಸರ್ಕಾರ ಇವತ್ತು ಮಾಡುತ್ತಿಲ್ಲ. ನಾವು ಒಂದು ವರ್ಷದಲ್ಲಿ ಸುಮಾರು ನೂರು ಕೋಟಿ ಹಣವನ್ನು ಕೇಂದ್ರದಿಂದ ಪಡೆದುಕೊಂಡಿದ್ದೇವೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ, ಒಂದು ವರ್ಷದಲ್ಲಿ ನೂರು ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದ ಸರ್ಕಾರವಿದ್ದರೆ ಅದು ನಮ್ಮ ಜನತಾದಳ ಸರ್ಕಾರ. ಈ ಬಗ್ಗೆ ಮೆಮೊರ್‍ಯಾಂಡಂನ್ನು ತಯಾರು ಮಾಡಿ, ಕೇಂದ್ರದಿಂದ ತಂಡವನ್ನು ಕರೆಸಿ ಅಲ್ಲೆಲ್ಲಾ ವೀಕ್ಷಣೆ ಮಾಡಿ ಕೇಂದ್ರದಿಂದ ಹಣವನ್ನು ಪಡೆದುಕೊಳ್ಳತಕ್ಕ ಕೆಲಸವನ್ನು ಇದುವರೆಗೆ ಯಾರೂ ಮಾಡಿಯೇ ಇಲ್ಲ. ಇವತ್ತು ಇರತಕ್ಕ ಹಣವನ್ನೇ ಬಿಡುಗಡೆ ಮಾಡಿಲ್ಲ ಇವರು. ಅದನ್ನು ಆದಷ್ಟು ಬೇಗ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜಿಲ್ಲೆಗಳಿಗೆ ಎಷ್ಟು ಹಣ ಬೇಕು ಅಷ್ಟನ್ನು ಇನ್ನು ಸಹ ಬಿಡುಗಡೆ ಮಾಡುತ್ತಿಲ್ಲ. ಆ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕು. ಈ ಆಡಳಿತದಲ್ಲಿ ಚುರುಕು ಮುಟ್ಟಿಸತಕ್ಕ ಸುಧಾರಣೆ ಬಗ್ಗೆ ಚಿಂತನೆ ಯಾವುದೂ ಇಲ್ಲವಾಗಿದೆ. ಅದನ್ನು ತಾವು ಮಾಡಿ. ಇಲ್ಲದಿದ್ದರೆ ನಾವು ಟೀಕೆ ಮಾಡಬೇಕೆಂದು ಮಾಡುವುದಿಲ್ಲ. ನಾವು ತಮಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ. ತಾವು ಎಲ್ಲಿ ತಪ್ಪು ದಾರಿಗೆ ಹೋಗುತ್ತೀರಿ ಆಗ ನಾವು ಟೀಕೆ ಮಾಡುವ ಹಕ್ಕಿದೆ, ಅದನ್ನು ನಾವು ಮಾಡುತ್ತೇವೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿಲ್ಲವೆಂದು ಹೇಳಿ ನಾನು ಹೆಚ್ಚು ಮಾತನಾಡದೆ, ಇಷ್ಟೊಂದು ವಿಚಾರಗಳನ್ನು ಹೇಳಲು ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

ಅಧ್ಯಕ್ಷರು: ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ಪಕ್ಷಗಳಿಂದ ಮಾತನಾಡುವವರು ಇನ್ನೂ 25 ಜನ ಇದ್ದಾರೆ. ನಾಳೆ ಸಂಜೆಯೊಳಗೆ ಇದನ್ನು ಮುಗಿಸಬೇಕೆಂದು ಬ್ಯುಸಿನೆಸ್ ಅಡ್ವೈಜರಿ ಕಮಿಟಿ (ಬಿ.ಎ.ಸಿ.) ಯಲ್ಲಿ ತಾತ್ಕಾಲಿಕವಾಗಿ ತೀರ್ಮಾನವಾಗಿದೆ. ಶನಿವಾರ ಮಾನ್ಯ ಸಭಾನಾಯಕರ ಉತ್ತರವೆಂದು ಸಹ ತೀರ್ಮಾನವಾಗಿದೆ. ಆದ್ದರಿಂದ ಇನ್ನು ಮುಂದೆ ಮಾತನಾಡುವವರು ಈ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದರೆ ಒಳ್ಳೆಯದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಆಡಳಿತ ಪಕ್ಷದ ಸದಸ್ಯರು ಮಾತನಾಡುವ ವಿಚಾರದಲ್ಲಿ ನಾವು ಅಧಿಕಾರದಲ್ಲಿರುವುದರಿಂದ ಸ್ವಲ್ಪ ಸಂಯಮವನ್ನು

ತೋರಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಸಂಸದೀಯ ಇಲಾಖೆಯ ಸಚಿವರು ತಮ್ಮ ಕೊಠಡಿಯಲ್ಲಿ ಹೇಳಿದ್ದಾರೆ. ನಾವು ಮಾತನಾಡತಕ್ಕ ಕೆಲವು ಸದಸ್ಯರುಗಳು, ಹಾಗೂ ಈ ಕಡೆ ಇರತಕ್ಕ ಹೊಸ ಸದಸ್ಯರುಗಳು ಮಾತನಾಡತಕ್ಕದ್ದೇ ಕಡಿಮೆ. ಏಕೆಂದರೆ ಸರ್ಕಾರ ಅಧಿಕಾರಕ್ಕೆ ಬಂದು ಇನ್ನೂ ಹದಿನೈದು ದಿವಸಗಳಾಗಿಲ್ಲ. ಆದ್ದರಿಂದ ನಾವು ಈ ದಿಕ್ಕಿನಲ್ಲಿ ಸರ್ಕಾರ ಹೋಗಬಹುದು ಎಂದು ನಮ್ಮ ಅನುಭವದಲ್ಲಿ ಹೇಳುವ ಕೆಲವು ಮಾತುಗಳಿಗೆ ಅವಕಾಶ ಸಿಗಬೇಕೇ ವಿನಃ ಸಮಯವನ್ನು ವ್ಯಯಮಾಡಬೇಕು ಎಂಬ ದೃಷ್ಟಿ ಯಾರಿಗೂ ಕೂಡ ಇಲ್ಲ. ಬೇಕಾದರೆ ನಾಳೆ ಬಿ.ಎ.ಸಿ. ಮೀಟಿಂಗ್ ಕರೆಯಿರಿ, ಅಲ್ಲಿ ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಸನ್ಮಾನ್ಯ ಅಧ್ಯಕ್ಷರೆ, ತಾವು ಇಬ್ಬರು ವಿರೋಧಪಕ್ಷದ ಮಾನ್ಯ ಸದಸ್ಯರುಗಳ ನಂತರ ಸ್ವತಂತ್ರವಾಗಿ ಗೆದ್ದವರಾದ ನಮ್ಮನ್ನು ತಾವು ಗುರುತಿಸಿದ್ದಕ್ಕೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆ ತಾನೆ ಘನವೆತ್ತ ಮಾನ್ಯ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಮುಂದಿನ ಐದು ವರ್ಷಗಳಲ್ಲಿ ಸರ್ಕಾರ ಮಾಡುವ ಕೆಲವು ಸಾಧನೆಗಳನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ತಿಳಿಸಿದ್ದಾರೆ. ಇವತ್ತು ರಾಜ್ಯದ ಅಭಿವೃದ್ಧಿಯ ಬಗ್ಗೆ, ಈ ಯಾಂತ್ರಿಕ ಯುಗದಲ್ಲಿ ಎರಡು ಸಾವಿರ ಇಸವಿಗೆ ಕಾಲಿಡುವುದಕ್ಕೆ ಇನ್ನೂ ಎರಡು ತಿಂಗಳುಗಳಿರುವ ಸಮಯದಲ್ಲಿ ಈ ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯನ್ನು ಮಾಡುವ ಜವಾಬ್ದಾರಿಯಲ್ಲಿ, ನಮ್ಮ ಕರ್ನಾಟಕ ರಾಜ್ಯ ತನ್ನದೇ ಆದ ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದು ನಮಗೆಲ್ಲರಿಗೂ ಗೊತ್ತಿದೆ. ಈ ರಾಜ್ಯದ ಮುತ್ಸದ್ಧಿ ರಾಜಕಾರಣಿಗಳಿರಬಹುದು, ಸಾಹಿತಿಗಳಿರಬಹುದು, ಈ ರಾಷ್ಟ್ರ ಹಾಗೂ ವಿಶ್ವಕ್ಕೆ ಅತ್ಯುನ್ನತ ಸ್ಥಾನಗಳಲ್ಲಿ ಅರ್ಥಪೂರ್ಣ ಚಿಂತನೆಯನ್ನು ಮಾಡುವಂತಹ ವ್ಯಕ್ತಿಗಳನ್ನು ಕೊಡುಗೆಯಾಗಿ ಕೊಟ್ಟಿರುವುದು ನಮ್ಮ ಕರ್ನಾಟಕ ರಾಜ್ಯ. ಈ ರಾಜ್ಯದ ಐದು ಕೋಟಿ ಜನತೆಯ ಆಶೀರ್ವಾದದ ಮೇರೆಗೆ ಇವತ್ತು ಒಂದು ಪಕ್ಷ ಸರ್ಕಾರವನ್ನು ನಡೆಸುತ್ತಿದ್ದರೆ ಮತ್ತೆ ಕೆಲವು ಪಕ್ಷಗಳ ಜನಪ್ರತಿನಿಧಿಗಳನ್ನು ಆರಿಸುವ ಸಂದರ್ಭದಲ್ಲಿ ಆಯಾ ಕ್ಷೇತ್ರದ ಜನ ತಮ್ಮದೇ ಆದಂಥ ಚಿಂತನೆಗಳನ್ನು ಮಾಡಿ, ಯಾರನ್ನು ಆರಿಸಿದರೆ ನಮ್ಮ ಕ್ಷೇತ್ರದ ಅಭಿವೃದ್ಧಿಯಾಗಬಹುದು, ನಮ್ಮ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ರಾಜ್ಯದ ಅಭಿವೃದ್ಧಿಯಾಗಬಹುದು, ಹೀಗೆ ರಾಜ್ಯದ ಅಭಿವೃದ್ಧಿಯಾಗುವಾಗ ಈ ರಾಷ್ಟ್ರಕ್ಕೆ ಗುರುತರವಾದ ಕಾಣಿಕೆಯನ್ನು ಹೇಗೆ ಕೊಡಬಹುದು ಎನ್ನುವ ದೃಷ್ಟಿಯಿಂದ ಜನತೆ ಇವತ್ತು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಇವತ್ತು ಈ ಹೊಸ ಸರ್ಕಾರದ ಆಡಳಿತ ಸೂತ್ರವನ್ನು ಹಿಡಿದು, ಈ ರಾಜ್ಯದ ಸಮಾಜವಾದಿ ತತ್ವಗಳ ಹಿನ್ನೆಲೆಯಲ್ಲಿ ಬಂದಿರುವ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾರೆ; ಅವರದೇ ಆದ ಸಚಿವ ಸಂಪುಟ ಈಗಾಗಲೇ ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿದೆ. ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಅನೇಕ ವಿಚಾರಗಳನ್ನು ಈ ರಾಜ್ಯದ ಜನತೆಗೆ ಬಳುವಳಿಯಾಗಿ ಕೊಡತಕ್ಕಂಥಾದ್ದರಲ್ಲಿ ಒಂದು ವಿಶೇಷವಾದ ಪರಂಪರೆಯನ್ನು ಸೃಷ್ಟಿ ಮಾಡುವ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು, ನಾವು ಈ ರಾಜ್ಯಕ್ಕೆ ಏನಾದರೂ ಅಪಾರವಾದ ಒಂದು ಕೊಡುಗೆಯನ್ನು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಮಾಡಿರುವ ಈ ಭಾಷಣಕ್ಕೆ ಕೆಲವು ಮಾರ್ಪಾಡುಗಳಿದ್ದರೂ ಕೂಡ ನಾನಾದರೂ ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಬಂದು ಬೆಂಗಳೂರಿನಂಥ ಈ ದೊಡ್ಡ ನಗರದಲ್ಲಿ, ಈ ರಾಷ್ಟ್ರದ ಐದನೆ ದೊಡ್ಡ ನಗರಕ್ಕೆ

ಬೇಕಾಗಿರುವ ಸರ್ವಾಂಗೀಣ ಅಭಿವೃದ್ಧಿಗೆ ಈ ಸರ್ಕಾರ ಉತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎನ್ನುವ ಒಂದು ಅರಿವನ್ನು ಇಟ್ಟುಕೊಂಡು ಇದನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ರಾಜ್ಯದ ಅನೇಕ ವಿಚಾರಗಳಲ್ಲಿ ಅದರಲ್ಲೂ ವಿಶೇಷವಾಗಿ ಈ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡ, ಅಲ್ಪಸಂಖ್ಯಾತರು, ತುಳಿತಕ್ಕೆ ಒಳಪಟ್ಟಿರುವವರು ಹಾಗೂ ಗುಡ್ಡಗಾಡಿನಲ್ಲಿ ವಾಸ ಮಾಡುವವರಿಗೆ, ಹೀಗೆ ಪ್ರತಿಯೊಬ್ಬರಿಗೂ ಕೂಡ ಮೂಲಭೂತವಾದ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ, ನಮ್ಮ ಅಧಿಕಾರಾವಧಿಯ ಈ ಐದು ವರ್ಷಗಳಲ್ಲಿ ನಾವು ಅವರಿಗೆ ಕನಿಷ್ಟ ಸೌಲಭ್ಯಗಳನ್ನು ದೊರಕಿಸಿ ಕೊಡುವುದರಲ್ಲಿ ಈ ಸರ್ಕಾರ ಒಂದು ಹೊಸ ಮೈಲಿಗಲ್ಲನ್ನು ಸ್ಥಾಪಿಸುತ್ತದೆನ್ನುವ ಮಾತನ್ನು ಅವರು ಹೇಳಿದ್ದಾರೆ; ಅವರು ಕೊಟ್ಟಿರುವ ಕೆಲವು ವಿಚಾರಗಳನ್ನು ನೋಡಿದಾಗ ನಾನಾದರೂ ಒಬ್ಬ ಆಶಾವಾದಿಯಾಗಿ ಈ ಸರ್ಕಾರದ ಸಾಧನೆಗಳನ್ನು ಮುಂದಿನ ದಿನಗಳಲ್ಲಿ ನೋಡುವ ಬಗ್ಗೆ ಈ ರಾಜ್ಯದ ಜನತೆಗೆ ಕೊಡುವ ಬಳುವಳಿ ಏನು ಎನ್ನುವುದರ ಬಗ್ಗೆ ಇವತ್ತು ನಿರ್ಧಿಷ್ಟವಾಗಿ ಹೇಳದಿದ್ದರೂ ಕೂಡ, ಕೆಲವು ಅಭಿವೃದ್ಧಿ ಕೆಲಸಕಾರ್ಯಗಳನ್ನು, ವಿಶೇಷವಾಗಿ ಇವತ್ತು ಆಡಳಿತ ವಿಕೇಂದ್ರಿಕರಣವಿರಬಹುದು, ಕೃಷಿಯಂಥ ಮಹತ್ವ ಪೂರ್ಣ ಕ್ಷೇತ್ರಗಳಲ್ಲಿ ಮಾರ್ಪಾಡು ಮಾಡುವುದು ಮತ್ತು ಯಾರು ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುವ ಕೊನೆಯ ಹಂತದ ಬಡವನಿಗೂ ಕೂಡ ಆರೋಗ್ಯ ಸೌಲಭ್ಯಗಳನ್ನು ಕೊಡುವುದು, ಸಾಕ್ಷರತೆಯನ್ನು ಶೇಕಡ 80 ಕ್ಕೆ ಕೊಂಡೊಯತಕ್ಕಂಥ ಕೆಲಸವನ್ನು ಮಾಡುತ್ತೇವೆಂದು ಈ ಸರ್ಕಾರ ಈಗಾಗಲೇ ತಿಳಿಸಿದೆ. ಇದು ನಿಜವಾಗಿಯೂ ಕೂಡ ಬಹಳ ತ್ಯಾಗಮಯವಾದ ವಿಚಾರ. ಆದರೆ ಈ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡುವಾಗ ಎದುರಾಗುವ ಕೆಲವು ಎರಡು ತೊಡರುಗಳನ್ನು ಹಾಗೂ ಪ್ರತಿಕೂಲ ವಾತಾವರಣವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ಯಾವರೀತಿ ನಿಭಾಯಿಸುತ್ತಾರೆಯೋ ಅದು ನಮಗೆ ಗೊತ್ತಿಲ್ಲ. ಅದನ್ನು ಮಾಡಿದ್ದಾದರೆ ಈ ಸರ್ಕಾರ ಒಂದು ಹೊಸ ಹೆಜ್ಜೆಯನ್ನು ಇಡುತ್ತದೆ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇವತ್ತು ಮನೆಗಳಿಲ್ಲದವರಿಗೆ ಮನೆಗಳನ್ನು ಕೊಡುತ್ತೇವೆ, ನಗರ ಪ್ರದೇಶಗಳಲ್ಲಿರುವ ಬಡವರನ್ನು ಗುರುತಿಸಿ ಅವರಿಗೆ ವಸತಿಗಳನ್ನು ಕೊಡುವ ಕೆಲಸವನ್ನು ಮಾಡುತ್ತೇವೆ ಎಂಬುದಾಗಿ ಅವರು ಅನೇಕ ವಿಚಾರಗಳನ್ನು ಇವತ್ತು ತಿಳಿಸಿದ್ದಾರೆ. ಈ ಎಲ್ಲಾ ವಿಚಾರಗಳಲ್ಲೂ ಕೂಡ ಇವತ್ತು ಈ ರಾಜ್ಯದ ಜನತೆಗೆ ಅವರು ಕೊಡುವ ಬಳುವಳಿ ಎಷ್ಟರಮಟ್ಟಿಗೆ ಇದೆ ಎಂದು ಅನೇಕ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ, ಇನ್ನು ಕೆಲವರು ಮಾತನಾಡುವವರಿದ್ದಾರೆ. ಆದರೆ ಈ ಬಗ್ಗೆ ನನ್ನ ಅನಿಸಿಕೆ ಇಷ್ಟೆ, ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಸುಮಾರು 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ- ಈ ನಗರ ಇಡೀ ರಾಷ್ಟ್ರದಲ್ಲಿ ಐದನೇ ದೊಡ್ಡ ನಗರವಾಗಿದೆ. ಈ ನಗರಕ್ಕೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡುವ ಬಗ್ಗೆ , ಇದನ್ನು ತಾಂತ್ರಿಕ ಯುಗಕ್ಕೆ ಕೊಂಡಯ್ಯುತಕ್ಕಂಥ ಬಗ್ಗೆ ಗುರುತರವಾದ ಹಾಗೂ ಜವಾಬ್ದಾರಿಯುತವಾದ ಪ್ರಕಟಣೆಯನ್ನು ಈ ಸರ್ಕಾರ ಮಾಡಿದೆ. ಈಗಾಗಲೇ ಮಾಡಿರುವ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅವರು ಎಷ್ಟರಮಟ್ಟಿಗೆ ಸಫಲತೆಯನ್ನು ಕಾಣುತ್ತಾರೆ, ಮುಂದಿನ ದಿನಗಳಲ್ಲಿ ಅವರು ಏನು ಮಾಡುತ್ತಾರೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಪ್ರಾಯಶಃ ಬೆಂಗಳೂರುನಗರಕ್ಕೆ ಕಳೆದ ಐವತ್ತು ವರ್ಷಗಳಲ್ಲಿ, 1989ರ ಕಾಂಗ್ರೆಸ್ ಸರ್ಕಾರದ ನಂತರ 1994ರಲ್ಲಿ ಬಂದಂಥ ನಮ್ಮ ಸರ್ಕಾರ, ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ ಸನ್ಮಾನ್ಯ

ಹೆಚ್.ಡಿ.ದೇವೇಗೌಡರವರು, ತದನಂತರ ಮುಖ್ಯಮಂತ್ರಿಗಳಾಗಿದ್ದಂಥ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಹಲವಾರು ಬೃಹತ್ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಚಾಲನೆಯನ್ನು ಕೊಟ್ಟರು. ಹಾಗೆ ಕೊಟ್ಟ ಚಾಲನೆಗೆ ಅಷ್ಟೊಂದು ಪ್ರತಿಕ್ರಿಯೆ ದೊರಕದಿದ್ದರೂ, ಕೆಲಸಕಾರ್ಯಗಳನ್ನು ತ್ವರಿತಗತಿಯಲ್ಲಿ ಮುಗಿಸುವುದಕ್ಕೆ ಆಗದಿದ್ದರೂ ಕೂಡ ಬೆಂಗಳೂರಿನಂಥ ದೊಡ್ಡ ನಗರಕ್ಕೆ ಹಿಂದಿನ ಸರ್ಕಾರ ಸ್ವಲ್ಪವಾದರೂ ಅಭಿವೃದ್ಧಿ ಯೋಜನೆಗಳನ್ನು ಮಾಡಿದೆ ಎನ್ನುವ ಭಾವನೆ ಮೂಡತಕ್ಕಂಥಾದ್ದು ನಮ್ಮಲ್ಲಿದೆ. ಇವತ್ತು ಯಾವುದೇ ಕೆಲಸಕಾರ್ಯಗಳನ್ನು ಮಾಡುವಾಗ, (ಈ ಸಂದರ್ಭದಲ್ಲಿ . ಶ್ರೀ. ಯು.ಆರ್. ಸಭಾಪತಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾನು ಕೂಡ ಹಿಂದಿನ ಸರ್ಕಾರದಲ್ಲಿ ಮೂರುವರ್ಷ ನಾಲ್ಕು ತಿಂಗಳುಕಾಲ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ; ಅದರಲ್ಲೂ ಬಂದಿಖಾನೆ, ಗೃಹ ರಕ್ಷಕದಳ, ಅಗ್ನಿಶಾಮಕ ಇಲಾಖೆ ಎನ್ನುವ ಸಣ್ಣ ಇಲಾಖೆಯ ಮಂತ್ರಿಯಾಗಿ, ಆ ಇಲಾಖೆಯಲ್ಲೂ ಕೆಲಸವಿದೆ ಎನ್ನುವುದನ್ನು ಸ್ವಲ್ಪವಾದರೂ ನಾನು ಎತ್ತಿ ತೋರಿಸಿದ್ದೇನೆ. ಆದರೆ ಕೇವಲ ನಾಲ್ಕು ತಿಂಗಳು ನಾಲ್ಕು ದಿವಸಗಳ ಕಾಲ ಬೆಂಗಳೂರಿನಂಥ ದೊಡ್ಡ ನಗರದ ಜವಾಬ್ದಾರಿಯನ್ನು ವಹಿಸಿಕೊಂಡು ಈ ನಗರಕ್ಕೆ ಕೆಲವು ಕಾಯಕಲ್ಪವನ್ನು ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡಿದ್ದೇವೆ. ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಈ ನಗರಕ್ಕೆ ಹೊಸ ಚಾಲನೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ.

3.40 ಪಿ.ಎಂ.

ಈ ನಗರದ ಅಭಿವೃದ್ಧಿ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಮುಂಚೆ ನನ್ನ ಒಂದು ಮನವಿಯೇಂದರೆ ಸೆಕ್ರೆಟೇರಿಯೆಟ್‌ನಲ್ಲಿರುವ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕೆಂಬುದಾಗಿದೆ. ಹಿಂದಿನ ಸರ್ಕಾರದಲ್ಲಿ ನಾನೂ ಕೂಡ 3 ವರ್ಷ 3 ತಿಂಗಳು ಮಂತ್ರಿಯಾಗಿ ಅಧಿಕಾರವನ್ನು ಮಾಡಿದ್ದೇನೆ. ತಾವು ಆಡಳಿತ ಯಂತ್ರವನ್ನು ಸುಧಾರಣೆ ಮಾಡುತ್ತೇವೆ, ಕಂಪ್ಯೂಟರೀಕರಣ ಮಾಡುತ್ತೇವೆ ಎಂದು ಹೇಳಿದ್ದೀರಿ. ಇವೆಲ್ಲವನ್ನೂ ಮಾಡಬೇಡಿ ಎಂದು ಹೇಳತಕ್ಕಂಥವನು ನಾನು ಅಲ್ಲ. ತಮ್ಮ ಈ ಕಾರ್ಯಕ್ರಮಗಳ ಜೊತೆಗೆ ಒಂದು ವಿಚಾರವೆಂದರೆ, ಜಡತ್ವವನ್ನು ಬೆಳೆಸಿ ಕೊಂಡಿರತಕ್ಕಂಥ, ಸೆಕ್ರೆಟೇರಿಯೆಟ್‌ನಲ್ಲಿ ಕೆಲಸ ಮಾಡುತ್ತಿರತಕ್ಕಂಥ ಅಧಿಕಾರಿಗಳನ್ನು, ಅದು ಮಲ್ಟಿಸ್ಟೋರೀಡ್ ಬಿಲ್ಡಿಂಗಿನಲ್ಲಿರಬಹುದು ಅಥವಾ ವಿಧಾನಸೌಧದಲ್ಲಿರಬಹುದು, ಅಂಥ ಕೆಲವು ಅಧಿಕಾರಿಗಳನ್ನು ಈ ರಾಜ್ಯದ ಮೂಲೆಮೂಲೆಗಳಲ್ಲಿ ಅವರಿಗೆ ತತ್ಸಮಾನವಾದ ಹುದ್ದೆಗಳು ಯಾವಯಾವ ಇಲಾಖೆಗಳಲ್ಲಿವೆ ಅಲ್ಲಿಗೆ ಹಾಕಿ. ಇವರನ್ನು ಅಲ್ಪಸ್ವಲ್ಪ ಇಲ್ಲಿಂದ ಅಲ್ಲಿಗೆ ಬದಲಾವಣೆ ಮಾಡತಕ್ಕಂಥ ಒಂದು ಗುರುತರವಾದ ತೀರ್ಮಾನವನ್ನು ತಾವು ತೆಗೆದುಕೊಂಡು, 15-20 ದಿವಸಗಳಲ್ಲಿ ಇದಕ್ಕೆ ಒಂದು ಸ್ವಲ್ಪ ಚುರುಕು ಮುಟ್ಟಿಸಿದ್ದೇ ಆದರೆ, ತಾವು ಏನು ಹೊಸಹೊಸ ಸಂಪ್ರದಾಯವನ್ನು ಹಾಕಬೇಕು ಎಂದು ಇದ್ದೀರಿ, ಪ್ರಾಯಶಃ ಆಗ ಅದಕ್ಕೆ ಚಾಲನೆ ಬರುತ್ತದೆ ಎನ್ನುವ ಮಾತನ್ನು ಹೇಳಲು ಇಚ್ಛಿಪಡುತ್ತೇನೆ. ನಾನು ಬೆಂಗಳೂರಿನಲ್ಲಿ ಓದಿದವನು, ವಿದ್ಯಾರ್ಥಿ ದಿಸೆಯಲ್ಲಿ ಬೆಂಗಳೂರಿನಲ್ಲಿ ಇದ್ದವನು, ಬೆಂಗಳೂರು ನಗರದ ಒಬ್ಬ ಪ್ರೇಮಿಯಾಗಿ, ಬೆಳೆಯುತ್ತಿರತಕ್ಕಂಥ ಈ ನಗರದ ಬಗ್ಗೆ ಹೊಸ ಕಲ್ಪನೆಯನ್ನು ಇಟ್ಟುಕೊಂಡಿರತಕ್ಕಂಥವರಲ್ಲಿ ನಾನೂ ಒಬ್ಬ. ಸನ್ಮಾನ್ಯ ಮುಖ್ಯ ಮಂತ್ರಿಗಳಾಗಿರತಕ್ಕಂಥ ಎಸ್. ಎಂ.ಕೃಷ್ಣ ಹಾಗೂ ಅವರ ಸಚಿವ ಸಂಪುಟದವರು ಆ ಒಂದು ಹೊಸ ಕಲ್ಪನೆಗೆ ಕೊಂಡೊಯ್ಯುತ್ತಾರೆ

ಎನ್ನುವ ಒಂದು ಭಾವನೆ ಅವರ ಘನವೆತ್ತ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿದೆ. ಆದರೆ ಇದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಸೆಕ್ರೆಟೇರಿಯೆಟ್‌ನಲ್ಲಿ ಇರತಕ್ಕಂಥವರನ್ನು ತೆಗೆದು ಹಾಕಿ ಎಂದು ನಾನು ಏಕೆ ಹೇಳಿದೆ ಎಂದರೆ, 20-25-30 ವರ್ಷಗಳಿಂದ ಅವರು ಒಂದೇ ಕಡೆ ಇದ್ದು, ಯಾವುದೇ ಒಂದು ಕಡತವನ್ನು ಸಂಬಂಧಪಟ್ಟ ಮಂತ್ರಿಗಳು ಕೇಳಬಹುದು ಅಥವಾ ಮುಖ್ಯ ಮಂತ್ರಿಗಳ ಕಛೇರಿಯವರು ಕೇಳಬಹುದು, ಆಗ ಅವರಿಗೆ ಬೇಕಾಗಿರತಕ್ಕಂಥಾದ್ದನ್ನು ಕಳುಹಿಸುತ್ತಾರೆ, ಬೇಡದೇ ಇರತಕ್ಕಂಥಾದ್ದಕ್ಕೆ ಏನೋ ಒಂದು ಸಬೂಬು ಬರೆಯುತ್ತಾರೆ. ಜನಪರ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತನ್ನು ಕೊಡಬೇಕು ಎಂದು ಹೇಳಿದಂಥ ಸಂದರ್ಭದಲ್ಲಿ, ಅಧಿಕಾರಿಗಳನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಇವತ್ತು ಈ ಇಲಾಖೆಯಲ್ಲಿ ಇರುತ್ತೇನೆ, ನಾಳೆ ಮತ್ತೊಂದು ಇಲಾಖೆಗೆ ಹೋಗುತ್ತೇನೆ ಎನ್ನುವ ಭಾವನೆ ಅಧಿಕಾರಿಗಳಲ್ಲಿ ಏನಿದೆ, ಅದಕ್ಕೆ ಏನಾದರೊಂದು ಸರಿಯಾದ ಇಂಜಕ್ಷನ್ ಅನ್ನು ಅವರಿಗೆ ಕೊಟ್ಟಿದ್ದೇ ಆದರೆ ಅದಕ್ಕೆ ಸ್ವಲ್ಪ ಚಾಲನೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳು ನಡೆಯುತ್ತಿವೆ. ಆ ಯೋಜನೆಗಳಲ್ಲಿ ಕೆಲವು ಅಲ್ಲಲ್ಲೇ ನಿಂತು ಹೋಗಿವೆ. ಮನುಷ್ಯನಿಗೆ ಮೂಲಭೂತವಾಗಿ ಬೇಕಾಗಿರತಕ್ಕಂಥಾವುಗಳೆಂದರೆ ಕುಡಿಯುವ ನೀರು, ಒಳ ಚರಂಡಿ, ರಸ್ತೆ ಮತ್ತು ದೀಪ. ಯಾವುದೇ ಒಬ್ಬ ಮನುಷ್ಯ ಆರೋಗ್ಯವಾಗಿರಬೇಕಾದರೆ ಇವುಗಳ ಅವಶ್ಯಕತೆ ಇದೆ. ಇವತ್ತು ಬೆಂಗಳೂರು ನಗರಕ್ಕೆ ವಿಶೇಷವಾದ ಒಂದು ಯೋಜನೆಯನ್ನು ಮಾಡಬೇಕು ಎನ್ನುವ ತೀರ್ಮಾನವನ್ನು ಏನು ಮಾಡಿದ್ದೀರಿ, ಅವುಗಳನ್ನು ಕೂಡಲೇ ಮಾಡಬೇಕು. 15 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರತಕ್ಕಂಥ ಈ ನಗರಕ್ಕೆ ತನ್ನದೇ ಆದಂಥ ವೈಶಿಷ್ಟ್ಯತೆ ಇದೆ. ರಾಜ್ಯದ ಬೊಕ್ಕಸದಲ್ಲಿ ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು ಅಂದು ಇದ್ದಂಥ ಅನೇಕ ಸನ್ಮಿತ್ರರು ಮಾತನಾಡಿರತಕ್ಕಂಥಾದ್ದನ್ನು ನಾವು ಕೂಡ ಕೇಳಿದ್ದೇವೆ. ಆದರೆ ನಾವು ಎಷ್ಟರ ಮಟ್ಟಿಗೆ ಈ ನಗರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬಹುದಾಗಿತ್ತೋ, ಅಷ್ಟೊಂದು ಮಾಡಲು ಆಗಲಿಲ್ಲ ಎನ್ನುವ ಮಾತನ್ನು ಕೂಡ ಹೇಳಲು ನಾನು ಇಚ್ಛಿಪಡುತ್ತೇನೆ. ಪಕ್ಕದ ರಾಜ್ಯವಾಗಿರತಕ್ಕಂಥ ಆಂಧ್ರಪ್ರದೇಶದ ಹೈದರಾಬಾದ್ ನಗರವನ್ನು, ಅಹಮದಾಬಾದ್ ನಗರವನ್ನು, ಇತ್ತೀಚಿನ ದಿನಗಳಲ್ಲಿ ಬೊಂಬಾಯಿ ನಗರವನ್ನು, ಕಲ್ಕತ್ತಾ ನಗರವನ್ನು ನಾವು ನೋಡಿ ಬಂದಾಗ, ಈ ನಗರಕ್ಕೆ ನಾವು ವಂಚನೆ ಮಾಡಿದ್ದೇವೆ, ಈ ನಗರದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಸರಿಯಾಗಿ ಒತ್ತನ್ನು ಕೊಡದೇ ಹೋದುದರ ಪ್ರತಿಫಲವಾಗಿ ಈ ನಗರಕ್ಕೆ ಬರತಕ್ಕಂಥ ಅನೇಕ ಯೋಜನೆಗಳು ಕುಂಟಿತವಾಗಿವೆ ಎನ್ನುವ ಭಾವನೆ ಬರುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಖಾತೆಯ ನಿರ್ವಹಣೆಯನ್ನು ಮಾಡುತ್ತಿರುವುದರಿಂದ ಮತ್ತು ತಾವೂ ಕೂಡ ಬೆಂಗಳೂರು ನಗರದ ಒಬ್ಬ ವಾಸಿಯಾಗಿರುವುದರಿಂದ, ತಾವು ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 125 ಕೋಟಿ ರೂಪಾಯಿಗಳನ್ನು ಬಾಂಡ್‌ಗಳ ಮೂಲಕ ಎತ್ತುವುದರ ಮೂಲಕ ಬೆಂಗಳೂರು ನಗರದ ರಸ್ತೆಗಳ ದುಸ್ಥಿತಿಯನ್ನು ಸರಿಪಡಿಸುವಂಥಾದ್ದಕ್ಕೆ ನಾವು ಚಾಲನೆಯನ್ನು ಕೊಟ್ಟಿದ್ದೆವು. 2.5 ಕಿ.ಮೀ. ದೂರದ ಮೇಲ್ಸೇತುವೆ ಸಿರ್ಸಿ ವೃತ್ತದಿಂದ, ಹಡ್ಸನ್ ವೃತ್ತದವರೆಗೆ ಅರ್ಧ ಭಾಗ ಮುಗಿದಿದೆ. ಬಾಕಿಯದನ್ನು ತಮ್ಮ ನೇತೃತ್ವದಲ್ಲಿ ಮುಗಿಸಿ, ಅದರ ಉದ್ಘಾಟನೆಯನ್ನು

ಮಾಡತಕ್ಕಂಥಾದ್ದಕ್ಕೆ ತಾವು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರೆಂದು ಕೇಳಿದ್ದೇನೆ. ಅದರ ಜೊತೆಗೆ, ಬೆಂಗಳೂರು ನಗರದಲ್ಲಿರತಕ್ಕಂಥ ಒತ್ತಡವನ್ನು ಮನಗಂಡು ಕೆಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದಕ್ಕೆ ನಾವು ಒಂದು ತಾಂತ್ರಿಕ ತಜ್ಞರ ಕಮಿಟಿಯನ್ನು ನೇಮಕ ಮಾಡಿದ್ದೆವು. ಬಿ.ಎಂ.ಟಿ.ಸಿ. ನಿರ್ದೇಶಕರಾಗಿರತಕ್ಕಂಥ ಶ್ರೀ ಕರೋಲಾರವರ ನಾಯಕತ್ವದಲ್ಲಿ ಆ ಕಮಿಟಿಯನ್ನು ಮಾಡಿ ಅದಕ್ಕೆ ಬೆಂಗಳೂರಿನಲ್ಲಿರತಕ್ಕಂಥ ಅತ್ಯುನ್ನತ ತಾಂತ್ರಿಕ ತಜ್ಞರನ್ನು ನೇಮಕ ಮಾಡಿದ್ದೆವು. ತಾವು ಆ ಕಮಿಟಿಯ ವರದಿಯನ್ನು ತರಿಸಿಕೊಂಡು, ಬೆಂಗಳೂರು ನಗರಕ್ಕೆ ಯಾವ ರೀತಿ ಕನಿಷ್ಟ ಸೌಲಭ್ಯಗಳನ್ನು ಒದಗಿಸಿ ಕೊಡಬಹುದು ಎನ್ನುವುದರ ಬಗ್ಗೆ ತಾವು ಚಿಂತನೆ ಮಾಡಬೇಕು. ಬೆಂಗಳೂರು ನಗರಕ್ಕೆ ಫ್ಲೈಓವರ್‌ಗಳನ್ನು ಮಾಡತಕ್ಕಂಥಾದ್ದು ಇರಬಹುದು, ರೋಡ್ ಸೆಪರೇಟರ್ ಮಾಡತಕ್ಕಂಥಾದ್ದು ಇರಬಹುದು, ರಸ್ತೆಗಳನ್ನು ಅಗಲ ಮಾಡತಕ್ಕಂಥಾದ್ದು ಇರಬಹುದು, ಇವೆಲ್ಲಕ್ಕಿಂತ ಮಿಗಿಲಾಗಿ ಈ ದೊಡ್ಡ ನಗರಕ್ಕೆ ಕೆಲವು ಯೋಜನೆಗಳನ್ನು ಮಾಡತಕ್ಕಂಥ ಸಂದರ್ಭಗಳಲ್ಲಿ, ಮತ್ತೊಂದು ಮಗದೊಂದು ಯೋಜನೆಗಳನ್ನು ಮಾಡತಕ್ಕಂಥ ಸಂದರ್ಭಗಳಲ್ಲಿ ಸುಮಾರು 15-20 ವರ್ಷಗಳಿಂದ ಅವಶ್ಯಕವಾಗಿ ಯಾವುದೋ ಒಂದು ತಡೆಯಾಜ್ಞೆಯನ್ನು ತಂದು ನಿಲ್ಲಿಸಿರತಕ್ಕಂಥ ಬಹುತೇಕ ಪ್ರಸಂಗಗಳನ್ನು ಗುರುತಿಸಿ ನಾವು ಅವೆಲ್ಲಕ್ಕೂ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಹಾಕಿ ಅವುಗಳನ್ನು ತೆರವು ಮಾಡಿಸತಕ್ಕಂಥಾದ್ದಕ್ಕೆ ನಾವು ಚಾಲನೆ ಕೊಟ್ಟಿದ್ದೇವೆ. ಸನ್ಮಾನ್ಯ ಮುಖ್ಯ ಮಂತ್ರಿಗಳೇ ಈ ಖಾತೆಯನ್ನು ನಿರ್ವಹಣೆ ಮಾಡುವುದರಿಂದ, ಕನಿಷ್ಟ ಪಕ್ಷ ತಿಂಗಳಿಗೆ ಒಮ್ಮೆಯಾದರೂ ಬೆಂಗಳೂರು ನಗರದ ಎಲ್ಲ ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಒಂದು ಸಭೆಯನ್ನು ಕರೆದು, ಆ ಸಭೆಯಲ್ಲಿ ಈ ವಿಚಾರಗಳನ್ನು ಚರ್ಚೆ ಮಾಡಿ ಒಂದು ಹೊಸ ವ್ಯವಸ್ಥೆಯನ್ನು ತರಬೇಕು ಎನ್ನುವ ಮನವಿಯನ್ನು ಮಾಡಲು ಇಚ್ಛಿಪಡುತ್ತೇನೆ. ಬೆಂಗಳೂರಿನಂಥ ದೊಡ್ಡ ನಗರಕ್ಕೆ ಬರತಕ್ಕಂಥ ವಾಹನಗಳ ಒತ್ತಡವನ್ನು ನಾವು ಮನಗಂಡು ಒಂದು ರಿಂಗ್ ರೋಡ್ ಯೋಜನೆಯನ್ನು ಮಾಡಬೇಕೆಂದು ಸುಮಾರು 180 ಕೋಟಿ ರೂಪಾಯಿಗಳ ಹುಡ್ಕೋ ನೆರವನ್ನು ಪಡೆದು, ಅದರಲ್ಲಿ ಈಗಾಗಲೇ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹೆಬ್ಬಾಳದಿಂದ ಕೆ.ಆರ್.ಪುರಂವರೆಗೆ, ಕೆ.ಆರ್.ಪುರಂನಿಂದ ಅಗರಂವರೆಗೆ, ಅಗರಂನಿಂದ ಹೊಸೂರಿನವರೆಗೆ, ಹೊಸೂರಿನಿಂದ ಮೈಸೂರು ರಸ್ತೆಗೆ ಬರತಕ್ಕಂಥ 45 ಕಿ.ಮೀ. ದೂರವನ್ನು ವಾಹನಗಳು ಓಡಾಡತಕ್ಕಂಥ ವ್ಯವಸ್ಥೆಗೆ ತಂದಿದ್ದೇವೆ. ತಾವು ದಯವಿಟ್ಟು ಅದನ್ನು ಮುಂದುವರೆಸಿ. ಉಳಿದಿರತಕ್ಕಂಥ ತುಮಕೂರು ರಸ್ತೆಯಿಂದ ಮಾಗಡಿ ರಸ್ತೆ, ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಇರತಕ್ಕಂಥ ಸುಮಾರು 11 ಕಿ.ಮೀ. ದೂರಕ್ಕೆ ಈ ವ್ಯವಸ್ಥೆಯನ್ನು ಮಾಡಿದ್ದೇ ಆದರೆ ಬೆಂಗಳೂರು ನಗರದ ಎಲ್ಲಾ ಕಡೆ ಬರತಕ್ಕಂಥ ವಾಹನಗಳ ಒತ್ತಡ ತಪ್ಪಲು ಅವಕಾಶವಾಗುತ್ತದೆ. ಮತ್ತು ಆ ವಾಹನಗಳ ಒತ್ತಡದಿಂದಾಗಿ ಆಗತಕ್ಕಂಥ ಅನೇಕ ಅಪಘಾತಗಳು ತಪ್ಪುತ್ತವೆ. ಬೆಳಿಗ್ಗೆ ಹೋದಂಥ ಬೆಂಗಳೂರು ನಗರದ ಸಾರ್ವಜನಿಕ ಮತ್ತೆ ಮನೆಗೆ ಬರತಕ್ಕಂಥ ಪರಿಸ್ಥಿತಿ ಇಲ್ಲದೇ ಇರುವಂಥ ಈ ಸಂದರ್ಭದಲ್ಲಿ ತಾವು ಇದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಈ ಒಂದು ರಿಂಗ್ ರೋಡಿನ ಕೆಲಸವನ್ನು ತಾವು ತಕ್ಷಣವೇ ಮುಗಿಸತಕ್ಕಂಥ ಕೆಲಸಕ್ಕೆ ಚಾಲನೆಯನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು ನಗರಕ್ಕೆ ಅಪರೂಪವಾದ ಕೆಲಸವನ್ನು ಮಾಡಬೇಕಾದಂಥ ಮೂರು ಸ್ವಾಯತ್ತ ಸಂಸ್ಥೆಗಳಿವೆ. ಒಂದು ಬೆಂಗಳೂರು ಮಹಾನಗರಪಾಲಿಕೆ, ಮತ್ತೊಂದು ಬೆಂಗಳೂರು

ನೀರು ಮತ್ತು ಒಳಚರಂಡಿ ಮಂಡಳಿ, ಮತ್ತೊಂದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಅದರ ಜೊತೆಗೆ ಬಿ.ಎಂ.ಆರ್.ಡಿ.ಎ., ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಬಿ.ಎಂ.ಟಿ.ಸಿ., ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳಿವೆ. ಈ ಎಲ್ಲ ಇಲಾಖೆಗಳ ಕೋಆರ್ಡಿನೇಷನ್ ಕಮಿಟಿಯೊಂದನ್ನು ಮಾಡತಕ್ಕಂಥಾದ್ದು ಅತಿ ಅವಶ್ಯಕವಾಗಿದೆ. ಈ ಕೋಆರ್ಡಿನೇಷನ್ ಕಮಿಟಿಯನ್ನು ಮಾಡದೇ ಹೋದರೆ ಏನಾಗುತ್ತದೆಂದರೆ, ತಾವು ಈಗ ಹಮ್ಮಿಕೊಂಡಿರುವ ಯೋಜನೆಗಳನ್ನು ರೂಪಿಸತಕ್ಕಂಥಾದ್ದು ಒಂದು ಇಲಾಖೆಯಾದರೆ, ಮತ್ತೊಂದು ಇಲಾಖೆ ಮತ್ತೊಂದು ಕೆಲಸವನ್ನು ಮಾಡುತ್ತದೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಒಂದು ಇಲಾಖೆ ಬೆಂಗಳೂರು ನಗರದಲ್ಲಿ ರಸ್ತೆ ಸರಿಮಾಡಿ ಬರುತ್ತೇವೆ ಎಂದರೆ ಮಾರನೇ ಬೆಳಿಗ್ಗೆ ಇನ್ನೊಂದು ಇಲಾಖೆಯವರು ಅಲ್ಲಿ ಹೋಗಿ ರಸ್ತೆಯನ್ನು ಅಗೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದು, ಇದರಿಂದಾಗಿ ನಾವು ಸಾರ್ವಜನಿಕರಿಂದ ಟೀಕೆ-ಟಿಪ್ಪಣಿಗೆ ಗುರಿಯಾಗುತ್ತಿದ್ದೇವೆ. ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಒಂದು ಕನ್‌ಸಾಲಿಡೇಟೆಡ್ ಕನ್ಸಲ್ಟೇಟಿವ್ ಕಮಿಟಿಯನ್ನು ಬೆಂಗಳೂರು ಮಹಾನಗರಪಾಲಿಕೆಯ ಆಯುಕ್ತರ ಸಂಚಾಲಕತ್ವದಲ್ಲೋ ಅಥವಾ ಮತ್ತೊಬ್ಬರ ಅಧ್ಯಕ್ಷತೆಯಲ್ಲೋ ಮಾಡಿ, ಅದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರಪಾಲಿಕೆ, ಜಲಮಂಡಳಿ, ಬಿ.ಎಂ.ಟಿ.ಸಿ., ಟೆಲಿಫೋನ್ ಎಕ್ಸ್‌ಚೇಂಜ್ ಇಂಥ ಇಲಾಖೆಗಳ ಉನ್ನತ ಅಧಿಕಾರಿಗಳನ್ನೊಳಗೊಂಡು, ಈ ಸಮಿತಿಯ ಸಭೆ ಕನಿಷ್ಟ ಪಕ್ಷ ತಿಂಗಳಿಗೆ ಒಂದು ಸಲ ಸೇರಿ, ಆ ಸಮಿತಿ ವರದಿಯನ್ನು ಕೊಡತಕ್ಕಂಥಾದ್ದಾಗಬೇಕು. ಕನಿಷ್ಟ ತಿಂಗಳಿಗೆ ನಾಲ್ಕು ಸಾರಿಯಾದರೂ ಅಧಿಕಾರಿಗಳು ಬೆಂಗಳೂರು ನಗರದ ಸುತ್ತಲೂ ಪ್ರದಕ್ಷಿಣೆ ಮಾಡಿ, ಬೆಂಗಳೂರು ನಗರದ ಆಗುಹೋಗುಗಳ ಬಗ್ಗೆ ಚಿಂತನೆ ಮಾಡತಕ್ಕಂಥಾದ್ದಕ್ಕೆ ಒಂದು ಹೊಸ ರೂಪವನ್ನು ಕೊಡಬೇಕು ಎನ್ನುವ ಮನವಿಯನ್ನು ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಇದೇ ಅಲ್ಲದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎನ್ನುವ ಒಂದು ಪ್ರಾಧಿಕಾರ ಇದೆ. ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಷ್ಟು ವರ್ಷದ ಕೊಳೆ ಎಂದರೆ, ಅದು ಒಂದು ರೀತಿ ಬಿಳಿಯಾನೆ ಇದ್ದಂತೆ ಎನ್ನುವ ಮಾತನ್ನು ನಾನು ಮಂತ್ರಿಯಾಗಿದ್ದಾಗಲೂ ಕೂಡ ಹೇಳುತ್ತಿದ್ದೆ. ನಾನು 4 ತಿಂಗಳಲ್ಲಿ ಸುಮಾರು 4 ಸಾರ್ವಜನಿಕ ಕುಂದುಕೊರತೆ ಸಭೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಕರೆದಾಗ, ಸುಮಾರು 15-18-20-25-30 ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿದಂಥ ಜನ ಬಂದು ತಮ್ಮ ಗೋಳನ್ನು ಹೇಳಿದ್ದಾರೆ. ಅದೆಲ್ಲವನ್ನೂ ನಾನು ಕಂಪ್ಯೂಟರೀಕರಣ ಮಾಡಿಸಿ ಒಂದು ಪುಸ್ತಕವನ್ನು ಮಾಡಿಸಿದ್ದೇನೆ. ಪ್ರತಿಯೊಂದು ಹಂತದಲ್ಲೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯಾವ ರೀತಿ ಮಾಡಿದೆ, ಇದರಲ್ಲಿ ಯಾವ ರೀತಿಯ ನ್ಯೂನ್ಯತೆಗಳಿವೆ, ಈ ನ್ಯೂನ್ಯತೆಗಳನ್ನು ಏನು ಮಾಡಬಹುದು ಎನ್ನುವುದರ ಬಗ್ಗೆ ಒಂದು ಪುಸ್ತಕವನ್ನು ಮಾಡಿಸಿದ್ದೇನೆ. ದಯಮಾಡಿ ತಾವು ಅದನ್ನು ತರಿಸಿಕೊಳ್ಳಬೇಕು. ಕೆಲವರು ಅರ್ಜಿ ಹಾಕಿ ಸುಮಾರು 20 ವರ್ಷಗಳಾಗಿದ್ದರೂ ಅವರಿಗೆ ಸೈಟುಗಳನ್ನು ಕೊಟ್ಟಿರುವುದಿಲ್ಲ. ಅಲ್ಲಿ ಯಾರಿಗೆ ತಮ್ಮದೇ ಆದಂಥ ಪ್ರಭಾವವಿದೆ, ಆ ಪ್ರಭಾವವನ್ನು ಬೀರತಕ್ಕಂಥವರಿಗೆ ಮಾತ್ರ ಸೈಟ್ ಸಿಗುತ್ತದೆ. ನಾನು ಈ ಸಭೆಯ ಮುಖೇನ ವಿನಂತಿ ಮಾಡುವುದು ಇಷ್ಟೇ; ನಾನು ಇನ್ನೂ ಐದಾರು ತಿಂಗಳು ಅಧಿಕಾರದಲ್ಲಿ ಇದ್ದಿದ್ದರೆ ಖಂಡಿತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರತಕ್ಕಂಥ ಎಲ್ಲಾ ಕೊಳೆಯನ್ನು ತೊಳೆದು ಅದನ್ನು ಕೇವಲ ಒಂದು ಪ್ಲಾನಿಂಗ್ ಅಥಾರಿಟಿ ಮಾತ್ರ ಮಾಡಿ ಅಲ್ಲಿರತಕ್ಕಂಥ ನೌಕರರನ್ನು ಬೇರೆ

ಬೇರೆ ಇಲಾಖೆಗಳಿಗೆ ವರ್ಗ ಮಾಡುತ್ತಿದ್ದೆ. ಈ ರೀತಿ ಮಾಡಿ ಅಲ್ಲಿರತಕ್ಕಂಥ ಎಲ್ಲವನ್ನೂ ಕೂಡ ಕ್ಲೋಸ್ ಮಾಡದೇ ಹೋದರೆ, ಇದು ಒಂದು ರೀತಿಯ ಬಿಳಿ ಆನೆಯಾಗಿದೆ; ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಏನಾದರೂ ಒಂದು ಹೊಸ ಕಲ್ಪನೆಯನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಡಿ.ಎಂ.ಆರ್.ಡಿ.ಎ. ಇದು ಕೆಲವು ಅಧಿಕಾರಿಗಳ ಮೋಜಿಗೋಸ್ಕರ ಇರತಕ್ಕಂಥ ಇಲಾಖೆಯಾಗಿದೆ. ಇದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿ ಅಧ್ಯಕ್ಷರಾಗಿರುತ್ತಾರೆ ಮತ್ತು ಅನೇಕ ಇಲಾಖೆಯ ಅಧಿಕಾರಿಗಳು ಇದಕ್ಕೆ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ಹೊರವಲಯದಲ್ಲಿ ಇರತಕ್ಕಂಥ ಸರ್ಕಾರಿ, ಹಾಗೂ ಖಾಸಗಿ ಜಾಗಗಳನ್ನು ಗ್ರಾಮಪಂಚಾಯಿತಿಯಲ್ಲಿ ಯಾವ ರೀತಿ ಪ್ಲಾನ್‌ಗಳನ್ನು ಸ್ಯಾಂಕ್ಷನ್ ಮಾಡಿಕೊಡುತ್ತಾರೆ ಆ ರೀತಿ ಮಾಡಿಕೊಡುವುದು ಇವರ ಕೆಲಸವಾಗಿದೆ. ಅಂದರೆ ದುಡ್ಡು ತೆಗೆದುಕೊಳ್ಳುವುದು ನಂತರ ಪ್ಲಾನ್ ಸ್ಯಾಂಕ್ಷನ್ ಮಾಡುವುದು ಇದು ಇವರ ವೃತ್ತಿಯಾಗಿದೆ. ಇದರ ಬಗ್ಗೆ ಈಗಿನ ಸರ್ಕಾರ ಸಮಗ್ರವಾದ ಚಿಂತನೆ ಮಾಡದೇ ಹೋದರೆ ಬೆಂಗಳೂರು ನಗರದ ಸುತ್ತ ಇರತಕ್ಕಂಥ ಲಕ್ಷಾಂತರ ಮನೆಗಳಿಗೆ ಯಾವುದೇ ವಿಧವಾದ ಶುಲ್ಕವಾಗಲೀ, ಕಂದಾಯವಾಗಲೀ, ಬೆಟರ್‌ಮೆಂಟ್ ಚಾರ್ಜ್ ಆಗಲೀ ಹಾಕದೇ ಇರುವುದರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ಬರುವುದಿಲ್ಲ. ಇವತ್ತು ಡಿ.ಎಂ.ಆರ್.ಡಿ.ಎ.ಗೆ ಹೋದರೆ ಎಲ್ಲಾ ಕೆಲಸವನ್ನು ಮಾಡಿಸಬಹುದು ಎನ್ನುವ ಭಾವನೆ ಜನರಲ್ಲಿ ಬಂದಿದೆ. ಅದಕ್ಕೆ ತಾವು ಒಂದು ಹೊಸ ರೂಪವನ್ನು ಕೊಡಬೇಕೆನ್ನುವ ಮನವಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬೆಂಗಳೂರು ಜಲಮಂಡಳಿ ಬಗ್ಗೆ ಹೇಳುವುದಾದರೆ, ಇದು ಸುಮಾರು ವರ್ಷಗಳಿಂದ ಇರುವಂಥದ್ದು ಆಗಿದೆ. 10 ಲಕ್ಷ ಜನಸಂಖ್ಯೆಗಿಂತ ಹೆಚ್ಚಿಗೆ ಬೆಂಗಳೂರು ನಗರದಲ್ಲಿ ಬೆಳೆಯಬಾರದು, ಅದಕ್ಕಿಂತ ದೊಡ್ಡದಾಗಿ ಬೆಳೆದರೆ ಈ ನಗರಕ್ಕೆ ವಿಪತ್ತು ಬರುತ್ತದೆ ಎನ್ನುವ ಭಾವನೆ ಇಟ್ಟುಕೊಂಡು ನಾಲ್ಕು ಕಡೆ ನಾಲ್ಕು ಗೋಪುರಗಳನ್ನು ದಿ: ಕೆಂಪೇಗೌಡರು 400 ವರ್ಷಗಳ ಹಿಂದೆ ನೆಟ್ಟಿದ್ದಾರೆ. ಆದರೆ ಅವರ ಕನಸಿನಂತೆ ಬೆಂಗಳೂರು ನಗರ ಈಗ ಇಲ್ಲ. ಅವರು ನೆಟ್ಟ ಗೋಪುರಗಳನ್ನು ದಾಟಿ 10 ರಿಂದ 20 ಪಟ್ಟಿನಷ್ಟು ಹೆಚ್ಚಿಗೆ ಬೆಂಗಳೂರು ನಗರ ಬೆಳೆದಿದೆ. ಬೆಂಗಳೂರು ನಗರದಲ್ಲಿ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಬೆಂಗಳೂರು ಸುಮಾರು 3200 ಅಡಿ ಸಮುದ್ರ ಮಟ್ಟಕ್ಕಿಂತ ಮೇಲೆ ಇದ್ದು, ಮಳೆ ಬಂದಂಥ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಇತರೇ ನಗರಗಳಿಗೆ ಹೋಲಿಕೆ ಮಾಡಿಕೊಂಡಾಗ ಯಾವ ಪಟ್ಟಣದಲ್ಲಿ ನಾವು ಇದ್ದೇವೆ ಎನ್ನುವ ಒಂದು ಅನುಮಾನ ಕಾಡುತ್ತದೆ. ಒಳಚರಂಡಿ ನೀರು ಕೆರೆಗಳಿಗೆ ಹೋಗಿ ಕಲ್ಮಷಗೊಳ್ಳುವುದು ಅದು ಹೆಬ್ಬಾಳ ಕೆರೆ, ಬೆಳ್ಳಂದೂರು ಕೆರೆ ಇರಬಹುದು, ಈ ಕೆರೆಗಳನ್ನು ಕ್ಲೀನ್ ಮಾಡಿಸುವುದಕ್ಕೆ ಸಮಗ್ರವಾದ ಯೋಜನೆ ಹಾಕಿ ಈಗಾಗಲೇ ಸ್ವಲ್ಪ ಚಾಲನೆಯನ್ನು ಕೊಟ್ಟಿದ್ದೆವು. ಈಗ ಅದನ್ನು ಈಗಿನ ಸರ್ಕಾರ ಮುಂದುವರಿಸಬೇಕು. ಬೆಂಗಳೂರು ಜಲಮಂಡಳಿಯಲ್ಲಿರತಕ್ಕಂಥ ಸ್ಯಾನಿಟೇಷನ್ ನೀರನ್ನು ಕ್ಲೀನ್ ಮಾಡತಕ್ಕಂಥ ಟ್ರೀಟ್‌ಮೆಂಟ್ ಪ್ಲಾಂಟ್ಸ್ ಯಾವುದು ಕೂಡ ಕೆಲಸ ಮಾಡುತ್ತಿಲ್ಲ. ಬೆಂಗಳೂರು ನಗರದ ಸೊಳ್ಳೆಯನ್ನು ತಪ್ಪಿಸಬೇಕಾದರೆ ಮೊದಲನೇ ಆದ್ಯತೆ ಸ್ಯಾನಿಟೇಷನ್ ನೀರನ್ನು ಕ್ಲೀನ್ ಮಾಡತಕ್ಕಂಥ ಟ್ರೀಟ್‌ಮೆಂಟ್ ಪ್ಲಾಂಟ್ಸ್‌ನ್ನು ಸರಿ ಪಡಿಸಬೇಕು. ದೆಹಲಿಯಲ್ಲಿನ

ಒಂದು ಕಂಪನಿ ಕೇವಲ 8 ಕೋಟಿ ರೂಪಾಯಿಗಳಲ್ಲಿ ದೆಹಲಿಯಲ್ಲಿನ ಸುಮಾರು ಅರ್ಧ ಭಾಗದ ಪಾರ್ಕ್‌ಗಳಿಗೆ, ಆಟದ ಮೈದಾನಗಳಿಗೆ ನೀರನ್ನು ಕೊಡತಕ್ಕಂಥಾದ್ದು, ಆ ಟ್ರೀಟ್‌ಮೆಂಟ್ ಮಾಡಿದ ನೀರಿನಲ್ಲಿ ವಿದ್ಯುಚ್ಛಕ್ತಿಯನ್ನು ಕೂಡ ತಯಾರು ಮಾಡತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡಿದ್ದಾರೆ. ಆ ಕಂಪನಿಯ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾತನಾಡಿ ನಂತರ ಇಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ದೆಹಲಿಯಲ್ಲಿ ಎಲ್ಲಾ ನೋಡಿಕೊಂಡು ಬಂದರೂ ಕೂಡ ಇಲ್ಲಿ ಹಳೆಯ ಕಾಲದ ವ್ಯವಸ್ಥೆಯನ್ನೇ ಮುಂದುವರೆಸಿ ಸ್ಯಾನಿಟೇಷನ್ ಅವ್ಯವಸ್ಥೆಯಿಂದ ಬೆಂಗಳೂರು ನಗರದಲ್ಲಿ ಸೊಳ್ಳೆಯ ಕಾಟ ಜಾಸ್ತಿಯಾಗಿದೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಗರಾಭಿವೃದ್ಧಿ ಖಾತೆಯನ್ನು ನಿರ್ವಹಣೆ ಮಾಡುತ್ತಿರುವುದರಿಂದ ಅದರ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ. ಇನ್ನು ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟದಿಂದ 2 ಟಿ.ಎಂ.ಸಿ. ಕುಡಿಯುವ ನೀರು, ಬೆಂಗಳೂರು-ಕಾವೇರಿ ಒಂದು ಮತ್ತು 2ನೇ ಹಂತದಿಂದ 4 ಟಿ.ಎಂ.ಸಿ. ನೀರು, ಕಾವೇರಿ 3ನೇ ಹಂತದಿಂದ 4 ಟಿ.ಎಂ.ಸಿ. ನೀರು ಹೀಗೆ ಒಟ್ಟು 10 ಟಿ.ಎಂ.ಸಿ. ನೀರು ನಮಗೆ ಬರುತ್ತಾ ಇದೆ. ಇನ್ನೂ 4 ಟಿ.ಎಂ.ಸಿ. ನೀರನ್ನು ತರಬೇಕೆನ್ನುವ ಯೋಜನೆಯನ್ನು ಹಾಕಿ ಅದಕ್ಕೆ ಒ.ಇ.ಸಿ.ಎಫ್. ನಿಂದ ಹಣವನ್ನು ಪಡೆದು ನಾವು ಕಾವೇರಿ 4ನೇ ಹಂತದ ಮೊದಲನೇ ಘಟ್ಟದ ಕೆಲಸವನ್ನು ಪ್ರಾರಂಭ ಮಾಡಿ ನಾವು ಯಾವ ಹಂತದಲ್ಲಿ ಅದನ್ನು ನಿಲ್ಲಿಸಿದ್ದೇವೋ ಆ ಹಂತದಲ್ಲಿಯೇ ಆ ಕೆಲಸ ಇದೆ. ಸುಮಾರು 1078 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 2001ನೇ ಇಸವಿಯೊಳಗೆ ಆ ಕಾವೇರಿ ಕುಡಿಯುವ ನೀರಿನ 4ನೇ ಹಂತದ ಮೊದಲನೇ ಘಟ್ಟದ ಕೆಲಸವನ್ನು ಮುಗಿಸಬೇಕಾಗಿದೆ. ಈ ಯೋಜನೆಯಿಂದ 270 ಎಂ.ಎಲ್.ಡಿ. ನೀರನ್ನು ನಾವು ತರಬಹುದು. ದಯವಿಟ್ಟು ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಈ ಸದನ ಮುಗಿದ ಮೇಲೆ ಅಥವಾ ಒಂದು ವಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆದು ಏತಕ್ಕೋಸ್ಕರ ಈ ಕೆಲಸ ನಿಂತಿದೆ, ಇದರ ಉದ್ದೇಶ ಏನು, ಎನ್ನುವುದರ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ. ಬೆಂಗಳೂರಿನ ಕುಡಿಯುವ ನೀರಿಗೆ ಕಾವೇರಿ ಮೊದಲನೇ ಸ್ಟೇಜ್‌ಗೆ 36 ಕೋಟಿ ರೂಪಾಯಿಗಳು, 2ನೇ ಸ್ಟೇಜ್‌ಗೆ 82 ಕೋಟಿ ರೂಪಾಯಿಗಳು, 3ನೇ ಸ್ಟೇಜ್‌ಗೆ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೂ ಅಲ್ಲದೆ 4ನೇ ಹಂತದ ಮೊದಲನೇ ಘಟ್ಟಕ್ಕೆ ಸುಮಾರು 1072 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಖರ್ಚು ಮಾಡುತ್ತಿರತಕ್ಕಂಥ 1072 ಕೋಟಿ ರೂಪಾಯಿಗಳಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಸಾಲದ ರೂಪದಲ್ಲಿ ಕೇವಲ ಶೇಕಡ ಒಂದು ಅಥವಾ ಎರಡರಷ್ಟು ಹಣ ಬರುತ್ತದೆ. ಆದ್ದರಿಂದ ಈ ಯೋಜನೆಯನ್ನು ತತ್‌ಕ್ಷಣವೇ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ 1072 ಕೋಟಿ ರೂಪಾಯಿಗಳಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಬೆಂಗಳೂರಿನಲ್ಲಿರತಕ್ಕಂಥ ಕೆರೆಕಟ್ಟೆಗಳಲ್ಲಿರುವ ಮಾಲಿನ್ಯ ನೀರನ್ನು ಸ್ವಚ್ಛತೆಗೊಳಿಸುವುದಕ್ಕೆ ಮತ್ತು ಟ್ರೀಟ್‌ಮೆಂಟ್ ಪ್ಲಾಂಟ್‌ನ್ನು ಹಾಕಿಸುವುದಕ್ಕೆ ಖರ್ಚು ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ನಾವು ಅವೆಲ್ಲವನ್ನು ಕೂಡ ಟೆಂಡರ್ ಮುಖೇನ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ಸೂಚನೆ ಕೊಟ್ಟಿದ್ದರೂ ಕೂಡ ಕೆಲವು ಅಧಿಕಾರಿಗಳು ಒತ್ತಡಕ್ಕೆ ಏನೋ ಈ ಕೆಲಸಗಳ ಚಾಲನೆ ಆಗಿಲ್ಲ, ಕೆಲಸಗಳು ನಿಂತಿವೆ. ಈ 4ನೇ ಹಂತದ ಮೊದಲನೇ ಘಟ್ಟದ ಕಾವೇರಿ ಕುಡಿಯುವ ನೀರಿನ ಯೋಜನೆಗಳನ್ನು ತಾವು 2001ನೇ ಇಸವಿಯೊಳಗೆ ಮಾಡಿದರೆ

ನಮಗೆ ಒ.ಇ.ಸಿ.ಎಫ್ ಜಪಾನ್‌ನವರ ಸಹಾಯ ಪಡೆಯತಕ್ಕಂಥಾದ್ದಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರು ನಗರ ಇದು ಹೃದಯ ಇದ್ದ ಹಾಗೆ, ಈ ನಗರದ 50 ಲಕ್ಷ ಜನ ತಮ್ಮ ಮೇಲೆ ವಿಶ್ವಾಸದ ದೃಷ್ಟಿಯನ್ನು ಇಟ್ಟಿದ್ದಾರೆ. ಆದ್ದರಿಂದ ರಾಜ್ಯವನ್ನು ಪ್ರೀತಿ ವಿಶ್ವಾಸದಿಂದ ಕಾಣುವುದರ ಜೊತೆಗೆ ಈ ನಗರದ ಮೇಲೆ ಕೂಡ ಬಹಳಷ್ಟು ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡು ಕೆಲಸಮಾಡಬೇಕು. ಇನ್ನು ಬೆಂಗಳೂರು ನಗರದಲ್ಲಿ ಕೆಲವು ಇಲಾಖೆಗಳನ್ನು ಕ್ರೋಢೀಕರಿಸಿ ಇಂಥಿಂಥ ಇಲಾಖೆಗೆ ಏನೇನು ಕರ್ತವ್ಯ ನಿರ್ವಹಿಸಬೇಕು ಎನ್ನುವುದರ ಬಗ್ಗೆ ತಿಳಿಸದೇ ಹೋದರೆ ಅದರಿಂದ ಕಷ್ಟವಾಗುತ್ತದೆ. ಇನ್ನು ಬೆಂಗಳೂರಿನಲ್ಲಿ ಡಿ.ಎಲ್.ಎಫ್. ಕಾಲೋನಿಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಅನುಮತಿ ಕೊಟ್ಟಿದ್ದನ್ನು ಹಿಂದೆ ಇದ್ದಂಥ ಸರ್ಕಾರ ಅದನ್ನು ವಿತ್‌ಡ್ರಾ ಮಾಡುವುದಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದರೂ ಕೂಡ ಏಕೋ ಏನೋ ನಮ್ಮ ಅಧಿಕಾರಿಗಳು ಆ ತೀರ್ಮಾನವನ್ನು ಗೆಜೆಟ್ ಮುಖಾಂತರ ಪ್ರಚಾರಪಡಿಸುವಂಥ ಕೆಲಸವನ್ನು ಇವತ್ತಿನವರೆಗೆ ಮಾಡಿಲ್ಲ. ಇದರಲ್ಲಿ ಯಾರ್‍ಯಾರದು ಎಷ್ಟೆಷ್ಟು ಆಸಕ್ತಿ ಇದೆಯೋ ಅದರ ಬಗ್ಗೆ ನನಗೆ ಅನುಮಾನ ಇದೆ. ಆದ್ದರಿಂದ ಮನೆಗಳನ್ನು ಕಟ್ಟುವುದಕ್ಕೆ ಡಿ.ಎಲ್.ಎಫ್.ಗೆ ಕೊಟ್ಟಂಥ ಅನುಮತಿಯನ್ನು ರದ್ದುಪಡಿಸುವುದಕ್ಕೆ ಆದಂಥ ತೀರ್ಮಾನವನ್ನು ತಕ್ಷಣವೇ ಜಾರಿಗೊಳಿಸುವುದಕ್ಕೆ ತಾವು ಕಾರ್ಯಕ್ರಮಗಳನ್ನು ದಯವಿಟ್ಟು ಹಮ್ಮಿಕ್ರೊಳ್ಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಬೆಂಗಳೂರು ನಗರಕ್ಕೆ ತರತಕ್ಕಂಥ ಕುಡಿಯುವ ನೀರಿಗೆ 1000 ಲೀಟರ್‌ಗೆ 13 ರೂ.ಗಳನ್ನು ಕೊಡುತ್ತಿದ್ದೇವೆ. ಇದರ ಬಗ್ಗೆ ಈ ಸದನದಲ್ಲಿ ಕೂಡ ಅನೇಕ ಸಂದರ್ಭದಲ್ಲಿ ಚರ್ಚೆ ಆಗಿತ್ತು. ಪುನಃ ಮತ್ತೊಂದು ಯೋಜನೆಯನ್ನು ಹಿಂದೆ ಇದ್ದಂಥ ಸರ್ಕಾರ ತೆಗೆದುಕೊಂಡಿದ್ದು ಅದನ್ನು ಪುನರ್‌ಪರಿಶೀಲನೆ ಮಾಡಬೇಕೆನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಯೋಜನೆ ಏನಾದರೂ ಆಗಿದ್ದೇ ಆದರೆ 1000 ಲೀಟರ್ ನೀರಿಗೆ ಸುಮಾರು 40 ರೂ.ಗಳು ಆಗುತ್ತದೆ. ಅದರ ಬಗ್ಗೆ ಇನ್ನೊಂದು ಸಲ ಚರ್ಚೆ ಮಾಡುವುದಾದರೆ ಅದರ ವಿವರಣೆಯನ್ನು ಕೊಡತಕ್ಕಂಥದ್ದು ಆಗಲಿ. ಬೆಂಗಳೂರು ನಗರದ ಪ್ರಜೆಗಳಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಒತ್ತನ್ನು ಕೊಡುವುದು ಸರ್ಕಾರದ ಕರ್ತವ್ಯವಾಗಿರಬೇಕು, ಏಕೆಂದರೆ ಇಲ್ಲಿ ಬಹಳಷ್ಟು ಮಧ್ಯಮವರ್ಗದವರು ಮತ್ತು ಬಡವರು ವಾಸ ಮಾಡುತ್ತಿದ್ದಾರೆ. ಈ ನಗರದ ಜನ ಯಾವ ರೀತಿ ಸರ್ಕಾರವನ್ನು ಪ್ರೀತಿಸುತ್ತಾರೋ ಅದನ್ನು ಇಡೀ ರಾಜ್ಯ ಅವಲಂಬಿಸುತ್ತದೆ. ಬೆಂಗಳೂರು ನಗರದಲ್ಲಿ ಸುಮಾರು 400 ಕೊಳೆಗೇರಿಗಳಿವೆ. ಈ 400 ಕೊಳಚೆ ಪ್ರದೇಶಗಳಲ್ಲಿ ಇರುವಂಥವರಿಗೆ ನ್ಯಾಯವಾಗಿ ಸಿಗಬೇಕಾದಂಥ ಮೂಲಭೂತ ಸೌಕರ್ಯಗಳಿಲ್ಲ. ಅವರಿಗೆ ಪ್ರಾಥಮಿಕ ಶಿಕ್ಷಣದ ಸೌಲಭ್ಯ ಇಲ್ಲ. ಬೆಂಗಳೂರು ನಗರದ ಅನೇಕ ಕಡೆ ನಾನು ಸುತ್ತಾಡಿದ್ದೇನೆ ಮತ್ತು ಮಾನ್ಯ ಸಚಿವರಾದ ಶ್ರೀ ರೋಷನ್‌ಬೇಗ್‌ರವರು ಕೂಡ ಇಲಾಖೆಯ ಕಾರ್ಯನಿರ್ವಹಣೆಯನ್ನು ಮಾಡಿದಾಗ ಸುತ್ತಾಡಿದ್ದಾರೆ. ಈ ನಗರಕ್ಕೆ ಹೊಸದಾಗಿ ಕಾಯಕಲ್ಪ ಕೊಡುವುದಕ್ಕೆ 400 ಕೊಳಚೆ ಪ್ರದೇಶಗಳನ್ನು ಒಂದು ತಹಬದಿಗೆ ತಂದು ಅವರು ಮನುಷ್ಯರಾಗಿ ಜೀವನ ಮಾಡುವುದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡುವುದರ ಜೊತೆಗೆ ಪ್ರೈಮರಿ ಎಜ್ಯುಕೇಷನ್ ಕೊಡುವುದಕ್ಕೆ ಕೂಡ ಈ ಸರ್ಕಾರ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅನೇಕ ಸಿ.ಎಂ.ಸಿ.ಗಳು ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆಯೇ ಇದೆ. ಅವುಗಳಲ್ಲಿ ಬರುವ ಎಲ್ಲವೂ ಖಾಸಗಿ ಬಡಾವಣೆಗಳು.

ರೆವಿನ್ಯೂ ಪ್ಯಾಕೆಟ್‌ಗಳನ್ನು ಸಕ್ರಮಗೊಳಿಸಬೇಕೆಂದು ಹೇಳಿದ ಸಂದರ್ಭದಲ್ಲಿ, ಇವತ್ತು ಅನೇಕ ಸನ್ಮಿತ್ರರು, ಅಲ್ಲಿ ಕುಳಿತಿರುವ ಸಚಿವರು ಅವತ್ತು ನಾನು ತಂದ ಬಿಲ್‌ನ್ನು ವಿರೋಧ ಮಾಡಿದರು. ಅದರ ಅವಶ್ಯಕತೆ ಎಷ್ಟಿದೆ ಎನ್ನುವುದನ್ನು ಇವತ್ತು ತಾವೇ ಚಿಂತಿಸಬೇಕು. ಲಕ್ಷಾಂತರ ಮನೆಗಳಿಗೆ ಇವತ್ತು ಇಲ್ಲ, ಕಂದಾಯ ಇಲ್ಲ. ಯಾವನೋ ಮನೆ ಕಟ್ಟಿದ್ದಾನೆ, ಅದರ ಸೌಲಭ್ಯಗಳನ್ನು, ಬಾಡಿಗೆಯನ್ನು ಪಡೆಯುತ್ತಿದ್ದಾನೆ. ಆದರೆ, ಮೂಲಭೂತ ಸೌಕರ್ಯಗಳನ್ನು ಕೊಡುವುದರಲ್ಲಿ ಮಧ್ಯಮ ವರ್ಗದವರಿಗೆ ವಂಚಿತವಾಗಿದೆ. ಆ ಒಂದೇ ಒಂದು ತಿದ್ದುಪಡಿ ಬಗ್ಗೆ ಸುಮಾರು ಎರಡು ದಿನಗಳ ಕಾಲ ಕೆಳಮನೆ, ಮೇಲ್ಮನೆಯಲ್ಲಿ ಚರ್ಚೆ ನಡೆಸಿದರೂ, ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸುವ ವ್ಯವಸ್ಥೆಯಾಗಿದೆ. ಆ ಒಂದು ರೆವಿನ್ಯೂ ಪ್ಯಾಕೆಟ್‌ಗಳ 38ಡಿ ಎಂದು ಏನು ಹೇಳಿದ್ದೀರಿ ಅದರ ಬಗ್ಗೆ ತಾವು ಚಿಂತಿಸಿ. ಅದರ ಅವಶ್ಯಕತೆ ಇದೆ ಎನ್ನುವುದಾದರೆ ಅದನ್ನು ತಾವು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಬೆಂಗಳೂರು ನಗರಕ್ಕೆ ತಾವು ಹೊಸ ವ್ಯವಸ್ಥೆಯನ್ನು ತರುತ್ತೇವೆಂದು ಹೇಳಿದ್ದೀರಿ. ಹೊಸ ವ್ಯವಸ್ಥೆ ತರುವುದರಲ್ಲಿ ಹಿಂದೆ ಇದ್ದ ಸರ್ಕಾರ ಮಾಡಿರುವ ಕೆಲವು ಯೋಜನೆಗಳನ್ನು ಕೂಡ ನಾವು ಯಾವುದೇ ಕಾರಣಕ್ಕೂ ಕುಂಠಿತಗೊಳಿಸುವುದಿಲ್ಲವೆಂದು ಹೇಳಿದ್ದೀರಿ. ಎಲ್ಲಕ್ಕಿಂತ ಹೆಚ್ಚಾಗಿ, ಬೆಂಗಳೂರು ನಗರ ರಾಷ್ಟ್ರದ 5ನೇ ನಗರವಾಗಿದ್ದು, ಅದಕ್ಕೆ ತಾವು ಎಷ್ಟು ಒತ್ತು ಕೊಡಬೇಕೋ, ಅಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಈ ನಗರದ ಯಾವ ರಿಂಗ್ ರಸ್ತೆ ಇದೆ, ಇದನ್ನು ತಾವು ಏನಾದರೂ ಮಾಡದೇ ಹೋದರೆ, ಮುಂದಿನ ಪೀಳಿಗೆಗೆ ನಾವು ಶಾಪಗ್ರಸ್ಥರಾಗುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ನಂಜಯ್ಯನ ಮಠರವರು, ನಾವು ಮಾಡಿರುವ ಒಳ್ಳೆಯ ಕೆಲಸಗಳು ಯಾವ ರೀತಿ ತೊಂದರೆ ಇದ್ದಾಗ ನಮ್ಮಲ್ಲಿ ಒಗ್ಗಟ್ಟಿಲ್ಲದಿದ್ದರೆ ಏನಾಗುತ್ತದೆಂಬ ಬಗ್ಗೆ ತುಂಬಾ ಚೆನ್ನಾಗಿ ಹೇಳಿದರು. ಒಗ್ಗಟ್ಟು ಭಾರೀ ಚೆನ್ನಾಗಿತ್ತು. ಆದರೆ, ನಮ್ಮಲ್ಲಿದ್ದವರು ಒಬ್ಬರು ಪಟೇಲರು, ಒಬ್ಬರು ಶಾನುಭೋಗರು, ಮತ್ತೊಬ್ಬರು ಗೌಡರು. ಗೌಡರು, ಶಾನುಭೋಗರು ತುಂಬಾ ಚೆನ್ನಾಗಿ ಕೆಲಸ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದು, ಏನೋ ಮಾಡುತ್ತಿದ್ದರು. ಆದರೆ, ಕಲಿಯುಗದ ಕೊನೆ ಹಂತದಲ್ಲೂ, ಒಂದೊಂದು ಸಾರಿ ಶಾನುಭೋಗರು ಮಾಡಿದ ಕೆಲವು ಕೆಲಸಗಳಿಂದ ಇವತ್ತು ನಾವು ಈ ಭಾಗದಲ್ಲಿ ಕುಳಿತು ಕೊಳ್ಳುವುದಕ್ಕೆ ಬಂದಿದ್ದೇವೆ. ದಯಮಾಡಿ, ನಿಮ್ಮಲ್ಲೇನಾದರೂ ಆ ಭಾವನೆಗಳಿದ್ದರೆ, ಅದನ್ನು ಮರೆತು, ನೀವು ಮತ್ತೇನಾದರೂ 132 ಜನರು ಬಂದಿದ್ದೇವೆಂದು ಹೇಳಿದರೆ, ನೀವು ಮತ್ತೆ ಇಲ್ಲಿ ಬರಬೇಕಾಗುತ್ತದೆ. ನಾವು ಅಲ್ಲಿ ಹೋಗಬೇಕಾಗುತ್ತದೆ. ತಾವು ಅದರ ಬಗ್ಗೆ ಚಿಂತಿಸಿ. ನಾನು ಸ್ವತಂತ್ರನಾಗಿ ಚುನಾವಣೆಗೆ ನಿಲ್ಲುವುದಕ್ಕೆ ಮುಂಚಿತವಾಗಿ ಮುಂದಿನ ಯೋಜನೆ ಏನು ಮಾಡಬೇಕೆಂಬ ಬಗ್ಗೆ ಸಭೆ ಮಾಡಿದ್ದಾಗ, ಆ ಜನ ಸಾಗರವನ್ನು ನೋಡಿ ದುಃಖಿತನಾಗಿ ನಮ್ಮ ನಾಯಕರುಗಳಿಗೆ, ಅದು ಏಕೆ ಬಂತೋ ಗೊತ್ತಿಲ್ಲ, ನಾನು ಚಿಕ್ಕವನು, ಯಾರ್‍ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೋ, ಅವರು ಸತ್ಯನಾಶವಾಗಲೆಂದು ಹೇಳಿದ್ದೆ. ಅದೇ ರೀತಿಯಾಗಿ ಅವರು ಮೂರು ಜನರೂ ಸತ್ಯನಾಶವಾಗಿ ಮೂಲೆಯಲ್ಲಿ ಕುಳಿತಿದ್ದಾರೆ. ಆದ್ದರಿಂದ, ದಯಮಾಡಿ ತಾವು ಮತ್ತೊಂದು ಸಾರಿ ಏನಾದರೂ ನೀವು ಆ ರೀತಿಯಾದರೆ, ಸತ್ಯನಾಶವಾಗುತ್ತೀರಿ, ಅದರ ಬಗ್ಗೆ ನೀವು ಯೋಚಿಸಬೇಕಾಗುತ್ತದೆ. ಅದನ್ನು ಮಾಡದೇ ಹೋದರೆ ಕಷ್ಟವಾಗುತ್ತದೆ. ರಾಜ್ಯದ ಜನರು ಬುದ್ಧಿಜೀವಿಗಳು. ಈ ರಾಜ್ಯದ ಜನ ಸುಸಂಕೃತರು. ರಾಜ್ಯದ ಜನರು, ರಾಜ್ಯಕ್ಕೆ ಏನಾದರೂ ಅಪಾರವಾದ ಕೊಡುಗೆಯನ್ನು

ಕೊಡುತ್ತಾರೆಂಬ ಹಂಬಲವನ್ನು ಇಟ್ಟುಕೊಂಡು, ಕೆಲಸಕಾರ್ಯಗಳನ್ನು ಮಾಡುವವರಿಗೆ ಬಾಲನೆ ಕೊಡದೇ ಹೋದರೆ, ಜನರು ಬುದ್ಧಿ ಕಲಿಸುತ್ತಾರೆನ್ನುವುದಕ್ಕೆ ನಾವೇ ಉದಾಹರಣೆಯಾಗಿದ್ದೇವೆ. ನನ್ನ ಕನಸಾದರೂ ಇಷ್ಟೆ, ತಾವು ರಾಜ್ಯದ ಸಮಗ್ರ ಅಭಿವೃದ್ಧಿಗೆ ಯಾವ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೀರೋ, ಆ ಕಾರ್ಯಕ್ರಮಗಳಿಗೆ ನಮ್ಮ ಸ್ವಾಗತವಿದೆ. ಆದರೆ, ನಮ್ಮಂಥ ಪಕ್ಷೇತರರಾಗಿ ಗೆದ್ದಿರುವ ಕೆಲವು ಕ್ಷೇತ್ರಗಳಿಗೆ, ನಮ್ಮ ಮುಖಗಳನ್ನು ನೋಡಿ ಮತ ಹಾಕಿರುವ ಮತದಾರರಿಗೆ ತಾವು ಯಾವುದೇ ಅಧಿಕಾರದ ವ್ಯಾಪ್ತಿಯಲ್ಲಿ ನಮಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾದ ಜವಾಬ್ದಾರಿ ತಮ್ಮದು ಹಾಗೂ ಮಾನ್ಯ ಮುಖ್ಯಮಂತ್ರಿಗಳದು. ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದ ವೈಶಿಷ್ಟ್ಯತೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆನ್ನುವ ಮಾತನ್ನು ಹೇಳುತ್ತೇನೆ. ನಾವು 19 ಜನರು ಸೇರಿ ನಿನ್ನೆ ಒಂದು ಸಭೆ ಮಾಡಿದ್ದೇವು. ನನಗನ್ನಿಸುತ್ತದೆ, ವಿರೋಧ ಪಕ್ಷದಲ್ಲಿ ಕುಳಿತಿರುವ ಬುದ್ಧಿಜೀವಿಗಳು ಅವರ ಜೊತೆ ಸರಿಸಾಟಿಯಾಗಿ....

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು): ಮಾನ್ಯ ಸುಬ್ಬಾರೆಡ್ಡಿಯವರು ಅವರಲ್ಲಿ ಸೇರಿದ್ದಾರೆಯೇ?

ಶ್ರೀ ವಿ. ಸೋಮಣ್ಣ: ಅವರೂ ಇಷ್ಟರಲ್ಲೇ ಬರುತ್ತಾರೆ. ಬಹುತೇಕ ಬುದ್ಧಿಜೀವಿಗಳಿದ್ದಾರೆ. ನಮ್ಮ ಆಸೆ, ಕನಸಾದರೂ ಇಷ್ಟೆ, ಯಾವ ಅಧಿಕಾರವಿಲ್ಲದೆ ಇದ್ದ ಸಂದರ್ಭದಲ್ಲಿ, ಅನೇಕರು ಇಲ್ಲಿ ಮಾತನಾಡಿದ್ದಾರೆ. ವಿಶೇಷವಾಗಿ ಮಾನ್ಯ ಖರ್ಗೆ, ಮಾನ್ಯ ಧರ್ಮಸಿಂಗ್‌ರವರ ಮಾತುಗಳು ಮನಮುಟ್ಟುವಂತಿವೆ. ಮುಂದಿನ ಸಾಲಿನಲ್ಲಿರುವವರೆಲ್ಲರೂ ಕೂಡ 60 ವಯಸ್ಸು ದಾಟಿರುವವರೇ. ನಿಮ್ಮಷ್ಟು ವಯಸ್ಸಿನವರೆಗೆ ರಾಜಕಾರಣದಲ್ಲಿ ನಾನಾದರೂ ಇರುತ್ತೇನೆಯೋ ಇಲ್ಲವೋ ಎಂಬ ಅನುಮಾನವಿದೆ. ನಾನು ಕೇವಲ ಇನ್ನೂ 10 ವರ್ಷಗಳಿರಬಹುದು; ಅದರ ಮೇಲೆ ಇರುವುದಕ್ಕಾಗುವುದಿಲ್ಲ. ಆದರೆ, ಯಾವುದೋ ಒಂದು ಪೂರ್ವಜನ್ಮದ ಸುಕೃತವೆಂದು ಕಾಣಿಸುತ್ತದೆ. ನಾನು ಸದನದಲ್ಲಿ ಬಹಳ ಕಿರಿಯವನಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ, ಅವರ ಸಚಿವಸಂಪುಟದ ಹಿರಿಯರಿಗೆ ಮನವಿ ಮಾಡುವುದಿಷ್ಟೆ, ಈ ರಾಜ್ಯದ ಅಭಿವೃದ್ಧಿಯನ್ನು ಮಾಡುವ ಸಂದರ್ಭದಲ್ಲಿ ಪಕ್ಷೇತರ ಸದಸ್ಯರು ಅವರು ವಿರೋಧಪಕ್ಷದವರಿದ್ದರೂ ಸಹ, ಇವರು ಕಾರ್ಯಕರ್ತರಿಗೆ ತೊಂದರೆ ಕೊಟ್ಟಿದ್ದಾರೆಂದು ಅನಾವಶ್ಯಕವಾಗಿ ಯಾವುದೇ ಗೊಂದಲಗಳನ್ನು ಕೊಡುವುದಕ್ಕೆ ತಾವು ಹೊಸ ಪೀಠಿಕೆ, ಸಂಪ್ರದಾಯಗಳನ್ನು ಹಾಕದ ಹಾಗೆ ನೋಡಬೇಕೆನ್ನುವ ಮಾತನ್ನು ಹೇಳಿ, ಜನ ಪ್ರತಿನಿಧಿ ಆದವರು ಜನರ ಒಳಿತಿಗೋಸ್ಕರ, ಜನರ ದುಃಖದುಮ್ಮಾನ ಅರಿತುಕೊಳ್ಳುವುದಕ್ಕೋಸ್ಕರ ತಾವು ಯಾವ ರೀತಿ ಉತ್ತಮವಾದ ಕೆಲಸಗಳನ್ನು ಮಾಡುತ್ತೀರೋ, ಅದಕ್ಕೆ ನಾವು 19 ಜನರು ನಿಮ್ಮ ಜೊತೆಯಲ್ಲಿರುತ್ತೇವೆ. ನಮ್ಮನ್ನೇನಾದರೂ ಸರಿಯಾಗಿ ನೋಡಿಕೊಳ್ಳದೇ ಹೋದರೆ, ನಾವಂತೂ ಅಲ್ಲಿ ಬಾವಿಯಲ್ಲಿ, ಮನೆ ಹತ್ತಿರ ಕುಳಿತುಕೊಳ್ಳುವುದೋ ಮತ್ತೊಂದೋ ತದನಂತರ ಮಾಡುತ್ತೇವೆ. ಆದರೆ, ನಿಮ್ಮಲ್ಲೇ ಒಳ ಜಗಳ ಬಂದಾಗ, ನಿಮ್ಮ ಜೊತೆಯಲ್ಲಿ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡ್ಯೊಯ್ಯುವುದಕ್ಕೆ ನಾವು ಇರುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮಗೆ ಬೇಕಾಗಿರುವುದು ನಮ್ಮ ಕ್ಷೇತ್ರದ ಜನ, ರಾಜ್ಯದ ಹಿತ. ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿ. ಇಷ್ಟನ್ನು ಬಿಟ್ಟರೆ, ನಮ್ಮ ಕನಸು ಮತ್ತೊಂದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಕೊನೆಯಲ್ಲಿ ಮನವಿ ಮಾಡುತ್ತೇನೆ, ತಾವು ಯಾರು ಇಲ್ಲಿದ್ದೀರಿ, ಒಂದೊಂದು ಸಾರಿ

ಬೆಂಗಳೂರು ನಗರಕ್ಕೆ ಬಂದಾಗ, ನಗರಕ್ಕೆ ಇದು ಎಲ್ಲಾ ಬೇಕೆ? ಎಂಬ ಮಾತನ್ನು ಆಡುತ್ತಾರೆ. ಈ ರಾಷ್ಟ್ರದ ಜನತೆಯ ಕಣ್ಣನ್ನು ತೆರೆಸಿರುವುದೇ ಈ ನಗರ, ಇಲ್ಲಿ 100ಕ್ಕೆ 90ಜನರು ವಾಸ ಮಾಡುತ್ತಾರೆ. ಕಡು ಬಡವ, ಎಲ್ಲಾ ವರ್ಗದ ಜನ ಇರುವುದು ಇಲ್ಲೇ. ಶಾಂತಿ, ನೆಮ್ಮದಿಗೆ ಪ್ರಸಿದ್ಧಿ ಪಡೆದಿರುವ ನಗರವಿದು. ಇದಕ್ಕೆ ತಾವು ಹೆಚ್ಚಿನ ಆದ್ಯತೆ ಕೊಡದೇ ಹೋದರೆ, ಖಂಡಿತವಾಗಿಯೂ ನಮಗೇನೂ ತೊಂದರೆ ಇಲ್ಲ; ನಿಮಗೂ ತೊಂದರೆ ಎಂದು ಹೇಳುತ್ತಿಲ್ಲ; ಎಲ್ಲೋ ಒಂದು ಕಡೆ ಜನರಿಗೆ ಮೋಸ ಮಾಡಿದ ಹಾಗಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ವಿಶ್ವನಾಥ್‌ರವರು ತಮ್ಮ ಸಚಿವ ಸಂಪುಟದ ತೀರ್ಮಾನದಲ್ಲಿ, 20 ವರ್ಷ ಕಳೆದಿರುವ ಉಪಾಧ್ಯಾಯರಿಗೆ ಯಾವ್ಯಾವ ರೀತಿ ನಡೆದುಕೊಳ್ಳಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿರುವ ಸರ್ಕಾರಿ ಶಾಲಾ-ಕಾಲೇಜುಗಳಿಗೆ ತಾವೊಂದು ಸಾರಿ ಬಂದು ಅಲ್ಲಿರುವ ದುರ್ವ್ಯವಸ್ಥೆ ನೋಡಬೇಕು. ನಿನ್ನೆ ತಾನೆ ತಮ್ಮ ಮಿತ್ರರಾದ ಪಾಪಣ್ಣನವರು, ಮಳೆ ಬಂದು ಸರ್ಕಾರಿ ಶಾಲೆ ಮಕ್ಕಳು ಕುಳಿತುಕೊಳ್ಳಲು ಸಾಧ್ಯವಿಲ್ಲದಂತಾಗಿದೆ ಎಂದು ಹೇಳುತ್ತಿದ್ದರು. ಬೆಂಗಳೂರಿನಂಥ ದೊಡ್ಡ ನಗರದಲ್ಲೂ ಆ ಅವ್ಯವಸ್ಥೆ ಇದೆ. ಆರೋಗ್ಯ ಇಲಾಖೆ, ಅನೇಕ ಇಲಾಖೆಗಳು, ವಿಶೇಷವಾಗಿ ಸಾರಿಗೆ ಇಲಾಖೆ ಬಗ್ಗೆ ಹೇಳುವುದಾದರೆ, ಮೊದಲನೆ ಬಾರಿಗೆ, ಬಿಎಂಟಿಸಿಯನ್ನು ಮಾಡಿ ಚಾಲನೆ ಕೊಟ್ಟಿರುವ ಕೀರ್ತಿ ನಮ್ಮ ಜನತಾದಳ(ಯು) ನಾಯಕರಾಗಿರುವ ಮಾನ್ಯ ಸಿಂಧ್ಯಾರವರಿಗೆ ಸಲ್ಲಬೇಕು. ತಾವು ಈಗಾಗಲೇ ಕೊಟ್ಟಿರುವ ಕಾರ್ಯಕ್ರಮಗಳನ್ನು ಮಾಡಿ. ಈ ನಗರದಲ್ಲಿ ಸಣ್ಣ ತೊಂದರೆಯಾದರೂ ಸಹ ಬಹಳ ಜನ ಬೆಳಗಿನಿಂದ ಸಂಜೆವರೆಗೆ ದುಡಿಮೆ ಮಾಡಿ ಜೀವನ ಮಾಡುವವರು ತೊಂದರೆಗೀಡಾಗುತ್ತಾರೆ. ಇವರ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ತಮ್ಮ ಆದ್ಯ ಕರ್ತವ್ಯವೆಂದು ಹೇಳುತ್ತಾನೆ. ಎಲ್ಲಾ ಶಾಸಕರು ಮತ್ತು ಸಚಿವರಲ್ಲಿ ನನ್ನ ಮನವಿ ಇಷ್ಟೆ, ನಗರದ ಸೌಲಭ್ಯ, ಸವಲತ್ತುಗಳನ್ನು ಕೊಡುವುದಕ್ಕೆ, ನಗರಕ್ಕೆ ಬೇಕಾದ ಅನೇಕ ಕೆಲಸಕಾರ್ಯಗಳನ್ನು ಮಾಡುವಾಗ ತಾವು ಯಾರೂ ಸಾರ್ವಜನಿಕರ ಕೆಲಸಗಳಿಗೆ ಅಡ್ಡಿಪಡಿಸಬಾರದೆಂಬ ಮಾತನ್ನು ಹೇಳುತ್ತೇನೆ. ಕೊಳಚೆಪ್ರದೇಶದಲ್ಲಿರುವ ಕಡುಬಡವರಿಗೆ ತಾವು ರಾಜ್ಯದ ಮೂಲೆಮೂಲೆಯಲ್ಲಿ ಏನು ಕೆಲಸ ಮಾಡುತ್ತೀರೋ, ಆ ವ್ಯವಸ್ಥೆಯನ್ನು ನಮಗೂ ಕೂಡ ಕೊಡಬೇಕಾಗುತ್ತದೆಂದು ಹೇಳಿ ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಮತ್ತೊಮ್ಮೆ ಮುಖ್ಯಮಂತ್ರಿಗಳ ಮೇಲೆ, ಅವರ ಸಚಿವಸಂಪುಟದಮೇಲೆ ಅಪಾರವಾದ ನಂಬಿಕೆ ಇಟ್ಟು ಸ್ವಾಗತಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಚೆನ್ನಿಗಪ್ಪ(ಕೊರಟಗೆರೆ): ಮಾನ್ಯ ಅಧ್ಯಕ್ಷರೇ ನಿನ್ನೆ ತಾನೆ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸರ್ಕಾರದ ಅನೇಕ ಧ್ಯೇಯೋದ್ದೇಶಗಳನ್ನು ಪ್ರಕಟಣೆ ಮಾಡಿಸಿದ್ದಾರೆ. ಅದರಲ್ಲಿ ಮೊಟ್ಟಮೊದಲನೆಯದಾಗಿ, ಅಭಿವೃದ್ಧಿ ಜೊತೆಯಲ್ಲಿ ಮಾನವ ಸಂಪನ್ಮೂಲ, ಆರೋಗ್ಯ, ವಸತಿ, ಪೌಷ್ಠಿಕ ಆಹಾರ, ಶಿಕ್ಷಣ ಕೊಡುತ್ತೇವೆಂದು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿಯಾಗಿ, ಆ ಎಲ್ಲಾ ವಿಚಾರಗಳನ್ನು ಎಷ್ಟರಮಟ್ಟಿಗೆ ಅವರು ಪ್ರಾಯೋಗಿಕವಾಗಿ ಮಾಡುತ್ತಾರೆನ್ನುವುದು ಚಿಂತನೆ ಮಾಡಬೇಕಾದ ವಿಚಾರ. ಶಿಕ್ಷಣ, ಆರೋಗ್ಯ, ವಸತಿ ಸೌಕರ್ಯ, ಆಹಾರವನ್ನು ಕೊಡುವುದರ ಜೊತೆಗೆ, ಮನುಷ್ಯರಿಗೆ ಬೇಕಾದ ಅವಶ್ಯಕ ವಸ್ತುಗಳು ಅದರಲ್ಲೂ ನಮ್ಮ ರಾಜ್ಯ

ಹಣಕಾಸಿನ ವಿಚಾರದಲ್ಲಿ ಬಹಳ ಹಿಂದಿದೆ; ಹಿಂದಿನ ಎಷ್ಟೋ ಸರ್ಕಾರಗಳು ಶಿಕ್ಷಣ ಕೊಟ್ಟರೂ, ಅನೇಕ ಶಾಲೆಗಳಲ್ಲಿ ಉಪಾಧ್ಯಾಯರೇ ಇರಲಿಲ್ಲ, ಅನೇಕ ಜಿಲ್ಲೆ, ತಾಲ್ಲೂಕುಗಳಲ್ಲಿ ಕೊಠಡಿಗಳೇ ಇರುವುದಿಲ್ಲ. ಯಾವ ಸರ್ಕಾರವೂ ಹಳ್ಳಿಗಾಡಿನ ಜನರಿಗೆ ಸರಿಯಾದ ರೀತಿಯಲ್ಲಿ ಕನಿಷ್ಠ ಹತ್ತರಷ್ಟೂ ಆರೋಗ್ಯದ ಬಗ್ಗೆ ಚಿಂತನೆ ಮಾಡಿಲ್ಲ. ಇದು ಎಲ್ಲಾ ಶಾಸಕರಿಗೂ ಗೊತ್ತಿರುವ ವಿಚಾರ, ನಮ್ಮ ಹಳ್ಳಿಗಳಲ್ಲಿ ಆರೋಗ್ಯ ಕೇಂದ್ರಕ್ಕೆ ಹೋಗಬೇಕಾದರೆ 5-6 ಕಿ.ಮೀ. ದೂರ ಹೋಗಬೇಕು. ದೊಡ್ಡ ಕಾಯಿಲೆ ಬಂದರೆ ಜಿಲ್ಲಾ ಕೇಂದ್ರಕ್ಕೆ ಹೋಗುವ ಸಂದರ್ಭವಿದೆ. ಆದರೆ, ಆ ನಿಟ್ಟಿನಲ್ಲಿ ನಾನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ಆರೋಗ್ಯ ಸಂಸ್ಥೆಗಳನ್ನು ಓಪನ್ ಮಾಡುತ್ತೇವೆಂದು ನಿಲುವು ಇದ್ದು, ಹೆಚ್ಚಿನ ರೀತಿಯಲ್ಲಿ ಅವರಿಗೆ ಬೇಕಾದ ಅಗತ್ಯ ವಸ್ತುಗಳನ್ನು ಪೂರೈಸುತ್ತೇವೆಂಬ ಬಗ್ಗೆ ಸ್ಪಷ್ಟವಾಗಿ ತಿಳಿಸಿಲ್ಲ. ಅದು ತಿಳಿಸಬೇಕಾದ ವಿಚಾರ. ಅದೇ ರೀತಿ, ಶಿಕ್ಷಣರಂಗದಲ್ಲಿ ಇವತ್ತು ಯಾವ್ಯಾವ ಹಂತದಲ್ಲಿ ಶಿಕ್ಷಣವನ್ನು ನಾವು ಮಾರ್ಪಾಡು ಮಾಡುತ್ತೇವೆ ಎಂಬ ಆಧುನಿಕ ವಿಚಾರವನ್ನು ಪ್ರಸ್ತಾವನೆಮಾಡಿಲ್ಲ.

4.10 ಪಿ.ಎಂ.

ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಏನು ಮನವಿ ಮಾಡಿಕೊಳ್ಳುತ್ತೇನೆಂದರೆ, ಎಲ್ಲಾ ಮೂಲಭೂತ ಸೌಕರ್ಯಗಳು ಕಡುಬಡವರಿಗೆ ದೊರಕುವಂತಾಗಲು ತಮ್ಮ ಸರ್ಕಾರದಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕು. ಇವತ್ತು ಯಾವುದೇ ಸೌಲಭ್ಯಗಳಿಂದ ವಂಚಿತನಾಗಿರುವ ಸಮಾಜದ ಕಡೆಯ ಮನುಷ್ಯರು ಯಾರೇ ಇರಬಹುದು, ಬೀದರ್ ಇರಬಹುದು, ಬಳ್ಳಾರಿ ಇರಬಹುದು, ಗುಲ್ಬರ್ಗಾ ಇರಬಹುದು, ರಾಯಚೂರು ಇರಬಹುದು, ತುಮಕೂರು ಅಥವಾ ಕೋಲಾರ ಯಾವುದೇ ಒಂದು ಜಿಲ್ಲೆಯಾಗಬಹುದು; ಉದಾಹರಣೆಗೆ ಹೇಳುವುದಾದರೆ, ಕೆಲವೊಂದು ಗ್ರಾಮಗಳಲ್ಲಿ ಕುಡಿಯುವ ನೀರು ಸಿಕ್ಕುವುದಿಲ್ಲ. ಮೈಸೂರಿನಲ್ಲಿ ಕೆ.ಆರ್.ಎಸ್. ಇರುವುದರಿಂದ ಅಲ್ಲಿ ನೀರಾವರಿ ಸೌಕರ್ಯವಿದೆ. ಡ್ಯಾಂವಿರುವ ಕಡೆ ಅಂದರೆ ಭದ್ರಜಲಾಶಯದಲ್ಲಿ ನೀರಾವರಿ ಸೌಕರ್ಯವಿದೆ. ಇದೀಗ ತಾನೇ ನನ್ನ ಸ್ನೇಹಿತರು ಹೇಳಿದ ಹಾಗೆ ಪ್ರಾಂತ್ಯವಾರು ಹೆಚ್ಚು ಕಡಿಮೆಯಾಗಿದೆ ಎಂದು ಹೇಳಿರುವುದು ಸತ್ಯದ ಮಾತು. ಈ ಪ್ರಾದೇಶಿಕ ಅಸಮತೋಲನೆಯನ್ನು ಸಂಪೂರ್ಣವಾಗಿ ನಿವಾರಿಸಬೇಕಾದರೆ, ಹೊಸದಾಗಿ ರಚಿತವಾಗಿರುವ ಈ ಸರ್ಕಾರ ಮೊಟ್ಟಮೊದಲನೆಯದಾಗಿ ಹಳ್ಳಿಗಾಡುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಹಾಗೂ ರೈತನಿಗೆ ದೊರಕುವಂಥ ಆರೋಗ್ಯ ಸೌಲಭ್ಯಗಳು ಹಾಗೂ ಸಾರಿಗೆ ವ್ಯವಸ್ಥೆ ಮತ್ತು ಇದರ ಮಧ್ಯಮದಲ್ಲಿ ಬರತಕ್ಕಂಥ ಮಾರ್ಕೆಟ್ ವ್ಯವಸ್ಥೆ ಇವುಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ವಿಶೇಷವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ರೈತರು ಆರ್ಥಿಕವಾಗಿ ಉತ್ತಮಗೊಂಡು ಸರ್ಕಾರ ಹಾಗೂ ರಾಜ್ಯವೂ ಕೂಡ ಉತ್ತಮ ಸ್ಥಿತಿಯಲ್ಲಿರುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ. ನಾನೊಬ್ಬ ಹಳ್ಳಿಯ ಮಗನಾಗಿ, ರೈತನ ಮಗನಾಗಿ, ನಾನು ಏನು ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ಯೋಜನೆಗೆ ಹೆಚ್ಚಿನ ಒತ್ತನ್ನು ಕೊಟ್ಟು ಅದರಲ್ಲೂ ನೀರಾವರಿ ಇಲ್ಲದಂಥ ಕೆಲವು ಭಾಗಗಳಲ್ಲಿ ಬೋರ್‌ವೆಲ್ ಹಾಕುವ ವಿಚಾರ ಇರಬಹುದು, ಬಡವರಿಗೆ ಕೊಡುವಂಥ ನೀರಾವರಿ ಯೋಜನೆಗಳಾಗಬಹುದು, ಅಥವಾ ಅವರಿಗೆ ಕೊಡುವಂಥ ಸರ್ಕಾರಿ ಸಾಲ ಆಗಬಹುದು, ಇಂಥವುಗಳಲ್ಲಿ ಅವರಿಗೆ ಹೆಚ್ಚಿನ ಸಬ್ಸಿಡಿ ಕೊಟ್ಟು ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಕೆಲಸ ಮಾಡಬೇಕು. ಹೊಸದಾಗಿ ಸರ್ಕಾರ ಬಂದ ತಕ್ಷಣ ಈ ಎಲ್ಲಾ ಪ್ರಕಟಣೆ ಮಾಡಿದಾಕ್ಷಣವೇ ನಾವು ಅವರನ್ನು ಟೀಕೆ ಮಾಡುವುದಕ್ಕೆ ಯಾವುದೇ

ವಿಚಾರ ಇಲ್ಲ. ಹೊಸದಾಗಿ ಪ್ರಕಟಣೆ ಮಾಡಿರುವ ಎಲ್ಲಾ ಅಂಶಗಳನ್ನು ನೋಡಿದರೆ ಅವೆಲ್ಲಾ ಸ್ವಾಗತ ಮಾಡುವಂಥ ವಿಚಾರಗಳೇ ಆಗಿವೆ. ಇವುಗಳು ಪ್ರತಿಯೊಬ್ಬ ಮನುಷ್ಯನಿಗೆ ಬೇಕಾಗಿರುವಂಥ ಅಂಶಗಳಾಗಿವೆ. ಇಂಡಸ್ಟ್ರೀಸ್ ಇರಬಹುದು, ಕಾಮರ್ಸ್ ಇರಬಹುದು, ಟ್ರಾನ್ಸ್‌ಪೋರ್ಟೇಷನ್ ಇರಬಹುದು, ಕಮ್ಯುನಿಕೇಷನ್ ಇರಬಹುದು, ಪ್ರತಿಯೊಂದು ಅಂಶಗಳನ್ನು ಬಹಳ ಚೆನ್ನಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಕಟಿಸಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತಾ ಇದರಲ್ಲಿ ಅವರು ಎಷ್ಟರಮಟ್ಟಿಗೆ ಸಫಲರಾಗುತ್ತಾರೆ ಎಂದು ನಾವು ಕಾದು ನೋಡಬೇಕಾಗಿದೆ. ಮಾನ್ಯ ಸದಸ್ಯರಾದ ಸೋಮಣ್ಣನವರು ಹೇಳಿದ ಹಾಗೆ ಬೆಂಗಳೂರಿನ ವಿಚಾರ ಆಗಬಹುದು, ಇದು ಕೇವಲ ಬೆಂಗಳೂರನ್ನು ಉದ್ಧಾರ ಮಾಡುವಂಥ ವಿಚಾರವಲ್ಲ. ಬೆಂಗಳೂರಿನಂಥ ಅನೇಕ ನಗರಗಳು ರಾಜ್ಯದಲ್ಲಿವೆ. ಎಲ್ಲಾ ನಗರಕ್ಕೂ ಸಮಾನವಾದ ಅವಕಾಶವನ್ನು ಕೊಡಬೇಕು. ಏಕೆಂದರೆ ಎಲ್ಲಾ ಕಡೆ ನಾಗರೀಕರೂ, ವಿದ್ಯಾವಂತರು, ಇದ್ದಾರೆ. ಇಂಥ ವಿಚಾರಗಳಲ್ಲೂ ಕೂಡ ಸಮತೋಲನ ಕಾಪಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ನಾನು ಮನವಿ ಮಾಡುತ್ತೇನೆ.

ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದರಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾದ ಅವಕಾಶವನ್ನು ಕಲ್ಪಿಸಿಕೊಡಬೇಕು. ಗಂಡು ಮಕ್ಕಳು ಯಾವುದೇ ರೀತಿಯ ಕಷ್ಟಸಾಧ್ಯವಾದ ಕೆಲಸಗಳನ್ನು ಮಾಡಿ ಅವರ ಕುಟುಂಬವನ್ನು ಸಾಕಬಹುದು. ಕೆಲವು ಹೆಣ್ಣು ಮಕ್ಕಳಿಗೆ ಆ ಶಕ್ತಿ ಇರುವುದಿಲ್ಲ. ಇಂಥಾ ಸನ್ನಿವೇಶದಲ್ಲಿ ಸರ್ಕಾರ ಏನು ಮಾಡಬೇಕು ಎಂಬುದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಆರ್ಥಿಕ ವ್ಯವಸ್ಥೆಯನ್ನು ಕಲ್ಪಿಸುವುದರ ಮುಖೇನ ಸರ್ಕಾರ ಕೊಡುತ್ತಿರುವ ಸವಲತ್ತುಗಳನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ. ಮಾನ್ಯ ರಾಜ್ಯಪಾಲರ ಈ ಭಾಷಣದಲ್ಲಿ ಆರ್ಥಿಕವಾಗಿ, ಅವರ ಸ್ಥಿತಿಯನ್ನು ಉತ್ತಮಪಡಿಸುತ್ತೇವೆ ಎಂದು ಹೇಳಿದ್ದಾರೆ ಆದರೆ ಅವರೇನು ಮಾಡುತ್ತಾರೆ? ಅದಕ್ಕೇನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂಬುದನ್ನು ಹೇಳಿಲ್ಲ. ಏಕೆಂದರೆ, ಸ್ತ್ರೀಯರಿಗೆ ಕೊಡುವಂಥ ಹಣ ಯಾವುದು? ಎಷ್ಟು? ಇದಕ್ಕೆ ಎಷ್ಟು ಮೀಸಲಿಡುತ್ತೀರಿ? ಯಾವ ರೀತಿ ಮಾಡುತ್ತೀರಿ ಎನ್ನುವ ಬಗ್ಗೆ ಈ ಭಾಷಣದಲ್ಲಿ ಹೇಳಿಲ್ಲ. ಇದನ್ನು ನಾನು ನಿರಾಕರಿಸುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ದಿಟ್ಟವಾದ ನಿಲುವನ್ನು ತಾಳಬೇಕು ಹಾಗೂ ವ್ಯವಸಾಯದಲ್ಲಿ ಭಾಗಿಗಳಾಗಿರುವ ಸ್ತ್ರೀ ವರ್ಗಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಎಂದು ಮತ್ತೊಮ್ಮೆ ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ವಿದ್ಯುತ್‌ನ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದನ್ನು ನಾವು ಪ್ರತ್ಯೇಕವಾಗಿ ಕಂಡಂತಹ ವಿಚಾರ. ನಮ್ಮ ಸರ್ಕಾರ ಹೋಗಬೇಕಾದರೆ, ಕೆ.ಯಿ.ಬಿ.ಯಲ್ಲಿ ನಾವು ತೆಗೆದುಕೊಂಡಿರತಕ್ಕಂಥ ನಿರ್ಧಾರದಿಂದ ರೈತರು ನಮ್ಮನ್ನು ಮನೆಗೆ ಕಳುಹಿಸಿದರು. ಯಾವುದೇ ಗ್ರಾಮದಲ್ಲಿ ರೈತನಿಗೆ ಅವಶ್ಯಕವಾಗಿ ಬೇಕಾಗಿರತಕ್ಕಂಥ ಒಂದು ಲೈನ್ ಹಾಕುವುದಕ್ಕಾಗಲಿ, ಟ್ರಾನ್ಸ್‌ಫಾರ್ಮ್ ಹಾಕಬೇಕಾದರೆ, ಸರ್ವೀಸ್ ತೆಗೆದುಕೊಳ್ಳಬೇಕಾದರೆ ಅಧಿಕಾರಿಗಳ ಹಾವಳಿ ಬಹಳ ಇದೆ. ಇವರದೇ ಆದಂಥ ಒಂದು ನಿಲುವು ಇಂದು ಕಂಡುಬರುತ್ತದೆ. ಇದನ್ನು ರೈತರು ಚೆನ್ನಾಗಿ ಅರ್ಥ ಮಾಡಿಕೊಂಡು ಇವರು ಎಷ್ಟು ದಿನ ಅಧಿಕಾರದಲ್ಲಿದ್ದರೂ ರೈತರಿಗೆ ಅನುಕೂಲವಾಗುವುದಿಲ್ಲ, ಇವರು ಬಂದ ಕೂಡಲೇ ರೇಟ್ ಜಾಸ್ತಿಯಾಗುತ್ತದೆಂದು ತಿಳಿದುಕೊಂಡು ಈ ವರ್ಷ ನಮ್ಮನ್ನು ಈ ಕಡೆಗೆ ಕಳುಹಿಸಿ, ನಿಮ್ಮನ್ನು ಅಲ್ಲಿಗೆ ಕಳುಹಿಸಿದ್ದಾರೆ. ಈ

ವಿಚಾರಕ್ಕಾಗಿ ನಾನು ವಿಷಾದಿಸುತ್ತೇನೆ. ಯಾವುದೇ ಸರ್ಕಾರ ಇದರ ಬಗ್ಗೆ ಉತ್ತಮವಾದ ವಿಚಾರ ಮಾಡಿಲ್ಲ; ಹೆಚ್ಚಿನ ಪ್ರೋತ್ಸಾಹ ಕೂಡ ಕೊಟ್ಟಿಲ್ಲ ಎಂದು ಹೇಳುತ್ತೇನೆ. ಈ ಕೆ.ಇ.ಬಿ. ವಿಚಾರದಲ್ಲಿ ಮತ್ತೊಮ್ಮೆ ಧೀರ್ಘವಾಗಿ ಯೋಚನೆ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಗುಂಡೂರಾವ್ ಹಾಗೂ ಮಾನ್ಯ ಬಂಗಾರಪ್ಪನವರನ್ನು ನಾವು ಇಂದು ನೆನಪಿಸಿ ಕೊಳ್ಳಬೇಕಾಗಿದೆ. ಏಕೆಂದರೆ, 50 ರೂಪಾಯಿಗಳಿಗೆ ಹೆಚ್.ಪಿ.ಪವರ್ ಕೊಡುತ್ತೇವೆಂದು ಹೇಳಿದಾಗ ಸರ್ಕಾರಕ್ಕೆ ಹೆಚ್ಚು ಒತ್ತು ಬರುವುದರ ಜೊತೆಗೆ ಬಡವರು ಉದ್ಧಾರವಾಗುವುದಕ್ಕೆ ಅನುಕೂಲವಾಯಿತು. ನಾವು ಇವತ್ತು ಅಧಿಕಾರಿಗಳಾಗಬಹುದು, ಶಾಸಕರಾಗಬಹುದು, ಮಂತ್ರಿಗಳಾಗಬಹುದು, ಸಮಾಜದ ಸೇವೆ ಮಾಡುವುದಕ್ಕೆ ಅನೇಕ ಮಾರ್ಗಗಳಿವೆ. ಆದರೆ ರೈತನಿಗೆ ವ್ಯವಸಾಯ ಬಿಟ್ಟರೆ ಬೇರೆ ಏನೂ ಇರುವುದಿಲ್ಲ; ಈ ಕಸಬು ಮಾಡಿ ಅವನು ತನ್ನ ಕುಟುಂಬ, ಮಕ್ಕಳ ಲಾಲನೆ ಪಾಲನೆ ಅವರಿಗೆ, ವಿದ್ಯಾಭ್ಯಾಸ ಕೊಡಿಸುವುದನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಬಡತನದ ರೇಖೆಗಿಂತ ಕೆಳಗಿರುವವರನ್ನು ಅರ್ಥ ಮಾಡಿಕೊಂಡು, ರೈತರಿಗೆ ಮೂಲಭೂತವಾಗಿ ಬೇಕಾಗಿರುವ ಈ ಪವರ್‌ನ್ನು ಸರ್ಕಾರ ಒದಗಿಸಿಕೊಡಬೇಕು. ಇದನ್ನು ಕಡಿಮೆ ಬೆಲೆಯಲ್ಲಿ ರೈತನ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಎಂದು ಅವರಲ್ಲಿ ನಾನು ವಿನಂತಿ ಮಾಡುಕೊಳ್ಳುತ್ತೇನೆ. ಇದೇ ಮಾದರಿಯಲ್ಲಿ, ರೇಷ್ಮೆ, ತಂಬಾಕು, ಕಬ್ಬು; ಇದಕ್ಕೆ ಸಂಬಂಧಪಟ್ಟಂತೆ ಇವತ್ತು ಮೂರು ಫ್ಯಾಕ್ಟರಿಗಳು ಇವೆ. ಒಂದೊಂದು ಫ್ಯಾಕ್ಟರಿಗಳಲ್ಲಿ ಒಂದೊಂದು ರೀತಿಯ ಬೆಲೆ ಇದೆ. ರೈತ 300 ರಿಂದ 600 ರೂಪಾಯಿವರೆಗೆ ಒಂದು ಟನ್‌ನಂತೆ ಮಾರಾಟ ಮಾಡುತ್ತಾನೆ. ಕೃಷಿಗೆ ಹೆಚ್ಚಿನ ರೀತಿಯಲ್ಲಿ ಒತ್ತು ಕೊಡುತ್ತೀರಿ ಎಂದು ಹೇಳಿರುತ್ತೀರಿ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ; ಆದರೆ ಯಾವ ರೀತಿಯಲ್ಲಿ ಏನೇನು ಮಾಡುತ್ತೀರಿ ಎಂಬುದನ್ನು ಹೇಳಿಲ್ಲ.

ಇನ್ನು ತಂಬಾಕು ಬಗ್ಗೆ ಹೇಳುವುದಾದರೆ ಇವತ್ತಿನ ಬೆಲೆಗೆ ಹೋಲಿಕೆ ಮಾಡಿದರೆ ತಂಬಾಕನ್ನು ಮಾರಿ ತಾನು ತೆಗೆದುಕೊಂಡಿರುವ ಸಾಲದ ಬಡ್ಡಿಯನ್ನು ಕಟ್ಟುವುದಕ್ಕೆ ಆತನಿಗೆ ಆಗುತ್ತಿಲ್ಲ. ಪಿ.ಎಲ್.ಡಿ. ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿರುವ ಒಬ್ಬ ರೈತ ತಾನು ತಂಬಾಕನ್ನು 10 ರೂಪಾಯಿಗೆ ಮಣ, ಮೂರು ರೂಪಾಯಿಗೆ, ಐದು ರೂಪಾಯಿಗೆ ಈ ರೀತಿ ಮಾರಾಟ ಮಾಡಿದರೆ ತಾನು ತೆಗೆದುಕೊಂಡಿರುವ ಸಾಲಕ್ಕೆ ಬಡ್ಡಿ ಕಟ್ಟುವುದಕ್ಕೆ ಆಗುತ್ತಿಲ್ಲ. ಬಡ್ಡಿ ಹೇಗೆ ಕಟ್ಟುತ್ತಾನೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಂಡು ತಂಬಾಕಿಗೆ ಬೆಂಬಲ ಬೆಲೆಯನ್ನು ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮುಂದಾಗಬೇಕು.

ಅದೇ ರೀತಿಯಲ್ಲಿ ಇಂದು ಎಲ್ಲಾ ನೀರಾವರಿ ಪ್ರದೇಶಗಳಲ್ಲಿ ಕಬ್ಬಿನ ಫ್ಯಾಕ್ಟರಿಗಳು ಇವೆ. ಒಂದೊಂದು ಫ್ಯಾಕ್ಟರಿಯಲ್ಲಿ ಒಂದೊಂದು ರೀತಿಯ ಬೆಲೆಗಳು ಇವೆ. ಇದನ್ನು ಸರಿಸಮವಾದ ರೀತಿಯಲ್ಲಿ ಬೆಲೆ ನಿಗದಿ ಮಾಡಿ ರೈತನಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮುಂದೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ.

ಇನ್ನು ರೇಷ್ಮೆಯ ಬಗ್ಗೆ ಹೇಳುವುದಾದರೆ, ಕೇಂದ್ರಸರ್ಕಾರದವರು ಈ ವಿಚಾರದಲ್ಲಿ

ಒಂದು ಅನ್ಯಾಯವನ್ನು ಮಾಡಿದರು. ಬೇರೆ ಕಡೆಯಿಂದ ರೇಷ್ಮೆ ವಸ್ತುಗಳನ್ನು ಆಮದು ಮಾಡಿಕೊಂಡು ಇವತ್ತು ನಮ್ಮ ರೈತನಿಗೆ ರೇಷ್ಮೆ ಒಂದು ಕೆ.ಜಿ.ಗೆ 180 ರೂಪಾಯಿ ಇದ್ದದ್ದು ಕೇವಲ 80, 90, ರೂಪಾಯಿಗಳ ಬೆಲೆ ದೊರಕುವಂತಾಗಿದೆ. ಆದ್ದರಿಂದ, ರೈತರಿಗೆ ಅನ್ಯಾಯವಾಗುವಂತಹ ಕಾನೂನನ್ನು ಹೊರತುಪಡಿಸಿ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಸಾಮಾಗ್ರಿಗಳು ಏನಿದೆ ಅದಕ್ಕೆ ಉತ್ತಮವಾದ ಬೆಲೆಯನ್ನು ಕೊಡುವುದರ ಜೊತೆಗೆ ಒಳ್ಳೆಯ ಮಾರುಕಟ್ಟೆಯನ್ನು ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುವ ಕೆಲಸವಲ್ಲ. ಅದನ್ನು ಮಾಡಿದವರ್ಯಾರು? ಸರಿ ಮಾಡಬೇಕಾಗಿರುವವರು ಯಾರು? ಎಂಬುದನ್ನು ದಯಮಾಡಿ ತಿಳಿಸಬೇಕು. ಮಾಡಿರುವವರು ಮಾನ್ಯ ರಾಮಕೃಷ್ಣ ಹೆಗಡೆಯವರು, ಈಗ ಅದನ್ನು ಸರಿ ಮಾಡಬೇಕಾಗಿರುವವರು ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು. ಅದಕ್ಕೂ ಈ ರಾಜ್ಯ ಸರ್ಕಾರಕ್ಕೂ ಸಂಬಂಧವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಹುಶಃ ಸ್ಥಾನಪಲ್ಲಟದಿಂದ ಮಾನ್ಯ ಸದಸ್ಯರು ಕೆಲವೊಂದು ವಿಚಾರಗಳನ್ನು ಮರೆತಿದ್ದಾರೆಂದು ನಾನು ಭಾವಿಸಿದ್ದೇನೆ. ತಾವು ಟೈಮ್ ಕೊಟ್ಟರೆ ನಾನು ಹೇಳಬಯಸುತ್ತೇನೆ.

ಶ್ರೀ ವೈ.ಕೆ.ರಾಮಯ್ಯ : ನನ್ನ ಮಾತಿನಲ್ಲಿ ಬದಲಾವಣೆ ಮಾಡಿಕೊಂಡರೆ ನಾನು ರಾಮಯ್ಯನೇ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದು ನಿಮಿಷ ತಾವು ಈಲ್ಡ್ ಆಗಿ;

ಮೊದಲನೆಯದಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರನ್ನು ಅವರು ಪ್ರಸ್ತಾಪ ಮಾಡಿದ್ದಾರೆ, ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಈ ಹೌಸ್‌ನಲ್ಲಿ ಇಲ್ಲ.....

ಶ್ರೀ ವೈ.ಕೆ.ರಾಮಯ್ಯ : ಅವರು ಕೇಂದ್ರದ ವಾಣಿಜ್ಯ ಸಚಿವರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ, ಇಲ್ಲಾಂದ್ರೆ ತಾವು ಮಾತನಾಡೋದಾದ್ರೆ ಮೊದಲು ಮಾತನಾಡಿ.

ಶ್ರೀ ವೈ.ಕೆ.ರಾಮಯ್ಯ : ಹೊರದೇಶದಿಂದ ರೇಷ್ಮೆ ತರಿಸಿ ರೈತರ ಬಾಯಿಗೆ ಮಣ್ಣು ಹಾಕಿದ್ದಾರೆ, ಇದನ್ನು ಸರಿ ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅವರು ಕೇಳಿಕೊಂಡರು. ನಾನು ಮಾನ್ಯ ಸದಸ್ಯರಲ್ಲಿ ಏನು ಪ್ರಾರ್ಥನೆ ಮಾಡಿಕೊಂಡೆ ಎಂದರೆ, ಇದಕ್ಕೂ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧವಿಲ್ಲ. ರೇಷ್ಮೆಯನ್ನು ಆಮದು ಮಾಡಿಕೊಂಡು ಕರ್ನಾಟಕದ ರೇಷ್ಮೆ ಬೆಳಗಾರರ ತಲೆ ಮೇಲೆ ಕಲ್ಲು ಚಪ್ಪಡಿ ಎಳೆದಂಥವರು ಕೇಂದ್ರದ ವಾಣಿಜ್ಯ ಸಚಿವರು. ಕೇಂದ್ರ ವಾಣಿಜ್ಯ ಸಚಿವರು ರೇಷ್ಮೆಯನ್ನು ಆಮದು ಮಾಡಿಕೊಂಡು ಮುಕ್ತ ಆಮದು ನೀತಿಗೆ ಮುಕ್ತವಾಗಿ ಒಪ್ಪಿಕೊಂಡು ಕರ್ನಾಟಕದ ರೇಷ್ಮೆ ಬೆಳಗಾರರ ತಲೆ ಮೇಲೆ ಕಲ್ಲು ಹಾಕಿದ್ದಾರೆ.

ಇದನ್ನು ಸರಿಪಡಿಸಬೇಕಾದರೆ ಈಗ ಅಲ್ಲಿರುವಂಥ ಕೇಂದ್ರ ಸರ್ಕಾರ ಅದನ್ನು ಸರಿಮಾಡಬೇಕು ಎನ್ನುವುದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ನಮ್ಮ ಸ್ನೇಹಿತರು ಹೇಳಿದರು, ರಾಮಯ್ಯನವರು ಸ್ಥಳ ಬದಲಾವಣೆಯಿಂದ ಅವರ ನಿಲುವಿನಲ್ಲಿ ಬದಲಾವಣೆ ಆಗುತ್ತಾರೆಂದು ಹೇಳಿದರು. ಆತರಹ ಆದರೆ ಆಗ ರಾಮಯ್ಯ ಸತ್ತು ಹೋಗುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಾಜ್ಯದ ರೇಷ್ಮೆ ಬೆಳಗಾರರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅವರಿಗೆ ಸಿಗಬೇಕಾಗಿರತಕ್ಕಂಥ ನ್ಯಾಯದ ಬಗ್ಗೆ ನಿರ್ವಿವಾದವಾಗಿರತಕ್ಕಂಥ ವಿಚಾರ ಇದು. ನೇರವಾಗಿ ಇದು ರಾಜ್ಯಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳ ಹೊಣೆ ಎಂದು ಯಾರೂ ಹೇಳುತ್ತಿಲ್ಲ. ಕೇಂದ್ರ ಸರ್ಕಾರದ ನೀತಿ ಏನಿದೆ ಆ ನೀತಿಯಿಂದ ಈ ರೀತಿ ಆಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇಲ್ಲಿ ತಮಗೆ ಎರಡು ವಿಚಾರಗಳನ್ನು ಮನವಿ ಮಾಡಿಕೊಳ್ಳುತ್ತೇನೆ; ಮೊದಲನೆಯದಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಹೆಸರು ಈ ಕಡತದಲ್ಲಿ ಹೋಗಬಾರದು. ಎರಡನೆಯದಾಗಿ ಮಾನ್ಯ ರಾಮಯ್ಯನವರು ಏಕೆ ಮರೆತಿದ್ದಾರೆಂದು ಹೇಳಿದೆ ಎಂದರೆ, ಮಾನ್ಯ ರಾಮಯ್ಯನವರು ಇದಕ್ಕೋಸ್ಕರ ಹೋರಾಟ ಮಾಡಿರತಕ್ಕಂಥವರು ಎಂಬುದರ ಬಗ್ಗೆ ಯಾರಿಗೂ ಎಳ್ಳಷ್ಟೂ ಸಂಶಯ ಬೇಕಾಗಿಲ್ಲ. ಶ್ರೀ ರಾಮಯ್ಯನವರು ಒಂದೇ ಒಂದು ವಿಚಾರವನ್ನು ಮರೆತಿದ್ದಾರೆ, ಅದನ್ನು ಅವರಿಗೆ ಜ್ಞಾಪಿಸಿ ನಾನು ಕುಳಿತುಕೊಳ್ಳುತ್ತೇನೆ. ಅದೇನೆಂದರೆ, ನಾವು ಶ್ರೀ ವೈ.ಕೆ ರಾಮಯ್ಯನವರು ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಕೇಂದ್ರದಲ್ಲಿ ಯಾವ ಸರ್ಕಾರ ಇದ್ದರೂ ಅವತ್ತಿನ ರಾಜ್ಯ ಸರ್ಕಾರದ ಸಚಿವ ಸಂಪುಟ ನಮ್ಮನ್ನು ಮತ್ತು ನಿಮ್ಮನ್ನು ಸೇರಿಸಿ, ದೆಹಲಿಗೆ ನಾವು ನಿಯೋಗ ಹೋಗಿ ಅವತ್ತಿನ ಕೇಂದ್ರ ವಾಣಿಜ್ಯ ಸಚಿವರನ್ನು ನಾವು ಬೇಟಿ ಮಾಡಲಿಲ್ಲವೆ? ಹಾಗೆ ಆಗಿನ ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ನಮ್ಮ ಜೊತೆ ಅವರು ಯಾವರೀತಿ ನಡೆದುಕೊಂಡರು ಎನ್ನುವುದು ತಮಗೆ ಗೊತ್ತಿರತಕ್ಕಂಥ ವಿಚಾರವಾಗಿದೆ. ಆ ದಿವಸ ಮಾನ್ಯ ಬೈರೇಗೌಡರು ಸಹ ಅಲ್ಲಿದ್ದರು. ನೀವು ಯಾರಿಗೋ ಬ್ರೀಫ್‌ಕೇಸ್ ಹಿಡಿದುಕೊಂಡು ಇಲ್ಲಿಗೆ ಬಂದಿದ್ದೀರೆ ಹೊರತು ರೈತರ ಪರವಾಗಿ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಕೇಂದ್ರ ಸರ್ಕಾರದ ನೀತಿಯಿಂದ ಈ ಬದಲಾವಣೆ ಆಗಿರತಕ್ಕಂಥದ್ದು ಇದೆ. ಇವತ್ತು ಆರ್ಥಿಕ ನೀತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ದೇಶದ ಆಮದು, ರಫ್ತು, ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿರತಕ್ಕಂಥದ್ದು, ನಮ್ಮ ದೇಶದ ರೈತನಿಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ಮಾನ್ಯ ರಾಮಯ್ಯನವರಿಗೂ ಸಹ ಗೊತ್ತಿದೆ. ಇವೆಲ್ಲಾ ನಮ್ಮ ಕಾಲಿಗೆ ನಾವೇ ಹಾಕಿಕೊಂಡಿರತಕ್ಕಂಥ ಸರಪಳಿಗಳು. ಇದನ್ನು ಹಿಂತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡೋಣ. ಮಾನ್ಯ ಸಭಾನಾಯಕರು ಈಗಾಗಲೇ ಒತ್ತಾಯ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿರತಕ್ಕಂಥಾದ್ದನ್ನು ನಾನು ನೋಡಿದ್ದೇನೆ. ಒಂದು ವೇಳೆ ಅವರು ಒತ್ತಾಯ ಮಾಡದೇ ಇದ್ದರೆ ಈಗ ಮಾಡುತ್ತಾರೆ. ಇವತ್ತು ಕೇಂದ್ರ ಸರ್ಕಾರದಲ್ಲಿ ನಮ್ಮ ಪಕ್ಷದ ಮುಖಂಡರುಗಳಿದ್ದಾರೆ, ಅವರ ಮೇಲೆ ನಾವು ಒತ್ತಾಯ ತರುತ್ತೇವೆ. ನೀವು ಸಹ ನಿಮ್ಮ ಮುಖಂಡರುಗಳ ಮೇಲೆ ಒತ್ತಾಯ ತರಬೇಕು. ಏಕೆಂದರೆ, ಇಡೀ ರಾಷ್ಟ್ರದಲ್ಲಿ ಇರತಕ್ಕಂಥ ರೇಷ್ಮೆ ಬೆಳೆಗಾರರ ಪೈಕಿ ಮತ್ತು ನೂಲು ತೆಗೆಯತಕ್ಕಂಥವರ ಪೈಕಿ ಕರ್ನಾಟಕದಲ್ಲೇ ಶೇಕಡ 60ರಷ್ಟು ಜನ ಇದ್ದಾರೆ. ಈ ಬಗ್ಗೆ ನಾವಿಬ್ಬರೂ ಸೇರಿ ಕೇಂದ್ರಕ್ಕೆ ಒತ್ತಾಯ ಮಾಡೋಣ. ತಾವು

ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರನ್ನು ಇಲ್ಲಿ ಸೂಚಿಸಿದ್ದಕ್ಕೆ ಈ ಎಲ್ಲಾ ವಿವರಗಳನ್ನು ನಾನು ಕೊಡಬೇಕಾದ ಅನಿವಾರ್ಯತೆ ಬಂತು. ಈಗಾಗಲೇ ಮರೆತು ಹೋಗಿರತಕ್ಕಂಥ ಆ ಪ್ರಕರಣವನ್ನು ಮತ್ತೆ ತಮಗೆ ಜ್ಞಾಪಕ ಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್): ನಾನೂ ಸಹ ಮಾನ್ಯ ರಾಮಯ್ಯನವರಿಗೆ ಕೆಲವು ವಿಷಯವನ್ನು ಜ್ಞಾಪಕಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಮತ್ತು ಮಾನ್ಯ ರಾಮಯ್ಯನವರು ಒಟ್ಟಿಗೆ ಅಂದಿನ ವಾಣಿಜ್ಯ ಮಂತ್ರಿಗಳ ಕಛೇರಿಯಲ್ಲಿ ನಮ್ಮ ರಾಜ್ಯದ ರೈತರ ಕಷ್ಟವನ್ನು ಅವರಿಗೆ ನಿವೇದನೆ ಮಾಡಿದಂಥ ಸಂದರ್ಭದಲ್ಲಿ ಅವರಿಗೂ ಮತ್ತು ನಮಗೂ ಏನು ವಿಚಾರ ನಡೆಯಿತು ಎಂಬುದಕ್ಕೆ ತಾವೇ ಪ್ರತ್ಯಕ್ಷದರ್ಶಿಯಾಗಿದ್ದೀರಿ. ಅಂದು ಅವರು ಉಪಯೋಗಿಸಿದಂಥ ಪದಗಳಿಗೆ ನಾವು ಪ್ರತಿಭಟನೆ ಮಾಡಿ ಕೇಂದ್ರ ವಾಣಿಜ್ಯ ಮಂತ್ರಿಗಳ ಕೋಣೆಯಿಂದ ನಾನು ಮತ್ತು ಮಾನ್ಯ ರಾಮಯ್ಯನವರು ಹೊರಗೆ ನಡೆದವು. ಅಂದಿನ ಕೇಂದ್ರ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿರುವುದು ತಮಗೆ ಮರೆತು ಹೋಗಿದೆ. ನಮ್ಮ ನಾಯಕರಾದಂಥ ಮಾನ್ಯ ಸಿಂಧ್ಯರವರು ಹೇಳಿದಂತೆ ಸ್ಥಾನಪಲ್ಲಟವಾಗಿರುವುದರಿಂದ ಅದು ಮರೆತು ಹೋಗಿದೆ ಎಂದು ಎಚ್ಚರಿಸಿ, ತಮ್ಮ ಜ್ಞಾಪಕಕ್ಕೆ ಈ ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಅವತ್ತು ಪ್ರತಿಭಟನೆ ಮಾಡಿದ್ದೆ, ಇವತ್ತು ಮಾಡುತ್ತೇನೆ, ನಾಳೆಯೂ ಸಹ ಮಾಡುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ಈಗ ಈ ರೇಷ್ಮೆ ಆಮದು, ರಫ್ತು ವ್ಯಾಪಾರ ನಿಮ್ಮ ಕೈಯಲ್ಲಿದೆ. ಹಿಂದಿನ ಸರ್ಕಾರದಲ್ಲಿ ಆ ಪರಿಸ್ಥಿತಿಗೆ ಒಳಗಾದವರು, ಈಗ ನಿಮ್ಮ ಕೈಯಲ್ಲಿ ಬಂದ ಮೇಲೆ ನೀವು ಏನು ಮಾಡಿದ್ದೀರಿ? ಈಗ ಇನ್ನೂ ಕೆಟ್ಟು ಹೋಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆಯೇ ಹೊರತು ಅವರು ಆ ಬಗ್ಗೆ ಆಪಾದನೆ ಮಾಡಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಹಿರಿಯ ಸದಸ್ಯರಾದಂಥ ಮಾನ್ಯ ಸಿಂಧ್ಯಾರವರು ಆ ವಿಷಯವನ್ನು ವಿಷಯಾಂತರ ಮಾಡುತ್ತಿದ್ದಾರೆ. ಸ್ನೇಹಿತರಾದ ಮಾನ್ಯ ಚಿನ್ನಿಗಪ್ಪನವರು ಮಾತನಾಡುತ್ತಾ ರೇಷ್ಮೆ ಆಮದಿನಿಂದ ಕರ್ನಾಟಕದ ರೇಷ್ಮೆ ಬೆಳೆಗಾರರ ತಲೆಯ ಮೇಲೆ ಕಲ್ಲು ಚಪ್ಪಡಿ ಎಳೆಯತಕ್ಕಂಥ ಕೆಲಸ ಆಯಿತು ಎನ್ನತಕ್ಕಂಥ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು. ಇದನ್ನು ನಾವೂ ಸಹ ಒಪ್ಪಿಕೊಳ್ಳುತ್ತೇವೆ. ಹಿಂದಿನ ಸರ್ಕಾರದಲ್ಲಿದ್ದಂಥ ಆಗಿನ ವಾಣಿಜ್ಯ ಮಂತ್ರಿಗಳು ಈ ಒಂದು ಆಮದು ನೀತಿಗೆ ಜವಾಬ್ದಾರರು ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರೊ? ಅಥವಾ ಇಲ್ಲವೊ? ಅವರು ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದು, ಕೇಂದ್ರದಲ್ಲಿ ವಾಣಿಜ್ಯ ಸಚಿವರಾಗಿದ್ದಂಥ ಕಾಲದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೇಷ್ಮೆ ಬೆಳೆ ಸಂಪೂರ್ಣವಾಗಿ ನಾಶವಾಗತಕ್ಕಂಥ ಕೆಲಸವನ್ನು ಮಾಡಿದರು. ತಾವು ಇದನ್ನು ಬಿಟ್ಟು ಕೇಂದ್ರ ವಾಣಿಜ್ಯ ಸಚಿವರ ಕಛೇರಿಗೆ ಹೋಗಿ ಅಲ್ಲಿ ನಡೆದಿದ್ದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ ಅಷ್ಟೆ. ಹಿಂದಿನ ಸರ್ಕಾರದಲ್ಲಿ ಕೇಂದ್ರ ವಾಣಿಜ್ಯ ಸಚಿವರು ತೆಗೆದುಕೊಂಡಂಥ ಆಮದು ನೀತಿಯಿಂದ ಇವತ್ತು ಇಡೀ ಕರ್ನಾಟಕದಲ್ಲಿ ರೇಷ್ಮೆ ಬೆಳೆ ಮತ್ತು ರೇಷ್ಮೆ ಕೃಷಿಕರು ಹಾಳಾಗಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾವು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಬಯ್ಯುವುದರಿಂದ ರಾಜಕೀಯವಾಗಿ ಯಾರಿಗೂ ಲಾಭವಾಗುವುದಿಲ್ಲ. ಆದ್ದರಿಂದ ಅವರಿಗೆ ಏಕೆ ಬಯ್ಯುತ್ತೀರಿ?

(ಗೊಂದಲ)

ಶ್ರೀ ಸಿ.ಬೈರೇಗೌಡ: ಉದಾರೀಕರಣದಲ್ಲಿ ಇದರ ಮೂಲ ಇರತಕ್ಕಂಥದ್ದು, ಕೇಂದ್ರದಲ್ಲಿ ಉದಾರೀಕರಣ ತಂದವರು ಯಾರೆಂಬುದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಇವತ್ತಿನ ಕಾಲದಲ್ಲಿ ರೇಷ್ಮೆಯಿಂದ ಮಾತ್ರ ರೈತನಿಗೆ ಅನ್ಯಾಯವಾಗುತ್ತಿಲ್ಲ, ರೈತನು ಬೆಳೆಯತಕ್ಕಂಥ ಅನೇಕ ಉತ್ಪನ್ನಗಳ ಪರಿಸ್ಥಿತಿ ಇದೇ ರೀತಿಯಾಗಿದೆ. ಇದಕ್ಕೆ ಮುಖ್ಯಕಾರಣ ಏನೆಂದರೆ ನನ್ನ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ದೇಶದಲ್ಲಿ ರೈತರು ಸಮಾಧಿಯಾಗಿರುವುದು ಈ ಉದಾರೀಕರಣ ನೀತಿಯಿಂದ. ಇದನ್ನು ನಾನು ಬಹಳ ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ದಯಮಾಡಿ ತಾವ್ಯಾರೂ ಬೇಸರ ಮಾಡಿಕೊಳ್ಳಬೇಡಿ. ನೆನ್ನೆ ದಿವಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಆಗಿರತಕ್ಕಂಥ ರೆಜೆಲೂಷನ್ಸ್, ಡಿಸ್ಕಷನ್ಸ್ ಬಗ್ಗೆ ನಾವು ನೀವು ಯೋಚನೆ ಮಾಡೋಣ. ನಾವು ರೇಷ್ಮೆ ಬೆಳಗಾರರ ಪರವಾಗಿರತಕ್ಕಂಥವರು ಮತ್ತು ಸ್ವತಃ ನಾವೇ ರೇಷ್ಮೆ ಬೆಳೆಯುವವರು ಎಂದು ತಮಗೆ ಗೊತ್ತಿದೆ. ರೇಷ್ಮೆ ಬೆಳಗಾರರಿಗೆ ಅನ್ಯಾಯವಾಗಿದೆ ಎಂದು ಗೊತ್ತಿದೆ, ಆದ್ದರಿಂದ ಅವರಿಗೆ ರಕ್ಷಣೆ ಮಾಡೋಣ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಆವೇಶದಿಂದ ರಾಜಕೀಯವಾಗಿ ಅವರ ಹೆಸರನ್ನು ಇಲ್ಲಿ ಹೇಳಿಕೊಳ್ಳುವುದರಿಂದ ಏನು ಉಪಯೋಗವಿಲ್ಲ. ಇವತ್ತು ಈ ಉದಾರೀಕರಣ ನೀತಿಯಿಂದಾಗಿ ಕಾಂಗ್ರೆಸ್ ಪಕ್ಷ, ಬಡವರ ಪರವಾಗಿದ್ದ ಒಂದು ಪಕ್ಷ ಇವತ್ತು ಯಾವ ದಿಕ್ಕಿನಲ್ಲಿ ಹೋಗಿದೆ ಎಂದು ನಿಮ್ಮ ಪಕ್ಷದ ನಾಯಕರು ಯೋಚನೆ ಮಾಡುತ್ತಿದ್ದಾರೆ. ಈಗ ನಿಮಗೆ 112 ಸೀಟ್ ಬಂದಿರುವುದರಿಂದ ನೀವು ಯೋಚನೆ ಮಾಡಬೇಕೆಂದು ನಾವು ಹೇಳುತ್ತಿಲ್ಲ, ಕಾಂಗ್ರೆಸ್ ಪಕ್ಷದ ಮುಖಂಡರೇ ಹೇಳುತ್ತಿದ್ದಾರೆ. ಆದ್ದರಿಂದ ಉದಾರೀಕರಣ ನೀತಿಯಿಂದ ಇದು ನಮಗೆ ಸಿಕ್ಕಿರತಕ್ಕಂಥ ಬಳುವಳಿ ಎಂದು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಶ್ರೀ ವೈ.ಕೆ. ರಾಮಯ್ಯ: ರೇಷ್ಮೆ ಬೆಳೆಯತಕ್ಕಂಥ ಜನ ದಿನಬೆಳಗಾದರೆ ನಮ್ಮನ್ನು ಬಂದು ನೋಡುತ್ತಾರೆ. ನಮ್ಮ ನೇರವಾದ, ಸ್ಪಷ್ಟವಾದಂಥ ನಿಲುವು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಅನ್ಯಾಯ ಮಾಡಿ ಹೊರದೇಶದಿಂದ ಮುಕ್ತವಾಗಿ ಆಮದು ಮಾಡಿಕೊಳ್ಳುವುದಕ್ಕೆ ಕಾರಣಕರ್ತರ್ಯಾರು? ಆಗ ಮಂತ್ರಿ ಯಾಗಿದ್ದವರ್ಯಾರು? ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ರಾಜುಗೌಡ (ಹನೂರು): ಆಮದು ನೀತಿಯನ್ನು ನಿಲ್ಲಿಸಬೇಕೆಂದು ಮಾನ್ಯ ಚೆನ್ನಿಗಪ್ಪನವರು ಪ್ರಸ್ತಾಪ ಮಾಡಿದಾಗ ಈ ಪ್ರಸ್ತಾಪ ಬಂತು. ಇದು ಮಾನ್ಯ ರಾಮಕೃಷ್ಣ

ಹೆಗಡೆಯವರ ಮೇಲೆ ಮಾಡಿದಂಥ ಪ್ರಸ್ತಾಪವಲ್ಲ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಅವರನ್ನು ಎದುರು ಹಾಕಿಕೊಂಡರೆ ಏನು ಪ್ರಯೋಜನ ಆಗುವುದಿಲ್ಲ, ಇದನ್ನು ತಾವು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಛೇರ್ಮನ್: ಈಗ ನಡೆದಿರತಕ್ಕಂಥ ಚರ್ಚೆ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿ.ಚೆನ್ನಿಗಪ್ಪ : ಈ ರೇಷ್ಮೆ ಆಮದಿಗೆ ಸಂಬಂಧಪಟ್ಟಹಾಗೆ ಇವತ್ತು ಯಾವುದೇ ರೀತಿಯ ಗೊಂದಲಮಯ ವಾತಾವರಣ ಇದ್ದರೂ ಕೂಡ ರೇಷ್ಮೆ ಆಮದಿಗೆ ಜವಾಬ್ದಾರಿಯುತ ಸ್ಥಾನದಲ್ಲಿದ್ದಂಥ ವ್ಯಕ್ತಿ ಕೊಟ್ಟಂಥ ಒಂದು ಪರ್ಮಿಷನ್‌ಗೆ ಅವರೇ ಹೊಣೆಗಾರರು. ಇದಕ್ಕೆ ಬೇರೆ ಯಾರು ಹೊಣೆಗಾರರಲ್ಲ. ರಾಜ್ಯದಲ್ಲಿ ಒಬ್ಬ ರೈತನ ಮಗನಾಗಿ ಹುಟ್ಟಿ ರಾಜ್ಯದಲ್ಲಿ ಎಲ್ಲರಿಂದ ಮತವನ್ನು ಪಡೆದು ಕೇಂದ್ರ ಸರ್ಕಾರದಲ್ಲಿ ಕುಳಿತುಕೊಂಡು ಕೆಲಸ ಮಾಡುವಾಗ ರೈತರ ಬಗ್ಗೆ ಚಿಂತನೆ ಮಾಡದೇ ಇರುವ ಆ ವಾಣಿಜ್ಯ ಮಂತ್ರಿ ಬಗ್ಗೆ ನನ್ನ ಪ್ರಕಾರ ಯಾರೂ ಸಹ ಸೌಜನ್ಯ ತೋರಿಸಬೇಕಾಗಿಲ್ಲ. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರರಿಗೆ ನಾವು ಹೆಚ್ಚು ಅನುಕೂಲ ಮಾಡಿಕೊಡುತ್ತೇವೆಂದು ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿರತಕ್ಕಂಥ ಈ ಕಾಂಗ್ರೆಸ್ ಸರ್ಕಾರ ಒಂದೇ ಒಂದು ಘೋಷಣೆ ಮಾಡಿದೆ. ಇದು ಸ್ವಾಗತಕರವಾದ ವಿಚಾರ, ಈ ವಿಚಾರಕ್ಕೆ ನಾನು ತಲೆಬಾಗುತ್ತೇನೆ. ಇದರಲ್ಲಿ ನಾನು ಅವರಿಗೆ ಒಂದು ವಿಷಯದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಹಿಳೆಯರಿಗೆ ಕೊಡತಕ್ಕಂಥ ಸಬ್ಸಿಡಿ ಎಷ್ಟು ಕೊಡುತ್ತೇವೆಂದು ಸರ್ಕಾರ ಎಲ್ಲಿಯೂ ಹೇಳಿಲ್ಲ, ಅದನ್ನು ಹೇಳಬೇಕಾಗಿತ್ತು. ಮತ್ತೆ ಪುರುಷರಲ್ಲಿ ಅಂತರವನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದೀರಿ, ಆದರೆ ಇದನ್ನು ಯಾವ ರೀತಿಯಲ್ಲಿ ಅಂತರವನ್ನು ಕಡಿಮೆ ಮಾಡುತ್ತೀರೆಂದು ಇಲ್ಲಿ ಸ್ಪಷ್ಟಪಡಿಸಿಲ್ಲ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಚಿಂತನೆ ಮಾಡಿ ಸರ್ಕಾರದಿಂದ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುವ ಮುಖೇನ ರೈತರ ಅದರಲ್ಲಿಯೂ ಮಹಿಳೆಯರ ಜೀವನಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಅವರೂ ಸಹ ಸಮಾಜದಲ್ಲಿ ಉತ್ತಮರೀತಿಯಲ್ಲಿ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ರೈತರ ಸಾಮಾಗ್ರಿಗಳನ್ನು ಯಶವಂತಪುರದಲ್ಲಿರತಕ್ಕಂಥ ಎ.ಪಿ.ಎಂ.ಸಿ ಗೆ ತರುತ್ತಾರೆ. 90 ರೂಪಾಯಿಗಳಿಗೆ ಒಂದು ಬುಟ್ಟಿ ಟೊಮೆಟೋ ಮಾರಿದರೆ ಅದರಲ್ಲಿ 9 ರೂಪಾಯಿಗಳನ್ನು ಹಿಡಿದುಕೊಂಡು 81 ರೂಪಾಯಿಗಳನ್ನು ರೈತನಿಗೆ ಕೊಡುತ್ತಾರೆ. ಅಂದರೆ 10 ಪರ್ಸೆಂಟ್ ದಲ್ಲಾಳಿ ಕೊಡಬೇಕು. ಇದುವರೆಗೆ ಎಲ್ಲಾ ಸರ್ಕಾರ ಬಂದು ಕಾನೂನನ್ನು ಮಾಡಿದ್ದೆ ಮಾಡಿದ್ದು ಮತ್ತು ಮಂತ್ರಿಗಳು ಸಹ ಎಷ್ಟು ಸಾರಿ ಚರ್ಚೆ ಮಾಡಿದ್ದರೂ ಸಹ ಇವತ್ತು ರಾಜಕೀಯವಾಗಿ ಏನು ಆಗಿದೆ? ನನ್ನ ಸರ್ಕಾರ ಇದ್ದಾಗ ಮತ್ತು ಬೇರೆ ಸರ್ಕಾರ ಇದ್ದಾಗಲೂ ಏನು ಮಾಡಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ದಲ್ಲಾಳಿಗಳು ತೆಗೆದುಕೊಳ್ಳತಕ್ಕಂಥ ಕಮಿಷನ್‌ನನ್ನು ತಪ್ಪಿಸಬೇಕು. ರೈತರಿಂದ ಕಡಿಮೆ ಪರ್ಸೆಂಟೇಜ್‌ನಲ್ಲಿ ಕಮಿಷನ್ ತೆಗೆದುಕೊಂಡು ರೈತನಿಗೆ ಉತ್ತಮವಾದಂಥ

ಬೆಲೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಮಾರುಕಟ್ಟೆಗೆ ತರಕಾರಿ ಎಷ್ಟು ಬಂದಿದೆ, ಯಾವ ರೇಟ್‌ಗೆ ಮಾರಾಟವಾಗಿದೆ? ಎಷ್ಟು ಕಮಿಷನ್ ತೆಗೆದುಕೊಂಡು, ಎಷ್ಟು ರಸೀತಿ ಹಾಕಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಸ್ಕ್ವಾಡ್ ಪ್ರಾರಂಭ ಮಾಡಿ, ಇದರ ಮೂಲಕ ಪರಿಶೀಲನೆ ಮಾಡಿದರೆ ಒಳ್ಳೆಯದು. ಈ ಮುಖೇನ ರೈತರ ಈ ಒಂದು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ನಾಡ ಕಛೇರಿಯನ್ನು ಮಾಡಿ, ಆ ನಾಡ ಕಛೇರಿ ಮುಖಾಂತರ ರೈತರಿಗೆ ಪಹಣಿ ಹತ್ತಿರವಾಗಿ ಸಿಗುವಂಥ ವ್ಯವಸ್ಥೆ ಮೊದಲು ಇತ್ತು. ಅದನ್ನು ಈಗ ಏನು ಮಾಡಿದ್ದಾರೆಂದರೆ, ಜಿಲ್ಲಾಧಿಕಾರಿಗಳು ಏನು ಹೇಳಿದ್ದಾರೆ, ಖಾತೆ ಮಾಡುವುದೆಲ್ಲವನ್ನೂ ತಾಲ್ಲೂಕು ಕಛೇರಿಗೆ ತಂದುಕೊಡಿ ಎಂದು ಹೇಳಿದ್ದಾರೆ. ಮೊದಲು ಇದ್ದದ್ದು ರೈತರಿಗೆ ಆದಂಥ ಅನುಕೂಲ ತಾನೆ. ಮೊಟ್ಟಮೊದಲನೆಯದಾಗಿ ರೈತರಿಗೆ ಸಾಲ ಸಿಗಬೇಕಾದರೆ, ಪಹಣಿ ಆಗಬೇಕು, ಖಾತೆ ಆಗಬೇಕು, ಪಿಟಿಷನ್ ಹಾಕಬೇಕು, ಈ ಹಂತದಲ್ಲಿ ಅವನಿಗೆ ಪತ್ರಗಳು ಸಿಗಬೇಕು; ಅದು ಸಿಗುವುದಿಲ್ಲ. ಈಗ ಏನಾಗಿದೆ ಎಂದರೆ; ಅವರು ತಾಲ್ಲೂಕು ಆಫೀಸಿಗೆ ಬರುವ ವ್ಯವಸ್ಥೆಯಾಗಿದೆ. ತಾಲ್ಲೂಕು ಆಫೀಸಿಗೆ ಬಂದು ರೈತ ಅರ್ಜಿಯನ್ನು ಕೊಟ್ಟು ಹೋಗಬೇಕು. ಆ ರೈತನಿಗೆ ಅಕ್ಕಿಯನ್ನು ತರಲು 10 ರೂಪಾಯಿಗಳು ಇರುವುದಿಲ್ಲ. ಅವನು ಟ್ರೈನ್‌ನಲ್ಲಿ ಅಥವಾ ಬಸ್ಸಿನಲ್ಲಿ 20 ಕಿ.ಮೀ. ದೂರದಿಂದ ಬರಬೇಕು. ತಹಶೀಲ್ದಾರ ಅದನ್ನು ಕೊಡುವುದಕ್ಕೆ ಒಂದು ವಾರ ಆಗುತ್ತದೆ. ಉತ್ತಮವಾದ ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದಾರೆ, ಅದೇ ತರಹ ಕೆಟ್ಟ ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದಾರೆ. ಬಡ ಜನರನ್ನು ಸುಲಿಗೆ ಮಾಡುವಂಥ ಅಧಿಕಾರಿಗಳು ಕೂಡ ಇದ್ದಾರೆ. ನಮ್ಮಂಥವರನ್ನು ಸುಲಿಗೆ ಮಾಡಿದರೆ ಪರವಾಗಿಲ್ಲ; ನಾವು ಏನೋ ಬೇರೆ ಕಡೆಯಿಂದ ಅದನ್ನು ವಸೂಲು ಮಾಡುತ್ತೇವೆ. ಆದರೆ ಬಡವರನ್ನು ಸುಲಿಗೆ ಮಾಡಿದರೆ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳನ್ನು ಈ ವಿಚಾರದಲ್ಲಿ ನಾನು ಸ್ವಾಗತ ಮಾಡುತ್ತೇನೆ. ಅವರಿಗೆ ಅಧಿಕಾರ ಬಂದಿರುವುದರಿಂದ ಅದನ್ನೂ ನಾನು ಸ್ವಾಗತ ಮಾಡುತ್ತೇನೆ. ಈ ವಿಚಾರದಲ್ಲಿ ಕೂಡಲೇ ಉತ್ತಮವಾದಂಥ ಒಂದು ಕಾನೂನನ್ನು ಮಾಡಿ ರೈತರಿಗೆ ಬೇಗ ಪಹಣಿ ಸಿಗುವಂತಾಗಬೇಕು. ಇವತ್ತು ಕಂಪ್ಯೂಟರೀಕರಣ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಮಗೆ ಮಾಡುವ ಕಂಪ್ಯೂಟರೀಕರಣ ಮುಖ್ಯವಲ್ಲ. ರೈತರಿಗೆ ಸಿಗುವಂಥ ವಸ್ತುಗಳ ಬಗ್ಗೆ ಏನಿದೆ ಅದನ್ನು ಕಂಪ್ಯೂಟರೀಕರಣ ಮಾಡಬೇಕು. ಅದು ಕಟ್ಟಕಡೆಯ ಮನುಷ್ಯನಿಗೆ ಸಿಗುವಂಥ ಸರ್ಕಾರದ ಸವಲತ್ತು. ನಮ್ಮ ಸರ್ಕಾರದ ಧ್ಯೇಯೋದ್ದೇಶ ಕಟ್ಟಕಡೆಯ ಮನುಷ್ಯನಿಗೆ ಸಿಗುವಂಥ ಸವಲತ್ತು ಎಂದು ಎಲ್ಲಾ ಸರ್ಕಾರಗಳು ಹೇಳಿವೆ. ಆದರೆ ಅವುಗಳನ್ನು ಮಾಡುವಾಗ ಶೇಕಡಾ 10ರಷ್ಟು ಭಾಗ ಕೂಡ ಫುಲ್‌ಫಿಲ್ ಆಗಿಲ್ಲ. ಆ ಒಂದು ನಿಟ್ಟಿನಲ್ಲಿ ಇವತ್ತು ತಾವು ಹೊಸ ಸರ್ಕಾರವನ್ನು ರಚನೆ ಮಾಡಿರುತ್ತೀರಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲವನ್ನೂ ಪ್ರಸ್ತಾಪ ಮಾಡಿದ್ದೀರಿ, ಆ ಪ್ರಸ್ತಾಪಕ್ಕಾಗಿ ಅವರಿಗೆ ವಂದಿಸಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ; ನಾನೂ ಒಬ್ಬ ರೈತನ ಮಗನಾಗಿ ಆ ಎಲ್ಲ ಕಾರ್ಯಗಳನ್ನು, ಅದರಲ್ಲಿ ಮುಖ್ಯವಾಗಿ ಪಹಣಿ ಮ್ಯುಟೇಷನ್‌ದ ಪತ್ರಗಳು ಕೂಡಲೇ ರೈತರಿಗೆ ಸಿಗುವಂಥ ವ್ಯವಸ್ಥೆಯನ್ನು ತಾವು ಕಾನೂನು ಮುಖಾಂತರ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಹಳ್ಳಿಯ ರಸ್ತೆಗಳು ಏನಿವೆ ಅವುಗಳ ದುರಸ್ತಿಗೆ, ನಬಾರ್ಡಿನಿಂದ 2000 ಅಥವಾ 1600 ಕೋಟಿ

ರೂಪಾಯಿಗಳನ್ನು ತೆಗೆದುಕೊಂಡು ಒಂದು ಕ್ಷೇತ್ರಕ್ಕೆ 3 ಅಥವಾ 2 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಇವತ್ತು 30-40 ಕಿ.ಮೀ. ರಸ್ತೆಗಳು ಟಾರ್ ಆಗಿವೆ. ಆ ಯೋಜನೆ ಬಗ್ಗೆ, ತಾವು ರಸ್ತೆಗಳ ಬಗ್ಗೆ ಇವತ್ತು ಏನು ಹೇಳಿದ್ದೀರಿ- ಆ ಪ್ರಕಾರ ಆ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಿ. ಪ್ರೈವೇಟ್ ಆದರೂ ಆಗಬಹುದು ಅವರಿಂದ ಹೆಚ್ಚಿಗೆ ಹಣವನ್ನು ತಂದು ಈ ಕೊರತೆಯನ್ನು ಸರಿಪಡಿಸಬೇಕು. ಇನ್ನು ವಿದ್ಯುಚ್ಛಕ್ತಿ, ಕುಡಿಯುವ ನೀರಿನ ಯೋಜನೆ, ರಸ್ತೆ, ವಿದ್ಯಾಭ್ಯಾಸ ಇವೆಲ್ಲ ಅವಶ್ಯಕವಾಗಿದೆ. ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆ ಬೇಕು. ಈ ರಾಜ್ಯದಲ್ಲಿ 1947 ರಿಂದ ಇಲ್ಲಿಯವರೆಗೆ ಉತ್ತಮವಾದಂಥ ಶಿಕ್ಷಣ ಸಚಿವರಲ್ಲಿ ಒಬ್ಬರೆಂದರೆ ಮಾನ್ಯ ಗೋವಿಂದೇಗೌಡರು. ನಾವು ಅವರನ್ನು ನೆನಪಿಸಿಕೊಳ್ಳಬೇಕಾದಂಥ ವಿಚಾರ. ಅಂತಹ ಒಂದು ಕೆಲಸದಲ್ಲಿ ಸರಿಯಾದ ಸೌಕರ್ಯವನ್ನು ಈ ಸರ್ಕಾರ ಮಾಡುತ್ತದೆ. ಇದರ ಬಗ್ಗೆ ಏನು ಒಂದು ಅನಿಸಿಕೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇವತ್ತು ಇಟ್ಟಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸಂಪೂರ್ಣವಾದ ಎಲ್ಲಾ ವಿಚಾರವನ್ನು ರಚನಾತ್ಮಕವಾಗಿ ಅಳವಡಿಸಿ ಅವರು ಇಲ್ಲಿ ಹೇಳಿಲ್ಲ. ಅವರು ಹೇಳುವಂಥಾದ್ದನ್ನು ಕಾರ್ಯತಃ ಮಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಅದನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ನಮಗೆ ಹೊಸ ಸರ್ಕಾರದಲ್ಲಿ ಟೀಕೆ ಮಾಡುವುದಕ್ಕೆ ಯಾವ ಅಂಶಗಳೂ ಇಲ್ಲ. ಕಾರಣ, ಯಾವುದೇ ಆ್ಯಕ್ಟನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ಅವರು ಕೈ ಹಾಕಿರುವುದಿಲ್ಲ. ಹಣಕಾಸಿನ ಸಂಪತ್ತು ಎಷ್ಟು ಇದೆ ಅದರ ಬಗ್ಗೆ ಯಾವುದೇ ಒಂದು ಮಾತನ್ನು ಇಲ್ಲಿ ಹೇಳಿಲ್ಲ. ಅವುಗಳನ್ನೆಲ್ಲಾ ಹೇಳಬೇಕಾಗಿತ್ತು. ಅಂತಹ ವಿಚಾರಗಳನ್ನು ಅವರು ಇಲ್ಲಿ ಹೇಳಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಟೀಕೆ ಮಾಡುವುದು ಅನಾವಶ್ಯಕ ಎಂದು ನಾನಾದರೂ ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅವರ ಸಚಿವ ಸಂಪುಟ ಈ ರಾಜ್ಯಕ್ಕೆ ಒಂದು ಉತ್ತಮವಾದಂಥ ಕೊಡುಗೆಯನ್ನು ಕೊಡಲಿ ಎಂದು ಹಾರೈಸುತ್ತೇನೆ. ಇಲ್ಲಿ ನಮ್ಮ ಜನತಾದಳ (ಎಸ್)ದಿಂದ 10 ಜನ ಶಾಸಕರಿದ್ದೇವೆ. ನೀವು ಒಳ್ಳೆಯ ಕೆಲಸವನ್ನು ಮಾಡಿದಾಗ ನಿಮಗೆ ತಲೆಬಾಗಿ ನಮಸ್ಕಾರ ಮಾಡಿ ಪ್ರೋತ್ಸಾಹ ಕೊಡುತ್ತೇವೆ. ನೀವು ಕೆಟ್ಟ ಕೆಲಸವನ್ನು ಮಾಡಿದರೆ ಅಷ್ಟೇ ಕಡಿವಾಣ ಹಾಕಿ ನಾವು ಎದ್ದು ನಿಂತು ಪ್ರತಿಭಟನೆ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇನ್ನುಳಿದ ವಿಚಾರಧಾರೆಗಳಾದ ಕುಡಿಯುವ ನೀರಿನ ವಿಚಾರವಾಗಿರಬಹುದು, ರಸ್ತೆಗಳಾಗಿರಬಹುದು, ಆರೋಗ್ಯ ವಿಷಯವಾಗಿರಬಹುದು, ಸಾಮಾಜಿಕ ನ್ಯಾಯವಾಗಬಹುದು ಅಥವಾ ಪಂಚಾಯತ್ ವ್ಯವಸ್ಥೆ ಆಗಬಹುದು; ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಆಗಬಹುದು. ಏಕೆಂದರೆ, ಮುಂಬರುವ ಏಪ್ರಿಲ್-ಮೇ ತಿಂಗಳಲ್ಲಿ ಚುನಾವಣೆಗಳು ಬರುವಂತಹ ಕಾಲ ಬಹಳ ಹತ್ತಿರದಲ್ಲಿದೆ. ಈ ಚುನಾವಣೆಗಳು ಮುಕ್ತವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಎಲ್ಲರೂ ದ್ವೇಷವನ್ನು ಮರೆಯಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರದಲ್ಲಿ ಆ ಒಂದು ಗಂಭೀರತೆ ಇದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಕೂಡ ಆಚೆ ಎದ್ದು ಹೋಗದೆ ಇಲ್ಲಿಯೇ ಕುಳಿತುಕೊಂಡು ನಮ್ಮಂಥ ಹೊಸ ಸದಸ್ಯರು ಏನು ಮಾತನಾಡುತ್ತಾರೆ ಎನ್ನುವುದನ್ನು ಕೇಳುತ್ತಾರೆ. ಇಂತಹ ಒಂದು ತಾಳ್ಮೆಗೆ ನಾನು ಅವರಿಗೆ ತಲೆಬಾಗುತ್ತೇನೆ. ನಾನು ಹಿಂದೆ ಅನೇಕ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಅವರು ಒಂದು ಗಾದೆ ಮಾತನ್ನು ಹೇಳಿ ಹೋಗಿ ತಮ್ಮ ಕಛೇರಿಯಲ್ಲಿ ಕುಳಿತುಕೊಂಡರೆ ಅವರು ವಾಪಸ್ಸು ಬರುತ್ತಿರಲಿಲ್ಲ. ಅಂತಹ

ಮುಖ್ಯಮಂತ್ರಿಗಳೂ ಇದ್ದರು. ಜನರು ಅಂತಹವರಿಗೆ ಏನು ಬುದ್ಧಿ ಕಲಿಸಬೇಕೋ ಅದನ್ನು ಕಲಿಸಿದ್ದಾರೆ. ಹಿಂದೆ ನಮ್ಮ ಪಕ್ಷ ಇತ್ತು, ಆಗ ನಮ್ಮಂಥ ಶಾಸಕರನ್ನು ಬಲಿ ಕೊಟ್ಟರು. ಶಿವ ಇದ್ದ, ಯಾರು ನಮ್ಮನ್ನು ತೇಜೋವಧೆ ಮಾಡಿದರು ಅವರನ್ನು ಮನೆಗೆ ಕಳುಹಿಸಿ ಇವತ್ತು ನಮ್ಮನ್ನು ಇಲ್ಲಿ ಕುಳಿತುಕೊಳ್ಳುವಂತೆ ಜನರು ಮಾಡಿದರು. ಯಾರ್‍ಯಾರು ಸಚಿವರು ಉತ್ತಮವಾದಂಥ ಕೆಲಸಗಳನ್ನು ಮಾಡಿದ್ದಾರೆ ಅವರು ಮತ್ತೆ ಆಯ್ಕೆಯಾಗಿ ಬಂದು ಇಲ್ಲಿ ಕುಳಿತಿದ್ದಾರೆ. ಯಾರು ಕೆಲಸವನ್ನು ಮಾಡಿಲ್ಲ ಅಂತಹವರನ್ನು ಜನರೇ ಮನೆಗೆ ಕಳುಹಿಸುತ್ತಾರೆ. ಅದೇರೀತಿ ನಿಮ್ಮ ಸರ್ಕಾರ ಕೂಡ ಅಷ್ಟೆ. ನೀವು ಉತ್ತಮವಾಗಿ ಕೆಲಸವನ್ನು ಮಾಡಿದರೆ ನಿಮಗೆ ನೂರು ವರ್ಷ ಆಯುಷ್ಯವನ್ನು ಕೊಟ್ಟು 20 ಸಲ ಆರಿಸಿ ಬಂದು 20 ಸಲ ಮುಖ್ಯಮಂತ್ರಿಗಳಾಗಬಹುದು. ನೀವೂ ಏನಾದರೂ ತಪ್ಪು ಮಾಡಿದರೆ ನಾವು ಆ ಕಡೆ ಬರುತ್ತೇವೆ, ನೀವು ನಮ್ಮ ಸ್ಥಾನದಲ್ಲಿ ಬರುತ್ತೀರಿ. ಅಂತಹ ಕೆಲಸ ಆಗುವುದು ಬೇಡ. ಉತ್ತಮವಾದಂಥ ಮಂತ್ರಿಮಂಡಲವನ್ನು ಇಟ್ಟುಕೊಂಡಂಥ ಮಾನ್ಯ ಎಸ್.ಎಂ.ಕೃಷ್ಣರವರಿಗೆ ಅವರ ಸಚಿವ ಸಂಪುಟದ ಸಹೋದ್ಯೋಗಿಗಳಿಗೆ ನಾವೆಲ್ಲಾ ಶಾಸಕರು ನಮ್ಮ ಬೆಂಬಲವನ್ನು ಕೊಡುತ್ತೇವೆ. ಅವರು ಉತ್ತಮವಾದಂಥ ಆಡಳಿತವನ್ನು ಮಾಡಲಿ, ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಓದಿದ್ದೇನೆ; ಅದರಲ್ಲಿ ಎಲ್ಲಾ ವಿಷಯಗಳ ಬಗ್ಗೆ ಉತ್ತಮವಾಗಿ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಅವರು ಏನು ಮಾಡುತ್ತೇವೆ ಎನ್ನುವ ಬಗ್ಗೆ ಒಂದು ವಿಚಾರವನ್ನೂ ಇಲ್ಲಿ ತಂದಿರುವುದಿಲ್ಲ. ಆರ್ಥಿಕ ಸಂಪತ್ತಿನ ಬಗ್ಗೆ ಏನು ಮಾಡುತ್ತೇವೆ, ಯಾವ ರೀತಿಯಾಗಿ ಆರ್ಥಿಕ ಸಂಪತ್ತನ್ನು ಕ್ರೋಢೀಕರಿಸುತ್ತೇವೆ ಎನ್ನುವ ವಿಚಾರಧಾರೆಯನ್ನು ಇಲ್ಲಿ ತಂದಿಲ್ಲ. ಅದನ್ನು ಇಲ್ಲಿ ಕೊಡಬೇಕಾಗಿತ್ತು. ಆ ವಿಚಾರದಲ್ಲಿ ವಿಷಾದವನ್ನು ವ್ಯಕ್ತಪಡಿಸುತ್ತಾ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುವುದು ಇಷ್ಟೆ; ಮಾನ್ಯ ಅಧ್ಯಕ್ಷರ ಮೂಲಕವಾಗಿ ಒಂದು ಮಾತನ್ನು ಹೇಳುತ್ತೇನೆ; ಮಾನ್ಯ ಶ್ರೀ ರಾಮಯ್ಯನವರು ಒಂದು ಮಾತನ್ನು ಹೇಳಿದರು, ಅವರು ಹಿರಿಯ ಸದಸ್ಯರು ಹಾಗೂ ಸಚಿವರಾಗಿದ್ದರವರು. ಈ ರೇಷ್ಮೆಯ ಆಮದಿಗೆ ಯಾರು ಕಾರಣರು? ಇನ್ನು ಕಬ್ಬಿನ ಬೆಲೆಯ ಬಗ್ಗೆ, ಹಳ್ಳಿಯಿಂದ ಬಂದಂಥ ಶಾಸಕರಾದ ನಾವು ಅದನ್ನು ಯೋಚನೆ ಮಾಡುವುದು ಆದ್ಯ ಕರ್ತವ್ಯ. ನಮಗೆ 10 ಪರ್ಸೆಂಟ್ ಓಟು ಕೊಟ್ಟವರು, ಆದರೆ 5 ಪರ್ಸೆಂಟ್ ಓಟು ಕೊಟ್ಟವರು ಶ್ರೀಮಂತರು. ಶ್ರೀಮಂತರು ಹೊರಗಡೆ ಬರುವುದಿಲ್ಲ. ಬಡವರು ನಮಗೆ ಓಟು ಕೊಟ್ಟಿದ್ದಾರೆ. ಅವರು ಓಟು ಕೊಟ್ಟು ಮನೆ ಮಾಡಿಕೊಡಿ, ಪೆನ್‌ಷನ್ ಮಾಡಿಸಿಕೊಡಿ, ಖಾತೆ ಮಾಡಿಸಿಕೊಡಿ, ಸಾಗುವಳಿ ಚೀಟಿ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಇಂತಹವರು 100 ಕ್ಕೆ 90 ಜನರು ಮಾತ್ರ. ಈ ಕಾನೂನು ಬಡವರಿಗಾಗಿ ಸೀಮಿತ ಆಗಬೇಕು ಎಂದು ನಾನು ಹೇಳುತ್ತೇನೆ. ಆ ವಿಚಾರವನ್ನು ಮನವಿ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲಿಚ್ಛಿಸುತ್ತೇನೆ. ಆ ಒಂದು ನಿಟ್ಟಿನಲ್ಲಿ ಈ ಸರ್ಕಾರ ಕೆಲಸವನ್ನು ಮಾಡಲಿ. ಈ ಸರ್ಕಾರ ಮಾಡುವ ಒಳ್ಳೆಯ ಕೆಲಸಕ್ಕೆ ನಾವು ತಲೆಬಾಗಿ ಪ್ರೋತ್ಸಾಹ ಕೊಡುತ್ತೇವೆ. ಅದೇರೀತಿಯಾಗಿ ಕೆಟ್ಟ ಕೆಲಸವನ್ನು ರೈತರಿಗೆ ಮಾಡಿದರೆ ಯಾವುದೇ ರೀತಿಯಲ್ಲಿ ಅದನ್ನು ಕ್ಷಮಿಸುವುದಕ್ಕೆ ಆಗುವುದಿಲ್ಲ; ನಾವು ಅದನ್ನು ವಿರೋಧ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಛೇರ್‌ಮನ್‌ರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ): ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣ, ಹಿಂದೆ ನಮ್ಮ ಸರ್ಕಾರ ಇದ್ದಾಗ ಇದ್ದಂತಹ ರಾಜ್ಯಪಾಲರ ಈ ಭಾಷಣ ಎರಡೂ ಒಂದೇ ಆಗಿ ಕಾಣಿಸುತ್ತವೆ. ಕಾರಣ ನನಗನಿಸುತ್ತದೆ, ನಮ್ಮ ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ ಭಟ್ಟಾಚಾರ್ಯ ಹಾಗೂ ಹಣಕಾಸಿನ ಕಾರ್ಯದರ್ಶಿಗಳಾದ ಶ್ರೀ ಗೋಪಾಲರೆಡ್ಡಿಯವರು ಅವರೇ ಬರೆದಂತೆ ಈ ಎರಡೂ ಒಂದೇ ಆಗಿದೆ. ಈ ಭಾಷಣದಲ್ಲಿನ ವಿಚಾರಗಳ ಬಗ್ಗೆ ಓದಿದಾಗ ನನಗನಿಸುತ್ತದೆ, ನಮ್ಮ ಸರ್ಕಾರ ಇದ್ದಾಗ ಹಾಕಿದಂಥ ಪ್ರೋಗ್ರಾಮ್‌ಗಳು ಏನಿವೆ ಅದೇರೀತಿಯಾಗಿ ನಿಮ್ಮ ಸರ್ಕಾರದಲ್ಲಿ ಆ ಪ್ರೋಗ್ರಾಮ್‌ಗಳಲ್ಲಿ ಇದೆಯೆಂದು ತೋರಿಸುತ್ತಿದ್ದೇ ಎನ್ನುವಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗುವ ಮೊದಲು ಒಂದು ಮಾತನ್ನು ಹೇಳಿದ್ದರು; ಮಾನ್ಯ ಕೆಂಗಲ್ ಹನುಮಂತಯ್ಯನವರ ಹಾಗೆ ಅಧಿಕಾರವನ್ನು ನಡೆಸುತ್ತೇನೆ; ಮಾನ್ಯ ದೇವರಾಜ್ ಅರಸ್‌ರ ಹಾಗೆ ನಾನು ಸಾಮಾಜಿಕ ನ್ಯಾಯವನ್ನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದರು. ನನಗೆ ಅದನ್ನು ಕೇಳಿದಾಗ ಬಹಳ ಸಂತೋಷವಾಯಿತು. ಬಹಳ ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆಯ್ಕೆಯನ್ನು ಲಕೋಟೆಯಲ್ಲಿ ಹಾಕಿ ದೆಹಲಿಯಿಂದ ಕಳುಹಿಸುತ್ತಿದ್ದರು. ಮೊಟ್ಟ ಮೊದಲನೇ ಸಾರಿ ಕಾಂಗ್ರೆಸ್ ಶಾಸಕಾಂಗ ಪಕ್ಷ ಒಬ್ಬ ಮುಖ್ಯ ಮಂತ್ರಿಯನ್ನು ಆಯ್ಕೆ ಮಾಡುವ ಅವಕಾಶ ನಿಮ್ಮ ಸರ್ಕಾರ ಮಾಡಿತು. ನನಗೆ ಅದನ್ನು ನೋಡಿದಾಗ ನಿಜವಾಗಲೂ ಬಹಳ ಸಂತೋಷವಾಯಿತು. ಕಟ್ಟಕಡೆಯಲ್ಲಾದರೂ ಕೂಡ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯ ಬುದ್ಧಿ ಬಂದಿದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದವರೆ ನಾಯಕರನ್ನು ಆಯ್ಕೆ ಮಾಡುವಂಥ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಲಕೋಟೆಯ ಮೂಲಕ ಮುಖ್ಯಮಂತ್ರಿಗಳ ಆಯ್ಕೆಯನ್ನು ನಿಲ್ಲಿಸಿ ಈ ರೀತಿ ಮಾಡಿದ್ದಾರೆನ್ನುವುದನ್ನು ಕೇಳಿ ಬಹಳ ಸಂತೋಷವಾಯಿತು. ಮಾನ್ಯ ಕೆಂಗಲ್ ಹನುಮಂತಯ್ಯ ಹಾಗೂ ಮಾನ್ಯ ದೇವರಾಜ್ ಅರಸ್‌ರವರ ದಾರಿಯಲ್ಲಿ ಹೋಗುತ್ತೇವೆ ಎನ್ನುವುದನ್ನು ಕೇಳಿದಾಗ ನನಗೆ ಮತ್ತಷ್ಟು ಸಂತೋಷವಾಯಿತು. ಇದರಿಂದ ಆಡಳಿತದಲ್ಲಿ ಬಿಗಿ ಇರುತ್ತದೆ, ಆಡಳಿತ ವ್ಯವಸ್ಥೆ ಆ ಒಂದು ದಿಕ್ಕೂಚಿಯಲ್ಲಿ ಹೋಗುತ್ತದೆ ಎನ್ನುವ ಭಾವನೆ ನನಗೆ ಆಗ ಬಂದಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದಾಗ ನಾನು ನಿರಾಶನಾಗಿಬಿಟ್ಟೆ. ರಾಜ್ಯದ ಒಬ್ಬ ಮುಖ್ಯಮಂತ್ರಿಯನ್ನು ಶಾಸಕಾಂಗ ಪಕ್ಷದವರೇ ಆಯ್ಕೆ ಮಾಡಿದಂತಹ ಈ ಸಮಯದಲ್ಲಿ ಅವರಿಗೆ ಎಲ್ಲಾ ಅಧಿಕಾರವನ್ನು ಕೊಟ್ಟರು; ಅವರ ಜೊತೆಯಲ್ಲಿ ಕನಿಷ್ಟ ಒಬ್ಬರಾದರು ಪ್ರಮಾಣ ವಚನವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಮಾನ್ಯ ಖರ್ಗೆಯವರಿಗೆ ಉಪಮುಖ್ಯಮಂತ್ರಿಯ ಸ್ಥಾನವನ್ನು ಕೊಡಬೇಕು ಎಂದು ಅವರನ್ನು ಕೇಳುವುದಕ್ಕೆ ಹೋದರು, ಅದಕ್ಕಾಗಿ ಮಂತ್ರಿಮಂಡಲ ಸದಸ್ಯರ ಪ್ರಮಾಣ ವಚನ ಮುಂದಕ್ಕೆ ಹೋಯಿತು ಎನ್ನುವ ವಿಷಯ ಪತ್ರಿಕೆಯಲ್ಲಿ ಬಂದಿದ್ದು ಸ್ಪಷ್ಟವಾಗಿದೆ. ಆದರೂ ಕೂಡ ತಾವು ಹೇಳಿದ ರೀತಿಗೂ ತಾವು ನಡೆದುಕೊಂಡ ರೀತಿಗೂ ಬಹಳ ವ್ಯತ್ಯಾಸ ಇದೆ; ಇದು ಆಗಬಾರದು. ನೀವು ಬಹಳ ಅನುಭವಿಗಳು. ನಾವು ವಿದ್ಯಾರ್ಥಿಗಳಾಗಿದ್ದಾಗ ಮಾನ್ಯ ಕೆ.ಹೆಚ್. ರಂಗನಾಥರವರನ್ನು, ಮಾನ್ಯ ಶ್ರೀಕಂಠಯ್ಯನವರನ್ನು, ಮಾನ್ಯ ಕೆ.ಹೆಚ್.ಪಾಟೀಲರವರನ್ನು ನೆನಸಿಕೊಂಡು ನಾವು ನೋಡಿದ್ದು ಇದೆ. ನಿಮ್ಮ ಕಾರ್ಯಶೈಲಿ ನೀವು ವಿಧಾನಸಭೆಯಲ್ಲಿ ಮಾತನಾಡುವಂಥ ರೀತಿ, ನಿಮ್ಮದೇ ಆದಂಥ ದಾಟಿಗಳನ್ನು ನೋಡಿದಾಗ

ನಿಜವಾಗಲೂ ಕೂಡ ಬಹಳ ಸಂತೋಷವಾಗುತ್ತಿತ್ತು. ಇಷ್ಟು ಅನುಭವಿಗಳಾದ ನೀವುಗಳು ಕಡೆಗೆ ಮಂತ್ರಿಮಂಡಲ ರಚನೆ ಮಾಡುವಾಗ ಪೇಪರ್‌ಗಳನ್ನು ಹಿಡಿದುಕೊಂಡು ದೆಹಲಿಗೆ ಹೋಗಿದ್ದು ನೋಡಿ ನನಗೆ ಎಲ್ಲೋ ಒಂದು ವಿಧದ ಅವ್ಯಕ್ತ ನೋವು ಕಾಡುತ್ತಿದೆಯೇನೋ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತು ನಿಮ್ಮನ್ನು ಬೇರೆಪಕ್ಷದವರು ಹಾಗೂ ನಮ್ಮ ಪಕ್ಷದವರು ವೈಟ್ ಕಾಲರ್ ರಾಜಕಾರಣಿ ಎಂದು ಹೇಳುತ್ತಾರೆ. ಬರೀ ಸೊಪ್ಪು ಮುದ್ದೆಯನ್ನು ತಿಂದು ಬಿಟ್ಟರೆ ಸಾಧ್ಯವಿಲ್ಲ; ರೈತನ ಮಗನೆಂದು ಹೇಳುವುದಕ್ಕೆ ಇಷ್ಟು ಸಾಲದು, ಊಟಕ್ಕೆ ಅನ್ನವನ್ನಾದರೂ ತಿನ್ನಬಹುದು, ಅದು ಊಟಕ್ಕೆ ಏನನ್ನು ಅವಲಂಬಿಸಬಾರದು. ಆಗ ಕಾಂಗ್ರೆಸ್‌ನವರೇ ಅದನ್ನು ಒತ್ತು ಕೊಟ್ಟು ವೈಟ್ ಕಾಲರ್ ರಾಜಕಾರಣಿ ಎಂದು ಬಿಂಬಿಸುತ್ತಿದ್ದರು. ಈ ರಾಜ್ಯದ ಮುಖ್ಯಮಂತ್ರಿಗಳು ಆಗುವ ಮುಂಚೆ 'ವೈಟ್ ಕಾಲರ್ ರಾಜಕಾರಣಿ' ಅದು-ಇದು ಎಂದು ಹೇಳುತ್ತಿದ್ದರು. ಅದಕ್ಕೆ ಅನೇಕ ಕಾರಣಗಳನ್ನು ಕೊಡುತ್ತಿದ್ದರು. ಆದರೂ ಕೂಡ ಅದನ್ನು ನಾನು ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ. ಇವತ್ತಿಗೂ ಕೂಡ ಮಾನ್ಯ ರಾಮಕೃಷ್ಣ ಹೆಗಡೆಯವರು 1983 ಹಾಗೂ 1985 ರಿಂದ ನಡೆಸಿದಂತಹ ಸರ್ಕಾರ, ಮಾನ್ಯ ವೀರೇಂದ್ರ ಪಾಟೀಲರು ನಡೆಸಿದಂಥ ಸರ್ಕಾರ ಇವತ್ತಿನವರೆಗೂ ಸ್ಮರಣೀಯವಾಗಿವೆ. ಮಾನ್ಯ ವೀರೇಂದ್ರ ಪಾಟೀಲರು ಇವತ್ತು ನಮ್ಮೊಡನೆ ಇಲ್ಲ, ಆದರೂ ಕೂಡ ಜನರು ಅವರನ್ನು ನೆನೆಸಿಕೊಳ್ಳುತ್ತಾರೆ. 11 1/2 ತಿಂಗಳು ಅವರು ನಡೆಸಿದಂಥ ಸರ್ಕಾರ, ಆರ್ಥಿಕ ದಿಗ್ಬಂಧನ ತಂದಂಥ ಈ ರಾಜ್ಯದಲ್ಲಿ 400 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿ ಹನ್ನೊಂದುವರೇ ತಿಂಗಳಲ್ಲಿ ಇಟ್ಟಂತಹ ರೀತಿ ನೀತಿಗಳನ್ನು ನೋಡಿದಾಗ ಯಾವ ದಿಕ್ಕಿನಲ್ಲಿ ಅವರು ನಡೆದರೋ ಮಾನ್ಯ ಸಭಾನಾಯಕರಾದ ತಾವು ಕೂಡ ಆ ದಿಕ್ಕಿನಲ್ಲಿ ನಡೆಯಬೇಕು ಎನ್ನುವ ಒಂದು ಅನಿಸಿಕೆ ಏನಿದೆ ಇದು ನನ್ನ ವೈಯಕ್ತಿಕ ಅನಿಸಿಕೆ ಅಲ್ಲ, ನಮ್ಮ ಪಕ್ಷದ ಪರವಾಗಿಯೂ ಕೂಡ ಆ ದಿಕ್ಕಿನಲ್ಲಿ ನೀವು ಕೆಲಸವನ್ನು ಮಾಡುತ್ತೀರಿ ಎನ್ನುವಂಥ ನಂಬಿಕೆ ನನ್ನಲ್ಲಿ ಇದೆ ಎಂದು ಈ ಸಮಯದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದೆ ನಮ್ಮ ಸರ್ಕಾರವಿದ್ದಾಗ ಮಂಡಲ ಪಂಚಾಯಿತಿ ಚುನಾವಣೆಯನ್ನು 2000ನೇ ಇಸವಿಯೊಳಗೆ ಮುಗಿಸಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ನಿನ್ನೆ ಇದರ ಬಗ್ಗೆ ನಾನು ಮತ್ತು ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದಾಗ ಈ ಚುನಾವಣೆಯನ್ನು ಮಾಡುತ್ತೀರಾ ಎಂದು ಮಾನ್ಯ ಎಂ.ವೈ.ಘೋರ್ಪಡೆಯವರನ್ನು ಕೇಳಿದಾಗ, ಇನ್ನೂ ಸುಮಾರು 5000 ಪಂಚಾಯಿತಿಗಳನ್ನು ನಾವು ಮಾಡುತ್ತೇವೆ. ಇನ್ನು ಒಂದು ವರ್ಷ ಮುಂದಕ್ಕೆ ಹೋಗಬಹುದು ಎನ್ನುವ ಸೂಚನೆಯನ್ನು ಮಾನ್ಯ ಸಚಿವರು ಕೊಟ್ಟರು. ಹಿಂದೆ ಮಂಡಲ್ ಪಂಚಾಯಿತಿಗಳಾಗಿದ್ದಾಗ ಪ್ರತಿ ಹಳ್ಳಿಯಲ್ಲಿಯೂ ಫೈಟ್ ಇತ್ತು. ಅಲ್ಲಿ ಒಬ್ಬ ಅಧ್ಯಕ್ಷನಾಗಿದ್ದವನು ಕಾರ್ಯದರ್ಶಿಯವರ ಹಿಂದೆ ಇರುತ್ತಿದ್ದನು. ಇತ್ತೀಚಿನ 5 ವರ್ಷಗಳಲ್ಲಿ ಆದಂತಹ ಪಂಚಾಯಿತಿಗಳಲ್ಲಿ ಕಾರ್ಯದರ್ಶಿಯ ಹಿಂದೆ ಅಧ್ಯಕ್ಷರು ಬ್ಯಾಗ್ ಹಿಡಿದುಕೊಂಡು ಹೋಗುವಂತಹ ಪರಿಸ್ಥಿತಿ ಇತ್ತು. ದಯವಿಟ್ಟು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಹಿಂದೆ ಮಂಡಲ್ ಪಂಚಾಯಿತಿಗಳು ಒಳ್ಳೆಯ ರೀತಿಯಲ್ಲಿ ಮತ್ತು ವಿಕೇಂದ್ರೀಕರಣದ ಹೆಸರಿನಲ್ಲಿ ನಡೆಯುತ್ತಿತ್ತು. ಇದನ್ನು ಹೆಚ್ಚಿಗೆ ಮಾಡುವುದರಿಂದ ಅವರ ಅಧಿಕಾರ ಮೊಟಕುಗೊಳಿಸುತ್ತೀರಿ ಎನ್ನುವಂತಹ ಭಾವನೆ ಇದೆ. ಮಾನ್ಯ ನಜೀರ್‌ಸಾಬ್‌ರವರ ಚಿಂತನೆ, ಪರಿಕಲ್ಪನೆ ಏನಿದೆ ಆ ರೀತಿಯಲ್ಲಿ ಇದನ್ನು ಮಾಡಬೇಕೆಂದು ಈ ಸಮಯದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

4.40 ಪಿ.ಎಂ.

ಇವತ್ತು ಸರ್ಕಾರ ಅಲ್ಪಸಂಖ್ಯಾತರು, ಪರಿಶಿಷ್ಟ ವರ್ಗದವರ ಮೂಲಕ ನಾವು ಗೆದ್ದಿದ್ದೇವೆ ಎನ್ನುವ ಚಿಂತನೆ ಬಗ್ಗೆ ಅಲ್ಲಲ್ಲಿ ಪತ್ರಿಕೆಗಳಲ್ಲಿ ಹೇಳುತ್ತಿದ್ದಾರೆ. ಆದರೆ ನಿಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಹಳ ಪುಟವಿದ್ದರೂ ಅಲ್ಪಸಂಖ್ಯಾತರ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಹೇಳಿರುವುದನ್ನು ಬಿಟ್ಟರೆ ಹೆಚ್ಚಿಗೆ ಅದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ. ಇವತ್ತು ಯಾರು ನಿಮಗೆ ಓಟು ಕೊಟ್ಟಿರುವವರು? ಶ್ರೀ ಅಜೀಜ್‌ಸೇಟ್, ಶ್ರೀ ರೋಷನ್‌ಬೇಗ್, ಶ್ರೀ ಖಮರುಲ್ಲಾ ಇಸ್ಲಾಂ, ಶ್ರೀ ಸಗೀರ್ ಅಹಮದ್ ಇರಬಹುದು, ಇವರೆಲ್ಲರೂ ಮಾತ್ರ ಅಲ್ಪಸಂಖ್ಯಾತರಲ್ಲ. ಇವತ್ತಿಗೂ ಕೂಡ ಅಲ್ಪಸಂಖ್ಯಾತರಲ್ಲಿ 100 ಕ್ಕೆ 2ರಷ್ಟು ಭಾಗ ವಿದ್ಯಾವಂತರಿರಬಹುದು. ಅವರ ವಿದ್ಯೆಗೆ ನೀವು ಪುಷ್ಟಿಯನ್ನು ಕೊಡಬೇಕು. ಅಲ್ಪಸಂಖ್ಯಾತರಲ್ಲಿ ಇವತ್ತು ಕೇವಲ 2-3 ಪರ್‌ಸೆಂಟ್ ವಿದ್ಯಾವಂತರು ಇದ್ದಾರೆ ಎನ್ನುವುದನ್ನು ಕೂಡ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಈ ಚಿಂತನೆಗೆ ತಾವು ಒತ್ತನ್ನು ಕೊಡಬೇಕು, ಇಲ್ಲದಿದ್ದರೆ ಸುಮ್ಮನೆ ಚುನಾವಣೆಯಲ್ಲಿ ಗೆದ್ದಿರುವ 4-5 ಜನ ಅಲ್ಪಸಂಖ್ಯಾತರಿಗೆ ಮಂತ್ರಿಗಳನ್ನಾಗಿ ಮಾಡಿ ನಾವು ಅಲ್ಪಸಂಖ್ಯಾತರನ್ನು ಪ್ರೀತಿಸಿದ್ದೇವೆ ಎನ್ನುವಂತಹ ಭಾವನೆಯನ್ನು, ಕಲ್ಪನೆಯನ್ನು ಮೂಡಿಸಬಾರದು. ಆ ದಿಕ್ಕಿನಲ್ಲಿ, ಹಿಂದೆ ಸರ್ಕಾರ ರೆಸಿಡೆನ್ಷಿಯಲ್ ಸ್ಕೂಲ್‌ಗಳನ್ನು ಮಾಡಿ ಅವರ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತನ್ನು ಕೊಟ್ಟರು. ಆ ದಿಕ್ಕಿನಲ್ಲಿ ಅಲ್ಪಸಂಖ್ಯಾತರ ಓಟುಗಳನ್ನು ತೆಗೆದುಕೊಳ್ಳುವುದೇ ಒಂದು ಮೂಲ ಉದ್ದೇಶವೇ ಅಲ್ಲ. ಅವರು ಯಾವ ದಿಕ್ಕಿನಲ್ಲಿ ಕೆಲಸ ಮಾಡಬೇಕು ಎನ್ನುವ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ತಾವು ಆ ಪರಿಕಲ್ಪನೆಯ ಕೆಲಸವನ್ನು ಮಾಡುತ್ತೀರಿ ಎನ್ನುವಂತಹ ನಂಬಿಕೆಯನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಇವತ್ತು ಕೋಲಾರದಲ್ಲಿ ಒಂದು ಉರ್ದು ಟೀಚರ್ ಹುದ್ದೆ ಸುಮಾರು 5-6 ವರ್ಷದಿಂದ ಖಾಲಿ ಇದೆ. ನಾನು ಸಂಬಂಧಪಟ್ಟ ಎಲ್ಲಾ ಅಧಿಕಾರಿಯವರನ್ನು ಇದರ ಬಗ್ಗೆ ಕೇಳಿದೆ. ಹೈಸ್ಕೂಲಿಗೆ ಬಿಎಡ್ ಆದವರನ್ನು ಬಿಟ್ಟು ಬೇರೆಯವರನ್ನು ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅವರು ಒಬ್ಬರು ಉರ್ದು ಮುನ್ಷಿಯನ್ನು ನೇಮಕ ಮಾಡಿಕೊಂಡಿದ್ದಾರೆ. ಅವರಿಗೆ ಉರ್ದು ಬಿಎಡ್ ಆಗಿರಬೇಕು. ಕರ್ನಾಟಕದಲ್ಲಿ ಬಿಎಡ್ ಮಾಡುವುದಕ್ಕೆ ಅವರಿಗೆ ಅವಕಾಶವಿಲ್ಲ. ಇಲ್ಲಿ ಉರ್ದು ಬಿಎಡ್ ಇರುವುದಿಲ್ಲ. ಅವರು ಬಿಹಾರಕ್ಕೋ ಅಥವಾ ಲಕ್ನೋಗೋ ಹೋಗಿ ಅಲ್ಲಿ ಉರ್ದು ಬಿಎಡ್ ಪದವಿಯನ್ನು ಪಡೆದುಕೊಂಡು ಬಂದು ಇಲ್ಲಿ ಪಾಠ ಹೇಳುವಂತಹ ಪರಿಸ್ಥಿತಿ ಇದೆ. ಇವತ್ತು ಯಾವ ಅಲ್ಪಸಂಖ್ಯಾತರ ಮತಗಳಿಂದ ನೀವು ಚುನಾವಣೆಯಲ್ಲಿ ಆರಿಸಿ ಬಂದಿದ್ದೀರಿ, ಅವರ ಚಿಂತನೆಯ ಬಗ್ಗೆ ನೀವು ಹೆಚ್ಚಿನ ಒತ್ತನ್ನು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಬರೀ ಓಟಿಗೋಸ್ಕರ ಅವರನ್ನು ವೆಪನ್ ಆಗಿ ಉಪಯೋಗಿಸಿಕೊಳ್ಳುವುದನ್ನು ಬಿಟ್ಟು, ಅವರ ಅಭಿವೃದ್ಧಿಗೆ ಕೂಡ ಒತ್ತನ್ನು ಕೊಡಬೇಕೆಂದು ಈ ಸಮಯದಲ್ಲಿ ನಾನು ಹೇಳುತ್ತೇನೆ; ಹಾಗೆಯೇ ಇಲ್ಲಿ ಏನು ಉರ್ದು ಬಿಎಡ್ ಶಾಲೆ ಇಲ್ಲ, ಆ ಉರ್ದು ಬಿಎಡ್‌ನ್ನು ಶಾಲೆಯನ್ನು ನಮ್ಮ ರಾಜ್ಯದವರು ಓದುವವರಿದ್ದರೆ ಅವರಿಗೆ ಕೊಡಲಿ; ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಬಿಎಡ್ ಉರ್ದು ಶಾಲೆಯನ್ನು ಪ್ರಾರಂಭ ಮಾಡಬೇಕು. ಇದು ಪ್ರಾರಂಭವಾದರೆ ಉರ್ದುವಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕಂತಹ ಪರಿಸ್ಥಿತಿ ಆಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನ ಇದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಮಾನ್ಯ ನಂಜಯ್ಯನಮಠರವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದರು; ನಮ್ಮ ಹಳೆಯ ಮೈಸೂರು ಏನಾಗಿದೆ, ಹೊಸ ಮೈಸೂರಿನಲ್ಲಿ ಏನಾಗಿದೆ ಎನ್ನುವುದನ್ನು ಬಹಳ ವಿಷದವಾಗಿ ಅವರು ಹೇಳಿದರು. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಚಂದ್ರೇಗೌಡರು ಆಗಲೇ ನಿಜವಾಗಲೂ ಈ ಬಗ್ಗೆ ಚೆನ್ನಾಗಿ ಹೇಳಿದರು. ಅದು ಹೊಸ ಕರ್ನಾಟಕ, ಹಳೆಯ ಕರ್ನಾಟಕ ಬಾಂಬೆ ಕರ್ನಾಟಕ, ಈ ತರಹ ಯಾರೂ ಕೂಡ ಮಾತನಾಡಬಾರದು. ಇವತ್ತು ಸಮಗ್ರ ಕರ್ನಾಟಕವಾಗಬೇಕಾದರೆ ಮಾನ್ಯ ನಿಜಲಿಂಗಪ್ಪನವರು ಇವತ್ತು ಇದ್ದಾರೆ; ಅವರ ಹೋರಾಟ, ಆ ಜನಗಳ ಹೋರಾಟದಿಂದ ಆಗಿರತಕ್ಕಂಥ ಈ ಸಮಗ್ರ ಕರ್ನಾಟಕದಲ್ಲಿ ರಾಂಗ್‌ಮೆಸೇಜ್‌ನ್ನು ಜನಕ್ಕೆ ಕಳುಹಿಸಿಬಾರದು. ಇಲ್ಲೆಲ್ಲೂ ಅಭಿವೃದ್ಧಿಯಾಗಿಲ್ಲ, ರಸ್ತೆಯಾಗಿಲ್ಲ, ಅಲ್ಲೊಂದು ಸ್ಕೂಲ್ ಆಗಿಲ್ಲ ಎನ್ನುವ ಒಂದೇ ಒಂದು ಕಾರಣದಿಂದ ನಮಗೆ ಬೇರೆ ರಾಜ್ಯ ಬೇಕು ಎಂದು ಹೇಳುವುದು ತಪ್ಪು. ಇವತ್ತು ಕೊಡಗಿನವರು ನಮಗೆ ಬೇರೆ ರಾಜ್ಯ ಬೇಕು ಎಂದು ಹೇಳುತ್ತಿದ್ದಾರೆ. ಈ ತರಹ ಸಣ್ಣ ಭಾವನೆ ಬರುವ ಹಾಗೆ ನಾವು ಆ ಜನಗಳಿಗೆ ರಾಂಗ್‌ಮೆಸೇಜ್‌ನ್ನು ಕೊಡುವುದು ತಪ್ಪಾಗುತ್ತದೆ. ಈ ಕಡೆ ಇರುವ ಸದಸ್ಯರಾಗಲಿ, ಆ ಕಡೆ ಇರುವ ಸದಸ್ಯರಾಗಲಿ, ಆ ದಿಕ್ಕಿನಲ್ಲಿ ಜಿಲ್ಲಾವಾರು ಅಭಿವೃದ್ಧಿಯ ಬಗ್ಗೆ ಮಾತನಾಡಲಿ. ನಮ್ಮ ಕೋಲಾರ ಜಿಲ್ಲೆಯಲ್ಲಿ ಇಂತಿಂಥ ಕೆಲಸಗಳಾಗಿಲ್ಲ, ಧಾರವಾಡದಲ್ಲಿ ಆಗಿಲ್ಲ ಬಿಜಾಪುರದಲ್ಲಿ ಆಗಿಲ್ಲ, ಎನ್ನುವಂತಹ ಮಾತನ್ನು ಆಡಬೇಕೇ ವಿನಃ ನಮಗೆ ಹಳೆಯ ಮೈಸೂರಿನಲ್ಲಿ ಬಹಳ ಆಗಿದೆ, ಹೊಸ ಮೈಸೂರಿನಲ್ಲಿ ಏನೂ ಆಗಲಿಲ್ಲ ಎನ್ನುವಂತಹ ಈ ತರಹ ಜನಗಳಿಗೆ ತಪ್ಪು ಭಾವನೆ, ತಪ್ಪು ಕಲ್ಪನೆಯನ್ನು ಕೊಡುವಂತಹ ಮಾತನ್ನು ಆಡಬಾರದು ಅಂತಹ ಕೆಲಸವನ್ನು ಯಾರೂ ಮಾಡಬಾರದು ಎಂದು ನಾನು ಎಲ್ಲಾ ಸದಸ್ಯರಲ್ಲೂ ಕೂಡ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಇವತ್ತು ನೀವು ಕೋಲಾರ ಜಿಲ್ಲೆಯ ಬಯಲುಸೀಮೆಯನ್ನು ನೋಡಿರಬಹುದು. ಅಲ್ಲಿ ಈಗಾಗಲೇ 800 ಅಡಿ ಆಳಕ್ಕೆ ಕುಡಿಯುವ ನೀರಿಗಾಗಿ ನಾವು ಬೋರ್‌ವೆಲ್ಸ್‌ನ್ನು ಹಾಕಿಸಲು ಹೋಗಿದ್ದೇವೆ. ನಮ್ಮ ಪರಿಸ್ಥಿತಿ ಏನಾಗಿದೆ ಏಕೆಂದರೆ ಈ ಸಲ ಅಲ್ಲಿ ಮಳೆಯಿಲ್ಲ. ಆಗಲೇ ಯಾರೋ ಮಾನ್ಯ ಸದಸ್ಯರು ಕೋಲಾರದಲ್ಲಿ ಅತಿವೃಷ್ಟಿಯಾಗಿದೆ ಎಂದು ಹೇಳುತ್ತಿದ್ದರು. ಮಾಸ್ತಿಯಲ್ಲಿ ಎಲ್ಲೋ ಒಂದು ಕಡೆ ಮನೆ ಬಿದ್ದುಹೋಗಿದೆ, ಇಲ್ಲಿ ಎಲ್ಲಿ ಅತಿವೃಷ್ಟಿಯಾಗಿದೆ, ನನಗೆ ಇದರ ಬಗ್ಗೆ ಅರ್ಥವಾಗಲಿಲ್ಲ. ಕೋಲಾರದಲ್ಲಿ ನೀರು ಕೆರೆಗಳಿಗೆ ಇನ್ನೂ ತುಂಬಿಲ್ಲ. 15-20 ದಿವಸಗಳಿಗೆ ಆಗುವಷ್ಟು ನೀರು ಕೂಡ ಕೆರೆಗಳಿಗೆ ಬಂದಿಲ್ಲ. ಅಂತಹದರಲ್ಲಿ ಕೆಲವು ಸದಸ್ಯರು ಅತಿವೃಷ್ಟಿ ಎಂದು ಮಾತನಾಡಿದಾಗ ನನಗೆ ಇದರಿಂದ ನೋವಾಯಿತು. ಈ ಸಾರಿ ಕುಡಿಯುವ ನೀರಿಗೆ ಹಳ್ಳಿಗಾಡಿನಲ್ಲಿ ಬಹಳ ಕಷ್ಟದ ಪರಿಸ್ಥಿತಿಯಾಗಿದೆ. ಅಲ್ಲಿಗೆ 55 ಲೀಟರ್ ನೀರನ್ನು ಸರಬರಾಜು ಮಾಡುತ್ತೇವೆಂದು ಹೇಳಿದಾಗ ಕೋಲಾರ ಜಿಲ್ಲೆಗೆ ಇದು ಸಾಧ್ಯವೇ? ಇದು ಸಾಧ್ಯವಿಲ್ಲವೆಂದು ನಾನು ಮನಪೂರ್ವಕವಾಗಿ ಹೇಳುತ್ತಿದ್ದೇನೆ. ಇವತ್ತು ನಾವು ಕುಡಿಯುವ ನೀರಿಗಾಗಿ 800 ಅಡಿ ಆಳಕ್ಕೆ ಹೋಗಿ ಬೋರ್‌ವೆಲ್ ಹಾಕಿ 5,10, ಹೆಚ್‌ಪಿ ಮೋಟಾರ್‌ಗಳಿಗೆ ಬದಲಾಗಿ ಇವತ್ತು 16-20 ಹೆಚ್‌ಪಿಗಳಿಗೆ ಬಂದಿದ್ದೇವೆ. ಇದರಲ್ಲಿ ವ್ಯವಸಾಯವನ್ನು ಬಿಟ್ಟು ಕುಡಿಯುವ ನೀರಿಗೆ ಈ ತರಹದ ಪರಿಸ್ಥಿತಿ ಇದೆ. ಆದರೆ ತಾವು ಕೆರೆಗಳ ಹೂಳೆತ್ತುವಂತಹ ಕಾರ್ಯಕ್ರಮವನ್ನು ಹಾಕಬೇಕಾಗಿತ್ತು. ಇವತ್ತು 4000 ಕೆರೆಗಳು ಕೋಲಾರ ಜಿಲ್ಲೆಯಲ್ಲಿದೆ. ಇವತ್ತು ನೀವು ಕೃಷ್ಣ ಮೇಲ್ದಂಡೆ ಯೋಜನೆಗೆ

5000 ಕೋಟಿ ರೂಪಾಯಿಗಳನ್ನು ಕೊಡಿ, ನಮ್ಮದೇನೂ ಅಭ್ಯಂತರವಿಲ್ಲ. ಕಾವೇರಿ ಜಲಾನಯನಕ್ಕೆ ಇನ್ನೂ 3000 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಕೊಡಿ, ಅದರಿಂದ ನಮಗೇನು ತೊಂದರೆ ಇಲ್ಲ. ಆದರೆ ಬಯಲುಸೀಮೆ ಅಭಿವೃದ್ಧಿಗೆ ನೀವು ಏನು ಕೊಡುತ್ತಿದ್ದೀರಿ, ಎಲ್ಲೋ 2-3 ಕೋಟಿ ರೂಗಳನ್ನು ಕೊಡುವುದು ಏನಿದೆ ಇದಕ್ಕಿಂತಲೂ ಹೆಚ್ಚಿಗೆ ಕೊಡಿ. ನಿಮ್ಮದು ಒಂದು ಬಯಲುಸೀಮೆ ಅಭಿವೃದ್ಧಿ ನಿಗಮ ಇದೆ ಎನ್ನುವ ಮಾತನ್ನು ನೀವು ಹೇಳುವಂತಹ ಕೆಲಸವನ್ನು ಬಿಡಬೇಕು. ನಿಮ್ಮ ಸರ್ಕಾರ ಕೆರೆಗಳ ಹೂಳೆತ್ತುವಂತಹ ಕೆಲಸವನ್ನು ಯುದ್ಧೋಪಾಧಿಯಲ್ಲಿ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದ ಮುಖ್ಯಮಂತ್ರಿಯಾದ ಶ್ರೀ ಚಂದ್ರಬಾಬು ನಾಯಿಡು ಕಂಪ್ಯೂಟರೀಕರಣ ಮಾಡಿದಂತಹ ಮುಖ್ಯಮಂತ್ರಿ ಎಂದು ಹೇಳಿರುವುದನ್ನು ಇವತ್ತು ನಾನು ಪತ್ರಿಕೆಯಲ್ಲಿ ನೋಡಿದೆ. ನಾವು ದೇಶ ವಿದೇಶಗಳಲ್ಲಿ ಅವರನ್ನು ನೋಡುತ್ತಿದ್ದೇವೆ. ತಾವು ಕೂಡ ಆ ದಿಕ್ಕಿನಲ್ಲಿ ಹೋಗುವಂತಹ, ಚಿಂತನೆ, ಮಾಡುವಂತಹ ತೀರ್ಮಾನವನ್ನು ಮಾಡಿದ್ದೀರಿ. ತಾವು ಕಂಪ್ಯೂಟರ್ ಮುಂದೆ ಕುಳಿತುಕೊಂಡು ಬಟನ್‌ನ್ನು ಒತ್ತುತ್ತಿರುವ ಭಾವಚಿತ್ರವನ್ನು ನಾನು ಪತ್ರಿಕೆಯಲ್ಲಿ ನೋಡಿದೆ. ಇದು ಬಹಳ ಒಳ್ಳೆಯದು, ಎಲ್ಲಾವಿಧದಲ್ಲಿ ಆಧುನೀಕರಣವಾಗುವಂತಹ ದೇಶ, 2001 ನೇ ಇಸವಿಗೆ ಹೊಸ ತಾಂತ್ರಿಕ ಯುಗಕ್ಕೆ ಕಾಲಿಡುವಂತಹ ನಾವು ಎಲ್ಲದರಲ್ಲೂ ಆಧುನೀಕರಣರಾಗಬೇಕು. ಅದು ಯಾವ ದಿಕ್ಕಿನಲ್ಲಿ, ಎಷ್ಟರಮಟ್ಟಿಗೆ ಆಗಬೇಕು ಎನ್ನುವ ಬಗ್ಗೆ ತಾವು ಯೋಚನೆ ಮಾಡಬೇಕು. ಇವತ್ತು ದೇಶದಲ್ಲಿ ಬೆಂಗಳೂರು ಸಾಫ್ಟ್‌ವೇರ್ ತಮಗೆ ತವರು ಮನೆ ಇದ್ದಹಾಗೆ ಆದರೆ ಇತ್ತೀಚೆಗೆ ಆಂಧ್ರಪ್ರದೇಶಕ್ಕೆ ಶ್ರೀ ಚಂದ್ರಬಾಬು ನಾಯಿಡುರವರು ಮುಖ್ಯಮಂತ್ರಿಯಾದ ಮೇಲೆ ಬಹಳಷ್ಟು ನಮ್ಮ ಕಂಪನಿಗಳು ಆ ಕಡೆಗೆ ಹೋಗುತ್ತಿವೆ. ಅದರ ಕಡೆಗೆ ಕೂಡ ತಾವು ಯೋಚನೆ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಉದ್ಯೋಗಸ್ಥ ಮಹಿಳೆಯರಿಗೆ ಒಂದು ಹಾಸ್ಟೆಲ್‌ನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಅದರಲ್ಲೂ ಹೇಳಿದ್ದೀರಿ. ಇವತ್ತು ಆಂಧ್ರದಲ್ಲಿ ಹಳ್ಳಿಯ ಮಹಿಳೆಯರಿಗೆ ಪುಕ್ಕಟೆಯಾಗಿ ಗ್ಯಾಸ್‌ನ್ನು ಕೊಡುತ್ತಿದ್ದಾರೆ. ಇಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ಹಾಸ್ಟಲ್ ಮಾಡುವುದರ ಜೊತೆಗೆ ಹಳ್ಳಿಗಾಡಿನಲ್ಲಿ ಜೀವನ ಮಾಡುವಂತಹ ಹೆಣ್ಣುಮಕ್ಕಳಿಗೆ ಒಂದು ಗ್ಯಾಸನ್ನು ಫ್ರೀಯಾಗಿ, ಮುಫಾತ್ತಾಗಿ ಕೊಟ್ಟರೆ ಅವರು ಮತ್ತೆ ನಿಮಗೆ ಓಟು ಹಾಕುತ್ತಾರೆ. ಈ ವಿಚಾರದಲ್ಲಿ ಇವತ್ತು ಹೇಗೆ ಆಂಧ್ರಪ್ರದೇಶದಲ್ಲಿ ಕೆಲಸಗಳು ಆಗಿದೆ ಆ ತರಹ ನೀವು ಕೆಲಸ ಮಾಡಬೇಕು. ಆ ದಿಕ್ಕಿನಲ್ಲಿ ನೀವು ಕೆಲಸ ಮಾಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ಪಟ್ಟಣ ಪ್ರದೇಶಗಳ ಬಗ್ಗೆ ಮಾನ್ಯ ಸ್ನೇಹಿತರಾದ ಸೋಮಣ್ಣನವರು ಬಹಳ ಹೇಳುತ್ತಿದ್ದರು, ನಿಜ ಬೆಂಗಳೂರು ನಮ್ಮ ರಾಜ್ಯದ ರಾಜಧಾನಿ ಅದು ಎಲ್ಲಾ ವಿಧದಲ್ಲೂ ಚೆನ್ನಾಗಿರಬೇಕು. ಸ್ವಾತಂತ್ರ್ಯ ಬಂದು 50ವರ್ಷಗಳಾಯಿತು ಆದರೆ ಉಳಿದ ನಗರಸಭೆಗಳ ಪರಿಸ್ಥಿತಿ ರಾಜ್ಯದಲ್ಲಿ ಹೇಳಿಕೊಳ್ಳುವಂಥದ್ದಾಗಿಲ್ಲ. ನಾನು ಕೋಲಾರದಮಟ್ಟಿಗೆ ಹೇಳಬೇಕಾದರೆ, ಇವತ್ತು ಕೋಲಾರದ ಪೂರ್ತಿ ಯುಜಿಡಿ ಇಲ್ಲ. ಕನಿಷ್ಟ ಒಂದು ಪ್ರೋಗ್ರಾಮ್‌ನ್ನು ಹಾಕಿಕೊಳ್ಳಿ, ನಮ್ಮ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಾದರೂ ಯುಜಿಡಿಯನ್ನು ಅಳವಡಿಸಿ. ಇವತ್ತು ಒಂದು ಗಲ್ಲಿಗಳಲ್ಲಿ ಹೋಗಬೇಕಾದರೆ ಕೈಯಲ್ಲಿ ಮೂಗು ಹಿಡಿದುಕೊಂಡು

ದಾಟಿಕೊಂಡು ಹೋಗಬೇಕಾಗುತ್ತದೆ. ಈ ತರಹದ ಪರಿಸ್ಥಿತಿ ನಗರಗಳಲ್ಲಿದೆ. ನಾವು ಹಳ್ಳಿಗಳ ನೈರ್ಮಲ್ಯೀಕರಣದ ಜೊತೆಗೆ ಕನಿಷ್ಟ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಯುಜಿಡಿಗಳನ್ನು ಅಳವಡಿಸಿ, ಅದಕ್ಕೆ ನೀವು ಸಾಕಷ್ಟು ಹೆಚ್ಚಿನ ಹಣವನ್ನು ಹಾಕಬೇಕಾಗುತ್ತದೆ. ಅದರ ಜೊತೆಗೆ ದೊಡ್ಡ ದೊಡ್ಡ ನಗರಸಭೆಗಳಿಗೂ ಒತ್ತು ಕೊಡಬೇಕಾಗುತ್ತದೆ. ಯಾವ ಸರ್ಕಾರ ಬಂದರೂ ಕೂಡ ಹಳ್ಳಿಗಳ ಬಗ್ಗೆ ಒತ್ತು ಕೊಡುತ್ತೇವೆಂದು ಹೇಳುತ್ತಾರೆ. ನಾನೂ ಕೂಡ ಹಳ್ಳಿಯಿಂದ ಬಂದವನೇ ಆಗಿದ್ದೇನೆ. ಹಳ್ಳಿಗಳ ಜೊತೆಗೆ ನಗರಗಳೂ ಕೂಡ ಅಭಿವೃದ್ಧಿಯಾಗಬೇಕು. ಅಲ್ಲೂ ಕೂಡ ಸ್ಲಮ್‌ಗಳು ಇವೆ; ಅವುಗಳನ್ನು ಅಭಿವೃದ್ಧಿಪಡಿಸಬೇಕೆನ್ನುವ ಮಾತನ್ನು ಈ ಸಭೆಯಲ್ಲಿ ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ನಿಮ್ಮ ಪ್ರಣಾಳಿಕೆಯಲ್ಲಿ 'ನಾವು ವಿದ್ಯುತ್ತನ್ನು ಉಚಿತವಾಗಿ ಕೊಡುತ್ತೇವೆ' ಎಂದು ಹೇಳಿದ್ದೀರಿ. ನಾನು ಆಗಲೇ ಹೇಳಿದಹಾಗೆ ನಮ್ಮಲ್ಲಿ ಬೋರ್‌ವೆಲ್‌ಗಳ ಆಳ 800 ಅಡಿಗೆ ಹೋಗಿದೆ. ಒಂದು ದಿವಸ ಏನಾದರೂ ಕರೆಂಟ್ ಇರಲಿಲ್ಲವೆಂದರೆ ಅವೊತ್ತು ನಮಗೆ ಕುಡಿಯುವುದಕ್ಕೆ ನೀರಿಲ್ಲ. ಆ ಪರಿಸ್ಥಿತಿ ಇರುವಾಗ, ನಮಗೆ ಉಚಿತ ಹಾಕುವುದು ಬೇಡ; ನೀವು ದುಡ್ಡು ತೆಗೆದುಕೊಳ್ಳಿ, ದಿವಸಕ್ಕೆ ಕನಿಷ್ಟ 10 ಗಂಟೆಗಳಾದರೂ ಕರೆಂಟ್ ಕೊಡಿ. ಈ ಬಗ್ಗೆ ಹಿಂದಿನ ಸರ್ಕಾರದವರು ಏನು ಮಾಡಿದರು ಎಂದು ಕೇಳುವುದು ಬೇಡ. ಇಂದಿನ ಸರ್ಕಾರದವರು ಏನು ಮಾಡುತ್ತೇವೆಂದು ಹೇಳಿದ್ದಾರೋ ಈ ದಿಕ್ಕಿನಲ್ಲಿ ನಾವು ಹೋಗುತ್ತೇವೆನ್ನುವ ಧೈರ್ಯದಿಂದ ಆ ಕೆಲಸವನ್ನು ಮಾಡಬೇಕಾಗುತ್ತದೆ. ಕನಿಷ್ಟ ರೈತನಿಗೆ ಕುಡಿಯುವ ನೀರಿಗಾದರೂ 10 ಗಂಟೆಗಳ ಕಾಲ ವಿದ್ಯುತ್ತನ್ನು ಕೊಡುವಂತಹ ಕೆಲಸವನ್ನು ನೀವು ಮಾಡಬೇಕೆಂದು ಹೇಳುತ್ತೇನೆ. ಕೋಲಾರ ಬೆಂಗಳೂರಿಗೆ ಕೇವಲ 42ಮೈಲಿ ದೂರದಲ್ಲಿದೆ. ಅಲ್ಲಿಂದ ಬೆಂಗಳೂರಿಗೆ ಬಂದರೆ ನಮಗೆ ಇಲ್ಲಿ ಸ್ವರ್ಗ ಕಾಣಿಸುತ್ತದೆ. ಅದೇ ಕೋಲಾರಕ್ಕೆ ಹೋಗಿ ನೋಡಿದರೆ ಅಲ್ಲಿಸರಿಯಾದ ರಸ್ತೆಯಿಲ್ಲ, ಚರಂಡಿ ವ್ಯವಸ್ಥೆ ಇಲ್ಲ, ಹೀಗೆ ಅನೇಕ ಅಭಿವೃದ್ಧಿ ಕೆಲಸಗಳು ಪಟ್ಟಣಗಳಲ್ಲಿ ಆಗಿಲ್ಲ. ಪಟ್ಟಣಗಳಿಗೂ ಕೂಡ ನೀವು ಹೆಚ್ಚಿನ ಒತ್ತನ್ನು ಕೊಡಬೇಕು. ಇನ್ನು ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನ್ನು ನಿರ್ವಹಣಾ ಜವಾಬ್ದಾರಿಯನ್ನು ನಮ್ಮ ಸಿನಿಮಾ ಆಕ್ಟರ್ ಮಾನ್ಯ ಕುಮಾರಬಂಗಾರಪ್ಪನವರಿಗೆ ಕೊಟ್ಟಿದ್ದಾರೆ. ಅವರಿಗೆ ಕೊಟ್ಟಿರುವುದು ಒಳ್ಳೆಯದೇ ಆಯಿತು. ಏಕೆಂದರೆ ಅವರು ಆಕ್ಟೀವ್ ಆಗಿ ಕೆಲಸ ಮಾಡುತ್ತಾರೆ. ಹಾಗೆಯೇ ಕೆರೆಗಳಲ್ಲಿನ ಹೂಳು ಎತ್ತುವುದಕ್ಕೆ ಹೆಚ್ಚಿನ ಹಣ ಕೊಡುವುದಕ್ಕೆ ಒತ್ತು ಕೊಡಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ 4436 ಕೆರೆಗಳಿವೆ. ಆ ಕೆರೆಗಳಲ್ಲಿನ ಹೂಳೆತ್ತುವಂತಹ ಕೆಲಸವನ್ನು ಮಾಡಬೇಕು. ಅವರು ಸಿನಿಮಾದಲ್ಲಿ ಆಕ್ಟ್ ಮಾಡುವುದಕ್ಕೆ ಹೋಗದೆ, ಕೆರೆಗಳ ಹೂಳೆತ್ತುವ ಬಗ್ಗೆ ಆಕ್ಟ್ ಮಾಡು, ನಾವೇನೂ ಬೇಡ ಅನ್ನುವುದಿಲ್ಲ. ಅಲ್ಲಿ ಆ್ಯಕ್ಷನ್ ಸಹ ಮಾಡಿಸಿ. ಮಾನ್ಯ ಕುಮಾರ್ ಬಂಗಾರಪ್ಪನವರು ಹೆಚ್ಚಿಗೆ ಹೂಳೆತ್ತುವ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನೊಂದು ನೋವಾಗುವಂತಹ ವಿಷಯ ಎಂದರೆ ಅದು ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಇರಬಹುದು; ಈ ಸಹಕಾರದ ವ್ಯವಸ್ಥೆ ಬಗ್ಗೆ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಕೂಡ ಇದರ ವಿಷಯವನ್ನೇ ಎತ್ತಲಿಲ್ಲ. ಇವತ್ತು ನಿಜವಾಗಿ ನೂರಕ್ಕೆನೂರರಷ್ಟು ಎಲ್ಲವೂ, ಸರಿಯಾಗಿ ನಡೆಯುತ್ತದೆಂದು ಹೇಳುವುದಿಲ್ಲ. ಈ ಸಹಕಾರ ವ್ಯವಸ್ಥೆಯಲ್ಲೂ ಕೂಡ ಸುಮಾರು ಈ 50 ವರ್ಷಗಳಲ್ಲಿ ಮೂರು ಪರ್ಸೆಂಟ್‌ನಷ್ಟು ಮಿಸ್‌ಅಪ್ರೊಪ್ರಿಯೇಷನ್ ಮತ್ತು ಮಿಸ್‌ಅಪ್ಲಿಕೇಶನ್ ಇರುವುದು ಕಂಡು ಬರುತ್ತದೆ. ಹಾಗಾದರೆ

ನಾವು ಇಲ್ಲೇನು 224 ಜನ ಸದಸ್ಯರಿದ್ದೇವೆ ನಾವೆಲ್ಲಾ ಸತ್ಯಹರಿಶ್ಚಂದ್ರರೇನು? ಇದನ್ನು ನಾವು ಪ್ರಶ್ನೆ ಮಾಡುವಾಗ ಇದಕ್ಕೆ ಬೇರೆ ವ್ಯವಸ್ಥೆ ಅಥವಾ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೇವೆ? ಇದಕ್ಕೆ ಪರ್ಯಾಯ ವ್ಯವಸ್ಥೆ ಎಲ್ಲಿದೆ? ಆದರೆ ಇದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕನಿಷ್ಟ ಅದರ ಹೆಸರನ್ನು ಸಹಿತ ಹೇಳಲಿಲ್ಲ. ಇವತ್ತು ಕ್ರೆಡಿಟ್ ಸಿಸ್ಟಂ ಅನ್ನು, ಹಿಂದೆ ಮಾನ್ಯ ಕೆ.ಹೆಚ್.ರಂಗನಾಥ್‌ರವರು ಸಹಕಾರ ಸಚಿವರಾಗಿದ್ದ ಕಾಲದಲ್ಲಿ ಹಳ್ಳಿಗಳಲ್ಲಿ ಸಹಕಾರ ಸಂಘಗಳನ್ನು ಏನೋ ಮಾಡಲಿಕ್ಕೆ ಹೋದರು. ಇವತ್ತು ಯಾವ ಪರಿಸ್ಥಿತಿಗೆ ಈ ಸಹಕಾರ ಸಂಘಗಳು ಬಂದಿವೆ ಅಂದರೆ ಅದರಲ್ಲೂ ಈ ಕ್ರೆಡಿಟ್ ಸೊಸೈಟಿಗಳು, ನಾನು ಆ ಪಕ್ಷ ಈ ಪಕ್ಷ ಅಂತ ಹೇಳುವುದಿಲ್ಲ; ಅಲ್ಲಿ ಇವತ್ತು ಬಡ್ಡಿ ಮನ್ನಾ ಮಾಡುವುದು ಆಗಬಹುದು, ಅಥವಾ ಸಾಲ ಮನ್ನಾ ಮಾಡಬಹುದಾದಂತಹ ಹೀನ ಪದ್ಧತಿಗಳು ಏನಿವೆ, ಈ ಪದ್ಧತಿಗಳನ್ನು ತಂದಿದ್ದರಿಂದ ಇವತ್ತು ಈ ಸಹಕಾರ ವ್ಯವಸ್ಥೆ ಪೂರ್ಣವಾಗಿ ಹಾಳಾಗಿದೆ. ಇವತ್ತು ಈ ಸಹಕಾರ ವ್ಯವಸ್ಥೆ ಹಾಳಾಗಿರುವುದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ? ಕಮರ್ಷಿಯಲ್ ಬ್ಯಾಂಕುಗಳಲ್ಲಿ ಸಾಲ ಕೊಡುತ್ತಾರೆಯೇ? ಇಲ್ಲ, ಅವರು ಆಸ್ತಿ ಕೂಡ ನೋಡುವುದಿಲ್ಲ. ಇವರಿಗೆ ಬೇರೆ ಆದಾಯದ ವ್ಯವಸ್ಥೆ ಏನಿದೆ ಎಂದು ನೋಡುವಂತಹ ವ್ಯವಸ್ಥೆ ಇವತ್ತಿಗೂ ಕೂಡ ಹಳ್ಳಿಗಾಡಿನಲ್ಲಿ ನಡೆಯುತ್ತಿದೆ. ಇದನ್ನು ನೀವು ನೀಗಿಸಬೇಕಾದರೆ ಸಹಕಾರ ವ್ಯವಸ್ಥೆಯನ್ನು ನೀವು ಸದೃಢವಾಗಿ ಬೆಳಸಬೇಕಾಗುತ್ತದೆ. ಇವತ್ತು ಒಬ್ಬ ಉತ್ಸಾಹಿ ಯುವಕರಿಗೆ ಈ ಸಹಕಾರ ಖಾತೆಯ ನಿರ್ವಹಣಾ ಜವಾಬ್ದಾರಿಯನ್ನು ಕೊಟ್ಟಿದ್ದೀರಿ; ಅದು ಒಳ್ಳೆಯದು. ಆದರೆ ಅವರು ಈ ದಿಕ್ಕಿನಲ್ಲಿ ಯೋಚನೆ ಮಾಡುವಂತಹ ಕೆಲಸವನ್ನು, ಆದರಲ್ಲೂ ನೀವು ಬರೀ ನಾಯಕರೇ ಅಲ್ಲ, ಆರ್ಥಿಕ ಮಂತ್ರಿಗಳಾಗಿರುವುದರಿಂದ ಸಹ ಈ ಸಹಕಾರಕ್ಕೆ ಎಷ್ಟು ಒತ್ತು ಕೊಡಬೇಕೆನ್ನುವುದನ್ನು ವಿಚಾರ ಮಾಡಿ ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ನಮ್ಮ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಯ ಶಿರಾದಲ್ಲಿ ಕಳೆದ ಏಳೆಂಟು ತಿಂಗಳುಗಳಲ್ಲಿ ಶಿರಾದ ಎಪಿಎಂಸಿಯಲ್ಲಿ ಈ ಕಡಲೇಕಾಯಿಗೆ ಒಳ್ಳೆಯ ರೇಟ್ ಬರಲಿಲ್ಲವೆಂದು ಗೋಲಿಬಾರ್ ಆಯಿತು. ಇವತ್ತು ಕೋಲಾರದಲ್ಲಿ ಟೊಮ್ಯಾಟೋ ರೇಟು ಕೆ.ಜಿ.ಗೆ 75 ಪೈಸೆ ಇರುತ್ತದೆ, ಇನ್ನೊಂದು ಸಾರಿ 5 ರೂಪಾಯಿ ಇರುತ್ತದೆ. ಈಗ ಈ ವ್ಯವಸಾಯ ಇಲಾಖೆಯಲ್ಲಿ ಒಳ್ಳೆಯ ಜವಾಬ್ದಾರಿಯುತ ಮಂತ್ರಿಗಳು ಇದ್ದಾರೆ. ಅವರು ನನ್ನ ಸ್ನೇಹಿತರಾಗಿರುವುದರಿಂದ ಇದನ್ನು ಹೇಳುತ್ತಿದ್ದೇನೆ. ಈ ದಿಕ್ಕಿನಲ್ಲಿ ಮಾನ್ಯ ಬೈರೇಗೌಡರು ಕೆಲವು ವಿಷಯಗಳನ್ನು ಜಾರಿಯಲ್ಲಿ ತಂದರು. ಆದರೆ ಅದು ಎಷ್ಟು ಸಫಲವಾಗಬೇಕೋ ಅಷ್ಟು ಸಫಲ ಆಗಲಿಲ್ಲ. ಇನ್ನೂ ಅದಕ್ಕೆ ಹೆಚ್ಚು ಒತ್ತು ಕೊಟ್ಟು ಹೆಚ್ಚಿನ ರೀತಿಯಲ್ಲಿ ಸಫಲವಾಗುವಂತೆ ಮಾಡಬೇಕು. ಈ ರೈತ ಬೆಳೆದ ಬೆಳೆಗೆ ಒಳ್ಳೆಯ ರೇಟು ಸಿಗುವಹಾಗೆ ವ್ಯವಸ್ಥೆ ಮಾಡಬೇಕು. ತಾವು ಆವೊತ್ತು ಪ್ರಮಾಣವಚನ ಸ್ವೀಕರಿಸಿದ ದಿನ ತಮ್ಮ ಭಾಷಣದಲ್ಲಿ, ಒಂದು ಹೆಕ್ಟೇರ್‌ಗೆ ಎರಡು ಪಟ್ಟು ಬೆಳೆಯನ್ನು ಜಾಸ್ತಿ ಮಾಡಿಸುತ್ತೇನೆಂದು ಹೇಳಿದ್ದನ್ನು ನಾನು ಉದಯ ಟಿ.ವಿ.ಯಲ್ಲಿ ನೋಡಿದೆ. ಅದನ್ನು ಕೇಳಿ ನನಗೆ ಸಂತೋಷವಾಯಿತು. ಹಾಗೆಯೇ ಅವನು ಬೆಳೆದಂತಹ ಬೆಳೆ ಏನಿದೆ ಅದಕ್ಕೆ ಒಳ್ಳೆಯ ರೇಟು ಸಿಗುವಹಾಗೆ ವ್ಯವಸ್ಥೆ ಮಾಡಬೇಕು. ಈ ವ್ಯವಸ್ಥೆಯಲ್ಲಿ ಮಾಡಬೇಕಾದರೆ, ಈ ಸಹಕಾರ ವ್ಯವಸ್ಥೆಯನ್ನು ಸರಿಯಾಗಿ ಸಂವೃದ್ಧವಾದ ರೀತಿಯಲ್ಲಿ ಬೆಳೆಸಬೇಕು ಎನ್ನುವಂತಹ ಮಾತನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ಬಹಳ ಮುಖ್ಯವಾಗಿ ಈ ವಿಚಾರದಲ್ಲಿ ಚುರುಕು ಮುಟ್ಟಿಸಬೇಕಾಗಿರುವುದು ಈ ಹಳ್ಳಿಗಾಡಿನಲ್ಲಿ. ಇವತ್ತು ಒಬ್ಬ ವಿಲೇಜ್ ಅಕೌಂಟ್,

ಅಥವಾ ನೀವು ಚೀಫ್ ಸೆಕ್ರೆಟರಿಯನ್ನು ಕರೆದು ಹೇಳಿದರೆ ತಕ್ಷಣ ಆರ್ಡರ್ ಮಾಡಬಹುದು. ಒಬ್ಬ ವಿಲೇಜ್ ಅಕೌಂಟೆಂಟ್, ಒಬ್ಬ ರೆವೆನ್ಯೂ ಇನ್ಸ್‌ಪೆಕ್ಟರ್, ಗ್ರಾಮಪಂಚಾಯಿತಿ ಕಾರ್ಯದರ್ಶಿ ಇವರಿಗೆ ಮೊದಲನೆಯದಾಗಿ ಚಾಲನೆ ಕೊಡಬೇಕು. ಯಾರು ಗ್ರಾಸ್‌ರೂಟ್ ಲೆವೆಲ್‌ನಲ್ಲಿ ಕೆಲಸ ಮಾಡುವಂತಹ ಒಬ್ಬ ವಿಲೇಜ್ ಅಕೌಂಟೆಂಟ್ ಆಗಬಹುದು ಅಥವ ರೆವೆನ್ಯೂ ಇನ್ಸ್‌ಪೆಕ್ಟರ್ ಆಗಬಹುದು ಪಂಚಾಯಿತಿಯ ಕಾರ್ಯದರ್ಶಿಯಾಗಬಹುದು ಇವರಿಗೆ ಚಾಲನೆ ಕೊಡುವಂತಹ ಆಡಳಿತವನ್ನು ಕೊಟ್ಟಾಗ ಮಾತ್ರ ಅದು ಪಾರದರ್ಶಕ ಆಡಳಿತವಾಗುತ್ತದೆ. ಆಗಮಾತ್ರ ನೀವೇನು ಇಷ್ಟು ವರ್ಷಗಳ ಕಾಲ ಈ ರಾಜಕೀಯ ಜೀವನದಲ್ಲಿ ಪಡೆದಂತಹ ಅನುಭವ ಕಾರ್ಯರೂಪಕ್ಕೆ ಬರುತ್ತದೆ ಅಂತ ಈ ಸಮಯದಲ್ಲಿ ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಒಂದು ವಿಚಾರವನ್ನು ಮಾನ್ಯ ಸಭಾನಾಯಕರಿಗೆ ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ, ಈ ಬಳ್ಳಾರಿ ಜಿಲ್ಲೆಗೆ ಸುಮಾರು 3,300 ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಗಳಿಗಾಗಿ ಕೊಡುತ್ತೇವೆಂದು ಹೇಳಿದ್ದೀರಿ. 3,300 ಕೋಟಿ ರೂಪಾಯಿಗಳನ್ನಾದರೂ ಕೊಡಿ, ಅದಕ್ಕಿಂತ ಹೆಚ್ಚು 10 ಸಾವಿರ ಕೋಟಿ ರೂಪಾಯಿಗಳನ್ನಾದರೂ ಕೊಡಿ. ಅದರಂತೆ ಬಳ್ಳಾರಿ ಜಿಲ್ಲೆ ಪಕ್ಕದಲ್ಲಿರುವ ರಾಯಚೂರಿಗೂ ಸಹ ಅಷ್ಟೇ ಕೋಟಿ ರೂಪಾಯಿಗಳನ್ನು ಕೊಡಿ. ಒಂದೊಂದು ಜಿಲ್ಲೆಗೆ ಒಂದೊಂದು ರೀತಿ ಮಾಡಿದಾಗ, ರಾಯಚೂರು ಜಿಲ್ಲೆಯಲ್ಲಿ ಗೆದ್ದವರು ಯಾವುದೇ ಪಕ್ಷದವರು ಇರಬಹುದು ಅದನ್ನು ನಾನು ಕೇಳುವುದಿಲ್ಲ, ಏನಪ್ಪಾ, ಬಳ್ಳಾರಿಯಲ್ಲಿರುವವರು ಮಾತ್ರ ಗಂಡಸರೇ? ನಾವೇನು ಬೇರೆಯೋ ಎಂದು ಅವರು ಕೇಳಿದಾಗ, ಅವರ ಪ್ರಶ್ನೆ ಏನು? ಅವರ ಅಳಿವು ಉಳಿವು ಏನು? ಇದನ್ನು ಕೂಡ ನೀವು ಯೋಚನೆ ಮಾಡಬೇಕು. ಕೋಲಾರ ಜಿಲ್ಲೆಗೂ ಸಹ ಅದು ಅನ್ವಯಿಸುತ್ತದೆ. ಬಳ್ಳಾರಿಗೆ ಏನು ಒತ್ತು ಕೊಟ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೀರಿ ಅದೇ ರೀತಿ ಕೋಲಾರಕ್ಕೂ ಕೊಡಿ, ಈ ಕಡೆಗೆ ಬೆಂಗಳೂರು ಗ್ರಾಮಾಂತರಕ್ಕೂ ಕೊಡಿ. ಆ ಕಡೆಗೆ ಗುಲ್ಬರ್ಗಕ್ಕೂ ಕೊಡಿ, ಬೀದರ್‌ಗೂ ಕೊಡಿ; ನಾವೇನೂ ಬೇಡವೆನ್ನುವುದಿಲ್ಲ. ಆದರೆ ಬರೀ ಒಂದೇ ಒಂದು ಜಿಲ್ಲೆಗೆ ಕೊಡುತ್ತೇವೆಂದರೆ ಅದು ತಪ್ಪಾಗುತ್ತದೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ; ಆ ಸರ್ಕಾರ ಈ ಸರ್ಕಾರ ಅಂತ ಅಲ್ಲ. ಅದರ ಬಗ್ಗೆ ನೀವು ಹೆಚ್ಚು ಒತ್ತು ಕೊಟ್ಟು ಇಂಡಿವಿಜ್ಯುಯಲ್ ಬೋರ್‌ವೆಲ್‌ಗಳನ್ನು ಹಾಕಿಸಿ ಅವರು ತಮ್ಮ ಜಮೀನುಗಳಿಗೆ ನೀರನ್ನು ಒದಗಿಸುವಂತಹ ಪರಿಸ್ಥಿತಿಯನ್ನು ಕಲ್ಪಿಸಿದರೆ ನೀವು ಕೊಡುವ ಮನೆಯೂ ಬೇಡ, ನೀವು ಕೊಡುವ ಐಆರ್‌ಡಿಪಿ ಸಾಲವೂ ಬೇಡ, ಅವರು ಸ್ವತಃ ಜೀವನ ಮಾಡುವಂತಹ ಅವಕಾಶ ಸಿಗುತ್ತದೆ. ಅದಕ್ಕೋಸ್ಕರ ಅವರಿಗಾಗಿ ಗಂಗಾಕಲ್ಯಾಣ ಯೋಜನೆ ಏನಿದೆ ಅದನ್ನು ಜಾರಿಗೊಳಿಸಬೇಕು. ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ಮಾತನಾಡುತ್ತಾ ನಿಮ್ಮ ಅನುಭವ, ನಿಮ್ಮ ಇಷ್ಟು ದಿವಸಗಳ ರಾಜಕಾರಣದ ಜೀವನದ ಅನುಭವದಿಂದ ಒಳ್ಳೆಯ ಆಡಳಿತ ಈ ರಾಜ್ಯಕ್ಕೆ ಸಿಗಲಿಯೆಂದು ಹೇಳಿ, ಮತ್ತೊಮ್ಮೆ ಎರಡು ವರ್ಷಗಳ ಕಾಲ ಮಾನ್ಯ ರಾಮಕೃಷ್ಣ ಹೆಗಡೆಯವರು ನೀಡಿದ ಪಾರದರ್ಶಕ ಆಡಳಿತ, ದಿವಂಗತ ವೀರೇಂದ್ರ ಪಾಟೀಲರ ಹನ್ನೊಂದುವರೆ ತಿಂಗಳ ಆಡಳಿತದ

ಮಾದರಿಯಲ್ಲಿಯೇ ನಿಮ್ಮ ಕೈಯಲ್ಲಿ ಆಡಳಿತ ಆಗಲಿಯೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಗೋಪಾಲ ಭಂಡಾರಿ(ಕಾರ್ಕಳ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣದ ಪ್ರಸ್ತಾಪಗಳನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತ ಮಾಡುತ್ತಾ, ಈ ಬಗ್ಗೆ ಒಂದೆರಡು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಲಿಕ್ಕೆ ನಾನು ಇಚ್ಛಿಸುತ್ತೇನೆ. ಕರ್ನಾಟಕ ರಾಜ್ಯದ ಪ್ರಜ್ಞಾವಂತ ಮತದಾರರು ಮಾನ್ಯ ಎಸ್.ಎಂ.ಕೃಷ್ಣಾಜಿಯವರ ನೇತೃತ್ವವನ್ನು, ಅವರ ನಾಯಕತ್ವವನ್ನು ಒಪ್ಪಿ ಇವತ್ತು ಪುನಃ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಹಳ ವಿಶೇಷವಾದಂತಹ ಒಂದು ಭರವಸೆಯಿಂದ ಅಧಿಕಾರಕ್ಕೆ ತಂದಿದ್ದಾರೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣವನ್ನು ಸೂಕ್ಷ್ಮವಾಗಿ ಗಮನಿಸುವಾಗ ಏನು ಈ ಪ್ರಜ್ಞಾವಂತ ಮತದಾರರ ನಿರೀಕ್ಷೆ ಇದೆ ಅದಕ್ಕೆ ಪೂರಕವಾದಂಥ ರೀತಿಯಲ್ಲಿ ಪ್ರಸ್ತಾವಗಳು ಬಂದಿವೆ ಎಂದು ನನ್ನ ಭಾವನೆ. ಆದ್ದರಿಂದ ಮಾನ್ಯ ರಾಜ್ಯಪಾಲರ ಭಾಷಣ ಏನಿದೆ ಅದನ್ನು ನಾನು ಹೃತ್ಪೂರ್ವಕವಾಗಿ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಇವತ್ತೇನು ಮಾನವ ಸಂಪನ್ಮೂಲವನ್ನು ಸಂಪದ್ಭರಿತವಾಗಿ ರೂಪಿಸಲಿಕ್ಕೆ ಪೂರಕವಾದಂಥ ಶಿಕ್ಷಣ, ಆರೋಗ್ಯ, ವಸತಿ, ಪೌಷ್ಟಿಕ ಆಹಾರ, ನೈರ್ಮಲ್ಯ ವ್ಯವಸ್ಥೆಯನ್ನು ತ್ವರಿತಗತಿಯಲ್ಲಿ ಬದಲಾವಣೆ ಮಾಡಬೇಕಾದಂಥ ಒಂದು ವ್ಯವಸ್ಥೆಗೆ ಹೆಚ್ಚು ಒತ್ತನ್ನು ಈ ಭಾಷಣದಲ್ಲಿ ಕೊಟ್ಟಿರುವುದು ಬಹಳ ಸ್ವಾಗತಾರ್ಹ. ಇದರ ಜೊತೆಗೆ ಜಾತ್ಯಾತೀತ ನಿಲುವಿನಲ್ಲಿ ಈ ಪ್ರಜಾಪ್ರಭುತ್ವ ಅರ್ಥಪೂರ್ಣವಾಗಿ ಈ ಸಮಾಜದ ಎಲ್ಲ ಜಾತಿ, ಎಲ್ಲ ಭಾಷೆ, ಎಲ್ಲ ಧರ್ಮದ ಜನ ಸ್ವಾಭಿಮಾನದಿಂದ ತಲೆಯೆತ್ತಿ ಬದುಕತಕ್ಕಂಥ ಪರಿಸ್ಥಿತಿಯನ್ನು ರೂಪಿಸಲಿಕ್ಕೆ ಪೂರಕವಾದಂಥ ಪ್ರಸ್ತಾಪಗಳು ಕೂಡ ಇಲ್ಲಿ ಇರುವುದು, ಇದೂ ಕೂಡ ಸ್ವಾಗತಾರ್ಹವಾದಂಥ ವಿಚಾರ ಎಂಬುದಾಗಿ ನನ್ನ ಭಾವನೆ.

ಮಾನ್ಯ ಅಧ್ಯಕ್ಷರೇ, ಈ ಆರೋಗ್ಯದ ಬಗ್ಗೆ ಬಹಳ ವಿಶೇಷವಾದಂಥ ಒತ್ತನ್ನು ಇಲ್ಲಿ ಕೊಟ್ಟಿದ್ದಾರೆ. ನಮ್ಮ ಉಡುಪಿ ಜಿಲ್ಲೆಯನ್ನು ಒಳಗೊಂಡಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಅಲೋಪಥಿಕ್ ವ್ಯವಸ್ಥೆ ಇದೆ, ಅದರ ಜೊತೆಗೆ ಆಯುರ್ವೇದಿಕ್ ವ್ಯವಸ್ಥೆ ಕೂಡ ಇದೆ. ನಮ್ಮಲ್ಲಿ ಬಹಳ ಪರಿಣಾಮಕಾರಿಯಾಗಿ ಆಯುರ್ವೇದಿಕ್ ವ್ಯವಸ್ಥೆಯನ್ನು ಜನ ಮೆಚ್ಚಿಕೊಂಡಿದ್ದಾರೆ. ಅನೇಕ ವರ್ಷಗಳಿಂದ ನಮ್ಮಲ್ಲಿ ಆಯುರ್ವೇದಿಕ್ ಚಿಕಿತ್ಸಾಲಯಗಳು ಕೆಲವು ರೂರಲ್ ಡಿಸ್ಪೆನ್ಸರಿಗಳಾಗಿ ನಮ್ಮ ಜಿಲ್ಲೆಯಲ್ಲಿವೆ. ಆದರೆ ಇತ್ತೀಚಿನ ದಿವಸಗಳಲ್ಲಿ ರೂರಲ್ ಡಿಸ್ಪೆನ್ಸರಿಗಳಲ್ಲೆ ಸೇವೆ ಮಾಡತಕ್ಕಂಥ ವೈದ್ಯರು ನಿವೃತ್ತಿಯಾದ ತಕ್ಷಣ ಆ ಡಿಸ್ಪೆನ್ಸರಿಯನ್ನು ಮುಚ್ಚತಕ್ಕಂಥ ಪ್ರಯತ್ನ ಇವತ್ತಿನ ದಿವಸಗಳಲ್ಲಿ ಕಂಡುಬರುತ್ತಿದೆ. ಇದರಿಂದ ಡಿಸ್ಪೆನ್ಸರಿಯನ್ನೇ ಇವತ್ತು ನಾವು ಕಡಿತಗೊಳಿಸುವಂಥ ಪ್ರಕ್ರಿಯೆಯನ್ನು ಇತ್ತೀಚಿನ ದಿವಸಗಳಲ್ಲಿ ಕಾಣುತ್ತಿದ್ದೇವೆ. ಆದ್ದರಿಂದ ಹಳ್ಳಿಗಳಲ್ಲಿರುವ ಇಂತಹ ರೂರಲ್ ಡಿಸ್ಪೆನ್ಸರಿಗಳಲ್ಲಿ ಆಯುರ್ವೇದ ಚಿಕಿತ್ಸೆ ಕೊಡುವ ವೈದ್ಯರು ಯಾರಿದ್ದಾರೆ ಅವರು ನಿವೃತ್ತರಾದಾಗ ಅವುಗಳನ್ನು ಆಯುರ್ವೇದ ಚಿಕಿತ್ಸಾಲಯಗಳಾಗಿ ಮಾರ್ಪಾಡಿಸತಕ್ಕಂಥ ವ್ಯವಸ್ಥೆ ಅತ್ಯಂತ ಸೂಕ್ತವಾದದ್ದು ಎನ್ನುವ ಪ್ರಸ್ತಾಪವನ್ನು ಕೂಡ ಈ ಸಂದರ್ಭದಲ್ಲಿ ಮಾಡುತ್ತೇನೆ.

ಇನ್ನು ವಸತಿ ಸೌಕರ್ಯಕ್ಕಾಗಿ ಇದರಲ್ಲಿ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಜನರಿಗೆ ಸಾಕಷ್ಟು ಮನೆಗಳನ್ನು ಕೊಡಲಿಕ್ಕೆ ಆಗದಿದ್ದರೂ ಕೂಡ ಕೊಟ್ಟಂಥ ಮನೆಗಳಿಗೆ

ಸಾಕಷ್ಟು ಅನುದಾನ ಬಿಡುಗಡೆ ಮಾಡದೇ ಇರುವಂಥ ಪರಿಸ್ಥಿತಿ ನಮ್ಮ ಜಿಲ್ಲೆಯಲಿಲ್ಲದೆ. ಉದಾಹರಣೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜನೆ ಮಾಡಿ ಉಡುಪಿ ಮತ್ತು ಮಂಗಳೂರಾಗಿ ಬೇರ್ಪಡಿಸಿದ್ದಾರೆ. ಈ ಉಡುಪಿ ಜಿಲ್ಲಾ ಪರಿಷತ್ತಿಗೆ ನಾನು ಹಿಂದೆ ಒಬ್ಬ ಸದಸ್ಯನಾಗಿದ್ದೆ. ಆ ಜಿಲ್ಲಾ ಪರಿಷತ್ತಿನಲ್ಲಿ ನಾನು ನೋಡಿದಾಗ, ಕೊಟ್ಟಂಥ ಸೀಮಿತವಾದಂಥ ಮನೆಗಳಿಗೆ ಕೂಡ ಇವತ್ತು ಅನುದಾನದ ಕೊರತೆಯಿಂದಾಗಿ ಆ ಫಲಾನುಭವಿಗಳು ತಾಲ್ಲೂಕು ಪಂಚಾಯಿತಿ ಕಛೇರಿಗಳಿಗೆ ಅಲೆದಾಡತಕ್ಕಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಸಾಕಷ್ಟು ಜನರ ನಿರೀಕ್ಷೆಗೆ ತಕ್ಕಂತೆ ಮನೆಗಳನ್ನು ಕೊಡದೆ ಇದ್ದರೂ ಕೂಡ ಅಲ್ಲಿ ಕೊಟ್ಟಿರುವಷ್ಟು ಮನೆಗಳಿಗೂ ಕೂಡ ಅನುದಾನದ ಕೊರತೆ ಇದೆ. ಆದರೆ ಇಲ್ಲಿ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದರಿಂದ ಈ ಸಮಸ್ಯೆ ಪರಿಹಾರವಾಗುತ್ತದೆ ಎನ್ನತಕ್ಕಂಥ ಆತ್ಮವಿಶ್ವಾಸ ನನ್ನಲ್ಲಿದೆ. ಇದರ ಜೊತೆಗೆ ನಿವೇಶನಗಳನ್ನು ಕೊಡತಕ್ಕಂಥ ಪರಿಸ್ಥಿತಿ ಕಳೆದ ಐದು ವರ್ಷಗಳಲ್ಲಿ ಬಹಳ ಗೋಜಲಾಗಿ ಹೋಗಿತ್ತು. ನಮ್ಮಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನರಿಗೆ ನಿವೇಶನಗಳನ್ನೇ ಕೊಟ್ಟಿಲ್ಲ. ಆ ನಿವೇಶನಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಇವತ್ತು ತಾಲ್ಲೂಕು ಪಂಚಾಯತಿಗೆ ಕೊಟ್ಟು, ತಾಲ್ಲೂಕು ಪಂಚಾಯತಿಯವರಿಗೂ, ಕಂದಾಯ ಇಲಾಖೆಯವರಿಗೂ ಇರತಕ್ಕಂಥ ಕೋ-ಆರ್ಡಿನೇಶನ್ ಕೊರತೆಯಿಂದಾಗಿ ಅಲ್ಲಿ ನಿವೇಶನಗಳನ್ನು ವಿತರಣೆ ಮಾಡದಂಥ ಪರಿಸ್ಥಿತಿ ನಮ್ಮಲ್ಲಿದೆ. ಕೆಲವು ಗ್ರಾಮಗಳಲ್ಲಿ ಐದು ವರ್ಷಗಳಿಂದ ಇದುವರೆಗೂ ನಿವೇಶನಗಳನ್ನು ಹಂಚಿಕೆ ಮಾಡಿಲ್ಲ. ಆದ್ದರಿಂದ ಈ ಸಮಸ್ಯೆಗೆ ಕೂಡ ಹೆಚ್ಚಿನ ಪರಿಹಾರ ಸಿಗುತ್ತದೆ ಎನ್ನತಕ್ಕಂಥ ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಜಿಲ್ಲೆ ಒಂದು ವಿಶಿಷ್ಟವಾದಂಥ ಜಿಲ್ಲೆ. ಬಹುಶಃ ಕೋಲಾರದಲ್ಲಿ ಇಡೀ ವರ್ಷದಲ್ಲಿ ಬಂದಷ್ಟು ಮಳೆ ನಮ್ಮಲ್ಲಿ ಒಂದೇ ದಿವಸದಲ್ಲಿ ಬರುತ್ತದೆ. ನಮ್ಮ ಉಡುಪಿಯಲ್ಲಿ ಒಂದು ದಿನದಲ್ಲಿ ಬರತಕ್ಕಂಥ ಮಳೆ ಕೋಲಾರದಲ್ಲಿ ಇಡೀ ವರ್ಷದಲ್ಲಿ ಕೆಲವೊಮ್ಮೆ ಬರುವುದಿಲ್ಲ. ಆದರೆ ವರ್ಷದ ಕೊನೆಗೆ ಮಾರ್ಚ್-ಏಪ್ರಿಲ್‌ನಲ್ಲಿ ನಮ್ಮಲ್ಲಿ ಕುಡಿಯುವುದಕ್ಕೆ ನೀರಿಲ್ಲ. ನಿಜವಾಗಿಯೂ ಇದು ಬಹಳ ವಿಶಿಷ್ಟವಾದಂಥ ಸಮಸ್ಯೆ. ವರ್ಷದ ಕೊನೆಗೆ ಕುಡಿಯುವುದಕ್ಕೆ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಮ್ಮಲ್ಲಿ ಉಂಟಾಗುತ್ತದೆ. ಇದು ಒಂದು ರೀತಿಯ ವ್ಯವಸ್ಥೆಯಾದರೆ ಇದಕ್ಕೆ ಬದಲಾಗಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡತಕ್ಕಂಥ ಅವಶ್ಯಕತೆಯನ್ನು ಮನಗಂಡು ಈ ಭಾಷಣದಲ್ಲಿ ಇದಕ್ಕೂ ಕೂಡ ಹೆಚ್ಚಿನ ಒತ್ತನ್ನು ಕೊಟ್ಟಿರುವುದು ಬಹಳ ಸ್ವಾಗತಾರ್ಹವಾದ ವಿಚಾರವಾಗಿದೆ.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾವೇರಿ-ಕೃಷ್ಣಾ ಪ್ರದೇಶದ ಜನರಿಗೆ ಅವರ ಹಿತಾಸಕ್ತಿಯನ್ನು ಕಾಪಾಡತಕ್ಕಂಥ ಪ್ರಸ್ತಾಪ ಕೂಡ ಇದೆ. ಇದು ಅತ್ಯಂತ ಸ್ವಾಗತಾರ್ಹ ವಿಚಾರ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನನಗನ್ನಿಸುತ್ತದೆ, ವಿಶಿಷ್ಟವಾದಂಥ ಒಂದು ಪ್ರಾಕೃತಿಕ ವ್ಯವಸ್ಥೆ ಇರತಕ್ಕಂಥಾದ್ದು ನಮ್ಮ ಜಿಲ್ಲೆ. ನಾನು ಆಗಲೇ ಹೇಳಿದಹಾಗೆ ಸಾಕಷ್ಟು ಮಳೆ ಬಂದರೂ ಕೂಡ ವರ್ಷದ ಕೊನೆಗೆ ನೀರೇ ಇಲ್ಲ. ಆದರೆ ಇಷ್ಟು ಮಳೆ ಬಂದರೂ ಕೂಡ ನಮ್ಮ ರೈತರ ಪರಿಸ್ಥಿತಿ ಇವತ್ತಿಗೂ ಚಿಂತಾಜನಕವಾಗಿದೆ. ಆ ಕಡೆ ಪಶ್ಚಿಮ ಘಟ್ಟದ ಮೇಲೆ ಬಂದಂಥ

ಬೆಳೆಯ ನಾಲ್ಕನೇ ಒಂದು ಪಾಲು ಕೂಡ ನಮ್ಮ ಜಿಲ್ಲೆಯಲ್ಲಿ ಬರುತ್ತಿಲ್ಲ. ಸಾಕಷ್ಟು ಮಳೆಯಿಂದಾಗಿ ನಮ್ಮ ಭೂಮಿಗೆ ಹಾಕಿದಂಥ ಸಾರ ಎಲ್ಲ ಕೊಚ್ಚಿಹೋಗಿದೆ. ಅದು ಸಮುದ್ರಕ್ಕೆ ಕೊಚ್ಚಿಕೊಂಡು ಹೋಗತಕ್ಕಂಥ ಪರಿಸ್ಥಿತಿಯಿಂದಾಗಿ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಬಹಳ ಎತ್ತರದ ಗುಡ್ಡಗಳು, ತಗ್ಗಿನ ಪ್ರದೇಶಗಳು ಇರುವುದರಿಂದ ಭಾರಿ ನೀರಾವರಿಗಳನ್ನು ಮಾಡುವುದಕ್ಕೆ, ದೊಡ್ಡ ನೀರಾವರಿ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಇಲ್ಲಿ ಸಣ್ಣ ನೀರಾವರಿಗಳನ್ನು, ಚಿಕ್ಕ ನೀರಾವರಿ ವ್ಯವಸ್ಥೆಯನ್ನು ನಮ್ಮ ಜಿಲ್ಲೆಯಲ್ಲಿ ಕೊಟ್ಟು ಏತ ನೀರಾವರಿಯನ್ನು ಒದಗಿಸಲಿಕ್ಕೆ ಹೆಚ್ಚಿನ ಒತ್ತು ಕೊಟ್ಟಾಗ ಮಾತ್ರ ನಮ್ಮ ರೈತರಿಗೆ ಒಂದು ಆರ್ಥಿಕವಾದ, ಸಾಮಾಜಿಕವಾದ ಚೈತನ್ಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ. ಈ ಎಲ್ಲ ವಿಚಾರಗಳನ್ನು ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ವಿಶ್ವಾಸದಿಂದ ಹೇಳುತ್ತೀದ್ದೇವೆ. ನಮ್ಮ ಜಿಲ್ಲೆಯ ಜನರನ್ನು ನೋಡಿದಾಗ, ದಕ್ಷಿಣ ಕನ್ನಡ ಜಿಲ್ಲೆಯ ಜನರು ಬುದ್ಧಿವಂತರು ಎಂದು ಕೆಲವರು ಹೇಳುತ್ತಾರೆ. ಇದನ್ನು ಕೇಳಿದಾಗ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಜನ ಶ್ರೀಮಂತರು ಎಂಬುದಾಗಿ ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಜನರಾದ ನಾವು ಸ್ವಾಭಿಮಾನಿಗಳು, ಹಾಗೆ ಇಲ್ಲದಿದ್ದರೂ ಕೂಡ ನಾವು ಇಲ್ಲವೆಂದು ಹೇಳುವುದಿಲ್ಲ. ಪೇಟೆಗೆ ಬರುವಾಗ ಮನೆಯಲ್ಲಿ ಊಟಕ್ಕೆ ಇಲ್ಲದಿದ್ದರೂ ಬಿಳಿಬಟ್ಟೆ ಹಾಕಿಕೊಂಡು ಹೋಗತಕ್ಕಂಥ ಸ್ವಾಭಿಮಾನಿಗಳು ಇರತಕ್ಕಂಥ ಜಿಲ್ಲೆ ನಮ್ಮದು. ಆದ್ದರಿಂದ ಈ ಜಿಲ್ಲೆಯ ವಿಶಿಷ್ಟವಾದಂಥ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥ ಪ್ರಸ್ತಾಪ ಹಾಗೂ ಸೂಚನೆಗಳು ಕೂಡ ಈ ಭಾಷಣದಲ್ಲಿ ಇರುವುದರಿಂದ ಇವೆಲ್ಲವನ್ನೂ ಕೂಡ ನಾನು ಹೃದಯಪೂರ್ವಕವಾಗಿ ಸ್ವಾಗತ ಮಾಡತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬಹಳ ಹಿರಿಯರು ಮತ್ತು ಅನುಭವ ಇರತಕ್ಕಂಥ ಮಾನ್ಯ ಸಚಿವರುಗಳು ಇರುವುದರಿಂದ ಈ ಎಲ್ಲ ಪ್ರಸ್ತಾಪಗಳು ಖಂಡಿತವಾಗಿಯೂ ಯಶಸ್ವಿಯಾಗುತ್ತವೆ, ಜರೂರಿಯಾಗಿ ಅನುಷ್ಠಾನಗೊಳ್ಳುತ್ತವೆ ಎನ್ನುತಕ್ಕಂಥ ಆತ್ಮವಿಶ್ವಾಸದ ಜೊತೆಗೆ ಮತ್ತೊಮ್ಮೆ ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತಮಾಡಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೇ ಈ ಬಗ್ಗೆ ನಾನು ಬಹಳ ಮಾತನಾಡುತ್ತೇನೆ, ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇರಬೇಕು.

ಚೇರ್ಮನ್ : ನೀವು ಮಾತನಾಡುತ್ತ ಇರಿ. ಮಾನ್ಯ ಮುಖ್ಯಮಂತ್ರಿಗಳು ಇಷ್ಟರಲ್ಲೇ ಬಂದುಬಿಡುತ್ತಾರೆ.

ಶ್ರೀ ಚೌಡರೆಡ್ಡಿ : ನಾನು ಮಾತನಾಡುವಾಗ ಅವರು ಇಲ್ಲಿರಬೇಕು ಏಕೆಂದರೆ ಬಹಳ ಮುಖ್ಯವಾದ ವಿಷಯಗಳು ಇವೆ.

ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಈಗಾಗಲೇ ಇಲ್ಲಿ ಅನೇಕ ನನ್ನ ಮಾನ್ಯ ಮಿತ್ರರುಗಳು ಮಾತನಾಡಿದ್ದಾರೆ. ಅದನ್ನು ನಾನು ಕೂಡ ಸ್ವಾಗತ ಮಾಡುತ್ತಿದ್ದೇನೆ. ನಿನ್ನೆ ದಿವಸ ಈ ಸದನದ ಮಾನ್ಯ ಅಧ್ಯಕ್ಷರ ಆಯ್ಕೆ ಬಗ್ಗೆ

ಮಾತನಾಡುವಾಗ ಕೂಡ ನಾನು ಇಲ್ಲಿ ಶಾಸಕರಿಗೆ, ಈ ಸಭೆಗೆ ಘನತೆ-ಗೌರವ ಉಳಿಯಬೇಕು ಎಂದು ಹೇಳಿದ್ದೆ. ಇಲ್ಲಿ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ನಮ್ಮ ಸರ್ಕಾರದವರು "We do not want people to travel long distances..."

ಎಂದು ಹೇಳಿದ್ದಾರೆ. ಅಂದರೆ ಜನರು ದೂರದಿಂದ ಇಲ್ಲಿಗೆ ಬರಬೇಕಾಗಿಲ್ಲ; ಸ್ಥಳೀಯವಾಗಿ ಎಲ್ಲಾ ಕೆಲಸಗಳು ಆಗುತ್ತವೆ ಎಂದು ಹೇಳಿದ್ದಾರೆ. ಅದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳುತ್ತಿದ್ದೇನೆ. ಇದಾದದ್ದು ಇವರ ಸರ್ಕಾರದಲ್ಲಿ ಅಲ್ಲ. ನಾನು ಪ್ರತಿನಿಧಿಸುವ ನನ್ನ ಚಿಂತಾಮಣಿ ಕ್ಷೇತ್ರದಲ್ಲಿ ``distribution of houses under Ashraya Yojane" ಅಂತ ಹೇಳಿ ಜಿಲ್ಲಾ ಪರಿಷತ್ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ನಾನು ಒಂದು ಕಾಗದ ಬರೆದೆ; ಇಲ್ಲಿ ಅಕ್ರಮ ನಡೆದಿದೆ, ಯಾರಿಗೆ ಮನೆಗಳು ಇಲ್ಲವೋ ಅವರಿಗೆ ಕೊಟ್ಟಿಲ್ಲ ಎಂದು. ಯಾರಿಗೆ ಬೋರ್‌ವೆಲ್ ಇದೆ, ಯಾರಿಗೆ ಜಮೀನು ಇದೆ, ಯಾರಿಗೆ ಮನೆಗಳು ಇವೆ, ಅವರಿಗೆ ಕೊಟ್ಟಿದ್ದಾರೆ. ಇದನ್ನು ನಾನು ಕ್ಯಾನ್ಸಲ್ ಮಾಡಿ ಎಂದು ಹೇಳಿಲ್ಲ. ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುತ್ತೇನೆ; ಇದನ್ನು ಮತ್ತೊಮ್ಮೆ ಪರೀಕ್ಷೆ ಮಾಡಿ, ನ್ಯಾಯವಾಗಿ ಯಾರಿಗೆ ಕಾನೂನು ಪ್ರಕಾರವಾಗಿ ಕೊಡಬೇಕೋ, ಅವರಿಗೆ ಅದನ್ನು ನೀವು ಪ್ರಸ್ತಾವನೆಯನ್ನು ನೋಡಿಬಿಟ್ಟು ಇದರ ಬಗ್ಗೆ ನ್ಯಾಯ ಕೊಡಿ ಎಂದು ಹೇಳಿ ನಾನು 19ನೇ ತಾರೀಖಿಗೆ ರಿಜಿಸ್ಟರ್ಡ್ ಪೋಸ್ಟ್‌ನಲ್ಲಿ ಪತ್ರ ಕಳಿಸಿದ್ದೆ. ಅದು ಅವರಿಗೆ 22ನೇ ತಾರೀಖಿಗೆ ಸೇರಿದೆ. ಇವತ್ತಿನವರೆಗೂ ಅವರು ಯಾರಿಗಾದರೂ ಈ ಬಗ್ಗೆ ಸೂಚನೆ ಕೊಟ್ಟಿದ್ದಾಗಲೀ ಅಥವಾ ನನ್ನ ಜೊತೆ ಮಾತನಾಡಿದ್ದಾಗಲೀ ಇಲ್ಲ. ತಾವು ಆಲೋಚನೆ ಮಾಡಿ.

5.10 ಪಿ.ಎಂ.

ಒಬ್ಬ ಶಾಸಕರು ಬರೆದಿರತಕ್ಕ ಪತ್ರಕ್ಕೆ ಸಿ.ಇ.ಒ ರವರು ಬೆಲೆ ಕೊಡದೇ ಇದ್ದರೆ ಹೇಗೆ? ಅದೂ ಕೂಡ ಬಡವರ ಬಗ್ಗೆ ಕೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಈ ರೀತಿಯಾದರೆ, ಈ ಸದನದಲ್ಲಿರತಕ್ಕ ಸದಸ್ಯರಿಗೆ, ಜನರಿಂದ ಚುನಾಯಿತರಾಗಿ ಬಂದಿರತಕ್ಕ ಸದಸ್ಯರಿಗೆ ಎಷ್ಟುಮಾತ್ರ ಗೌರವ, ಮರ್ಯಾದೆ ಇದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಿ. ಆದ್ದರಿಂದ, ನಾನು ತಮ್ಮ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ; ನಾವು ಸ್ವತಂತ್ರವಾಗಿ ಇಲ್ಲಿಗೆ ಆರಿಸಿ ಬಂದಿದ್ದೇವೆ, ಅವರಿಗೆ ಏನೂ ಮರ್ಯಾದೆ ಕೊಡಬೇಕಾಗಿಲ್ಲ ಅಥವಾ ಯಾರು ಪಾರ್ಟಿಯಿಂದ ಗೆದ್ದು ಬಂದಿರುತ್ತಾರೋ ಅವರ ಒಂದು ಗುಂಪೇ ಇರುತ್ತದೆ ಎಂಬ ಭಾವನೆ ಇದ್ದು ನಮಗೆ ಮರ್ಯಾದೆ ಕೊಡಬೇಕೆಂದು ಮನಸ್ಸಿನಲ್ಲಿದೆಯೋ ಇಲ್ಲವೋ? ನಾವು ಈಗಾಗಲೇ ನಿನ್ನೆ ಸಭೆ ಸೇರಿದ್ದೆವು. ಸ್ವತಂತ್ರವಾಗಿ ಗೆದ್ದು ಬಂದಿರುವವರು ನಾವುಗಳು 19 ಜನ ಇದ್ದೇವೆ; ಗುಂಪಾಗಿ ಸಾರ್ವಜನಿಕರಿಗೆ ನಮ್ಮ ಕ್ಷೇತ್ರಗಳಲ್ಲಿ ನ್ಯಾಯ ದೊರಕಿಸಿಕೊಡುವುದಕ್ಕೆ ಯಾವ ಮಟ್ಟಕ್ಕಾದರೂ ಇಳಿಯುವುದಕ್ಕೆ ನಾವು ತಯಾರಿದ್ದೇವೆ. ಅದಕ್ಕೋಸ್ಕರ ತಮ್ಮ ಮುಖೇನ ಅವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಇದಕ್ಕೆ ಅವಕಾಶ ಮಾಡಿ ಕೊಡುವುದು ಬೇಡಿ. ಇವತ್ತು ಅದನ್ನು ನಾನೇನೂ ಕ್ಯಾನ್ಸಲ್ ಮಾಡಿ ಎಂದು ಹೇಳುತ್ತಾ ಇಲ್ಲ. ನಮ್ಮ ಕ್ಷೇತ್ರದಲ್ಲಿರತಕ್ಕ ಅದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ, ಕಾನೂನು ಪ್ರಕಾರ ಯಾರಿಗೆ ಮನೆಗಳನ್ನು ಕೊಡಬೇಕೋ ಅವರಿಗೆ ಕೊಡಿ ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಅವರಿಗೆ ಪತ್ರ ಕೂಡ ಬರೆದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: 'ಆಶ್ರಯ' ಸಮಿತಿಗೆ ನಾಳೆ ತಾವೇ ಅಧ್ಯಕ್ಷರಾಗುತ್ತೀರಿ. ಎಲ್ಲಾ ಕ್ಷೇತ್ರಗಳಲ್ಲಿ ಶಾಸಕರು ಅಧ್ಯಕ್ಷರಾಗಿಯೇ ಇರುತ್ತಾರೆ. ನಿಮ್ಮ ವ್ಯಾಪ್ತಿಗೆ ಎಲ್ಲಾ ವಿಚಾರಗಳೂ ಬರುತ್ತವೆ. ಆಗ ನೀವೇ ಅದನ್ನು ತನಿಖೆ ಮಾಡಿಸಬಹುದಲ್ಲ?

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೇ, ನಮ್ಮ ಕಾಗೋಡು ತಿಮ್ಮಪ್ಪನವರು ಬಹಳ ಬುದ್ಧಿವಂತರು; ನಾನು ಮೊದಲಿನಿಂದಲೂ ನೋಡಿದ್ದೇನೆ. ಅವರು ಹೇಳುವುದೇನೆಂದರೆ, ಈಗ ಸ್ಟೇಷನ್‌ನಲ್ಲಿ ಬಂದಿರತಕ್ಕ ರೈಲು ಹೊರಟು ಹೋಗಿಬಿಡಲಿ, ಆಮೇಲೆ ನಾವು ಮಾತನಾಡಿಕೊಳ್ಳೋಣ ಎಂದು ಅವರು ಹೇಳುತ್ತಾ ಇರುವುದು. ಈಗ ಆಗಿರತಕ್ಕ ಅಕ್ರಮವನ್ನು ನಿಲ್ಲಿಸಿಬಿಟ್ಟು ಆ ವಿಚಾರವನ್ನು ಮತ್ತೊಮ್ಮೆ ಪರೀಕ್ಷೆ ಮಾಡಿ, ಅದನ್ನು ಸರಿಮಾಡಿ ಎಂದು ನಾವು ಕಾಗದ ಬರೆದರೆ, ಅವರು ಈ ರೀತಿ ಹೇಳಿಂತ್ತಾರೆ. ನಾವು ಅಧ್ಯಕ್ಷರಾಗಿ ಮೀಟಿಂಗ್ ಕರೆದು ನೋಡುವುದರೊಳಗಾಗಿ ಪೇಮೆಂಟ್ಸ್ ಎಲ್ಲಾ ಆಗಿಹೋದ ಮೇಲೆ, ತಾವು ಹೇಳಿದಹಾಗೆ ಆ ರೈಲು ಹೊರಟು ಹೋಗಿಬಿಡಲಿ ಆಮೇಲೆ ಮಾತನಾಡಿಕೊಳ್ಳೋಣ ಎಂದಹಾಗೆ ಆಗುತ್ತದೆ. ಆದ್ದರಿಂದ ದಯವಿಟ್ಟು ಆ ತರಹ ಮಾಡಬೇಡಿ ಎಂದು ನಾನು ಅಧ್ಯಕ್ಷರ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಈ ಪತ್ರವನ್ನು ನಾನು ತಮ್ಮ ಕಡೆಗೆ ಕಳುಹಿಸಿಕೊಡುತ್ತಿದ್ದೇನೆ. ತಾವು ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳಿಗೆ ಇದನ್ನು ಕಳುಹಿಸಿಕೊಡಿ.

ಇನ್ನು ಆರೋಗ್ಯದ ಬಗ್ಗೆ ಕೆಲವು ವಿಷಯಗಳನ್ನು ಚೆನ್ನಾಗಿ ತಿಳಿಸಿದ್ದಾರೆ. ಇದರಿಂದ ನಿಜವಾಗಿಯೂ ಈ ಸರ್ಕಾರ ನಡೆಸತಕ್ಕ ನಮ್ಮ ಮಿತ್ರರಿಗೆ ಬಹಳ ಕಾಳಜಿ ಇದೆ ಎಂದು ನನಗನಿಸುತ್ತಿದೆ. ಸನ್ಮಾನ್ಯ ಅಧ್ಯಕ್ಷರೇ, ನನ್ನ ನೋವು ಏನೆಂದರೆ, ಯಾವುದೇ ಪಕ್ಷದ ಸರ್ಕಾರ ಇರಲಿ, ಜನ ಯಾರಿಗೆ ಬೆಂಬಲ ಕೊಡುತ್ತಾರೋ, ಯಾರಿಗೆ ಬಹುಮತ ಬರುತ್ತದೋ ಅವರು ಸರ್ಕಾರ ನಡೆಸುತ್ತಾರೆ. ಆದರೆ, ಅವರು ಇವತ್ತು ಆ ಕಡೆ ಇದ್ದಾರೆ, ಪುನಃ ಅವರು ಈ ಕಡೆ ಬರಬಹುದು. ಆದರೆ ಸರ್ಕಾರ ನಡೆಸುವಾಗ ಅವರು ಏನು ಕಾರ್ಯಕ್ರಮಗಳನ್ನು ಹಾಕಿದ್ದಾರೋ ಅವುಗಳನ್ನು ನಾವು ನಡೆಸಿಕೊಂಡು ಮುಂದೆ ಹೋಗಬೇಕು. ನಾವು ಶಾಸಕರಾಗಿರಬಹುದು, ಶಾಸಕರಾಗಿಲ್ಲದೇ ಇರಬಹುದು; ನಮ್ಮ ಕಾಲದಲ್ಲಿ 8 ಕೋಟಿ ರೂಪಾಯಿಗಳ ವೆಚ್ಚದಲ್ಲಿ 50 ಹಾಸಿಗೆಗಳ ಆಸ್ಪತ್ರೆಯನ್ನು 150 ಹಾಸಿಗೆಗಳ ಆಸ್ಪತ್ರೆಗೆ ಕನ್‌ವರ್ಟ್ ಮಾಡಿ, ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಮತ್ತು ಹಣಕಾಸಿನ ಇಲಾಖೆಯವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಈಗ ನಮ್ಮ ಮಾನ್ಯ ಮಲಕಾರೆಡ್ಡಿಯವರು ಆರೋಗ್ಯ ಮಂತ್ರಿಗಳಾಗಿದ್ದಾರೆ. ಅವರೂ ಬಂದು ನಮ್ಮ ಆಸ್ಪತ್ರೆ ನೋಡಿದ್ದಾರೆ. ಇದಕ್ಕೆ ನಾವು ನಮ್ಮ ಸಚಿವ ಸಂಪುಟದಲ್ಲಿಯೂ ಅನುಮೋದನೆ ಕೊಟ್ಟಿದ್ದೆವು. 5 ವರ್ಷದಿಂದ ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಅದಕ್ಕೆ ಅಳವಡಿಸಿಲ್ಲ ಇದು ನಡೆಯಲಿ ಎಂದು ನಾವು ಮಾಡಿಕೊಟ್ಟರೆ, ಇವತ್ತಿಗೂ ಕೂಡ ಒಂದು ಫ್ಲೋರ್ ಆಗಿಲ್ಲ. ದಯವಿಟ್ಟು ತಾವು ಈ ಬಗ್ಗೆ ಆಲೋಚನೆ ಮಾಡಿ; ಇವತ್ತು ಬಡವರಿಗೆ ಏನಾದರೂ ಇದರಲ್ಲಿ ಕಾಂಪ್ಲಿಕೇಷನ್ ಬಂದರೆ ಕೋಲಾರಕ್ಕೋ, ಬೆಂಗಳೂರಿಗೋ ಕಾರುಗಳನ್ನು ಮಾಡಿಕೊಂಡು ಬರಬೇಕಾದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಸ್ವಲ್ಪಹೊತ್ತಿಗೆ ಮುಂಚೆ ಸಿಲ್ಕ್ ಬಗ್ಗೆ ಎರಡೂ ಕಡೆಗಳಲ್ಲಿಯೂ ಸಾಕಷ್ಟು ಗಲಾಟೆ ನಡೆಯಿತು. ಈ ಸದನದಲ್ಲಿ ಎಲ್ಲರೂ ಒಂದೇ. ಎಲ್ಲರೂ ಕಷ್ಟಪಟ್ಟು ದುಡಿದು, ಕರ್ನಾಟಕದಲ್ಲಿರತಕ್ಕ ನಾವು: ಪ್ರಜೆಗಳಿಗೆ ಒಳ್ಳೆಯದನ್ನು ಮಾಡಬೇಕು. ಅದಕ್ಕಾಗಿ ನಾನು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ನಾವು ಮಾಡಿದ ಕೆಲಸವನ್ನು ನಿಲ್ಲಿಸಿಬಿಟ್ಟರೆ, ಇದರಿಂದ ಎಷ್ಟು ಜನರಿಗೆ ತೊಂದರೆಯಾಗುತ್ತದೆ? ಇವತ್ತು ಆ ಆಸ್ಪತ್ರೆ ಏಕೆ ಕಂಪ್ಲೀಟ್ ಆಗಲಿಲ್ಲ? ಬರೀ ಚೌಡರೆಡ್ಡಿ ಇದನ್ನು ಪ್ರಪೋಸ್ ಮಾಡಿರತಕ್ಕಂಥಾದ್ದು

ಎನ್ನುವ ದುರುದ್ದೇಶ ಇರಬಾರದು. ಅದಕ್ಕೋಸ್ಕರ ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ; ವಿರೋಧ ಪಕ್ಷದವರಾಗಲೀ ಅಥವಾ ಆಡಳಿತ ಪಕ್ಷದವರಾಗಲೀ ಯಾರು ಮಾಡಿದರೂ ಕೂಡ ಸರ್ಕಾರದ ಕಾರ್ಯಕ್ರಮಗಳು, ಸಚಿವ ತೀರ್ಮಾನವಾಗಿ, ಅದು ಕಾನೂನಿನ ಪ್ರಕಾರ ಎಲ್ಲಾ ಮಂಜೂರಾತಿ ಆಗಿ ಬಂದಮೇಲೆ ಅದಕ್ಕೆ ಚಾಲನೆ ಕೊಡಬೇಕು, ಅದನ್ನು ಯಾವ ಕಾರಣಕ್ಕೂ ನಿಲ್ಲಿಸಬಾರದು ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಈಗ ನಮ್ಮ ಆಸ್ಪತ್ರೆಯಲ್ಲಿ ಕನಿಷ್ಠ ಸೌಲಭ್ಯಗಳೂ ಕೂಡ ಇಲ್ಲ; 50 ಹಾಸಿಗೆಗಳ ಆಸ್ಪತ್ರೆ ಇದೆ. ಇವತ್ತು ಅಲ್ಲಿ ಬಡಜನರು ಬಹಳಷ್ಟು ಒದ್ದಾಡುತ್ತಿದ್ದಾರೆ. ಇದನ್ನು ಪ್ರೋವೈಡ್ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಹಿಂದೆ ಸರ್ಕಾರದವರು ಮಾಡದೇ ಇದ್ದರೂ ಚಿಂತೆ ಇಲ್ಲ; ತಾವಾದರೂ ಮಾಡಿಕೊಡಿ ಎಂದು ನಾನು ಮಾನ್ಯ ಮಲಕಾರೆಡ್ಡಿಯವರನ್ನು ಕೇಳಿಕೊಳ್ಳುತ್ತೇನೆ. ನಾನು ಇಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಆರಿಸಿ ಬಂದಿದ್ದೇನೆ; ಅವರು ನಮ್ಮ ಊರಿಗೆ ನನ್ನ ಜೊತೆಯಲ್ಲಿ ಬಂದು ಆಸ್ಪತ್ರೆ ನೋಡುವುದಕ್ಕೆ ಸಂಕೋಚವಾದರೆ, ಅವರೇ ಬಂದು ನೋಡಿಕೊಂಡು ಬರಲಿ. ನನ್ನ ಜೊತೆ ಬಂದರೆ, ಏನಪ್ಪ ಚೌಡರೆಡ್ಡಿಯವರಿಗೆ ಎನ್‌ಕರೇಜ್ ಕೊಡುತ್ತಾರೆಂಬ ಸಂಶಯ ಬಂದರೆ, ಅವರೇ ಬಂದು ನೋಡಲಿ ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇದಾದ ನಂತರ, ಇನ್ನೂ ತಾಲ್ಲೂಕು ಆಫೀಸ್ ಆಡಳಿತದ ಬಗ್ಗೆ ಹೇಳಬೇಕು; ಏಕೆಂದರೆ, ಕೆಳಗಡೆಯಿಂದ ಆಡಳಿತ ಸೂತ್ರವನ್ನು ಸರಿ ಮಾಡಬೇಕು; ಮೇಲ್ಗಡೆಯಿಂದ ಅಲ್ಲ ಎಂದು ನನ್ನ ಅನೇಕ ಮಿತ್ರರು ಮಾತನಾಡಿದ್ದಾರೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ಹೆಣ್ಣುಮಕ್ಕಳಿಗೆ, ದುರ್ಬಲ ವರ್ಗದವರಿಗೆ, ಬಡವರಿಗೆ ಸದನದಲ್ಲಿ ನ್ಯಾಯ ದೊರಕಿಸಿಕೊಡಬೇಕೆಂದು ಮಾತನಾಡಿದ್ದಾರೆ. ಇವರು ಇವತ್ತು ಒಂದು ಪಡಿತರ ಚೀಟಿಗೋಸ್ಕರ ಅದರಲ್ಲಿಯೂ ಒಬ್ಬ ಪರ್ವೀನ್ ತಾಜ್ ಎಂಬ ಹೆಣ್ಣುಮಗಳು 1998ರಲ್ಲಿ ಅರ್ಜಿ ಹಾಕಿದ್ದಾರೆ. ಇವತ್ತಿನವರೆಗೂ ಆ ಪಡಿತರ ಚೀಟಿಯನ್ನು ಕೊಡುತ್ತೇವೆ ಅಥವಾ ಕೊಡುವುದಿಲ್ಲವೆಂದು ಒಂದು ಸಾಲಿನ ಉತ್ತರ ಕೊಟ್ಟಿಲ್ಲ. ತಾವು ಆಲೋಚನೆ ಮಾಡಬೇಕು. ಇಂಥಾದ್ದನ್ನು ತಮಗೂ ಕಳುಹಿಸಿಕೊಡುತ್ತೇನೆ. ಏಕೆಂದರೆ, ಬಡಜನಗಳು ನಮ್ಮ ಹತ್ತಿರ ಬರುತ್ತಾರೆ. ಅವರ ಬಗ್ಗೆ ನಾವು ಕಾಳಜಿಯಿಂದ ಕೆಲಸ ಮಾಡಿದರೆ ಈ ಸದನಕ್ಕೆ ಹೆಚ್ಚು ಗೌರವ ಬರುತ್ತದೆಂದು ಈ ವಿಚಾರವನ್ನು ತಮ್ಮ ಮುಂದೆ ನಾನು ತಿಳಿಸುತ್ತಿದ್ದೇನೆ.

ಆಮೇಲೆ ಈ ಅಗ್ರಿಕಲ್ಚರ್ ಬಗ್ಗೆ ಅವರು ಬಹಳ ಮಾತನಾಡಿದ್ದಾರೆ. ನಾನು ಅದಕ್ಕೇನೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರಬೇಕೆಂದು ಕೇಳಿದ್ದು. ಈ ಅಗ್ರಿಕಲ್ಚರ್ ಬಗ್ಗೆ, ``The food production and productivity in agriculture will be given a further boost by providing access to modern technologies..." ಎಂದು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ನಮ್ಮ ಕೋಲಾರ ಜಿಲ್ಲೆಯವರಾದ ಮಾನ್ಯ ದಿ॥ ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟೆ ಕಟ್ಟಿದ ಮೇಲೆ ಮದ್ದೂರಿನಲ್ಲಿ ಅನೇಕ ನೀರಾವರಿ ಸೌಲಭ್ಯಗಳು ಬಂದಿವೆ. ಈಗಾಗಲೇ ನಮ್ಮ ಶ್ರೀನಿವಾಸಗೌಡರು ಆ ವಿಚಾರ ಮಾತನಾಡಿದರು. ನಮಗಂತೂ 600-800 ಅಡಿ ಕೆಳಗೆ ಹೋದರೂ ನೀರು ಇಲ್ಲ. ಕರಂಟ್ ಅಂತು ಅದು ಯಾವಾಗ ಬರುತ್ತೋ ಯಾವಾಗ ಬರುವುದಿಲ್ಲವೋ ಅದೂ ಗೊತ್ತಿಲ್ಲ. ನಮ್ಮ ರೈತರು ಈರುಳ್ಳಿ

ಅಥವಾ ಟೊಮ್ಯಾಟೋ ಬೆಳೆ ಹಾಕಿದರೆ, ಅದಕ್ಕೆ ನೀರು ಹಾಯಿಸಬೇಕಾದರೆ, ಕರಂಟ್ ಯಾವಾಗ ಬರುತ್ತದೋ ಎಂದು ರಾತ್ರಿ ಎಷ್ಟು ಹೊತ್ತಾದರೂ ಕಾದುಕೊಂಡಿರಬೇಕು. ರಾತ್ರಿವೇಳೆ ಹಾವು ಅಥವಾ ಚೇಳು ಕಚ್ಚಿಬಿಟ್ಟರೆ ಗೋವಿಂದ। ಈ ರೀತಿ ನಮಗಿರತಕ್ಕ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯವರು ಕನ್ನಂಬಾಡಿ ಕಟ್ಟೆ ಕಟ್ಟಿ ಅವರ ಜಿಲ್ಲೆಗೆ ಹೆಚ್ಚಿಗೆ ಸೌಕರ್ಯ ಮಾಡಿಕೊಟ್ಟಂತೆ ಅವರು ಕೂಡ ಈಗ ನಮಗೆ ಹೆಚ್ಚಿನ ಕಾಳಜಿ ವಹಿಸಿ, ನಮ್ಮ ಜಿಲ್ಲೆಗೆ ಸೌಕರ್ಯ ಮಾಡಿಕೊಡಬೇಕೆಂದು ಅವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ, ಇಲ್ಲಿ ಪ್ರೊಡಕ್ಷನ್ ಒಂದೇ ಮುಖ್ಯವಲ್ಲ; ವಿತರಣೆ ಕೂಡ ಬಹಳ ಮುಖ್ಯ. ಈ ಸದನದಲ್ಲಿ ನಮ್ಮ ಮಾನ್ಯ ಬೈರೇಗೌಡರು ಇಲ್ಲ. ಅವರು ವಿಧಾನಸೌಧದ ಮುಂದೆ ಒಂದು ಸಲ ಟೊಮ್ಯಾಟೋ ಹಾಕಿದ್ದರು. ಆದರೆ ನಾವು ಆ ರೀತಿ ಮಾಡುವುದಿಲ್ಲ. ನಮ್ಮಲ್ಲಿ ಚಿಕ್ಕ ಚಿಕ್ಕ ಫಾರಂಗಳು ಇವೆ. ನಾವು ತರಕಾರಿ ಬೆಳೆಯುತ್ತೇವೆ. ನನ್ನ ಕಾಲದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ವತಿಯಿಂದ ಒಂದು ಮಾರ್ಕೆಟ್ ಮಾಡಿದ್ದೇವೆ. ಆ ತರಕಾರಿ ಮಾರುಕಟ್ಟೆಯಲ್ಲಿ ಹೆಚ್ಚಿನ ತರಕಾರಿ, ಬಹುಶಃ ಹೇಳುವುದಾದರೆ ನಮ್ಮ ಮಾರುಕಟ್ಟೆಯಿಂದ ವಿತರಣೆಯಾಗುತ್ತದೆ. ಈಗಾಗಲೇ ಶ್ರೀನಿವಾಸಗೌಡರು ಹೇಳಿದ್ದಾರೆ; ಒಂದು ಸಲ ಟೊಮ್ಯಾಟೋ ಕಮ್ಮಿ ಬರುತ್ತದೆ, ಒಂದು ಸಲ ಜಾಸ್ತಿ ಬರುತ್ತೆ ಎಂದು. ಇವತ್ತು ಶ್ರೀರಾಮರೆಡ್ಡಿ ಎಂಬ ಈರುಳ್ಳಿ ಮರ್ಚೆಂಟ್ ನನಗೆ ಒಂದು ಸ್ಲಿಪ್ ಕಳುಹಿಸಿದ್ದಾರೆ. ನಾನು ಆಚೆ ಹೋಗಲಿಲ್ಲ; ಏಕೆಂದರೆ, ಇವತ್ತು ನಮ್ಮ ಜಿಲ್ಲೆಯಲ್ಲಿ ವಿಪರೀತ ಈರುಳ್ಳಿ ಬೆಳೆದಿದ್ದಾರೆ. ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ; ಸ್ವಾಮಿ, ನಿಮ್ಮಲ್ಲಿ ಇಷ್ಟೇ ಪ್ರಾರ್ಥನೆ ಮಾಡಿಕೊಳ್ಳುವುದು; ಡೆಲ್ಲಿಗೆ ಫೋನ್ ಮಾಡಿ, ಈರುಳ್ಳಿ ಬೆಳೆಗೆ ಎಕ್ಸ್‌ಪೋರ್ಟ್ ಕೊಡಿಸಿ. ಇವತ್ತು ಅವರೆಲ್ಲಾ ಕಾಯುತ್ತಿದ್ದಾರೆ. ತಮ್ಮ ಹತ್ತಿರ ಬೇಕಾದರೆ ಕರೆದುಕೊಂಡು ಬರುತ್ತೇನೆ. ತಾವು ಫೋನ್ ಮಾಡಿದರೆ, ಎಕ್ಸ್‌ಪೋರ್ಟ್ ಮಾಡಬಹುದು. ಹೋದಸಲವೂ ಹಿಂದೆ ಇದ್ದವರು ಫೋನ್ ಮಾಡಿ ಕೊಡಿಸಿದ್ದರಂತೆ. ತಾವು ಕೂಡ ಫೋನ್ ಮಾಡಿ ಎಕ್ಸ್‌ಪೋರ್ಟ್ ಕೊಡಿಸಿದರೆ ಈರುಳ್ಳಿ ಬೆಳೆಯುವ ರೈತರಿಗೆ ಅನ್ನ ಸಿಗುತ್ತದೆ, ಇಲ್ಲದೇಹೋದರೆ ಕಷ್ಟಪಟ್ಟು ಬೆಳೆದರೂ ಪ್ರಯೋಜನವಾಗುವುದಿಲ್ಲ. ಇವತ್ತು ಎಲ್ಲಿ ನೋಡಿದರೂ ಕೂಡ ಅವರು ಈರುಳ್ಳಿ ಬೆಳೆದಿದ್ದಾರೆ, ದಯವಿಟ್ಟು ಇದನ್ನು ಮಾಡಿಕೊಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಹೇಳುತ್ತಿದ್ದರು; ನಾನು ಆಗಲೇ ಮಧ್ಯೆ ಎದ್ದು ನಿಂತು ಹೇಳೋಣ ಅಂತ ಇದ್ದೆ, ಆದರೆ ಮಧ್ಯೆ ಏಕೆ ಎದ್ದು ನಿಂತು ಹೇಳುವುದು ಅಂತ ಹೇಳಲಿಲ್ಲ. ಕೋಲಾರ ಜಿಲ್ಲೆಯಲ್ಲಿಯೂ ಸಹ ಪ್ರವಾಹ ಬಂದಿದೆ, ಆ ಬಗ್ಗೆ ಮಾಹಿತಿಯನ್ನು ನಾನು ತಮಗೂ ಕಳುಹಿಸಿಕೊಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಅಂತ ಇದೆ. ಅಲ್ಲಿ ಶೇಂಗಾ ಜಾಸ್ತಿ ಬೆಳೆಯುತ್ತಾರೆ. ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿಯೂ ಸಹ ಶೇಂಗಾ ಜಾಸ್ತಿ ಬೆಳೆಯುತ್ತೇವೆ. ನಮ್ಮಕಡೆ ಈಗ ಸ್ವಲ್ಪ ಸ್ವಲ್ಪವಾಗಿ ಬರುತ್ತಿದೆ. ಮೊದಲಿಂದಲೂ ನಮಗೆ ಮಳೆ ಇಲ್ಲ. ನಮ್ಮ ಕಡೆ ಶೇಂಗಾ ಬೆಳೆ ಜಾಸ್ತಿ ಹಾಕುವುದು. ಈ ಸಾರಿ ನಾವು ಶೇಂಗಾ ಬೆಳೆಯುವುದಕ್ಕೂ ಆಗಲಿಲ್ಲ. ಆದರೆ ಈಗ ಬೆಳೆದಿರುವ ಶೇಂಗಾ ಯಾವ ರೀತಿ ಇವೆ ಅಂದರೆ ಆ ಶೇಂಗಾ ಗಿಡಗಳಿಗೆ ಹುಳುಗಳು ಬಿದ್ದಿವೆ. ಹುಳುಗಳು ಏಕೆ ಬರುತ್ತವೆ ಅಂದರೆ, ಮಳೆ ಬರುವುದು ಏನಾದರೂ ಸ್ವಲ್ಪ ತಡವಾದರೆ ಕಪ್ಪು ಹುಳುಗಳು

ಬಂದು ಪೂರ್ತಿಯಾಗಿ ತಿಂದು ಬಿಡುತ್ತವೆ. ನಮ್ಮ ಚೇಳೂರು ಹೋಬಳಿಯಲ್ಲಿ ಎಷ್ಟು ಬೆಳೆ ನಾಶವಾಗಿದೆ ಎನ್ನುವುದಕ್ಕೆ ನಾನು ಫೋಟೋ ಸಹ ತಂದಿದ್ದೇನೆ. ಸರ್ಕಾರಕ್ಕೆ ಅಲ್ಲಿನ ಅಧಿಕಾರಿಗಳು ಒಂದು ವರದಿಯನ್ನು ಸಹ ಕಳುಹಿಸಿದ್ದಾರೆ; ಈ ತರಹ ಶೇಂಗಾ ಬೆಳೆ ನಾಶವಾಗಿದೆ ಅಂತ. ನಾನು ತಮ್ಮನ್ನು ಕೇಳಿಕೊಳ್ಳುವುದು ಇಷ್ಟೇ, ಇಲ್ಲಿ ಈ ಪ್ರಸ್ತಾವನೆಯಲ್ಲಿ ಸರ್ಕಾರದವರು ಹೇಳಿದ್ದಾರೆ. ಕ್ರಾಫ್ ಇನ್‌ಷೂರೆನ್ಸ್ ಸ್ಕೀಮ್ ಅಂತ. ಈ ಕ್ರಾಫ್ ಇನ್‌ಷೂರೆನ್ಸ್ ಸ್ಕೀಮ್ ಮಾಡೋಣ, ಇವತ್ತು ನಮ್ಮ ರೈತರಿಗೆ ಬಹಳಷ್ಟು ಜನರಿಗೆ ಓದು ಬರಹ ಬರುವುದಿಲ್ಲ. ಅವರಿಗೆ ಕ್ರಾಫ್ ಇನ್‌ಷೂರೆನ್ಸ್ ಅಂದರೆ ಏನು ಅಂತ ಗೊತ್ತಿಲ್ಲ. ಹಿಂದೆ ಈ ಬಗ್ಗೆ ಸ್ವಲ್ಪ ಹೆಚ್ಚು ಪ್ರಚಾರ ಮಾಡಿ ಕ್ರಾಫ್ ಇನ್‌ಷೂರೆನ್ಸ್ ಕೊಟ್ಟರೆ ಆಗ ಸರಿ ಹೋಗುತ್ತದೆ. ಈಗ ತಕ್ಷಣಕ್ಕೆ ನಮಗೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಮಾನ್ಯ ಚಂದ್ರಬಾಬುನಾಯ್ಡುರವರು ಆಂಧ್ರಪ್ರದೇಶದಲ್ಲಿ ರೈತರಿಗೆ ಕೊಟ್ಟಿರುವ ಪರಿಹಾರದ ಬಗ್ಗೆ ಅನೇಕ ಸಲ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಈಗ ಹೈಟೆಕ್ ಅಂತ ಏನೇನೋ ಹೇಳುತ್ತಿದ್ದಾರೆ. ಇಲ್ಲಿ ರೈತರಿಗೆ ಬೇಕಾಗಿರುವುದು ಹೈಟೆಕ್‌ಗಿಂತ ಹೆಚ್ಚಾಗಿ ಪರಿಹಾರದ ಹಣ. ನಮ್ಮ ಚೇಳೂರು ಹೋಬಳಿ ಬಾಗೇಪಲ್ಲಿ ತಾಲ್ಲೂಕು ಇವು ಆಂಧ್ರಪ್ರದೇಶದ ಬಾರ್ಡರ್ ಪ್ರದೇಶಗಳು. ಈ ಬಗ್ಗೆ ಮಾನ್ಯ ಸದಸ್ಯರಾದ ಸಂಪಂಗಿಯವರು ಸಹ ಮಾತನಾಡುವವರಿದ್ದಾರೆ. ಆ ಬಾರ್ಡ್‌ರ್‌ನಲ್ಲಿ ಈ ಶೇಂಗಾ ಬೆಳೆ ಈ ಕಡೆ ಸ್ವಲ್ಪ ಆ ಕಡೆ ಸ್ವಲ್ಪ ಹೋಗಿದೆ. ಆ ಕಡೆ ಹೋದವರಿಗೆ ಅಂದರೆ ಆಂಧ್ರಪ್ರದೇಶದ ಬಾರ್ಡ್‌ರ್‌ಗೆ ಹೋದವರಿಗೆ, ಮಾನ್ಯ ಚಂದ್ರಬಾಬುನಾಯ್ಡುರವರು ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತಿದ್ದಾರೆ. ಸರ್ಕಾರದವರೇ ಒಂದು ವರದಿಯನ್ನು ಕಳುಹಿಸಿದ್ದಾರೆ ಎಷ್ಟು ಎಕರೆ ಪ್ರದೇಶದಲ್ಲಿ ಶೇಂಗಾ ಬೆಳೆ ಹೋಗಿದೆ ಎಂದು. ಅದರ ಪ್ರತಿಯನ್ನೂ ಸಹ ನಾನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಬಡವರಿಗೆ ಬಹಳ ಅನ್ಯಾಯವಾಗಿದೆ ಎಂದು ಆ ವರದಿಯಲ್ಲಿ ಹೇಳಿದ್ದಾರೆ. ಆದ್ದರಿಂದ ಪಕ್ಕದ ಆಂಧ್ರಪ್ರದೇಶದ ಸರ್ಕಾರದವರು ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಾನು ತಮ್ಮ ಮುಖೇನ ಅವರಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ಪಟ್ಟಣಗಳ ಅಭಿವೃದ್ಧಿ ಬಗ್ಗೆ ಕೆಲವು ಜನ ನಮ್ಮ ಮಾನ್ಯ ಸ್ನೇಹಿತರು ಮಾತನಾಡುತ್ತಿದ್ದರು. ಮಾನ್ಯ ವಿರೋಧಪಕ್ಷದ ನಾಯಕರು ಸಹ ಮಾತನಾಡುತ್ತಿದ್ದರು. ಆಕ್ಟ್ರಾಯ್ ಅಬಾಲಿಷನ್ ಆಯಿತು. ಆಕ್ಟ್ರಾಯ್ ಅಬಾಲಿಷನ್ ಆದಮೇಲೆ ಮುನಿಸಿಪಾಲಿಟಿಗಳಿಗೆ ಮತ್ತು ಚಿಕ್ಕ ಚಿಕ್ಕ ಪಟ್ಟಣಗಳಿಗೆ ಏನಾದರೂ ಆದಾಯ ಬರುವ ರೀತಿಯಲ್ಲಿ ಒಂದು ಯೋಜನೆಯನ್ನು ಹಾಕಿ ಎಂದು ಕೇಳುತ್ತಿದ್ದಾರೆ. 1974ನೇ ಇಸವಿಯಲ್ಲಿ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಸ್ಮಾಲ್ ಅಂಡ್ ಮೀಡಿಯಂ ಟೌನ್ಸ್ ಎನ್ನುವಂತಹ ಒಂದು ಯೋಜನೆಯನ್ನು ಈ ದೇಶದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೇರಿಕೊಂಡು ಈ ಯೋಜನೆಗಳನ್ನು ಅಳವಡಿಸಿದ್ದಾರೆ. ಈ ಯೋಜನೆ 1974ನೇ ಇಸವಿಯಿಂದ ಇದೆ. ಮೊದಲು ಈ ಒಂದು ಸ್ಕೀಮ್‌ನಲ್ಲಿ ಈ ರಾಜ್ಯಕ್ಕೆ 3 ಅಥವಾ 4 ಪಟ್ಟಣಗಳಿಗೆ ಮಾತ್ರ ಹಣ ಬರುತ್ತಿತ್ತು. ಅದು 1993ನೇ ಇಸವಿಯಲ್ಲಿ ನಾನು ಪೌರಾಡಳಿತ ಸಚಿವನಾಗಿದ್ದಾಗ ಈ ಯೋಜನೆಯನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ಯೋಜನೆಯನ್ನು ಯಾವ ರೀತಿಯಾಗಿ ತಯಾರು ಮಾಡ ಬೇಕು ಅಂತ ಹೇಳಿ, ಇಲ್ಲಿಂದ ನಮ್ಮ ಇಂಜನೀಯರ್ಸ್‌ನ್ನು ಡೆಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಟೌನ್ ಅಂಡ್ ಕಂಟ್ರಿ

ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ, ಈ ಯೋಜನೆಯನ್ನು ತಯಾರು ಮಾಡತಕ್ಕಂಥ ಇಂಜನೀಯರ್ಸ್‌ನ್ನು ಎಲ್ಲರನ್ನಿ ತಯಾರು ಮಾಡಿಸಿ ನಾನು ಕಳುಹಿಸಿದೆ. ಆಗ ಸುಮಾರು 32 ಸಣ್ಣ ಪಟ್ಟಣಗಳ ಅಭಿವೃದ್ಧಿ ಯೋಜನೆಗೆ ಒಪ್ಪಿಗೆ ದೊರೆತು ಅವು ಬಂದವು. ಈ ಮೊದಲು ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ 21ನೇ ಜಾಗದಲ್ಲಿತ್ತು, ಈ ಯೋಜನೆಗಳನ್ನು ತರುವುದರಲ್ಲಿ ಆ ವರ್ಷ ಒಂದನೇ ಸ್ಥಾನಕ್ಕೆ ಬಂತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ವೀರಪ್ಪಮೊಯ್ಲಿಯವರು ಈ ಮಾತನ್ನು ಸದನದಲ್ಲಿ ಹೇಳಿದರು; ನಮ್ಮ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಈ ಯೋಜನೆಗಳನ್ನು ತಂದಿದೆ; ಈಗ ನಮ್ಮ ರಾಜ್ಯ ಒಂದನೇ ಸ್ಥಾನಕ್ಕೆ ಬಂದಿದೆ ಅಂತ ಹೇಳಿ. ಅದಕ್ಕೆ ನನಗೆ ಮೂರು ದಿವಸಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯನ್ನು ಕಿತ್ತು ಗೃಹ ಇಲಾಖೆಗೆ ಬಡ್ತಿ ಕೊಟ್ಟರು. ನಾನು ಮೊನ್ನೆ ಡಿಲ್ಲಿಗೆ ಹೋಗಿದ್ದಾಗ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಿದ್ದೆ. ಅಲ್ಲಿ ನೋಡಿದರೆ ಒಂದನೇ ಕಂತು, ಎರಡನೆ ಕಂತು ಇಷ್ಟರಲ್ಲಿಯೇ ನಿಂತು ಹೋಗಿದೆ. ಎಲ್ಲಾ ಕಡೆ ಅರ್ಧದಲ್ಲಿಯೇ ನಿಂತು ಹೋಗಿದೆ. ಇದಕ್ಕೆ ಅಲ್ಲಿನ ಮುನಿಸಿಪಾಲಿಟಿಯವರು ಕಾರಣರಾಗುತ್ತಾರೆ. ಜೊತೆಗೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಇದನ್ನು ವಾಚ್ ಮಾಡಬೇಕು. ಕಾನೂನಿನ ಪ್ರಕಾರ ಅವರು ಈ ಯೋಜನೆ ಏಕೆ ನಿಂತು ಹೋಯಿತು ಎನ್ನುವುದನ್ನು ನೋಡಿ ಸರ್ಕಾರದ ಗಮನಕ್ಕೆ ತಂದು ಆ ಫಂಡ್ಸ್‌ನಿಂದ ಆ ಮುನಿಸಿಪಾಲಿಟಿ ಏರಿಯಾದಲ್ಲಿ ಕಾಂಪ್ಲೆಕ್ಸ್ ಆದರೂ ಕಟ್ಟಬಹುದು; ಇಂಡಸ್ಟ್ರೀಸ್ ಆದರೂ ಮಾಡಬಹುದು. ಆ ಮುನಿಸಿಪಾಲಿಟಿಯ ವರಮಾನವನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಅಲ್ಲಿರತಕ್ಕಂಥ ಜಮೀನುಗಳಲ್ಲಿ ಯಾವ ಯಾವ ರೀತಿ ನಾವು ಅಭಿವೃದ್ಧಿ ಮಾಡಿದರೆ ಅವರಿಗೆ ವರಮಾನ ಬರುತ್ತದೆ ಎನ್ನುವುದಕೋಸ್ಕರವೇ ಈ ಯೋಜನೆ ಇರುವುದು. ಇಂತಹ ಯೋಜನೆಗಳು ಇವತ್ತು ಎಲ್ಲಾ ಅರ್ಧದಲ್ಲಿಯೇ ನಿಂತು ಹೋದರೆ ನಮ್ಮ ರಾಜ್ಯಕ್ಕೆ ಏನು ಉಪಯೋಗ ಬಂತು ಹೇಳಿ. ಯಾವ ರೀತಿ ಈ ಮುನಿಸಿಪಾಲಿಟಿಗಳು ಅಭಿವೃದ್ಧಿಯಾಗುತ್ತವೆ ಎನ್ನುವುದನ್ನು ಯೋಚನೆಮಾಡಿ ಸರ್ಕಾರದವರು ಇನ್ನು ಮೇಲಾದರೂ ಕ್ರಮ ತೆಗೆದುಕೊಂಡು ಒಂದು ಕಮಿಟಿ ಮಾಡಿ ನಿಂತು ಹೋಗಿರುವಂತಹ ಈ ಎಲ್ಲಾ ಕೆಲಸಗಳಿಗೂ ಚಾಲನೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಚಿಂತಾಮಣಿಯಲ್ಲಿ ಒಂದು ರೀಟೆಲ್ ಮಾರ್ಕೇಟನ್ನು ಒಂದು ಕೋಟಿ 5 ಲಕ್ಷಕ್ಕೆ ಡೆಲ್ಲಿಯಲ್ಲಿ ಮಂಜೂರಾಗಿ ಅವರು 50 ಲಕ್ಷ ರೂಪಾಯಿಗಳನ್ನು ಕೊಟ್ಟರು. ಮುನಿಸಿಪಾಲಿಟಿ ವತಿಯಿಂದ ನಾವು ಸುಮಾರು 20 ಲಕ್ಷ ರೂಪಾಯಿಗಳನ್ನು ಸರಿಮಾಡಿ ಸುಮಾರು 70 ಲಕ್ಷ ರೂಪಾಯಿಗಳನ್ನು ಗುತ್ತಿಗೆದಾರರಿಗೆ ಕೊಟ್ಟಿದ್ದೇವೆ. ಅವರು ಸರ್ಕಾರದ ರೈಲ್ವೆ ಕಂಟ್ರಾಕ್ಟರ್; ಅವರಿಗೆ ಕೊಟ್ಟು ಮಾಡಿಸಿದ್ದೇವೆ. 1994ನೇ ಇಸವಿಯಲ್ಲಿ ಸುಮಾರು 99 ಭಾಗದಷ್ಟು ಕೆಲಸ ಎಲ್ಲಾ ಮುಗಿದು ಹೋಗಿತ್ತು. ಅವರಿಗೆ ಇನ್ನು ಕೇವಲ 40 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅಲ್ಲಿ ಸುಮಾರು 150 ಮಳಿಗೆಗಳು ಇವೆ. ಅದರಲ್ಲಿ ಅರ್ಧ ಮಾತ್ರ ಮೊದಲು ಇದ್ದವರಿಗೆ ಹೋಗುತ್ತದೆ. ಇನ್ನು ಉಳಿದಿದ್ದನ್ನು ಹರಾಜು ಹಾಕಿ ಬಂದ ಹಣದಲ್ಲಿ ಸಾಲ ತೀರಿಸಿ ಚಾಲನೆ ಮಾಡಬೇಕಾಗಿತ್ತು. ಆದರೆ ದುರಾದೃಷ್ಟ ನಾನು ಏಕೆ ಮಂಜೂರು ಮಾಡಿಸಿದೆ ಅಂತ ಆಗುತ್ತದೆ. ಮಾನ್ಯ ಚೌಡರೆಡ್ಡಿ ಮಂಜೂರು ಮಾಡಿಸಿದ್ದು ಎನ್ನುವ ಒಂದು ಮಾತನ್ನು ಹಿಡಿದುಕೊಂಡು ಕಳೆದ 5 ವರ್ಷಗಳಿಂದ ಆ ಮಾರ್ಕೆಟನ್ನು ಪ್ರಾರಂಭ ಮಾಡಲಿಲ್ಲ. ಅವರಿಗೆ ಕೊಡಬೇಕಾದ 40 ಲಕ್ಷ ರೂಪಾಯಿಗಳನ್ನು ಕೊಡಲೂ ಇಲ್ಲ. ಆ 40 ಲಕ್ಷಕ್ಕೆ ಬಡ್ಡಿ

ಅದಕ್ಕೆ ಬಡ್ಡಿ ಸೇರಿ ಇವತ್ತು ಆ ಮುನಿಸಿಪಾಲಿಟಿ ತಲೆಯ ಮೇಲೆ ದೊಡ್ಡ ಬಂಡೆ ಬಿದ್ದಿಗೆ. ಇವತ್ತು ಜನಪ್ರತಿನಿಧಿಗಳು ಏನಾದರೂ ಒಂದು ಒಳ್ಳೆಯ ಕೆಲಸ ಅಲ್ಲಿ ಮಾಡಬೇಕೇ ಬಿಡಬೇಕೆ ಎನ್ನುವ ಪರಿಸ್ಥಿತಿ ಬಂದಿದೆ. ನಾನು ಈ ಸದನದ ಮುಖಾಂತರ ಕೇಳುತ್ತಿದ್ದೇನೆ ಆಡಳಿತಪಕ್ಷದವರು ಆಗಲಿ, ವಿರೋಧಪಕ್ಷದವರು ಆಗಲಿ ಈ ದೇಶದ ಅಭಿವೃದ್ಧಿಗೋಸ್ಕರ ನಾವು ವಿಶಾಲ ಮನೋಭಾವದಿಂದ ಕೆಲಸ ಮಾಡಬೇಕು. ಯಾರೇ ಸದಸ್ಯರು ಇರಲಿ ಮಾಡಿರುವ ಕೆಲಸವನ್ನು ಮುಂದುವರಿಸಿಕೊಂಡು ಹೋದರೆ ಈ ದೇಶದ ಪ್ರಗತಿಯಾಗುತ್ತದೆಂದು ಹೇಳಿ, ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಂಡು ಬೇಗ ಆ ಕೆಲಸವನ್ನು ಇತ್ಯರ್ಥ ಮಾಡಿ ಆ ಮುನಿಸಿಪಾಲಿಟಿಗೆ ಆದಾಯ ಬರುವಂತೆ ಮಾಡಲಿ ಅಂತ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀನಿವಾಸ ಗೌಡರು ಎಲ್ಲಾ ವಿಷಯಗಳನ್ನು ಇಲ್ಲಿ ಮಾತನಾಡಿದ್ದಾರೆ. ಇಲ್ಲಿ ಬರಪೀಡಿತ ಪ್ರದೇಶ, ಇಲ್ಲಿ ಕೆರೆಗಳಲ್ಲಿ ಹೂಳು ತೆಗೆಸುವುದು, ವಿದ್ಯುತ್ ಬಗ್ಗೆ ಎಲ್ಲಾ ಪ್ರಸ್ತಾಪ ಮಾಡಿದ್ದಾರೆ. ಇಷ್ಟು ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ): ಮಾನ್ಯ ಅಧ್ಯಕ್ಷರೇ, ಇದು ಮಾನ್ಯ ರಾಜ್ಯಪಾಲರು ನಿನ್ನೆಯ ದಿವಸ ಮಾಡಿದಂತಹ ಭಾಷಣ. ಈಗಾಗಲೇ ನಮ್ಮ ಸರ್ಕಾರ ಇದ್ದಾಗ 1999-2000 ಇಸವಿಯಲ್ಲಿ ಈ ಬಗ್ಗೆ ಒಂದು ದಿಕ್ಸೂಚಿಯ ರೀತಿಯಲ್ಲಿ ಸರ್ಕಾರದ ಸಾಧನೆ ಮತ್ತು ಮಾಡಬೇಕಾದ ಗೊತ್ತು ಗುರಿಗಳನ್ನು ತಿಳಿಸತಕ್ಕಂಥಾದ್ದು ಆಗಿದೆ. ಆನಂತರ ಬಂದ ಚುನಾವಣೆಯಲ್ಲಿ ಇವತ್ತು ಆ ಕಡೆ ಬಂದಿರತಕ್ಕಂಥ ಕಾಂಗ್ರೆಸ್ ಪಕ್ಷ ಜನರ ಬಹುಮತವನ್ನು ಪಡೆದು ಸರ್ಕಾರ ನಡೆಸುತ್ತಾ ಇರತಕ್ಕಂಥಾದ್ದು, ಅದರ ನಾಯಕರಾಗಿ ಮಾನ್ಯ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಾ ಇರತಕ್ಕಂಥಾದ್ದು, ನಮ್ಮ ಪ್ರಬುದ್ಧ ಮತದಾರರು ನೀಡಿದ ತೀರ್ಪು ನಮ್ಮನ್ನು ಇಲ್ಲಿ ಕುಳ್ಳರಿಸಿದೆ, ತಮ್ಮನ್ನು ಅಲ್ಲಿ ಕುಳ್ಳಿರಿಸಿರತಕ್ಕಂಥಾದ್ದನ್ನು ನಾವು ಕಂಡಿದ್ದೇವೆ. ಈ ಹೊಸ ಸರ್ಕಾರ ಬಂದಮೇಲೆ ಮಾನ್ಯ ರಾಜ್ಯಪಾಲರ ಭಾಷಣವನ್ನು ನೋಡಿದಾಗ ಈ ಬಾರಿ ನೀರಸವಾದ ಭಾಷಣ ಇದಾಗಿದೆ. ಇದಕ್ಕೆ ಅವರು ಒಂದು ದಿಕ್ಸೂಚಿಯನ್ನು ಕೊಡುತ್ತಾರೆಂದು ನಾವು ಅಂದುಕೊಂಡಿದ್ದೆವು. ಕೇವಲ 12 ಪುಟಗಳು ಇರುವಂತಹ ಭಾಷಣ ಏನಿದೆ ಅದರಲ್ಲಿ ನಮ್ಮ ಸರ್ಕಾರದ ಗುರಿ ಏನು ಇದೆ ಎಂದು ಹೇಳಬೇಕಾಗಿತ್ತು. ಏಕೆಂದರೆ ನಾವು ಕಳೆದ ಮಾರ್ಚಿಯಲ್ಲಿ ಬಜೆಟ್ ಮಂಡಿಸಿದ್ದೆವು. ಇವೊತ್ತು ಮತ್ತೆ ಚುನಾವಣೆಯ ಘೋಷಣೆ ಆಯಿತು. ಇದುವರೆವಿಗೂ ಚುನಾವಣೆ ಪ್ರಕ್ರಿಯೆಯಲ್ಲಿಯೇ ನಾವು ಕಾಲ ಕಳೆದಿದ್ದೇವೆ. ಸುಮಾರು 9 ತಿಂಗಳುಗಳ ಕಾಲ ಚುನಾವಣಾ ನೀತಿ ಸಂಹಿತೆ ಇತ್ಯಾದಿಗಳನ್ನು ಹೇಳಿಕೊಂಡು ಯಾವುದೇ ಕೆಲಸವನ್ನು ಸರಿಯಾಗಿ ಮಾಡಲು ಆಗಿಲ್ಲ. ಯಾವುದೇ ಕೆಲಸ ಹೇಳಿದರೂ ಚುನಾವಣೆ ಇದೆ ಎಂದು ಹೇಳಿಕೊಂಡು ಅದನ್ನು ಅಧಿಕಾರಿಗಳು ಮುಂದಕ್ಕೆ ಹಾಕಿಕೊಂಡು ಬಂದಂಥಾದ್ದು ಆಗಿದೆ; ಅದು ತಮಗೆಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಇನ್ನು ಉಳಿದಂಥ ಅವಧಿಯಾದ ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ ಮತ್ತು ಮಾರ್ಚ್ ಈ ಐದು ತಿಂಗಳ ಕಾಲಾವಕಾಶ ನಮಗೆ ಸಿಕ್ಕಿದೆ. ಈ 5 ತಿಂಗಳುಗಳ ಅವಧಿಯಲ್ಲೆ ಬಹಳ ಕೆಲಸಕಾರ್ಯಗಳು ಆಗಬೇಕಾಗುತ್ತದೆ ಮತ್ತು ಅದು ಬಹಳ ಶೀಘ್ರಗತಿಯಲ್ಲಿ ಆಗಬೇಕಾಗುತ್ತದೆ. ಮಾನ್ಯ ರಾಜ್ಯಪಾಲರು ಯಾವಾಗಲೂ ಮಾಡುವ ಹಾಗೆ ಸಂಪ್ರದಾಯಕವಾದ ತಮ್ಮ ಭಾಷಣದ ಒಂದು ಪ್ರತಿಯನ್ನು ಈ ಸಭೆಯ

ಮುಂದಿಡತಕ್ಕಂಥಾದ್ದು ಇದೆ. ನಮ್ಮ ಜನತಾದಳದ ಸರಕಾರವು ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಮಾಡಿರತಕ್ಕಂಥ ಕೆಲಸಕಾರ್ಯಗಳು ಸಾಕಷ್ಟು ಇವೆ ಎಂಬುದನ್ನು ತಾವುಗಳು ಬಲ್ಲಿರಿ. ಇವೊತ್ತು ಬೆಳಿಗ್ಗೆ ಮಾನ್ಯ ಸದಸ್ಯರಾದ ಶ್ರೀ ನಂಜಯ್ಯನಮಠ್‌ರವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವನೆಯನ್ನು ಮಂಡಿಸಿದಾಗ ಅವರು ನಮ್ಮ ಸರಕಾರ ಯಾವದಿಕ್ಕಿಗೆ ಹೋಗಲಿದೆ ಎಂಬುದನ್ನು ಪ್ರಸ್ತಾಪ ಮಾಡಿದರು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಹಳಷ್ಟು ವಿಚಾರಗಳುನ್ನು ಹೇಳಿದ್ದಾರೆ. ಪ್ರಾದೇಶಿಕ ಅಸಮಾನತೆ ಬಗ್ಗೆ ಹಾಗೂ ಇನ್ನೂ ಅನೇಕ ವಿಷಯಗಳ ಬಗ್ಗೆ, ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದಾರೆ. ನಮ್ಮ ಸರಕಾರವು ಅಧಿಕಾರಕ್ಕೆ ಬಂದಾಗ ಹಾಕಿಕೊಂಡಂಥ ಕಾರ್ಯಕ್ರಮಗಳು, ಐದು ವರ್ಷಗಳಲ್ಲಿ ನಮ್ಮ ಸರಕಾರದ ಆದ್ಯತೆಗಳು ಏನು ಎಂಬ ದೃಷ್ಟಿಯಿಂದ ಜನತಾದಳ ಸರಕಾರವು ಪ್ರಥಮ ಆದ್ಯತೆಯನ್ನು ಕೊಟ್ಟಂಥಾದ್ದು ಈ ರಾಜ್ಯದಲ್ಲಿ ಶಿಕ್ಷಣಕ್ಕೆ. ಶಿಕ್ಷಣವನ್ನು ಮೇಲಕ್ಕೆ ತರಬೇಕೆಂದು ರಾಜ್ಯದ 27 ಸಾವಿರ ಹಳ್ಳಿಗಳಲ್ಲಿಯೂ ಶಾಲೆಗಳು ಇರಬೇಕೆಂದು 15-20 ಮಕ್ಕಳಿದ್ದರೂ ಕೂಡ ಅಲ್ಲಿಗೆ ಶಾಲೆಯನ್ನು ಕೊಟ್ಟು ಒಂದು ವ್ಯವಸ್ಥೆಯನ್ನು ಮಾಡಿರತಕ್ಕಂಥ ಕೀರ್ತಿಯು ಜನತಾದಳ ಸರಕಾರದ್ದಾಗಿದೆ. ಹಾಗೆಯೇ ಸುಮಾರು ಒಂದು ಲಕ್ಷದಷ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡಿದ ಕೀರ್ತಿಯೂ ನಮಗೆ ಸಲ್ಲಬೇಕು. 1989ರಿಂದ 1994ರ ವರೆಗೂ ನಾವು ಕಂಡಂತೆ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇರಲಿಲ್ಲ. ಹೀಗೆ ಉಪಾಧ್ಯಾಯರುಗಳು ಇಲ್ಲದಿರುವ ಶಾಲೆಗಳನ್ನು ನಾವು ನೋಡಿದ್ದೇವೆ. ಅದೇ ರೀತಿಯಲ್ಲಿ ನಿಮ್ಮ ಸರಕಾರವು ನಮಗೆ ಬಿಟ್ಟು ಹೋಗಿರತಕ್ಕಂಥಾದ್ದು 536ಕೋಟಿ ರೂಪಾಯಿಗಳ ಸಾಲದ ಹೊರೆ ಮಾತ್ರ; ಮಾನ್ಯ ವೀರಪ್ಪ ಮೊಯಿಲಿಯವರ ಸರಕಾರವು ಅಧಿಕಾರ ಬಿಟ್ಟಾಗ ನಮಗೆ 536ಕೋಟಿ ರೂಪಾಯಿಗಳ ಸಾಲದ ಹೊರೆ ಇತ್ತು. ನಾವು ಆ ಸಾಲವನ್ನು ತೀರಿಸಿದೆವು....

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ನಾನು ಕೂಡ 1989ರಲ್ಲಿ 11ತಿಂಗಳುಗಳ ಕಾಲ ಶಿಕ್ಷಣ ಸಚಿವನಾಗಿದ್ದೆ. ಮಾನ್ಯ ಸದಸ್ಯರಿಗೆ ಸ್ವಲ್ಪ ಮರೆವು ಬಂದಿದೆಯೋ ಏನೋ ಗೊತ್ತಿಲ್ಲ. 1983 ರಿಂದ 1989ರ ವರೆಗೆ ಇದ್ದಂತಹ ಸರಕಾರ ಈ ನೇಮಕಾತಿಗಳನ್ನು ಸಂಪೂರ್ಣವಾಗಿ ಬ್ಯಾನ್ ಮಾಡಿತ್ತು. ಯಾವುದೇ ಇಲಾಖೆಗಳಲ್ಲಿಯೂ ಯಾವುದೇ ನೇಮಕ ಮಾಡಬಾರದು ಎಂದು ಇತ್ತು. ಇದರಲ್ಲಿ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳೂ ಸೇರಿದ್ದುವು. ಆದರೆ ನಾವು 1989ರಲ್ಲಿ ಅದನ್ನು ಪುನರ್‌ಪರಿಶೀಲನೆ ಮಾಡಿ, ಹಣವನ್ನು ಒಟ್ಟಿಗೆ ನಿಗದಿ ಮಾಡಿದ ಮೇಲೆ, ನೇಮಕ ಮಾಡಬೇಕೆಂದು ಕಾರ್ಯಕ್ರಮವನ್ನು ತೆಗೆದುಕೊಂಡ ಮೇಲೆ, ಮುಂದೆ ನೇಮಕಾತಿಗಳನ್ನು ಮಾಡತಕ್ಕಂಥಾದ್ದು ಆಯಿತು. ಮಾನ್ಯ ಗೋವಿಂದೇಗೌಡರ ಕಾಲದಲ್ಲಿ ಅದು ಹೆಚ್ಚು ಪ್ರಗತಿಪರವಾಗಿ ನಡೆಯಿತು. ಆದ್ದರಿಂದ ಆಗ ನೇಮಕಾತಿಗಳ ಬಗ್ಗೆ ಬ್ಯಾನ್ ಇದ್ದ ಕಾರಣ ಮಾತ್ರದಿಂದ ಉಪಾಧ್ಯಾಯರುಗಳ ನೇಮಕಾತಿಯು ಆ ಕಾಲದಲ್ಲಿ ನಡೆಯಲ್ಲಿಲ್ಲ. ಮಾನ್ಯ ಬಚ್ಚೇಗೌಡರು ಈ ವಿಚಾರವನ್ನು ಪುನರ್‌ಪರಿಶೀಲನೆ ಮಾಡಿದ್ದಲ್ಲಿ ಈ ಮಾತನ್ನು ಹೇಳುತ್ತಿರಲಿಲ್ಲವೆಂದು ಕಾಣುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಎಸ್ಸೆನ್‌ಷಿಯಲ್ ಸರ್ವೀಸಸ್‌ಗೆ ಎಲ್ಲೆಲ್ಲಿ ಆವಶ್ಯಕತೆ ಇದೆಯೋ ಅಲ್ಲಿ ನೇಮಕ ಮಾಡಬೇಕಾಗುತ್ತದೆ. ಆ ಕಾಲದಲ್ಲಿ ನೇಮಕಾತಿಗಳ ಬಗ್ಗೆ ಬ್ಯಾನ್ ಇದ್ದುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ: ಯಾವ ಇಲಾಖೆಗಳಲ್ಲಿಯೂ ಕೂಡ ಯಾವುದೇ ನೇಮಕಾತಿ ಮಾಡಬಾರದೆಂದು ಅದಕ್ಕೆ ಬ್ಯಾನ್ ಇತ್ತು. ಅದಕ್ಕೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಯು ಕಾರಣ ಆಗಿತ್ತು.

ಶ್ರಿ ಬಿ.ಎನ್. ಬಚ್ಚೇಗೌಡ: 1989 ರಿಂದ 1994ರ ವರೆಗೆ ತಾವುಗಳು ಏನು ಮಾಡಿದ್ದೀರಿ ಎಂಬ ಬಗ್ಗೆ ನಮ್ಮಲ್ಲಿ ಮಾಹಿತಿಗಳು ಇಲ್ಲ. ಇದ್ದಲ್ಲಿ ತಾವುಗಳು ಹೇಳಬಹುದು. ತಾವುಗಳು ಎಷ್ಟು ಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೀರಿ? ಎಷ್ಟು ಶಾಲೆಗಳನ್ನು ತಾವುಗಳು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಬ್ಯಾನ್ ಲಿಫ್ಟ್ ಮಾಡಿದ ನಂತರ ತಾವುಗಳು ಈ ಕುರಿತು ಮಾಡಿದ ಸಾಧನೆಯನ್ನು ಹೇಳಿ.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೇ, 1985ರ ಚುನಾವಣೆಗೆ ಮುಂಚಿತವಾಗಿ ನಾನು ಆಗ ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿದ್ದೆ. ಮುಂದೆ 1987ರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಯಾಗಿದ್ದೆ. ಆಗ 16 ಸಾವಿರಗಳಷ್ಟು ಉಪಾಧ್ಯಾಯರ ನೇಮಕವನ್ನು ಚುನಾವಣೆಗೆ ಮೊದಲು ನಾವು ಮಾಡಿದ್ದೇವೆ. ತಾವುಗಳು 1983 ರಿಂದ 89ರವರೆಗೆ ಯಾವುದೇ ನೇಮಕವಾಗಿಲ್ಲ ಎಂದು ಹೇಳಿದ್ದೀರಿ. ಆ ವಿವರಗಳನ್ನು ತಾವುಗಳು ತೆಗೆಸಿ ನೋಡಬಹುದು.

ಶ್ರಿ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಸರಕಾರದಲ್ಲಿದ್ದ ಆದ್ಯತೆಯ ಬಗ್ಗೆ ಮಾತನಾಡುತ್ತಿದ್ದೆ. ಒಂದು ಲಕ್ಷ ಉಪಾಧ್ಯಾಯರುಗಳ ನೇಮಕ ಮಾಡಿದಂತೆ ಶಾಲಾ ಕೊಠಡಿಗಳ ಬಗ್ಗೆಯೂ ನಾವು ಕ್ರಮವನ್ನು ತೆಗೆದುಕೊಂಡಿದ್ದೆವು. ಅದೇ ರೀತಿಯಲ್ಲಿ 536 ಕೋಟಿ ರೂಪಾಯಿಗಳ ಸಾಲವನ್ನು ತೀರಿಸಿದ್ದೇವೆ; ಪಿಯರ್‌ಲೆಸ್ ಸಂಸ್ಥೆಯಿಂದ ಹಣವನ್ನು ಪಡೆದು ಆ ಸಾಲವನ್ನು ತೀರಿಸಿದ್ದು ನಮ್ಮ ಸರಕಾರ. ಅದೇ ರೀತಿಯಲ್ಲಿ ನಮ್ಮ ಸರಕಾರವು ಯಾವುದೇ ಓವರ್‌ಡ್ರಾಫ್ಟ್ ಇಲ್ಲದೆ ಆಡಳಿತವನ್ನು ನಡೆಸಿದ ಕೀರ್ತಿಯನ್ನು ಪಡೆದಿದೆ.

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಉತ್ತರಕ್ಕೆ ಪ್ರತ್ಯುತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾವು ಅಡ್ಡಿ ಬರುವುದಿಲ್ಲ. ತಾವುಗಳು 536 ಕೋಟಿ ರೂಪಾಯಿಗಳನ್ನು ಪಿಯರ್‌ಲೆಸ್ ಸಂಸ್ಥೆಯಿಂದ ಪಡೆದು ಸಾಲ ತೀರಿಸಿದ ಬಗ್ಗೆ ಹೇಳಿದ್ದೀರಿ. ಒಟ್ಟಾರೆ ನಿಮ್ಮ ಅವಧಿಯ ಐದು ವರ್ಷಗಳಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮಾಡಿ ಹೋಗಿದ್ದೀರಿ. ವಿಶ್ವಬ್ಯಾಂಕ್, ನಬಾರ್ಡ್ ಮುಂತಾದ ಕಡೆಗಳಲ್ಲಿ ಸಾಲವನ್ನು ತಂದು ಖರ್ಚು ಮಾಡಿದ್ದೀರಿ ಅಲ್ಲವೇ? ಹೀಗೆ ನಿಮ್ಮ ಅಸೆಟ್ಸ್ ಕಡಿಮೆಯಾಗಿ ಲೋನ್ ಜಾಸ್ತಿ ಇತ್ತು ಎಂಬುದನ್ನು ನೀವು ಹೇಳುವುದಿಲ್ಲ ಏಕೆ? ಹಾಗೆ ಎಲ್ಲರೂ ಸಾಲವನ್ನು ತರುತ್ತಾರೆ.

ಶ್ರಿ ಬಿ.ಎನ್. ಬಚ್ಚೇಗೌಡ: ಮಾನ್ಯ ಖರ್ಗೆಯವರು ಹಿರಿಯ ಮಂತ್ರಿಗಳಾಗಿದ್ದವರು. ಯಾರಿಗೂ ತಮ್ಮಲ್ಲಿರುವಂಥ ಸಂಪನ್ಮೂಲಗಳಿಂದಲೇ ಅಭಿವೃದ್ಧಿಯನ್ನು ಮಾಡಲಾಗುವುದಿಲ್ಲ. ನಾವು ಎಕ್ಸ್‌ಟರ್ನಲ್ ಏಜನ್ಸಿಗಳ ಮೂಲಕ ಹಣವನ್ನು ಪಡೆಯಲೇಬೇಕಾಗುತ್ತದೆ. ಉದಾಹರಣೆಗೆ ಪಿಡಬ್ಲ್ಯೂಡಿ ಬಜೆಟ್‌ಗೆ 170ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಯಾವುದೇ ರಸ್ತೆಗಳನ್ನು ಅಷ್ಟು ಹಣದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇವೊತ್ತು ನಾವು ಸ್ಟ್ಯಾಂಡರ್ಡ್ ರಸ್ತೆಗಳನ್ನು

ಮಾಡಬೇಕಾಗುತ್ತದೆ. ವಿಶೇಷತ ಉತ್ತರಕರ್ನಾಟಕ ಭಾಗಗಳಲ್ಲಿ ಮಣ್ಣಿನ ಗುಣಕ್ಕೆ ಸರಿಯಾಗಿ ಒಂದು ಸ್ಟ್ಯಾಂಡರ್ಡ್ ರಸ್ತೆಗಳನ್ನು ಮಾಡಬೇಕೆಂದರೆ, ಪಿಡಬ್ಲ್ಯೂಡಿ ರಸ್ತೆಗಳನ್ನು ಆ ಒಂದು ಸ್ಟ್ಯಾಂಡರ್ಡ್‌ಗೆ ತರಬೇಕೆಂದರೆ, ಹುಡ್ಕೊ, ನಬಾರ್ಡ್, ಅಥವಾ ಬೇರೆ ಯಾವುದೇ ಎಕ್ಸ್‌ಟರ್ನ್‌ಲ್ ಏಜನ್ಸಿ ಕಡೆಯಿಂದ ಸಾಲವನ್ನು ತರಲೇಬೇಕಾಗುತ್ತದೆ. ಅದು ಮಾನ್ಯ ನಾಯಕರಿಗೂ ಗೊತ್ತಿದೆ. ಆದರೂ ಅವರು ಈ ವಿಚಾರವನ್ನು ಹೇಳುತ್ತಾರೆ. ನಾವು ಕೃಷ್ಣ ಜಲಭಾಗ್ಯ ನಿಗಮದಿಂದ ಹಣವನ್ನು ತೆಗೆದುಕೊಂಡಿದ್ದೆವು. ವಿಶ್ವಬ್ಯಾಂಕ್‌ನಿಂದ ಹಣವನ್ನು ತೆಗೆದುಕೊಂಡಿದ್ದೇವೆ. ಹಣ ತೆಗೆದುಕೊಂಡು ನಾವು 2000ದ ವರ್ಷದಲ್ಲಿ ಈ ಯೋಜನೆಯನ್ನು ಮುಗಿಸಲೇಬೇಕು. ನೀರಾವರಿ ಸಂಪನ್ಮೂಲಗಳನ್ನು ನಾವು ಪೂರ್ಣವಾಗಿ ಬಳಸಿಕೊಳ್ಳಬೇಕು. ಇದಕ್ಕೆ ಹಣ ಎಲ್ಲಿಂದ ಬರುತ್ತದೆ? 125 ಕೋಟಿ ರೂಪಾಯಿಗಳ ಬಾಂಡ್ಸ್‌ನ್ನು ರೈಸ್ ಮಾಡಿ ಬೆಂಗಳೂರು ನಗರದ ಅಭಿವೃದ್ಧಿ ಮಾಡಿದ್ದೇವೆ. ಇದಕ್ಕೆ ಹಣ ಬೇರೆ ಎಲ್ಲಿಂದ ಬರುತ್ತದೆ ಹೇಳಿ? ನಮ್ಮ ಸರಕಾರದಲ್ಲಿರುವ ಹಣದಲ್ಲಿ 80 ಪರ್‌ಸೆಂಟ್‌ನಷ್ಟು ಹಣವು ಸರಕಾರಿ ನೌಕರರಿಗೆ ಹೋಗುತ್ತದೆ. ಅಂದರೆ ಒಟ್ಟು ಆರೂವರೆ ಸಾವಿರ ಕೋಟಿ ರೂ.ಗಳು ನಮ್ಮ ನೌಕರರ ಸಂಬಳ ಸಾರಿಗೆಗೆ ಹೋಗುತ್ತದೆ. ಅದನ್ನು ಬಿಟ್ಟು ಉಳಿದ ಒಂದೂವರೆ ಸಾವಿರ ಕೋಟಿಗಳಲ್ಲಿ ನಾವೇನು ಅಭಿವೃದ್ಧಿಯನ್ನು ಮಾಡಲು ಸಾಧ್ಯವಾಗುತ್ತದೆ? ಹಾಗೆಯೇ ಕೇಂದ್ರ ಸರಕಾರದಿಂದ ಬರುವ ನೆರವು ಸೇರಿದಂತೆ ಒಟ್ಟು 15-16ಸಾವಿರ ಕೋಟಿ ರೂಪಾಯಿಗಳಷ್ಟು ಆದಾಗ, ಅನೇಕ ರಾಜ್ಯಗಳಲ್ಲಿ 85ಪರ್‌ಸೆಂಟ್‌ನವರೆಗೂ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ಸ್ ಆಗುತ್ತಾ ಇರುತ್ತದೆ. ಪ್ರತಿ ಐದು ವರ್ಷಗಳಿಗೂ ಈ ಒಂದು ವೆಚ್ಚ ಆಗುತ್ತಿರುವುದು ತಮಗೂ ಗೊತ್ತಿದೆ. ಹೀಗೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿ, ಜಾಸ್ತಿಯಾಗಿ, ಒಟ್ಟು 35 ಪರ್‌ಸೆಂಟ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್, ಇನ್ನು ಮುಂದಿನ ವರ್ಷಗಳಲ್ಲಿ ನಾವು ಕೂಡ 85-90 ಪರ್‌ಸೆಂಟ್‌ಗೆ ನಾನ್‌ಪ್ಲಾನ್ಡ್ ಎಕ್ಸ್‌ಪೆಂಡಿಚರ್‌ಗೆ ಬರಬಹುದೋ ಏನೋ? ಇದು ನಮ್ಮ ಫೈನಾನ್‌ಷಿಯಲ್ ಮ್ಯಾನೇಜ್‌ಮೆಂಟ್ ಎಂದು ಹೇಳುತ್ತಿರುವುದು. ದೇಶದ 11ನೇ ಫೈನಾನ್ಸ್ ಕಮಿಷನ್‌ರವರು ನಮ್ಮ ಆರ್ಥಿಕ ನಡೆಯನ್ನು ಪ್ರಶಂಸಿಸಿದ್ದಾರೆ. ಈ ಬಗ್ಗೆ ನಾವು ದೇಶದಲ್ಲಿ ಒಂದನೇ ಸ್ಥಾನದಲ್ಲಿದ್ದೇವೆ. ಫೈನಾನ್‌ಷಿಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ನಾವು ಒಂದನೇ ಸ್ಥಾನದಲ್ಲಿದ್ದೆವು. ವೇಸ್ ಅಂಡ್ ಮೀನ್ಸ್‌ಗೆ ಹೋಗಿಲ್ಲ, ಒಂದೂ ಕೂಡ ಓವರ್‌ಡ್ರಾಫ್ಟ್ ಆಗಿಲ್ಲ. ಒಂದೂ ಚೆಕ್ ಕೂಡ ಬೌನ್ಸ್ ಆಗಿಲ್ಲ. ಇದನ್ನು ನಾವು ಪಡೆದಂತಹ ಕ್ರೆಡಿಟ್ ಎನ್ನುವುದನ್ನು ಆ ಕಡೆಯಲ್ಲಿ ಕುಳಿತವರು ಅರ್ಥ ಮಾಡಿಕೊಳ್ಳಬೇಕು. ಈ ಸಾಧನೆಗಳನ್ನು ನಾವು ಮಾಡಿದ್ದೇವು. ಇವೊತ್ತು 35ಸಾವಿರ ಶಾಲಾ ಕೊಠಡಿಗಳನ್ನು ನಾವು ಕಟ್ಟಿಸಿದ್ದೇವೆ. ಅಕ್ಷಯ ಯೋಜನೆಯಡಿಯಲ್ಲಿ ಪಂಚಾಯತ್‌ಗಳ ಮ್ಯಾಚಿಂಗ್ ಮನಿಯೊಂದಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಕೊಠಡಿಗಳಿಗೆ ವ್ಯಯ ಮಾಡಿದ್ದೇವೆ. ಹಿಂದೆ 25 ಸಾವಿರ ರೂಪಾಯಿಗಳನ್ನು ಕೊಟ್ಟು ಕಟ್ಟಿಸಿದ ಕಟ್ಟಡಗಳಲ್ಲಿ ನೀರು ಸೋರುತ್ತಿತ್ತು ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಅಷ್ಟು ಹಣದಲ್ಲಿ ಅದು ಹೇಗೆ ಸಾಧ್ಯವಾಗುತ್ತದೆ? ಆದಕ್ಕಾಗಿ ಸೂಕ್ತ ಪ್ರಮಾಣದ ಹಣವನ್ನು ನಾವು ಒದಗಿಸಿಕೊಟ್ಟಿದ್ದೆವು. ಹೀಗೆ ಮೊದಲಿಂದಲೂ ನಾವು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟುಕೊಂಡು ಬಂದಿದ್ದೇವೆ. ಮತ್ತೆ ಮಾನ್ಯ ಚೌಡರೆಡ್ಡಿಯವರು ಈ ಆರೋಗ್ಯದ ವಿಚಾರದ ಬಗ್ಗೆ ಹೇಳುತ್ತಿದ್ದರು. ಈ ಆರೋಗ್ಯ ನಮ್ಮ ಆದ್ಯತೆಯಲ್ಲಿ ಎರಡನೆಯದು. ಇವತ್ತು ವಿಶ್ವಬ್ಯಾಂಕಿನ ಬಗ್ಗೆ ಮಾನ್ಯ

5.40 ಪಿ.ಎಂ.

ಖರ್ಗೆಯವರು ಪ್ರಸ್ತಾಪಿಸಿದರು. ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದ ಪರಿಸ್ಥಿತಿ ಇತ್ತು. 1000 ವೈದ್ಯರು, 1058 ಪ್ಯಾರಾ ಮೆಡಿಕಲ್ ಸ್ಟಾಫ್, 1865 ನರ್ಸಿಂಗ್ ಸ್ಟಾಫ್‌ಗಳನ್ನು ನೇಮಿಸಿದ್ದು ನಮ್ಮ ಸರ್ಕಾರ. 548 ಕೋಟಿ ರೂಪಾಯಿಗಳ ವಿಶ್ವಬ್ಯಾಂಕಿನ ನೆರವು ಪಡೆದು ರಾಜ್ಯದಲ್ಲಿ 201 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದೆವು. 50 ಹಾಸಿಗೆ, 100 ಹಾಸಿಗೆ ಆಸ್ಪತ್ರೆಗಳನ್ನು ಜರ್ಮನಿ ದೇಶದ ನೆರವಿನಿಂದ ಹೈಟೆಕ್ ಆಸ್ಪತ್ರೆಗಳನ್ನಾಗಿ ಮಾಡಿದೆವು. ಇದು ನಮ್ಮ ಗುಲ್ಬರ್ಗ ಸ್ನೇಹಿತರಿಗೆ ಗೊತ್ತಿದೆ.

ಶ್ರೀ ಜಿ. ರಾಜುಗೌಡ: ಇಷ್ಟೆಲ್ಲಾ ಪ್ರಗತಿಪರ ಕಾರ್ಯಗಳನ್ನು ಮಾಡಿದರೂ ಕೂಡ ತಾವು ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಲು ಏನು ಕಾರಣ ಎಂಬುದನ್ನು ದಯಮಾಡಿ ಹೇಳುತ್ತೀರ?

ಶ್ರೀ ಬಿ. ಎನ್. ಬಚ್ಚೇಗೌಡ: ಅದನ್ನು ಇಲ್ಲಿ ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ ರಾಜುಗೌಡರೇ. ಸ್ವಾಮಿ, ಈ ಚುನಾವಣೆಯಲ್ಲಿ ನಮ್ಮ ಸಾಧನೆಗಳ ಪ್ರಸ್ತಾಪ ಆಗಲಿಲ್ಲ. ನಮ್ಮ ದುರಾದೃಷ್ಟ ಒಂದು ಮತದಲ್ಲಿ ಹೋದಂತಹ ಪಾರ್ಲಿಮೆಂಟ್ ಚುನಾವಣೆ ನಮ್ಮ ತಲೆ ಮೇಲೆ ಬಂತು. ಈ ರಾಜ್ಯದಲ್ಲಿ ಈ ಚುನಾವಣೆ ಬೇಕಾಗಿರಲಿಲ್ಲ. ಯಾರೂ ಇವತ್ತು ಬಹಳ ಸಾಧನೆ ಮಾಡಿದ್ದೀವಿ ಅಂತ ಅಂದುಕೊಳ್ಳಬೇಡಿರಿ. ನಿಮ್ಮ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಸೋನಿಯಾಗಾಂಧಿಯವರ ಮ್ಯಾನಿಫೆಸ್ಟೋ ಇದರಲ್ಲಿ ಅಚ್ಚಾಗಿಲ್ಲ.

ಶ್ರೀ ಜಿ. ರಾಜುಗೌಡ: ನಿಮ್ಮ ಕಾರ್ಯಕ್ರಮಗಳ ಮೇಲೆ ಮಾತನಾಡಿ.

ಶ್ರೀ ಬಿ. ಎನ್. ಬಚ್ಚೇಗೌಡ: ದಯವಿಟ್ಟು ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ, ನಾವು ಇಲ್ಲಿ ಏತಕ್ಕೆ ಇದ್ದೇವೆ ಅಂತ ಕೇಳಿದ್ದಕ್ಕೆ ನಿಮಗೆ ನಾನು ರಿಪ್ಲೈ ಹೇಳುತ್ತೇನೆ. ಸ್ವಾಮಿ ಆ ಸಂದರ್ಭದಲ್ಲಿ ರಾಷ್ಟ್ರೀಯ ವಿಷಯಗಳು ಚರ್ಚೆಗೆ ಬಂದವು, ನಾವು ಮಾಡಿದ ಸಾಧನೆ ಗೌಣ ಆಯಿತು. ಆ ಪಕ್ಷಕ್ಕೆ ಖಾತರಿ ಇರಲಿಲ್ಲ ಎಷ್ಟು ಸೀಟು ಗೆದ್ದು ಬರುತ್ತೇವೆ ಅಂತ; ಅವರು ಮಾನ್ಯ ದೇವೇಗೌಡರ ಹತ್ತಿರ ರಾತ್ರಾನುರಾತ್ರಿ ಹೋಗಿ ನಾವು 80-90ರಲ್ಲಿದ್ದೇವೆ ನೀವೊಂದಿಷ್ಟು ನೆರವು ಕೊಡಿ ನಮಗೆ, ಅಂತ ಹೇಳಿದರು. ಅಲ್ಲಿ ಕಳಾತಿರುವುದು ಅನಿರೀಕ್ಷಿತವಾದರೂ ಮಾನ್ಯ ರಾಜುಗೌಡರು ಮಾತನಾಡುತ್ತಿದ್ದಾರೆ. ಇವರ ಹಣೆಬರಹ ಏನಾಗಿದೆ ಎಂದರೆ ರಾಷ್ಟ್ರದಲ್ಲಿ ಯಾವ ಪಕ್ಷಗಳೂ ಮೇಲಕ್ಕೆ ಹೋಗಲಿಲ್ಲ; 182-ಬಿಜೆಪಿ ಅಲ್ಲೇ ಇದೆ, 120-ಎನ್‌ಡಿಎ ಅಲ್ಲೇ ಇದೆ.

ಶ್ರೀ ಕೆ ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಮಾನ್ಯ ಬಚ್ಚೇಗೌಡರಿಗೆ ಮಾನ್ಯ ಸದಸ್ಯರಾದ ರಾಜುಗೌಡರಿಗೆ ಕುಳಿತುಕೊಳ್ಳಿರಿ ಅಂತ ಹೇಳುವ ಅಧಿಕಾರ ಇಲ್ಲ. ಆ ಅಧಿಕಾರ ಇರುವುದು ತಮಗೆ. ಇದರ ಬಗ್ಗೆ ಬಹಳ ಪ್ರಿಸಿಡೆಂಟ್ಸ್ ಇವೆ. ಕುಳಿತುಕೊಳ್ಳಿರಿ ಅಂತ ಜೋರು ಮಾಡುವುದು ಮೊದಲೇ ಇಲ್ಲ. ಏತಕ್ಕೋ ಅವರು ಕೋಪದಲ್ಲಿರುವಂತಿದೆ.

ಶ್ರೀ ಜಿ. ರಾಜುಗೌಡ: ಸಹ ಸದಸ್ಯರನ್ನು ಯಾವರೀತಿ ಸಂಬೋಧಿಸಬೇಕೂಂತ ಗೊತ್ತಿಲ್ಲ, ನಾಲ್ಕು ಸಲ ಗೆದ್ದು ಬಂದರೇನು ಪ್ರಯೋಜನ?

ಶ್ರೀ ಬಿ. ಎನ್. ಬಚ್ಚೇಗೌಡ: ನಾನು ಕೋಪ ಮಾಡುವುದಿಲ್ಲ. ಅವರು ಹೇಳಿದ್ದು ನನಗೆ ಸಂಗತ ವಿಷಯವಾಗಿತ್ತು; ಅದಕ್ಕೇ ವಿವರಿಸುತ್ತಿದ್ದೇನೆ. ಒಂದು ಓಟಿನಿಂದ ಅನ್ಯಾಯವಾಗಿ ಈ ಚುನಾವಣೆಗಳು ಸಾವಿರಾರು ಕೋಟಿ ರೂಪಾಯಿಗಳ ಲುಕ್ಸಾನು ನಮ್ಮ ತಲೆ ಮೇಲೆ ತಂದವು. ಮತ್ತು ಏನು ರಿಸಲ್ಟ್ ಬಂತು ಎಂದರೆ, 182-ಬಿಜೆಪಿಗೆ ಇದೆ, 120-ಎನ್‌ಡಿಎನ್ ಇದೆ, ಕಾಂಗ್ರೆಸ್-111, ತಿರುಪತಿಯಾಯಿತು, ಕೆಳಕ್ಕೆ ಬಂತು

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ: ಒಂದು ಓಟಿನಿಂದ ಬಿತ್ತಂದ್ರಲ್ಲ ಸರ್ಕಾರ ಆಗ ನೀವು ಯಾರಿಗೆ ಹಾಕಿದ್ರಿ?

ಶ್ರೀ ಬಿ. ಎನ್. ಬಚ್ಚೇಗೌಡ: ಆಗ ನಾವೆಲ್ಲ ಒಟ್ಟಾಗಿದ್ದೆವು.

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ: ಮತ್ತೆ ಸುಮ್ಮನೆ ಯಾಕೆ ಮಾತನಾಡುತ್ತೀರಿ?

ಶ್ರೀ ಬಿ. ಎನ್. ಬಚ್ಚೇಗೌಡ: ಅದಕ್ಕೆ ಏನು ಸಾಧನೆ ಮಾಡಲಿಲ್ಲ. ಮಾನ್ಯ ನರಸಿಂಹರಾಯರಿದ್ದಾಗ 142 ಸೀಟು, ಮಾನ್ಯ ಸೀತಾರಾಮ ಕೇಸರಿಯವರಿದ್ದಾಗ 142 ಸೀಟು, ಮಾನ್ಯ ಸೋನಿಯಾರ ಕಾಲದಲ್ಲಿ ಕಾಂಗ್ರೆಸ್ 111ಕ್ಕೆ ಬಂತು, ಇದನ್ನು ತಿಳಿದುಕೊಳ್ಳಬೇಕು ರಾಜೂಗೌಡರು.

ಶ್ರೀ ಡಿ. ರಾಜುಗೌಡ: ನಿಮ್ಮ ಪಕ್ಷದ ನೆಲಗಟ್ಟೇ ಇಲ್ಲ, 'ನಮ್ಮ ಪಕ್ಷದಲ್ಲಿ ಶಿಸ್ತಿಲ್ಲ' ಅಂತ ಮಾನ್ಯ ಸಿದ್ದರಾಮಯ್ಯನವರೇ ಹೇಳಿದ್ದಾರೆ. ನೀವು ಅರ್ಥಮಾಡಿಕೊಳ್ಳಿ ಅದನ್ನು. ನಾವು 50ವರ್ಷಗಳಿಂದ ಆಡಳಿತ ಮಾಡಿಕೊಂಡು ಬಂದಿದ್ದೇವೆ, ತಾವು ಇವತ್ತು ಹೇಳುವುದಲ್ಲ ಆ ಮಾತನ್ನು. ನಮ್ಮ ಪಕ್ಷದ ಬಗ್ಗೆ ಟೀಕೆ ಮಾಡುವುದಕ್ಕೆ ನಿಮಗೆ ಅರ್ಹತೆ ಇಲ್ಲ, ಕುಳಿತುಕೊಳ್ಳಿ.

ಶ್ರೀ ಬಿ. ಎನ್. ಬಚ್ಚೇಗೌಡ: ಸ್ವಾಮಿ, ಇವರು ಶಿಸ್ತು ಇಲ್ಲ ಅಂತ ಹೇಳಿದ್ದಕ್ಕೆ ಹೇಳುತ್ತೇನೆ: 4 ದಿವಸಗಳಾಯಿತು. ಆ ಬಗ್ಗೆ 7ನೇ ತಾರೀಖು ಅನೌನ್ಸಾಯಿತು, ಅಮಾವಾಸ್ಯೆ, ಪೌರ್ಣಮಿ ನೋಡಿದರು, ಕೊಳ್ಳೇಗಾಲ ಬೆಟ್ಟಕ್ಕೆ ಹೋಗಿದ್ದರು ಮಲೈಮಾದೇಶ್ವರನ ಆಶೀರ್ವಾದ ಪಡೆಯುವುದಕ್ಕೆ. ಮಾನ್ಯ ಖರ್ಗೆಯವರು, ನಮ್ಮ ನಾಯಕರು, ಆಸೆ ಇಟ್ಟುಕೊಂಡಿದ್ದರು ನಾನು ಮುಖ್ಯಮಂತ್ರಿ ಆಗುತ್ತೇನೆ ಅಂತ, ಬಹಳ ಕಷ್ಟಪಟ್ಟರು ಈ ಕಡೆ ವಿರೋಧಪಕ್ಷದ ನಾಯಕನಾಗಿ; ಅದು ಅವರಿಗಾಗಬೇಕಾಗಿತ್ತು, ಆಗಲಿಲ್ಲ; ಅವರಿಗೆ ದುರಾದೃಷ್ಟ ಆಯಿತು. ಆಗಲಿ, ಮುಂದೆ ಆಗುತ್ತಾರೆ ಅವರು, ತಾಳ್ಮೆ ಇದೆ ಅವರಿಗೆ. ಇನ್ನೂ ಸ್ವಲ್ಪ ದಿವಸದಲ್ಲೇ ಆಗುತ್ತಾರೆ. ಆಮೇಲೆ ನಾಲ್ಕನೇ ದಿವಸಕ್ಕೆ ಇಲ್ಲಿ ಪ್ರಮಾಣವಚನ ನಡೆಯಿತು. ಆಮೇಲೆ ಉಪಮುಖ್ಯಮಂತ್ರಿ ಯಾರು ಆಗಬೇಕೆಂಬ ಚರ್ಚೆ ಆಯಿತು, ಉಪಮುಖ್ಯಮಂತ್ರಿ ಅಂದರೆ ಟ್ರೆಡಿಷನ್ ಏನು ಮಾಡಿದ್ದೇವೆ ಎಂದರೆ ಅದಾದ ನಂತರ ನೆಕ್ಸ್ಟ್ ಪ್ರಮೋಶನ್ ಮುಖ್ಯಮಂತ್ರಿಗೆ.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮ ಐದು ವರ್ಷದ್ದನ್ನು ಹೇಳುವುದಕ್ಕೆ ಇಲ್ಲಿ ಜನ ದೆಹಲಿಯಿಂದ ಕೆಳಗಡೆ ಇಳಿಸಿದ್ದು, ಪ್ರಧಾನಮಂತ್ರಿ, ಮುಖ್ಯಮಂತ್ರಿಯನ್ನು ಇಳಿಸುವುದಕ್ಕೆ ಪ್ರಯತ್ನಿಸಿದ್ದು, ಮುಖ್ಯಮಂತ್ರಿ, ಪ್ರಧಾನಮಂತ್ರಿಯನ್ನು ಇಳಿಸುವುದಕ್ಕೆ ಪ್ರಯತ್ನಿಸಿದ್ದು- ಆ ವ್ಯಾಖ್ಯಾನ ಮಾಡುವುದಕ್ಕೆ ಇಷ್ಟು ಜನ ಇಲ್ಲಿ ಸಿದ್ಧವಾಗಿದ್ದಾರೆ ಅಂತ ಮರೆತುಬಿಟ್ಟಿದ್ದೀರಲ್ಲ, ಯಾಕೆ?

ಶ್ರೀ ಡಿ.ವಿ. ಸದಾನಂದಗೌಡ: ನೀವು ಇಬ್ಬರು ಹೀಗೆ ಮಾತನಾಡಿಕೊಂಡರೆ, ಈ ಮಧ್ಯೆ ನಾವಿದ್ದೀವಲ್ಲಪ್ಪ ಈಗ ಒಂದು ರೊಟೇಶನಾಗುತ್ತಿದೆ, ಅಲ್ಲಿದ್ದವರು ಈ ಕಡೆ ಬಂದರೆ ಈ ಕಡೆ ಇದ್ದವರು ಆ ಕಡೆ ಹೋಗುತ್ತಾರೆ, ಆ ರೀತಿ ನಾವು ಬರುವ ಸಾಲ ಆ ಕಡೆ ಬರಬೇಕಾಗುತ್ತದೆ, ನಮ್ಮನ್ನು ಯಾಕೆ ಮರೆತುಬಿಡುತ್ತೀರಿ ನೀವು?

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಬಿಜೆಪಿಯವರು ಅದೂ ಇದೂ ಮಾಡಿ ರಾಷ್ಟ್ರದಲ್ಲಿ ಬರಬಹುದೇ ವಿನಾ ಕರ್ನಾಟಕದಲ್ಲಿ ಇವರು ಇಲ್ಲಿರುತ್ತಾರೆ ಇಲ್ಲ ನಾವಲ್ಲಿರುತ್ತೇವೆ, ಅವರು ಮಾತ್ರ ಇಲ್ಲೇ ಇಲ್ಲ, ಬರೀ ಗಲಾಟೆ ಮಾಡುವುದಕ್ಕೇ ಬಂದಿರುವ ಪಕ್ಷ ಅವರದು.

ಶ್ರೀ ಸಿ. ಬೈರೇಗೌಡ: ಮಾನ್ಯ ರಂಗನಾಥರು ಹಿಂದೆ ಏನು ಭವಿಷ್ಯ ನುಡಿದಿದ್ದರೋ ಅದೇ ತರಹ ಆಯಿತು, ಆ ಕಡೆ ಇದ್ದವರು ಈ ಕಡೆ ಬಂದಿರಿ, ನಾವು ಆ ಕಡೆ ಹೋದೆವು. ಈಗ ಪುನಃ ಭವಿಷ್ಯ ನುಡಿಯುತ್ತಿದ್ದೀರಿ, ನಾವಲ್ಲಿ ಬರುತ್ತೇವೆ.

ಚೇರ್ಮನ್: ಮಾನ್ಯ ಬಚ್ಚೇಗೌಡರೇ ನೀವು ಮುಂದುವರೆಸಿ.

ಶ್ರೀ ಬಿ. ಎನ್. ಬಚ್ಚೇಗೌಡ: ಅವರು ಮುಖ್ಯಮಂತ್ರಿಗಳಾಗಿ ಒಂದು ವಾರದ ತರುವಾಯ ಮಂತ್ರಿಮಂಡಲ ವಿಸ್ತರಣೆಯಾಯಿತು. ಪ್ರಾದೇಶಿಕ ಅಸಮಾನತೆ ಅಲ್ಲಿ ಕಾಣುತ್ತಿದೆ. ಹೊಸ ಜಿಲ್ಲೆ ಮಾಡಿದ ಕೀರ್ತಿ ನಮಗೆ, 20 ಜಿಲ್ಲೆ ಇದ್ದುದ್ದನ್ನು 27 ಮಾಡಿದೆವು, ಉಡುಪಿ ಅಂತ ತಮ್ಮದು ಒಂದು ಜಿಲ್ಲೆ, ಶ್ರೀಕೃಷ್ಣ ತಾವು ಅಲ್ಲಿಂದ ಬಂದಿರೋರು, ನಾವು ಎಲ್ಲೆಲ್ಲಿ ಹೊಸ ಜಿಲ್ಲೆ ಮಾಡಿದೆವೋ ಅಲ್ಲಿಗೆ ಮಂತ್ರಿ ಪದವಿ ಕೊಟ್ಟಿಲ್ಲ.

ಚೇರ್ಮನ್: ಹೊಸ ಜಿಲ್ಲೆಗಳೆಲ್ಲ ಸಣ್ಣ ಜಿಲ್ಲೆಗಳು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾತಿನಿಧ್ಯ ಸಿಕ್ಕಿದೆ.

ಶ್ರೀ ಬಿ. ಎನ್. ಬಚ್ಚೇಗೌಡ: ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಕೊಟ್ಟಿಲ್ಲ ಸ್ವಾಮಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಮಾನ್ಯ ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇವರೇನೋ ಹೊಸ ಜಿಲ್ಲೆಗಳನ್ನು ಮಾಡಿದರು, ಸಂತೋಷ. ಇವರು ಹೊಸ ಜಿಲ್ಲೆಗಳನ್ನು ಏನು ರಚನೆ ಮಾಡಿದರು, ಅದಕ್ಕಾಗಿ ಜನರಿಗೂ ಬಹಳ ಸಂತೋಷವಾಯಿತು. ಆದರೆ ಆ ಭಾಗದಿಂದ ಎಷ್ಟು ಜನ ಶಾಸಕರುಗಳನ್ನು ಆರಿಸಿ ಕಳುಹಿಸಿದರು ಎಂದು ಅದನ್ನು ಅವರು ಹೇಳಬೇಕಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ: ತಾವು ಮೊದಲು ಈ ಹೊಸ ಜಿಲ್ಲೆಗಳನ್ನು ರಚನೆ ಮಾಡಿರುವ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು ಆಡಳಿತ ಜನರ ಬಳಿಗೆ ಹೋಗಲಿ ಎನ್ನುವ ಉದ್ದೇಶದಿಂದ ಅದನ್ನು ಮಾಡಿರುವುದು. ಆದ್ದರಿಂದ ಸಣ್ಣ ಜಿಲ್ಲೆಗಳನ್ನು ಮಾಡಿ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವಂಥ ಕಾರ್ಯವನ್ನು ಮಾಡಿರುವುದು. ಅದರಲ್ಲಿ ಏಳು ಜಿಲ್ಲೆಗಳಿಗೆ ಮಂತ್ರಿಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಅದು ಅಸಮಾನತೆಯನ್ನು

ತೋರಿಸುವಂಥ ಒಂದು ವ್ಯವಸ್ಥೆ ಎಂದು ನಾನು ಹೇಳಿದ್ದು. ಮತ್ತು ಇವರು ಹೇಳಿದ ಹಾಗೆ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಮಂತ್ರಿಮಂಡಲ ಬಹಳ ಚಿಕ್ಕದಾಗಿರುತ್ತದೆ ಎಂದು ತಿಳಿಸಿದಂಥ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇವತ್ತು 42 ಮಂತ್ರಿಗಳನ್ನು ನೇಮಕ ಮಾಡಿದ್ದಾರೆ. ಅವರನ್ನೂ ಸೇರಿಸಿದರೆ ಅದು ಸಧ್ಯಕ್ಕೆ 43 ಆಗುತ್ತದೆ. ಅಷ್ಟಕ್ಕೂ ತೃಪ್ತಿ ಇಲ್ಲ; ಅವರಿಗೆ ತೃಪ್ತಿ ಇಲ್ಲದೆ ಅದು ಹೊಗೆಯಾಡುತ್ತಿದೆ. ಅದರಲ್ಲಿ ಮಾನ್ಯ ನೀಲಕಂಠಪ್ಪನವರೂ ಒಬ್ಬ ಆ್ಯಸ್ಪಿರೆಂಟ್. ಮತ್ತೆ ನಮ್ಮ ಮಾನ್ಯ ರಾಜುಗೌಡರು ಅವರೂ ಮಂತ್ರಿ ಆಗಬೇಕಾಗಿತ್ತು. ಅವರು ಹಿರಿಯ ಸದಸ್ಯರು ಇದ್ದಾರೆ; ಅವರ ಜಿಲ್ಲೆಗೆ ಕೊಡಬೇಕಾಗಿತ್ತು; ಅವರ ಜಿಲ್ಲೆಗೆ ಮಂತ್ರಿಯೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಮ್ಮ ಮಾನ್ಯ ಬಚ್ಚೇಗೌಡರು ಯಾರ್‍ಯಾರು ಮಂತ್ರಿಗಳಾಗಬೇಕು ಎಂದು ಶಿಫಾರಸ್ಸು ಮಾಡುತ್ತಿದ್ದಾರೆ.

ಶ್ರೀ ಬಿ. ಎನ್. ಬಚ್ಚೇಗೌಡ: ಮಾನ್ಯ ಸಭಾಧ್ಯಕ್ಷರೇ, ನಾವು, 30 ಜನರನ್ನು ಮಾತ್ರ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಬಹುದು ಎಂದು ತಿಳಿದುಕೊಂಡಿದ್ದೆವು, ಹಾಗೆ ಮಂತ್ರಿಮಂಡಲ ಬಹಳ ಚೊಕ್ಕದಾಗಿ ಚಿಕ್ಕದಾಗಿರುತ್ತದೆ ಎಂದು ಅಂದುಕೊಂಡಿದ್ದೆವು. ಅದು ಸಧ್ಯಕ್ಕೆ 42-43 ಆಯಿತು. ಆಮೇಲೆ ಇವತ್ತು ಇಲ್ಲೆಲ್ಲಾ ನೋಡಿ; ಆಗಲೇ ಆ ಕುರ್ಚಿಗಳು ಖಾಲಿ ಆಗಿವೆ. ಮುಂದಿನ ಬೆಂಚ್‌ಗಳವರು ಬರುತ್ತಿಲ್ಲ. ಅನೇಕರು ಬರುತ್ತಿಲ್ಲ. ಇದು ಆಗಲೇ ಶುರುವಾಗಿದೆ. ಆ ಮೂಲೆಯಲ್ಲಿ ಸೇರುವವಂಥಾದ್ದು ಅಲ್ಲಿ ಒಳಜಗಳ. ಇನ್ನು ಏಳು ಜಿಲ್ಲೆಗಳಿಗೆ ಕೊಟ್ಟರೆ ಅದು 50-52 ಆಗುತ್ತದೆ. ಇದು ಇವತ್ತು ನಾವು ಕಾಣುತ್ತಾ ಇರುವಂಥಾದ್ದು; ಇವತ್ತು ನಾವು ಅಸಮಾನತೆಯನ್ನು ಕಾಣುತ್ತಿರುವಂಥಾದ್ದು. ಇವತ್ತು ನಾನೇನು ಪ್ರಸ್ತಾಪ ಮಾಡುತ್ತಿದ್ದೆ, ಇವತ್ತು ಆಡಳಿತದಲ್ಲಿ ಶಿಕ್ಷಣಕ್ಕೆ ಒತ್ತು ಕೊಡುವಂಥಾದ್ದು, ಆರೋಗ್ಯದ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೆ. ಆರೋಗ್ಯಕ್ಕೆ ನಮ್ಮ ಸರ್ಕಾರ ವಿಶೇಷವಾಗಿ ಇವತ್ತು ಹೊಸ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂಥಾದ್ದಕ್ಕೆ ಸುಮಾರು 546 ಕೋಟಿ ರೂಪಾಯಿಗಳನ್ನು ತೊಡಗಿಸಿ, ವಿಶ್ವಬ್ಯಾಂಕಿನಿಂದ ಆ ಹಣವನ್ನು ಪಡೆದು ಇವತ್ತು ಮೇಲ್ದರ್ಜೆಗೇರಿಸುವ ಕಾರ್ಯವನ್ನು, 50 ಬೆಡ್, 100 ಬೆಡ್ ಆಸ್ಪತ್ರೆಗಳನ್ನು ಮಾಡುವುದು, ಪ್ಯಾರಾ ಮೆಡಿಕಲ್ ಸಿಬ್ಬಂದಿಯನ್ನು ತೆಗೆದುಕೊಳ್ಳುವುದು ಮತ್ತು ಹೈಟೆಕ್ ಆಸ್ಪತ್ರೆಗಳನ್ನು ಮಾಡುವುದು ರಾಯಚೂರಿನಲ್ಲಿ ಅದು ಕೂಡ ಸಿದ್ಧ ಇದೆ; ರಾಯಚೂರಿನಲ್ಲಿ ಹೈಟೆಕ್ ಆಸ್ಪತ್ರೆಯ ಉದ್ಘಾಟನಾ ಕಾರ್ಯ ಆಗುವಂಥಾದ್ದು ಇದೆ. ಹೀಗೆ ಅನೇಕ ಕಾರ್ಯಗಳನ್ನು ಇವತ್ತು ಆರೋಗ್ಯದ ಕ್ಷೇತ್ರದಲ್ಲಿ ಮಾಡಿರುವಂಥಾದ್ದು ಇದೆ. ಅದಾದಮೇಲೆ ಇವತ್ತು ಬಡವರಿಗೆ ಹಸಿರು ಕಾರ್ಡ್‌ನ್ನು ವಿತರಣೆ ಮಾಡುವುದು ಇದೆ. ಇವತ್ತು 3-50 ರೂ.ದರದಲ್ಲಿ ಅಕ್ಕಿಯನ್ನು ಕೊಡುವಂಥಾದ್ದರಲ್ಲಿ ಸುಮಾರು 69 ಲಕ್ಷ ಕಾರ್ಡ್‌ಗಳನ್ನು ಕೊಟ್ಟಿರುವ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುವಂಥಾದ್ದು ಆಗಿದೆ. ರಾಜ್ಯದಲ್ಲಿರುವ 5 ಕೋಟಿ 25 ಲಕ್ಷ ಜನರು ಇರುವಂಥಾದ್ದರಲ್ಲಿ ಸುಮಾರು 69-70 ಲಕ್ಷ ಜನರಿಗೆ ಹಸಿರು ಕಾರ್ಡ್‌ಗಳನ್ನು ಕೊಟ್ಟು ಅವರಿಗೆಲ್ಲಾ ಅಕ್ಕಿಯನ್ನು ವಿತಾರಣೆ ಮಾಡುವ ವ್ಯವಸ್ಥೆಯನ್ನು ನಾವು ಮಾಡಿರತಕ್ಕಂಥಾದ್ದು ಆಗಿದೆ. ಇವತ್ತು ಬಡವರಿಗೆ ಅನ್ನವನ್ನು ಕೊಡುವ ಒಂದು ಕಾರ್ಯ ಆಗಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಇವರೇನೋ ಕಾರ್ಡ್‌ನ್ನು ಕೊಟ್ಟರು. ಅದು ನಿಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದನ್ನು ರದ್ದುಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದೂವರೆ ಸಾವಿರ ಕಾರ್ಡ್‌ಗಳನ್ನು ರದ್ದುಮಾಡುವುದಕ್ಕೆ ನೋಟಿಫಿಕೇಷನ್ ಹಾಕಿದ್ದಾರೆ. ಇಡೀ ರಾಜ್ಯದಲ್ಲಿ ಆ ರೀತಿ ಆಗುತ್ತಿದೆ. ಅದು ತಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಮನೆಗೆ ನಿನ್ನೆ ಒಬ್ಬ ಕ್ಷೌರಿಕ ಬಂದಿದ್ದ; ಹಳ್ಳಿಯಲ್ಲಿ ಅವನಿಗೆ ಚೌರ ಮಾಡುವುದಕ್ಕೆ ಎರಡು ತಲೆಗಳು ಸಿಗುವುದಿಲ್ಲ. ಆ ಮನುಷ್ಯನಿಗೆ ಇರುವ ಒಂದು ಹಸಿರು ಕಾರ್ಡ್ ರದ್ದಾಗುತ್ತೆ ಎಂದರೆ ಏನು ಅರ್ಥ?

ಒಬ್ಬ ಮಾನ್ಯ ಸದಸ್ಯರು: ಹಿಂದಿನ ಸರ್ಕಾರ ಮಾಡಿದ ಆದೇಶ ಅದು; ಈಗ ಕಾರ್ಯಗತವಾಗುತ್ತದೆ. ಹಿಂದಿನ ಸರ್ಕಾರ ಮಾಡಿದ ಆದೇಶವನ್ನು ಅಧಿಕಾರಿಗಳು ಈಗ ಕಾರ್ಯಗತ ಮಾಡಲು ಹೊರಟಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಕೃಷಿ ಕಾರ್ಮಿಕರಿಗೆ, ಕುಶಲಕಾರ್ಮಿಗಳಿಗೆ, ಬಡವರಿಗೆ ಅದನ್ನು ರದ್ದು ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್(ಮಾನ್ಯ ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ 1-10-99 ರಿಂದ ಜಾರಿಗೆ ಬರಬೇಕು ಎಂದು ಹೇಳಿ ಒಂದು ನಿರ್ದೇಶನ ಆಹಾರ ಇಲಾಖೆಯಿಂದ ಹೋಗಿತ್ತಂತೆ. ಆದ್ದರಿಂದ ತತ್‌ಕ್ಷಣವೇ ಅದನ್ನು ನಿಲ್ಲಿಸಬೇಕು; ಸರ್ಕಾರ ಪರಿಶೀಲನೆ ಮಾಡುವವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಾರದೆಂದು ಈಗಾಗಲೇ ಆದೇಶ ಹೋಗಿದೆ.

ಶ್ರೀ ಬಿ. ಎನ್. ಬಚ್ಚೇಗೌಡ: ಹಸಿರು ಕಾರ್ಡ್ ಕೊಟ್ಟಿರುವುದರಲ್ಲಿ ಏನಾದರೂ ಲೋಪ ಇದ್ದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಅವಕಾಶ ಇದೆ. ಇವತ್ತು ರಾಜ್ಯದಲ್ಲಿ 70 ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡ್ ಕೊಡುವ ಕಾರ್ಯವನ್ನು ನಾವು ಮಾಡಿದ್ದೇವೆ. ಬಡವರಿಗೆ 10 ಕೆಜಿ ಅಕ್ಕಿ ಕೊಡುವ ಕಾರ್ಯವನ್ನು ಆದ್ಯತಾ ಕ್ಷೇತ್ರಗಳಲ್ಲಿ ನಾವು ಮಾಡಿದ್ದೇವೆ ಎಂದು ತಮಗೆ ಹೇಳುತ್ತಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್: ಹಸಿರು ಕಾರ್ಡ್ ಕೊಡುವಾಗ ವಾರ್ಷಿಕ ಆದಾಯವನ್ನು ಕಡಿಮೆ ಮಾಡಿ ವಾಪಸ್ ಕಿತ್ತುಕೊಂಡಂಥ ಕೀರ್ತಿಯೂ ನಿಮಗೇ ಹೋಗುತ್ತೆ. ಅದು ನಮಗೆ ಸಲ್ಲುವುದಿಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ: ಅವರ ವಾರ್ಷಿಕ ವರಮಾನ 12 ಸಾವಿರ ರೂಪಾಯಿಗಳು ಇರಬೇಕು, 6 ಸಾವಿರ ರೂಪಾಯಿಗಳು ಇರಬೇಕೆನ್ನುವ ಪ್ರಶ್ನೆ ಬಂದಾಗ ಇವತ್ತು ಸರ್ಕಾರ ಅದನ್ನು ಬಹಳ ತೀವ್ರವಾಗಿ ತೆಗೆದುಕೊಂಡಿಲ್ಲ. ಆ ರೀತಿ ವರಮಾನವನ್ನು ನಾವು ತೆಗೆದುಕೊಂಡರೆ ಯಾರಿಗೂ ಹಸಿರು ಕಾರ್ಡೇ ಸಿಗುವುದಿಲ್ಲ. ಬಹಳ ಲೀನಿಯೆಂಟ್ ಆಗಿ ನಾವು ಬಡವರಿಗೆ ಅದು ಸೇರಬೇಕು ಎಂದು ಹೇಳಿ ಮಾಡಿದ್ದೇವೆ. ಆ ಬಗ್ಗೆ ನಾವು ಬಹಳ ಸೀರಿಯಸ್ ಆಗಿ ವ್ಯೂ ಮಾಡಲಿಲ್ಲ. ಆ ಬಗ್ಗೆ ತಮಗೂ ಗೊತ್ತಿದೆ. ಎಲ್ಲರಿಗೂ ಸಿಗುತ್ತದೆ, ಅದು ಸಿಗಲಿ ಎಂದು ಹೇಳಿ ನಾವು ಮಾಡಿದ್ದೇವೆ. ಆದರೆ ಅದು ದುರುಪಯೋಗವಾಗುವಂಥಾದ್ದನ್ನು ತಡೆಹಿಡಿಯುವ ಕಾರ್ಯ

ಇವತ್ತು ಆಗಬೇಕಾಗಿದೆ. ಪ್ರಾಥಮಿಕ ಶಿಕ್ಷಣ, ಆರೋಗ್ಯ, ಹಸಿರುಕಾರ್ಡ್ ವಿತರಣೆ ಮತ್ತು ವಸತಿ ಇವುಗಳ ಬಗ್ಗೆ ಆದ್ಯತಾ ರೀತಿಯಲ್ಲಿ ಕೆಲಸಗಳು ಆಗಬೇಕಾಗುತ್ತದೆ. ವಿಶೇಷವಾಗಿ ಈ ವಸತಿ ಬಗ್ಗೆ ಹೇಳುವುದಾದರೆ 1989ರಿಂದ ಅಧಿಕಾರದಲ್ಲಿ ಇದ್ದ ಸರ್ಕಾರ ಕೇವಲ 5 ವರ್ಷಗಳಲ್ಲಿ ಈ ವಸತಿ ಯೋಜನೆಯಡಿಯಲ್ಲಿ 60 ಸಾವಿರ ಮನೆಗಳನ್ನು ಕೊಟ್ಟಿದ್ದಾರೆ. 1994ರಿಂದ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಈ 5 ವರ್ಷದಲ್ಲಿ ಇಂದಿರಾ ಅವಾಸ್, ಅಂಬೇಡ್ಕರ್, ಮತ್ತು ಆಶ್ರಯ ಯೋಜನೆಗಳಡಿಯಲ್ಲಿ ನಾವು 4 ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ; ಒಂದೊಂದು ತಾಲ್ಲೂಕಿಗೆ ಎರಡೂವರೆ ಸಾವಿರ, ಮೂರುಸಾವಿರ, 4 ಸಾವಿರ ಮನೆಗಳನ್ನು ಬಡವರಿಗೆ ಕೊಟ್ಟಿದ್ದೇವೆ. ಅದಕ್ಕಾಗಿ ಶ್ರೀ ಮಾನ್ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, 12 ಸಾವಿರ ರೂಪಾಯಿಗಳು, 13 ಸಾವಿರ ರೂಪಾಯಿಗಳು ಇದ್ದ ಹಣಕ್ಕೆ ಹೆಚ್ಚುವರಿಯಾಗಿ 20 ಸಾವಿರ ರೂಪಾಯಿಗಳನ್ನು ಕೊಟ್ಟ ಕೀರ್ತಿ ನಮ್ಮ ಸರ್ಕಾರಕ್ಕೆ ಬರುವಂಥಾದ್ದಾಗಿದೆ. ನಾನೇಕೆ ಇದನ್ನೇಲ್ಲಾ ಹೇಳುತ್ತಿದ್ದೇನೆ ಎಂದರೆ, ತಾವು ಈಗ ಬಂದಿರುವವರು ಇನ್ನೂ ಇದರಲ್ಲಿ ಮುಂದೆ ಹೋಗಬೇಕು; ಬಡವರ ಬಗ್ಗೆ ಇನ್ನೂ ಹೆಚ್ಚು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅದು ಯಾವುದನ್ನೂ ನೀವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರತಿಬಿಂಬಿಸಿಲ್ಲ. It is a very simple document. ಇದರಲ್ಲಿ ಯಾವ ಅಂಕಿ ಸಂಖ್ಯೆಗಳೂ ಇಲ್ಲ. ಈ ಮಾನ್ಯ ರಾಜ್ಯಪಾಲರ ಭಾಷಣವನ್ನು ನಾವು ನೋಡಿದಂಥಾದ್ದು ಇದು ಬಹಳ ವೇಗ ಆಗಿರತಕ್ಕಂಥಾದ್ದು ಆಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಮ್ಮದು ಬಹಳ ನಿರರ್ಥಕವಾದ ಸರ್ಕಾರ ಎಂದು ಹೇಳಿ. ಈ ಸಾರ್ಥಕವಾದ ಸರ್ಕಾರ ಆ ಕಡೆಯಿಂದ ಬಂದಿರುವವರು ಇದನ್ನು ಅರ್ಥಮಾಡಿಕೊಳ್ಳಬೇಕು. ಆ ಸಾರ್ಥಕತೆಯನ್ನು ಐದು ವರ್ಷದಲ್ಲಿ ಮಾಡಿ ಶ್ರಮಪಟ್ಟಿರತಕ್ಕಂಥವರು ನಾವು. ಮಾನ್ಯ ರಾಜುಗೌಡರು ಹಾಗಾದರೆ ನೀವೇಕೆ ಮೆಜಾರಿಟಿಯಲ್ಲಿ ಆರಿಸಿ ಬರಲಿಲ್ಲ, ಏಕೆ ಅಲ್ಲಿ ಇದ್ದೀರಿ ಎಂದು ಕೇಳಿದರು. ಅದು ಜನರ ತೀರ್ಮಾನ. ಜನರು ಪ್ರಬುದ್ಧರು ಇದ್ದಾರೆ, ಸ್ವಾಮಿ. ನಿಮ್ಮನ್ನು ಅಲ್ಲಿ ಕೂರಿಸುತ್ತಾರೆ, ನಮ್ಮನ್ನು ಇಲ್ಲಿ ಕೂರಿಸುತ್ತಾರೆ. ಮತದಾರ ಏನು ಇದ್ದಾನೆ ಈರಾಜ್ಯದಲ್ಲಿ ಅವನು ಬಹಳ ಪ್ರಬುದ್ಧ, ಬುದ್ಧಿವಂತ ಇದ್ದಾನೆ. ಇವತ್ತು ಆತನನ್ನು ಮೆಚ್ಚಬೇಕು. ಆ ಮೆಚ್ಚುಗೆಗೆ ನೀವು ಬೆನ್ನು ತಟ್ಟಿಕೊಳ್ಳಬೇಡಿ. ನಾವೇನೋ ಸಾಧನೆ ಮಾಡಿಬಿಟ್ಟಿದ್ದೇವೆ ಎಂದು. ನೀವು ಏನೂ ಮಾಡಿಲ್ಲ; ಯಾವುದೋ ಕೃಪಾಪೋಷಿತ ನಾಟಕ ಮಂಡಳಿಯವರು ನೀವು; ಶ್ರೀಮತಿ ಇಂದಿರಾಗಾಂಧಿ ಕೃಪಾಪೋಷಿತ ನಾಟಕ ಮಂಡಳಿಯವರು ನೀವು. ನೀವ್ಯಾರೂ ಓಟು ಕೇಳುವುದಿಲ್ಲ. ನೀವು ತೋರಿಸುವ ಶ್ರೀರಾಜೀವ್‌ಗಾಂಧಿ ಅವರು ಇವತ್ತು ಎಲ್ಲಿದ್ದಾರೆ, ನೀವು ಶ್ರೀಮತಿ ಇಂದಿರಾಗಾಂಧಿಯವರನ್ನು ತೋರಿಸುತ್ತೀರಿ; ಅವರು ಎಲ್ಲಿದ್ದಾರೆ? ನೀವು ಇಟಲಿಯ ಆ ಹೆಣ್ಣು ಮಗಳು ಸೋನಿಯಾಗಾಂಧಿಯನ್ನು ತೋರಿಸುತ್ತೀರಿ. ಎಲ್ಲಿದ್ದಾರೆ ಆ ಹೆಣ್ಣುಮಗಳು?

ಶ್ರೀ ವಿಜಯಕುಮಾರ್ ಶೆಟ್ಟಿ: ನೀವು ಈ ರೀತಿ ಹೇಳುವುದು ಸರಿಯಲ್ಲ. ನೀವು ಆಶ್ರಯದ ಬಗ್ಗೆ ಹೇಳಿದಿರಿ; ನಮ್ಮ ಗ್ರಾಮಪಂಚಾಯಿತಿಗೆ ಒಂದೇ ಒಂದು ಮನೆಯನ್ನು ಆಶ್ರಯ ಯೋಜನೆಯಡಿ ಕೊಟ್ಟಿಲ್ಲ. ನೀವು ಲಕ್ಷ ಮನೆಗಳನ್ನು ಕೊಡುತ್ತೇವೆ ಎಂದು ಸುಮ್ಮನೆ ಹೇಳುವುದು ಸರಿಯಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ನೀಮ್ಮ ಕೈಯಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕಾಗಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಗ್ರಾಮಪಂಚಾಯಿತಿಗೂ ನೀವು ಬೇಕಾದಷ್ಟು ಕೊಟ್ಟಿಲ್ಲ. ಸುಮ್ಮನೆ ಲಕ್ಷ ಮನೆಗಳು ಎಂದು ಹೇಳುತ್ತಿದ್ದೀರಿ. ನೀವು ಇಲ್ಲಿ ಮಾನ್ಯ ರಾಜೀವ್‌ಗಾಂಧಿ, ಶ್ರೀಮತಿ ಸೋನಿಯಾಗಾಂಧಿ ಆ ಹೆಸರುಗಳನ್ನು ಎತ್ತುವ ಅವಶ್ಯಕತೆ ಇಲ್ಲ. ನಮ್ಮ ನಾಯಕರನ್ನು ಆ ರೀತಿ ಟೀಕೆ ಮಾಡಿದರೆ ಅದಕ್ಕೆ ನಾವು ಉಗ್ರವಾಗಿ ವರ್ತಿಸಬೇಕಾಗುತ್ತೆ. ಮಾನ್ಯ ಅಧ್ಯಕ್ಷರೇ, ತಾವು ಈ ಬಗ್ಗೆ ಅವರಿಗೆ ಡೈರೆಕ್ಷನ್‌ನ್ನು ಕೊಡಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಮಾತನಾಡುವಾಗ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದು ಟೀಕೆ ಎಂದು ಅಲ್ಲ. ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ನಿಮ್ಮನ್ನು ಹೊಗಳಿಕೆ ಮಾಡುವುದಕಾಗುತ್ತದೆಯೇ? ನಮ್ಮ ಕೆಲಸವನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ: ನೀವು ಈ ಸಭೆಗೆ ತಪ್ಪು ಮಾಹಿತಿಯನ್ನು ಕೊಡಬೇಡಿ. ಆಶ್ರಯಡಿಯಲ್ಲಿ 4 ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಲ್ಲ; ಎಲ್ಲಿ ಕೊಟ್ಟಿದ್ದೀರಿ ಹೇಳಿ. ಈ ಆಶ್ರಯ ಯೋಜನೆಯನ್ನು ಇಂಟ್ರಡ್ಯೂಸ್ ಮಾಡಿದ್ದೇ ನಮ್ಮ ಸರ್ಕಾರ; ಅಂಬೇಡ್ಕರ್ ಯೋಜನೆಯನ್ನು ಇಂಟ್ರಡ್ಯೂಸ್ ಮಾಡಿದ್ದು ನಮ್ಮ ಸರ್ಕಾರ. ನೀವು ಅದಕ್ಕೆ ಕೊಡ ತಕ್ಕಂಥ ಹಣ ಏನಿದೆ ಅದನ್ನು 12 ಸಾವಿರದಿಂದ 20 ಸಾವಿರ ರೂಪಾಯಿಗಳು ಎಂದು ಮಾಡಿದರೆ ಬಹಳ ದೊಡ್ಡ ಸಾಧನೆ ಮಾಡಿದಂತಾಯಿತೇ? ಸ್ವಾಮಿ ಆಮೇಲೆ ಮಾತನಾಡಿ ನೀವು; ತಮಗೆ ಅವಕಾಶ ಇದ್ದಾಗ ಮಾತನಾಡಿ. ನಾನು ಇದನ್ನು ಏಕೆ ಹೇಳಿದೆ ಎಂದರೆ, ಆ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಒಂದು ಮನೆಯಾಗುತ್ತದೆ ಎಂದರೆ ಅದರಲ್ಲಿ ನನಗೆ ನಂಬಿಕೆ ಇಲ್ಲ. ನೀವು ಕೊಡತಕ್ಕಂಥ 20,000 ರೂಪಾಯಿಗಳ ಜೊತೆಗೆ ಅದಕ್ಕೆ ಫಲಾನುಭವಿಯೂ ತನ್ನ ಪಾಲನ್ನು ಹಾಕಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅವನು ದುಡಿಯಬೇಕಾಗುತ್ತದೆ. ಅವನಿಗೂ ಇಂಟರೆಸ್ಟ್ ಬರಬೇಕಾಗುತ್ತದೆ. ಆ ಇಪ್ಪತ್ತು ಸಾವಿರ ರೂಪಾಯಿಗಳು ಬಹಳ ದೊಡ್ಡ ಹಣವೆಂದು ನಾನು ಅಂದುಕೊಳ್ಳುವುದಿಲ್ಲ. ಅದರ ಜೊತೆಗೆ ಅವನ ಕಾಂಟ್ರಿಬ್ಯೂಷನನ್ನು ಅವನು ಹಾಕಿಕೊಳ್ಳಬೇಕಾಗುತ್ತದೆ. ಇಡೀ ರಾಷ್ಟ್ರದಲ್ಲಿ ಇಂತಹ ಕಾರ್ಯ ಇದುವರೆಗೆ ಎಲ್ಲೂ ಆಗಿಲ್ಲ; ಅದನ್ನು ನಾನು ಹೇಳುವಂತಹದು, ನಾವು ಮಾಡಿರುವಂತಹ ಸಾಧನೆ. ಇನ್ನು ಮುಂದೆ ಹೋಗಿ ಹೇಳುವುದಾದರೆ, ಈ ಗ್ರಾಮೀಣಾಭಿವೃದ್ಧಿ ವಿಚಾರ ಏನಿದೆ. ಅದರಲ್ಲಿ ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಈ ರಾಜ್ಯದಲ್ಲಿ ಮಾಡಿರುವುದು. 27 ಸಾವಿರ ಕಂದಾಯ ಗ್ರಾಮಗಳೇನು ಇವೆ; 27 ಸಾವಿರ ತಾಂಡಾ, ಬೇರೆ ಬೇರೆ ಕಾಲೋನಿಗಳು ಇವೆ; ಜನತಾ ಕಾಲೋನಿಗಳು ಇವೆ. ಈ ರಾಜ್ಯದಲ್ಲಿ ಏನು 57 ಸಾವಿರ ಇವೆ- ರೆವೆನ್ಯೂ ಮತ್ತು ರೆವೆನ್ಯೂ ಅಲ್ಲದೇ ಇರತಕ್ಕಂಥ ಗ್ರಾಮಗಳು, ಅಲ್ಲಿ ಅಷ್ಟೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಶ್ರೀಮಾನ್ ನಜೀರ್‌ಸಾಬ್ ಮಾಡಿದ್ದರು. ಅವರ ಕಾಲವನ್ನು ದಿವಂಗತ ನಜೀರ್‌ಸಾಬ್‌ರವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಅಲ್ಲಿಂದ ಬಂದಂತಹ ಯೋಜನೆಗಳನ್ನು ಈ ರಾಜ್ಯದಲ್ಲಿ ಸುಮಾರು ಒಂದು ಲಕ್ಷ 56 ಸಾವಿರ ಕೊಳವೆ ಬಾವಿಗಳನ್ನು ಹಾಕಿರತಕ್ಕದ್ದು ಮತ್ತು ನಮ್ಮ ಐದು ವರ್ಷದ ಸಾಧನೆಯಲ್ಲಿ ನಮ್ಮ ಸರ್ಕಾರ ಇವತ್ತು ಪ್ರತಿ ಗ್ರಾಮದಲ್ಲಿ ನೀರಿನ ವ್ಯವಸ್ಥೆ ಮಾಡಿದೆ. ಎಲ್ಲೆಲ್ಲಿ ಇತ್ತು ಅಲ್ಲಿಗೆ ಉತ್ತಮ ನೀರನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಹಿಂದೆ ಇದ್ದಂತಹ ನಮ್ಮ ಗ್ರಾಮೀಣಾಭಿವೃದ್ಧಿ

ಸಚಿವರು ಅದರಲ್ಲಿ ಸಾಕಷ್ಟು ಹಣವನ್ನು ತೊಡಗಿಸಿ ಮಾಡಿದ್ದರು, ಸುಮಾರು 30 ಭಾಗದ ಹಣವನ್ನು ಅದರಲ್ಲಿ ತೊಡಗಿಸಿರತಕ್ಕದ್ದು ಇದೆ; ಇದನ್ನು ನಾವು ಇವತ್ತು ಹೇಳುವಂತಹದು. ಇವತ್ತು ನಮ್ಮ 11ನೇ ಆರ್ಥಿಕ ಆಯೋಗ ಬಂದಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಇನ್ನೂ ಕೆಲವು ಜಿಲ್ಲೆಗಳಿವೆ; ಪರ್-ಕ್ಯಾಪಿಟ ಇನ್‌ಕಂ ಅನ್ನು ಜಾಸ್ತಿ ಮಾಡುವಂತಹ ಒಂದು ವ್ಯವಸ್ಥೆ ಏನಿದೆ ಅದರಲ್ಲಿ ಆರ್ಥಿಕವಾಗಿ ಒಬ್ಬ ಮನುಷ್ಯನು ಇಡಬೇಕಾದಂತಹ ಹಣದ ವ್ಯವಸ್ಥೆಯನ್ನು ಜಾಸ್ತಿ ತೆಗೆದುಕೊಂಡು ಹೋಗುವಂತಹ ಡೈರೆಕ್ಷನ್ ಅನ್ನು ಆಗ ಬಂದಂತಹ ಸಮಿತಿಯನ್ನು ಸೂಚಿಸಿದ್ದಾರೆ. ಇವತ್ತು ಗುಲ್ಬರ್ಗಾ ಜಿಲ್ಲೆ ಇರಬಹುದು, ರಾಯಚೂರು ಜಿಲ್ಲೆ ಇರಬಹುದು, ಬಳ್ಳಾರಿ ಜಿಲ್ಲೆ ಇರಬಹುದು, ಹೀಗೆ ಉತ್ತರ ಕರ್ನಾಟಕದ ಭಾಗದಲ್ಲಿನ ಅನೇಕ ಜಿಲ್ಲೆಗಳಲ್ಲಿ ಇನ್ನೂ ಆರ್ಥಿಕ ವ್ಯವಸ್ಥೆ, ಪರ್ ಕ್ಯಾಪಿಟಾ ಇನ್‌ಕಂ ಜಾಸ್ತಿ ಮಾಡಿಕೊಡುವಂತಹ ವ್ಯವಸ್ಥೆ ಇವತ್ತು ಜರೂರು ಆಗಬೇಕು ಎಂದು ಸೂಚನೆ ಮಾಡಿರತಕ್ಕದ್ದೂ ಇದೆ. ಆ ದಿಸೆಯಲ್ಲಿ ನಾವು ಪರ್-ಕ್ಯಾಪಿಟಾ ಇನ್‌ಕಂ ಇನ್ ಬ್ಯಾಕ್‌ವರ್ಡ್ ಏರಿಯಾ ಎಂದೇನು ಇದೆ, ಅಲ್ಲಿ ಅದಕ್ಕೆ ವಿಶೇಷ ಆಸಕ್ತಿಯನ್ನು ವಹಿಸಿ ಮೇಲೆ ತರುವಂತಹ ಕಾರ್ಯ ಆಗಬೇಕಾದ್ದು, ಅದನ್ನು ಒಪ್ಪುವಂತಹದು ಇದೆ ಎಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತಿದ್ದೇನೆ. ಇವತ್ತು ಗ್ರಾಮೀಣಾಭಿವೃದ್ಧಿ ದಿಸೆಯಲ್ಲಿ ಒಂದು ಪ್ರಸ್ತಾಪ ಆಗಿದೆ. ಅದೇನೆಂದರೆ ಈ ಚುನಾವಣೆ ವಿಚಾರ. ಮಂಡಲ್ ಪಂಚಾಯತ್ ವ್ಯವಸ್ಥೆ ಇದ್ದಾಗ ಆದಂತಹ ಚುನಾವಣೆಗಳು ಏನಿದೆ ಅದನ್ನು ನಾವು ಪ್ರತಿಪಾದಿಸತಕ್ಕದ್ದು ಇದೆ; ಅದಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬುವಂತಹದು, ಹೆಚ್ಚು ಹಣಕಾಸಿನ ವ್ಯವಸ್ಥೆ ಇರುತ್ತದೆ ಎನ್ನುವಂತಹದನ್ನು ನಾವು ಮಾತನಾಡಿಕೊಂಡಿದ್ದು ಇದೆ. ಆ ಭಾಗದಲ್ಲಿ ಯಾರೋ ಒಬ್ಬ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ, 'ಇಲ್ಲ ಹಿಂದೆ ಇದ್ದಂತಹ ಗ್ರಾಮ ಪಂಚಾಯತಿಯ ವ್ಯವಸ್ಥೆಯೇ ಇರಬೇಕು; ಮಂಡಲ್ ಪಂಚಾಯತಿ ವ್ಯವಸ್ಥೆ ಏನಿದೆ ಅದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ' ಎಂದು ಹೇಳುವಂತಹದನ್ನು ನಾನು ವಿರೋಧಿಸುತ್ತೇನೆ. ಕಾರಣ ಈಗಿರತಕ್ಕ ಪಂಚಾಯತಿಗಳು ಬಹಳ ಚಿಕ್ಕವು. ಅವುಗಳ ಆರ್ಥಿಕ ವರಮಾನ ಬಹಳ ಕಡಿಮೆ. ಆ ಪಂಚಾಯತಿಗಳಲ್ಲಿ ಅದನ್ನು ನಿರ್ವಹಿಸುವುದಕ್ಕೆ ಆಗುವುದಿಲ್ಲ, ಗ್ರಾಮಗಳ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಗ್ರಾಮ ಪಂಚಾಯತಿ ವ್ಯವಸ್ಥೆಯನ್ನು ವೈಡರ್ ಸ್ಕೋಪ್ ಮಾಡಬೇಕು. ಹಿಂದೆ ಇದ್ದಂತಹ ಮಂಡಲ್ ಪಂಚಾಯತಿಯ ವ್ಯಾಪ್ತಿಯನ್ನು ನೋಡಿದಾಗ ಅದಕ್ಕೆ ಬಹಳ ಶಕ್ತಿ ಇರುತ್ತದೆ; ಹೆಚ್ಚು ಹಣವನ್ನು ತರಿಸುವಂತಹದ್ದು ಆಗುತ್ತದೆ. ಆ ಬಾರೋಯಿಂಗ್ಸ್ ಜಾಸ್ತಿ ಆದಾಗ ಅಭಿವೃದ್ಧಿ ದಿಸೆಯಲ್ಲಿ ಅದು ಜಾಸ್ತಿ ಆಗುತ್ತದೆ. ಆ ಒಂದು ವ್ಯತ್ಯಾಸವನ್ನು ಮಂಡಲ್ ಪಂಚಾಯತಿ ಮತ್ತು ಈಗಿರತಕ್ಕ ಗ್ರಾಮ ಪಂಚಾಯತಿಗಳಲ್ಲಿ ನಾವು ಕಂಡಿದ್ದೇವೆ. ಈ ದಿಸೆಯಲ್ಲಿ ಮಂಡಲ್ ಪಂಚಾಯತಿ ವ್ಯವಸ್ಥೆಯೇ ಇರಬೇಕೆಂದು ಹೇಳಿ ನಮ್ಮ ಸರ್ಕಾರ ತೆಗೆದುಕೊಂಡಂತಹ ತೀರ್ಮಾನ ಅದು; ಇವತ್ತು ಸುಪ್ರೀಂ ಕೋರ್ಟಿನ ಮುಂದೆ ಇದೆ. ಆ ತೀರ್ಮಾನ ಮಂಡಲ್ ಪಂಚಾಯತಿಯ ವ್ಯವಸ್ಥೆಯೇ ಮುಂದುವರಿಯಬೇಕು ಎನ್ನುವುದು ನಾನು ತಮಗೆ ಕೇಳುವಂತಹ ಒಂದು ವಿಷಯ. ಆ ಗ್ರಾಮೀಣಾಭಿವೃದ್ಧಿ ದಿಸೆಯಲ್ಲಿ ನಮ್ಮ ಸರ್ಕಾರ ತೆಗೆದುಕೊಂಡಂತಹ ಪ್ರಗತಿ ಪರ ಕಾರ್ಯಕ್ರಮ ಮತ್ತು ಹಸಿರು ಕಾರ್ಡ್‌ನ್ನು ಕೊಟ್ಟಂತಹ ವಿಷಯ; ವಿಶೇಷವಾಗಿ 69 ಲಕ್ಷ ಕುಟುಂಬಗಳಿಗೆ ಇದನ್ನು ಕೊಟ್ಟಂತಹ ಕೀರ್ತಿ ನಮ್ಮ ಸರ್ಕಾರದ್ದು. ಅದೇ ದಿಸೆಯಲ್ಲಿ ಸುಮಾರು ನಾಲ್ಕು ಲಕ್ಷ ಮನೆಗಳನ್ನು ಈ ಆಶ್ರಯ ಯೋಜನೆಯಲ್ಲಿ ಬಡವರಿಗೆ ಕಟ್ಟಿಕೊಟ್ಟಂತಹ ಕೀರ್ತಿ ಕೂಡ ನಮ್ಮ

ಸರ್ಕಾರದ್ದು. ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ತೊಡಗಿಸಿದಂತಹ ಕೀರ್ತಿ ನಮ್ಮದು. ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇರಲಿಲ್ಲ. ಅಲ್ಲೆಲ್ಲಾ ವೈದ್ಯರನ್ನು ಕೊಟ್ಟಂತಹ ಕೀರ್ತಿ; ಮತ್ತು ಪ್ರಾಥಮಿಕ ಶಿಕ್ಷಣವನ್ನು ಒಂದು ಕ್ರಾಂತಿಕಾರಕ ದೃಷ್ಟಿಯಲ್ಲಿ ಮಾಡಿರುವ ಕೀರ್ತಿ ಕೂಡ ನಮ್ಮದೇ. ಈ ಸಂದರ್ಭದಲ್ಲಿ ಶ್ರೀಮಾನ್ ಗೋವಿಂದೇಗೌಡರನ್ನು ನಾವು ಶ್ಲಾಘಿಸಿಕೊಳ್ಳಬೇಕಾಗುತ್ತದೆ; ಅವರು ಬಹಳ ಉತ್ತಮ ಕಾರ್ಯವನ್ನು ಮಾಡಿದ್ದಾರೆ. ನಮ್ಮ ಸ್ನೇಹಿತರಾದಂತಹ ಶ್ರೀ ವಿಶ್ವನಾಥ್ ಅವರೂ ಸಹ ಇಲ್ಲಿದ್ದಾರೆ; ಅವರು ನನಗೆ ಹಿಂದಿನಿಂದ ಬಹಳ ಸ್ನೇಹಿತರು; ಅವರು ಇವತ್ತು ಮಂತ್ರಿಗಳಾಗಿದ್ದಾರೆ. ಅವರು ಇನ್ನೂ ಮುಂದಕ್ಕೆ ಹೋಗಬೇಕು; ಆ ಒಂದು ಪ್ರಾಥಮಿಕ ಶಿಕ್ಷಣಕ್ಕೆ ಇನ್ನೂ ಒತ್ತು ಕೊಡುವಂತಹ ಕಾರ್ಯ ಆಗಬೇಕು. ಆ ಕಾರ್ಯವನ್ನು ಅವರು ಮಾಡಬೇಕೆಂದು ತಿಳಿಸುತ್ತೇನೆ.

ಇನ್ನು ಈ ಲೋಕಲ್ ಬಾಡೀಸ್ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ನಾನು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದೆ. ಅದರಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್, ಅರ್ಬನ್ ಡೆವಲಪ್‌ಮೆಂಟ್- ಇವೆಲ್ಲಾ ಇದೆ. ಅದರಲ್ಲಿ 'ತಿಮ್ಮಯ್ಯ ವರದಿ' ಎಂದು ಹೇಳಿ ಅದಕ್ಕೆ 65 ಕೋಟಿ ರೂಪಾಯಿಗಳನ್ನು ಈ ಸಮಸ್ಯೆಗಳಿಗೆ ಕೊಡುವಂತಹದು ಇತ್ತು. ಹಾಗೆಯೇ ಇವತ್ತು ಆಕ್ಟ್ರಾಯ್ ಬಗ್ಗೆ ಈ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಹಿಂದೆ ಇದೇ ಸರ್ಕಾರ ಶ್ರೀಮಾನ್ ದೇವರಾಜ್ ಅರಸ್ ಅವರಿದ್ದ ಕಾಲದಲ್ಲಿ ಆಕ್ಟ್ರಾಯನ್ನು ರದ್ದು ಮಾಡಿರತಕ್ಕದ್ದು ಇದೆ. ಅದನ್ನು ರದ್ದು ಮಾಡಿ, ನಮ್ಮಲ್ಲಿ ಅದರಿಂದ ಬರತಕ್ಕಂಥ ಟ್ಯಾಕ್ಸನ್ನು ನಮಗೆ ಕೊಡುವಂತಹ ಒಂದು ವ್ಯವಸ್ಥೆ ಇದ್ದಂತಹದು ತಮಗೆಲ್ಲಾ ಗೊತ್ತಿದೆ. ನಮ್ಮ ಸರ್ಕಾರ ಇದ್ದಾಗ ಆಕ್ಟ್ರಾಯ್ ಜಾರಿ ಬಗ್ಗೆ ಮರು ಪರಿಶೀಲನೆ ಮಾಡಿತು. ಅಥವಾ ಆ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಏನು ಅರ್ಬನ್ ಲೋಕಲ್ ಬಾಡೀಸ್ 215 ಇದೆ- ಅದಕ್ಕೆ ಪರಿಹಾರ ಧನವಾಗಿ ಹಣವನ್ನು ಕೊಡುವಂತಹದು ಮತ್ತು ಅಲ್ಲಿದ್ದಂತಹ ನೌಕರರಿಗೆ ಹಣವನ್ನು ತುಂಬುವಂತಹದು-ಈ ಸಂಪೂರ್ಣ ಜವಾಬ್ದಾರಿ ಸರ್ಕಾರದ್ದು; ಈ ಕಾರ್ಯವನ್ನು ನಮ್ಮ ಸರ್ಕಾರ ಮಾಡಿಕೊಂಡು ಬಂದಂತಹದು ಇದೆ. ಇವತ್ತು ಅಲ್ಲಿ ವಸೂಲಾತಿ ಮಾಡಿಕೊಂಡು ಅವರಿಗೆ ಹಣವನ್ನು ಕೊಡುವುದನ್ನು ಬಿಟ್ಟು, ಅಲ್ಲೇನೆ ನಾವು ಇವತ್ತು ಕೊಡುವಂತಹ ಗ್ರಾಂಟ್ಸ್ ಇದೆ, ಅದರಲ್ಲಿ ಸಂಪೂರ್ಣ ಆ ನೌಕರರಿಗೆ ಹಣವನ್ನು ಕೊಟ್ಟು ಅಲ್ಲಿನ ಸಂಪನ್ಮೂಲಗಳ ಮೂಲಕ ಬಂದಂತಹ ಹಣದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತಹದು ಇದೆ. ಮತ್ತು ಅಲ್ಟಿಮೇಟ್ ಆಗಿ ಮೊದಲು 65 ಕೋಟಿ, ನಂತರ 65 ಕೋಟಿ, ಕೊನೆಗೆ 65ರ ನಾಲ್ಕುಪಟ್ಟು ಸುಮಾರು 425 ಕೋಟಿ ರೂಪಾಯಿಗಳು ಸಂಪೂರ್ಣವಾಗಿ ಈ ಸಮಸ್ಯೆಗಳಿಗೆ ಅದರ ಪರಿಹಾರಕ್ಕೆ ಸೇರುವಂತಹ ಒಂದು ವ್ಯವಸ್ಥೆ ಮಾಡಿ, ಅದಕ್ಕೆ ಶಕ್ತಿಯನ್ನು ತುಂಬುವಂತಹ ಒಂದು ಕಾರ್ಯವನ್ನು ಇವತ್ತು ಮಾಡಿರುವಂತಹದು ಇದೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಇವತ್ತೇನು ಪಟ್ಟಣ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮೆನ್‌ಷನ್ ಇಲ್ಲ. ಬೆಂಗಳೂರು ನಗರವನ್ನು ಮಾತ್ರ ಅದರಲ್ಲಿ ಮೆನ್‌ಷನ್ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ 50 ಲಕ್ಷ ಜನಸಂಖ್ಯೆ ಇದೆ. ನಾವು ಇವತ್ತು ಪಡೆದಿರತಕ್ಕಂಥ ಹುಡ್ಕೋ ನೆರವು ಇರಬಹುದು; ಇವತ್ತು ನಾವು ಕಟ್ಟುತ್ತಿರತಕ್ಕಂಥ ಫ್ಲೈ ಓವರ್ ರಸ್ತೆ ಏನು ಇದೆ. ಔಟರ್

ಬೈಪಾಸ್ ರಸ್ತೆ ಇರಬಹುದು, ಇನ್ನೂ ಒಂದು ಬೈಪಾಸ್ ರಸ್ತೆ ಅಂದರೆ ಡಾಬಸ್ ಪೇಟೆಯಿಂದ ಹಿಡಿದು ಅತ್ತಿಬೆಲೆ ಮದ್ರಾಸ್‌ಗೆ ಸೇರುವಂತಹ ರಸ್ತೆಗೆ 36 ಕೋಟಿ ರೂಪಾಯಿಗಳನ್ನು ಕೊಟ್ಟಂತಹ ಔಟರ್ ಬೈಪಾಸ್ ರಸ್ತೆ ಇರಬಹುದು; ಇವತ್ತು ಈ ಎಲ್ಲಾ ಕಾರ್ಯಗಳು ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಮಯದಲ್ಲಿ ಆದಂತಹದು ಇದೆ. ಇದನ್ನು ಇನ್ನೂ ತೀವ್ರಗತಿಯಲ್ಲಿ ಮಾಡಿ ಮುಗಿಸಬೇಕಾದಂತಹ ಕಾರ್ಯ, ಜವಾಬ್ದಾರಿ ಈ ಸರ್ಕಾರದ ಮೇಲೆ ಇದೆ. ಅದರ ಬಗ್ಗೆ ಅವರ ಭಾಷಣದಲ್ಲಿ ಒಂದೂ ಪ್ರಸ್ತಾಪ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ನೀವು ಅವಸರದಲ್ಲಿ ಅದನ್ನು ಓದಿ ಬಿಟ್ಟಿದ್ದೀರೋ ಏನೋ। ಮಾನ್ಯ ಬಚ್ಚೇಗೌಡರು ಕೋಪದಲ್ಲಿ ಅವಸರದಲ್ಲಿ ಓದಿದ ಹಾಗೆ ಕಾಣುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ನನಗೆ ಕೋಪ ಇಲ್ಲ ಸ್ವಾಮಿ; ನನ್ನ ಮುಖದಲ್ಲಿ ಹಾಗೆ ಕಾಣಬಹುದು. ನಾನು ಕೋಪದ ಮನುಷ್ಯ ಅಲ್ಲ ಸ್ವಾಮಿ.

ಶ್ರೀ ಕೆ.ಹೆಚ್. ರಂಗನಾಥ್: ಇರಬಹುದು; ಅವರ ಮುಖವೇ ಕೋಪದ ತರಹ ಇರಬಹುದು. ಈ ಡೆವಲಪ್‌ಮೆಂಟ್ ಎಂದು ಏನು ಇದು ಕಂಟಿನ್ಯೂಯಸ್ ಪ್ರೋಸೆಸ್. ಅದರ ಜೊತೆಗೆ ಈ ಹ್ಯೂಮನ್‌ರಿಸೋರ್ಸ್ ಡೆವಲಪ್‌ಮೆಂಟ್ ಕೂಡ ಕಂಟಿನ್ಯೂಯಸ್ ಆಗಿ ಇದೆ. ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತು ಅದರಲ್ಲಿದೆ. ತಾವು ಅದನ್ನು ಗಮನಿಸಲಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಮ್ಮ ಈ ಪೌರ ಸಮಸ್ಯೆಗಳ ವಿಚಾರವಾಗಿ ಹೇಳಬೇಕಾದರೆ, ವಿಶೇಷವಾಗಿ ಅರ್ಬನ್ ಲೋಕಲ್ ಬಾಡೀಸ್ ಎನು ಇದೆ ಮತ್ತು ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಏನಿದೆ ಇವತ್ತು ಇಡೀ ರಾಜ್ಯದಲ್ಲಿರತಕ್ಕ ಎಲ್ಲ ಪ್ರದೇಶಗಳಿಗೆ ನೀರನ್ನು ಕೊಡುವಂತಹ ಕಾರ್ಯ. ಏನು ಮಾಡುತ್ತಿವೆ. ಹುಡ್ಕೋ ನೆರವು ಹಾಗೂ ಎಡಿಬಿ ಪ್ರಾಜೆಕ್ಟ್‌ನಿಂದ ಹಣಕಾಸಿನ ನೆರವು. ಮತ್ತು ಈಗ ವಿಶ್ವಬ್ಯಾಂಕಿನ ಮೂಲಕ ತೆಗೆದುಕೊಳ್ಳುವಂತಹ ಸುಮಾರು 13 ಕೋಟಿ ರೂಪಾಯಿಗಳ ಯೋಜನೆ ಬಗ್ಗೆ. ನಿನ್ನೆ ತಾನೇ ನಾನು ಪತ್ರಿಕೆಯಲ್ಲಿ ನೋಡಿದೆ. ತಮ್ಮ ಕಡೆಗೆ ಆಗಬೇಕಾದಂತಹದು ಅಂದರೆ ಇವತ್ತು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗೆ, ಈ ಎರಡೂ ಜಿಲ್ಲೆಗಳಲ್ಲಿ ಆಗುವಂತಹ ಎಡಿಬಿ ಎರಡನೇ ಹಂತದ ಯೋಜನೆಗೆ ಸುಮಾರು 600 ಕೋಟಿ ರೂಪಾಯಿಗಳಿಗೆ ಮಂಜೂರಾತಿ ಮಾಡಿರತಕ್ಕದ್ದು ಇದೆ. ಅದಕ್ಕೆ ಮನಿಲಾದಲ್ಲಿ ಮಂಜೂರಾತಿ ದೊರಕಿರತಕ್ಕದ್ದನ್ನು ನಾನು ನಿನ್ನೆ ಪತ್ರಿಕೆಯಲ್ಲಿ ಓದಿದೆ. ಆ ಯೋಜನೆ ಬಹಳ ಮೆಚ್ಚುವಂತಹದು ಅದನ್ನೂ ನಾವು ಇನಿಷಿಯೇಟ್ ಮಾಡಿದ್ದು ಇದೆ. ನಾವು ಇನಿಷಿಯೇಟ್ ಮಾಡಿದ್ದು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಗೊತ್ತಿರಬಹುದು. ಇವತ್ತು ಅದು ಅಪ್ರೂವ್ ಆಗಿದೆ. ಅದರ ವ್ಯಾಪ್ತಿ ತಮ್ಮ ಕ್ಷೇತ್ರ, ಉಡುಪಿಗೂ ಬರುತ್ತದೆ. North & South Canara districts` 11 taluks with a project of drinking water and in addition Rs.300 crore, ಅದಲ್ಲದೆ ಬೇರೆ ಅಭಿವೃದ್ಧಿ ದಿಸೆಯಲ್ಲಿ 300 ಕೋಟಿ ರೂಪಾಯಿಗಳು ಎಲ್ಲಾ ಒಟ್ಟು 600 ಕೋಟಿ ರೂಪಾಯಿಗಳ ಪ್ರಸ್ತಾವನೆಗೆ ಮಂಜೂರಾತಿ ಆಗಿದೆ. ಅದನ್ನು ನಾವು ಇನಿಷಿಯೇಟ್ ಮಾಡಿದ್ದು; ಅದರ ಕೀರ್ತಿ ನಮಗೆ ಬರಬೇಕು. ಅದರ ಬಗ್ಗೆ ನಾನು ಶ್ರಮ

ಪಟ್ಟಂತಹದು ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದು ತಮಗೂ ಗೊತ್ತಿದೆ. ಸನ್ಮಾನ್ಯ ಛೇರ್‌ಮನ್‌ರವರು ಸಾಕಷ್ಟು ಒತ್ತಾಯ ತಂದು ಈ ಕಾರ್ಯಗಳೆಲ್ಲಾ ಆಗಬೇಕು ಎಂದು ಹೇಳಿರುವಂತಹದು ಇದೆ. ಅಂತಹ ಕಾರ್ಯ ಇವತ್ತು ಆಗಿರತಕ್ಕದ್ದು. ಹೀಗೆ ಇವತ್ತು ಐಡಿ-ಎಸ್‌ಎಂಕೆ ಬಗ್ಗೆ ಪ್ರಸ್ತಾಪವನ್ನು ಮಾನ್ಯ ಚೌಡರೆಡ್ಡಿಯವರು ಪ್ರಸ್ತಾಪ ಮಾಡಿದರು. ನಮ್ಮ ಕಾಲದಲ್ಲಿ ಐಡಿ ಎಸ್‌ಎಂಕೆ ಬಗ್ಗೆ ಇಷ್ಟೆಲ್ಲಾ ಆಯಿತು. ಅದು ಕಂಟಿನ್ಯೂಯೆಸ್ ಪ್ರೋಸೆಸ್. ಸಣ್ಣ ಮತ್ತು ಮಧ್ಯಮ ಟೌನ್ಸ್ ಅನ್ನು ಅಭಿವೃದ್ಧಿ ಮಾಡುವಂತಹದು. ಅದರಲ್ಲಿ ರಿಸೋರ್ಸ್‌ಸ್ ಮೊಬಿಲೈಸೇಷನ್ ಮಾಡಿಕೊಂಡು ಆರ್ಥಿಕ ಶಕ್ತಿ ಬರುವಂತಹ ಒಂದು ಕಾರ್ಯ ಆಗಬೇಕು, ಆ ಸಮಸ್ಯೆಗಳಿಗೆ ಆರ್ಥಿಕ ಶಕ್ತಿ ಬರಬೇಕು ಎನ್ನುವಂತಹ ದಿಸೆಯಲ್ಲಿ ಮಾಡಿರತಕ್ಕಂಥ ಬಹಳ ಉತ್ತಮವಾದ ಯೋಜನೆ; ನಾವು ಅದನ್ನೇ ಮುಂದುವರೆಸಿಕೊಂಡು ಬಂದೆವು.

ಶ್ರೀ ಚೌಡರೆಡ್ಡಿ : ಈ ಅರ್ಬನ್ ಡೆವಲಪ್‌ಮೆಂಟ್ ವಿಚಾರ ನೋಡಿದಾಗ ಹಣ ಸರಿಯಾದ ರೀತಿ ಯುಟಿಲೈಸೇಷನ್ ಆಗುತ್ತಿಲ್ಲ. ಪ್ರತಿ ಜಿಲ್ಲೆಗೆ ಡೆಪ್ಯುಟಿ ಕಮೀಷನರ್ ಅವರು ಇನ್‌ಛಾರ್ಜ್ ಇರುತ್ತಾರೆ, ಅದನ್ನು ಸರಿಯಾಗಿ ಯುಟಿಲೈಸೇಷನ್ ಮಾಡಿಸಿಕೊಳ್ಳಿ. ಅದರಿಂದ ಅಭಿವೃದ್ಧಿ ಆಗಲಿ, ಅದು ಫಿನಿಷ್ ಆಗಲಿ ಎಂದು ನಾನು ಕೇಳಿದ್ದು ಅಷ್ಟೇ.

ಛೇರ್‌ಮನ್: ಮಾನ್ಯ ಬಚ್ಚೇಗೌಡರೇ ನೀವು ಇನ್ನೂ ಎಷ್ಟು ನಿಮಿಷ ಮಾತನಾಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ: ತಾವು ಎಷ್ಟು ಹೇಳಿದರೆ ಅಷ್ಟಕ್ಕೇ ನಾನು ಕನ್‌ಫೈನ್ ಆಗುತ್ತೇನೆ.

ಛೇರ್‌ಮನ್: ಆರೂವರೆಗೆ ನಾವು ಈ ಸಭೆಯ ಕಲಾಪಗಳನ್ನು ಮುಕ್ತಾಯ ಮಾಡಬೇಕಾಗಿದೆ. ಅದಕ್ಕೆ ಮುನ್ನ ಒಬ್ಬ ಸದಸ್ಯರು ಮಾತನಾಡಬೇಕಾಗಿದೆ. ಇನ್ನು ಹತ್ತು ನಿಮಿಷದಲ್ಲಿ ಮುಗಿಸಿ.

6.10 ಪಿ.ಎಂ.

ಶ್ರೀ ಬಿ.ಎನ್. ಬಚ್ಚೇಗೌಡ: ಇವತ್ತು ಬಹಳ ಮುಖ್ಯವಾಗಿ ಯುವಕರಿಗೆ ಉದ್ಯೋಗವನ್ನು ಕೊಡುವ ಕೆಲಸ ಆಗಬೇಕಾಗಿದೆ. ಇದರ ಬಗ್ಗೆ ಯಾವ ಪ್ರಸ್ತಾವನೆಯೂ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಯಾವುದೇ ವಿಚಾರ ಇಲ್ಲ. ಯುವಕರಿಂದ ನಾವು ಹೆಚ್ಚು ಮತವನ್ನು ಪಡೆದಿದ್ದೇವೆ. ಭವಿಷ್ಯದಲ್ಲಿ ಯುವಕರಿಗೆ ಉದ್ಯೋಗದ ಭರವಸೆ ಏನು, ನಾವು ಎಷ್ಟು ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆ ಎಂಬ ಬಗ್ಗೆ ಅದರಲ್ಲಿ ಯಾವುದೇ ಚಿತ್ರಣ ಇಲ್ಲ. ಇವತ್ತು ಕೇಂದ್ರ ಸರ್ಕಾರದವರು ಒಂದು ಕೋಟಿ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಅದು ಬಹಳ ಮೆಚ್ಚತಕ್ಕಂತಹ ವಿಚಾರವಾಗಿದೆ. ಇದರಿಂದ ನನಗೆ ಬಹಳ ಸಂತೋಷವಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯ ಸೌಲಭ್ಯವನ್ನು ಹತ್ತು ವರ್ಷಗಳ ಕಾಲ ಅಂದರೆ 2010ನೇ ಇಸವಿಯವರೆಗೆ ಮುಂದುವರೆಸಿಕೊಂಡು ಹೋಗುವ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ಅದರ ಕೀರ್ತಿ ಆ ಸರ್ಕಾರಕ್ಕೆ ಸಲ್ಲುತ್ತದೆ. ಸರ್ಕಾರಕ್ಕೆ ಬಡವರ ಬಗ್ಗೆ ದಲಿತರ ಬಗ್ಗೆ ಕಾಳಜಿ ಇದೆ. ಅವರಿಗಾಗಿ ಇರುವ ಮೀಸಲಾತಿಯನ್ನು 2010ನೇ ಇಸವಿಯವರೆಗೆ ಮುಂದುವರೆಸಿಕೊಂಡು ಹೋಗುವುದು ಕೇಂದ್ರ ಸರ್ಕಾರದ ಧೋರಣೆಯಾಗಿದೆ. ಅದರ ಜೊತೆಗೆ ಒಂದು ಕೋಟಿ

ಉದ್ಯೋಗದ ಸೃಷ್ಟಿ ಇದೆ. ಆದರೆ ನಮ್ಮಲ್ಲಿ ಯುವಕರಿಗೆ ಉದ್ಯೋಗದ ಸೃಷ್ಟಿ ಏನು? ಇಲ್ಲ. ಈ ಸರ್ಕಾರಕ್ಕೆ ಯುವಕರಿಗೆ ಉದ್ಯೋಗದ ದೃಷ್ಟಿಯಿಂದ ಉತ್ತಮವಾಗಿ ಅವರನ್ನು ತೊಡಗಿಸಿಕೊಳ್ಳುವ ದೃಷ್ಟಿಯಿಂದ ಯಾವುದಾದರೂ ಉದ್ಯೋಗವನ್ನು ಕಲ್ಪಿಸುವಂಥ, ಅದು ಸ್ವತಂತ್ರ್ಯ ಉದ್ಯೋಗ ಇರಬಹುದು, ಸರ್ಕಾರಿ ಉದ್ಯೋಗ ಇರಬಹುದು, ಯಾವ ರೀತಿಯಲ್ಲಿ ಉತ್ತಮ ಮಾರ್ಗದಲ್ಲಿ ಹೋಗುವಂಥ ವ್ಯವಸ್ಥೆಯನ್ನು ಮಾಡುವ ಕಾರ್ಯದ ಬಗ್ಗೆ ಇದರಲ್ಲಿ ಪ್ರಸ್ತಾಪವಿಲ್ಲ. ಇಂದು ಉದ್ಯೋಗದ ಭರವಸೆ ಯುವಕರಿಗೆ ಬಹಳ ಬೇಕಾಗಿರುವಂಥಾದ್ದು. ಯುವಕರು ಉತ್ತಮ ಮಾರ್ಗದಲ್ಲಿ ಹೋಗಬೇಕಾದಂಥ ವ್ಯವಸ್ಥೆ ಆಗಬೇಕಾಗುತ್ತದೆ. ಆ ಕೆಲಸ ಶೀಘ್ರವಾಗಿ ಆಗಬೇಕೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಸುಮಾರು ನಲವತ್ತು ಸಾವಿರ ಸಣ್ಣ ಕೆರೆಗಳು ಇದೆ. ಇವತ್ತು ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೃಷ್ಣ ಕಾವೇರಿ ಬೇಸಿನ್‌ನಲ್ಲಿ ಖರ್ಚು ಮಾಡುತ್ತಿದ್ದೇವೆ. ಆ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ. ಇದು ಮಾನ್ಯ ಖರ್ಗೆಯವರಿಗೂ ಗೊತ್ತು. 1989ರಿಂದ 1994ರಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದರೆ ನಾವು 1994 ರಿಂದ 1999ರವರೆಗೆ ಇದಕ್ಕಾಗಿ ಖರ್ಚು ಮಾಡಿರತಕ್ಕ ಹಣ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳು. ಅದು ಕೃಷ್ಣ ಜಲಭಾಗ್ಯ ನಿಗಮ ಇರಬಹುದು, ಬೇರೆ ಬೇರೆ ರೀತಿಯಲ್ಲಿ ಇರಬಹುದು. ಇವತ್ತು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎರಡು ಸಾವಿರ ಇಸವಿಯಲ್ಲಿ ಆ ಕೊಳ್ಳದ ಸಂಪೂರ್ಣ ನೀರನ್ನು ಉಪಯೋಗ ಮಾಡಿಕೊಳ್ಳುವ ಕಾರ್ಯವನ್ನು ಮಾಡಿದ್ದು ಈ ಹಿಂದೆ ಇದ್ದ ನಮ್ಮ ಸರ್ಕಾರ. ಆ ಕೀರ್ತಿ ನಮಗೆ ಸಲ್ಲುತ್ತದೆ. ನಮ್ಮ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಒಟ್ಟಾರೆ ಖರ್ಚು ಮಾಡಿದ್ದು ಹತ್ತು ಸಾವಿರ ಕೋಟಿ ರೂಪಾಯಿಗಳು. ಇದೇ ರೀತಿ ಸಣ್ಣ ನೀರಾವರಿಗೆ ನಾವು ಇವತ್ತು ಹೆಚ್ಚು ಹಣವನ್ನು ತೊಡಗಿಸಬೇಕು. ಮಾನ್ಯ ಮಂತ್ರಿಗಳಾದ ಕುಮಾರ್ ಬಂಗಾರಪ್ಪನವರು ಇಲ್ಲಿ ಇಲ್ಲ. ಇದಕ್ಕಾಗಿ ಬಹಳ ಕಡಿಮೆ ಹಣ ಇದೆ. ಇದರಲ್ಲಿ ಹೆಚ್ಚು ಹಣವನ್ನು ತೊಡಗಿಸಿ ಕೆರೆಗಳ ಹೂಳು ತೆಗೆಯುವ ಕೆಲಸ ಆಗಬೇಕು. ವಿಶೇಷವಾಗಿ ಕೋಲಾರ, ಬೆಂಗಳೂರು, ತುಮಕೂರು ಎಲ್ಲಿ ಬಯಲುಸೀಮೆ ಇದೆ ಅಲ್ಲಿ ಕೆರೆಗಳಲ್ಲಿ ಸಂಪೂರ್ಣವಾಗಿ ಹೂಳು ತುಂಬಿಕೊಂಡಿದೆ. ಅದನ್ನು ತೆಗೆದು ನೀರು ಮತ್ತೆ ಶೇಖರಿಸಿ ಇಡುವ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕೆ ಹೆಚ್ಚು ಹಣವನ್ನು ತೊಡಗಿಸುವುದು ಬಹಳ ಮುಖ್ಯವಾಗಿ ಆಗಬೇಕಾಗಿದೆ. ಇದನ್ನು ಮಾಡಿಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್: ಇವತ್ತು ಹಳ್ಳ ಕೊಳ್ಳಗಳನ್ನೆಲ್ಲ ಒತ್ತುವರಿ ಮಾಡಿದ್ದಾರೆ. ಅದನ್ನು ಅಕ್ರಮ ಸಕ್ರಮ ಮಾಡಬೇಕೆಂದು ಬಂದಿದ್ದಾರಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಅದನ್ನು ತೆರವು ಮಾಡಿಸಬೇಕು. ಅಕ್ರಮ ಸಕ್ರಮ ಈ ಕೆರೆ ಅಂಗಳದ ವಿಚಾರದಲ್ಲಿ ಬರುವುದಿಲ್ಲ. ಸರ್ಕಾರದ ಜಮೀನು ಮಾತ್ರ ಅದರಲ್ಲಿ ಬರುತ್ತದೆ.

ಶ್ರೀ ಕೆ.ಹೆಚ್ ರಂಗನಾಥ್: ತುಮಕೂರಿನಿಂದ ನಮ್ಮ ಕಡೆಗೆ ಬರುವಾಗ ದೊಡ್ಡ ಕೆರೆ ಬರುತ್ತದೆ. ಆ ದೊಡ್ಡ ಕೆರೆಯ ಅಂಗಳದಲ್ಲೇ ಅಡಿಕೆ, ತೆಂಗಿನ ತೋಟ ಬಂದಿದೆ. ನಾವು ನೀವು

ಅದನ್ನು ನೋಡಿಕೊಂಡು ಓಡಾಡುತ್ತಲೇ ಇದ್ದೇವೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅಕ್ರಮ ಸಕ್ರಮದಲ್ಲಿ ಹಳ್ಳಗಳೆಲ್ಲ ಖಾಯಂ ಆಗಿಬಿಟ್ಟರೆ ಅದನ್ನು ತೆರವು ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಸೋಮಶೇಖರ್: ಅಕ್ರಮ ಸಕ್ರಮಗಳಲ್ಲಿ ಯಾರು ಅಡಿಕೆ ತೋಟ ಮಾಡಿದ್ದಾರೆ ಅದನ್ನು ಸಕ್ರಮ ಮಾಡತಕ್ಕದ್ದು ಕಾನೂನಿನಲ್ಲಿ ಇಲ್ಲ.

ಶ್ರೀ ಕೆ.ಹೆಚ್ ರಂಗನಾಥ್: ಆ ಹಳ್ಳ ಖಾಲಿಯಾಗಬೇಕಲ್ಲ; ಹಾಗಾದರೆ ಮಾತ್ರ ತಮ್ಮ ಕೆರೆಗೆ ನೀರು ತುಂಬುವುದು ಅಲ್ಲವೆ?

ಶ್ರೀ ಬಿ. ಸೋಮಶೇಖರ್: ಅವರು ಪಟ್ಟಭಧ್ರ ಹಿತಾಸಕ್ತಿಗಳಾಗಿದ್ದರೆ ಅವರನ್ನು ಬಿಡಿಸಬೇಕು; ಸರ್ವೆ ಮಾಡಿಸಬೇಕು. ಅದಕ್ಕೆ ದೊಡ್ಡ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಕೆ.ಹೆಚ್ ರಂಗನಾಥ್: ಅವರು ಪಟ್ಟಭದ್ರ ಹಿತಾಸಕ್ತಿಗಳಾಡಲೂ ಅಥವಾ, ಸಣ್ಣ ಭದ್ರಹಿತಾಸಕ್ತಿಗಳಾದರೂ ಆ ಕೆಲಸ ಮಾಡಬೇಕಾಗುತ್ತದೆ. ಹಳ್ಳದ ಪಾತ್ರ, ನದಿಯ ಪಾತ್ರ, ಕೆರೆ ಅಂಗಳಗಳನ್ನು ಅವರಿಗೆ ಕೊಡುವಂತೆಯೇ ಇಲ್ಲವಲ್ಲ. Unless it is an abandoned tank, it cannot be given for cultivation.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈಗ ಯಾವ ರೀತಿಯಾಗಿದೆಯೆಂದರೆ ಕೆರೆಯ ಅಂಗಳದಲ್ಲಿ ಒತ್ತುವರಿ ಮಾಡಿದ್ದೀರೆಂದು ತಾವೇನು ಹೇಳುತ್ತಿದ್ದೀರಿ ಅದು ಸರಿ. ತಮ್ಮ ಸರ್ಕಾರದಲ್ಲಾದರೂ ಇದರ ಬಗ್ಗೆ ಭದ್ರವಾದ ಕ್ರಮ ತೆಗೆದುಕೊಂಡು ಅಂಥದನ್ನು ಖುಲ್ಲಾ ಮಾಡಿಸಲು ಏರ್ಪಾಡು ಮಾಡುತ್ತೀರಾ? ಅಂತರ್ಜಲವು ನಾಶವಾಗಲು ಇದೇ ಕಾರಣವಾಗಿದೆ. ನಾವು ನೀವು ನಿಷ್ಠೂರ ಕಟ್ಟಿಕೊಳ್ಳಬೇಕಷ್ಟೆ. ಅಲ್ಲಿನ ಅಧಿಕಾರಿಗಳು ಬೆಚ್ಚಗಿರುತ್ತಾರೆ. ಅಲ್ಲಿರುವ ತಹಶೀಲ್ದಾರರಾಗಲಿ, ಜಿಲ್ಲಾಧಿಕಾರಿಗಳಾಗಲಿ ನಾವು ಹೇಳಿದರೂ ಹೋಗುವುದಿಲ್ಲ, ಅಲ್ಲಿರುವವರಿಗೆ ನಿಮ್ಮ ಶಾಸಕ, ಮಂತ್ರಿಗಳು ಈ ರೀತಿ ಹೇಳುತ್ತಾರೆಂದು ಹೇಳಿಕೊಡುತ್ತಾರೆ. ಇದು ಪರಿಸ್ಥಿತಿ.

ಶ್ರೀ ಕೆ.ಹೆಚ್ ರಂಗನಾಥ್: ಇಲ್ಲಿ ತಾವುಗಳೆಲ್ಲರೂ ಒಪ್ಪಿಗೆ ಕೊಟ್ಟರೆ ಆ ಕೆಲಸ ಮಾಡಬಹುದು.

ಶ್ರೀ ಆರಗ ಜ್ಞಾನೇಂದ್ರ: ಇಲ್ಲಿ ಒಪ್ಪಿಗೆಯ ಪ್ರಶ್ನೆಯೇ ಇಲ್ಲ, ಇದರ ಬಗ್ಗೆ ಕಾನೂನೇ ಇದೆ.

ಶ್ರೀ ಮಂಜುನಾಥ್: ಮಾನ್ಯ ಅಧ್ಯಕ್ಷರೇ, ಇದಕ್ಕೆ ಸದನದ ಒಪ್ಪಿಗೆ ಬೇಕಾಗಿಲ್ಲ, ಯಾವುದೇ ಕಾರಣದಿಂದ ಕೆರೆಯನ್ನು ಒತ್ತುವರಿ ಮಾಡಬಾರದು ಎಂದು ಕಾನೂನೆ ಇದೆ. ಅದನ್ನು ಜಾರಿಗೆ ತಂದರೆ ಬಹಳ ಒಳ್ಳೆಯದು.

ಶ್ರೀ ಕೆ.ಹೆಚ್. ರಂಗನಾಥ್: ಕೊಲೆ ಮಾಡಬಾರದೆಂದು ಇಂಡಿಯನ್ ಪೀನಲ್ ಕೋಡ್‌ನಲ್ಲಿ ಇದೆ. ಆದರೆ ದಿನಾ ಮಾಡುತ್ತಿರುತ್ತಾರಲ್ಲ. ಒತ್ತುವರಿ ಮಾಡಬಾರದೆಂದು ಇದೆ, ಆದರೆ ಮಾಡಿಯಾಗಿದೆಯಲ್ಲ.

ಶ್ರೀ ಮಂಜುನಾಥ್: ತಾವು ಅದನ್ನು ಖುಲ್ಲಾ ಮಾಡಿಸುತ್ತೇವೆಂದರೆ ಸದನದ ಸದಸ್ಯರಾದ ನಾವುಗಳೆಲ್ಲರೂ ಒಪ್ಪಿಗೆಯನ್ನು ಕೊಡುತ್ತೇವೆಂದು ಹೇಳಬಹುದು.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಸದಸ್ಯರಾದ ಮಂಜುನಾಥ್‌ರವರಿಗೆ ಅನುಭವ ಸಾಲದು. ಇಲ್ಲಿ ಮಾತನಾಡಿದಷ್ಟು ಸುಲಭವಲ್ಲ, ತಾವು ಸದಸ್ಯರಾಗಿ ಅಲ್ಲಿಗೆ ಹೋಗುತ್ತೀರಲ್ಲ ಆಗ ತಮಗೆ ಗೊತ್ತಾಗುತ್ತದೆ.

ಶ್ರೀ ಮಂಜುನಾಥ್: ಹಾಗಾದರೆ ತಮ್ಮ ಹತ್ತಿರ ಯಾವ ಕೆರೆಯನ್ನು ಯಾರಿಗೆ ಬೇಕಾದರೂ ಗ್ರ್ಯಾಂಟ್ ಮಾಡಿಸಬಹುದೆನ್ನಿ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅವರ ರಾಜಕೀಯ ಜೀವನದಲ್ಲಿ ಬಹಳಷ್ಟು ಶ್ರಮಪಟ್ಟರು. ಬಿ.ಎಸ್.ಪಿ., ಸೋಶಿಯಲಿಸ್ಟ್, ಸಮಾಜವಾದಿ ತತ್ವಗಳು, ಕಾಂಗ್ರೆಸ್ ತತ್ವಗಳ ಹಿನ್ನೆಲೆಯಲ್ಲಿ ಬಹಳಷ್ಟು ಶ್ರಮಪಟ್ಟು ಇಲ್ಲಿಗೆ ಬಂದು ಮುಖ್ಯಮಂತ್ರಿಗಳಾದರು ಅದಕ್ಕೆ ನನಗೆ ಸಂತೋಷ. ಅವರು ಉತ್ತಮ ವಾಗ್ಮಿಗಳು, ಉತ್ತಮ ಲೋಕಸಭಾ ಸದಸ್ಯರು. ಅವರ ಅದೃಷ್ಟ ಚೆನ್ನಾಗಿತ್ತು. ನಮ್ಮ ಜಗಳದಿಂದ ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಸರ್ಕಾರವನ್ನು ಇನ್ನು ಐದು ವರ್ಷಗಳ ಕಾಲ ನಡೆಸಿಕೊಂಡು ಹೋಗತಕ್ಕ ದೊಡ್ಡ ಜವಾಬ್ದಾರಿ ಅವರ ಮೇಲಿದೆ. ಈ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ದಿಸೆಯಲ್ಲಿ ನಾವು ಕೆಲಸ ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಅವರು ಪ್ರಮಾಣವಚನ ಸ್ವೀಕಾರದ ಮೊದಲೇ ಎಡವಿದರು. ಅಂದರೆ, ಅವರ ಮಂತ್ರಿಮಂಡಲದ ಗಾತ್ರದಲ್ಲಿ ಎಡವಿದರು. ಇದರ ಬಗ್ಗೆ ಆಗಲೇ ನಾನು ಪ್ರಸ್ತಾಪ ಮಾಡಿದ್ದೆ, ಆದರೆ ಆಗ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ಇನ್ನೂ ಸಚಿವ ಸಂಪುಟದ ಗಾತ್ರವನ್ನು ಜಾಸ್ತಿ ಮಾಡುತ್ತಾರೆ ಎಂಬ ವದಂತಿಯನ್ನು ಪತ್ರಿಕೆಗಳಲ್ಲಿ ದಿನನಿತ್ಯ ನೋಡುತ್ತಿದ್ದೇವೆ. ಆದರೆ ಅದು ಮಾನ್ಯ ಮುಖ್ಯಮಂತ್ರಿಗಳ ತೀರ್ಮಾನಕ್ಕೆ ಬಿಟ್ಟಿರತಕ್ಕದ್ದು. ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯ ಕೆಲಸಗಳಾಗುವುದಿದ್ದರೆ ಅವರಿಗೆ ನಾವುಗಳು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ಅವರು ತಪ್ಪು ದಾರಿ ಹಿಡಿದಾಗ ಅದನ್ನು ಟೀಕೆ ಮಾಡಿ ಖಂಡಿಸಿ ಸರಿಯಾದ ದಾರಿಯಲ್ಲಿ ಹೋಗುವಂಥ ಗುರುತರವಾದ ಆ ಕಾರ್ಯವನ್ನು ವಿರೋಧ ಪಕ್ಷದಲ್ಲಿರುವ ಎಲ್ಲಾ ಸದಸ್ಯರುಗಳು ಮಾಡುತ್ತೇವೆ. ಇವತ್ತು ಮಾನ್ಯ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಏನು ಭಾಷಣ ಮಾಡಿದ್ದಾರೆ ಅದು ನಮ್ಮ ನಿರೀಕ್ಷೆಗೆ ತಕ್ಕಂತೆ ಬರಲಿಲ್ಲ. ನಾವೇನು ನಿರೀಕ್ಷೆ ಮಾಡಿದ್ದೇವೋ, ನಾವೇನು ಮಾನ್ಯ ಎಸ್.ಎಂ.ಕೃಷ್ಣರವರ ಬಗ್ಗೆ ತಿಳಿದುಕೊಂಡಿದ್ದೆವೋ ಅವರ ಪ್ರತಿಬಿಂಬ ಇಲ್ಲಿದೆ, ಅವರ ದೂರದೃಷ್ಟಿ ಎಲ್ಲಾ ಇದರಲ್ಲಿ ಕಂಡುಬರುತ್ತದೆ ಎಂದುಕೊಂಡಿದ್ದೆವು, ಆದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನೂ ಇಲ್ಲ, ಇದು ಹಳೆಯ ಕತೆಯೇ ಆಗಿದೆ. ಹಳೆ ರಾಗ ಹಳೆ ಕತೆಯಾಗಿದೆ. ಇದರಲ್ಲಿ ಹೊಸ ರಾಗ, ಮಾನ್ಯ ಕೃಷ್ಣರವರ ರಾಗ ಬೇಕು. ಈ ರಾಜ್ಯದ ಭವಿಷ್ಯದಲ್ಲಿ ನಿಮ್ಮ ಐದು ವರ್ಷಗಳ ಅವಧಿಯಲ್ಲಿ ಹೊಸ ದೃಷ್ಟಿಕೋನ, ಏನು ಎಂಬುದನ್ನು ಪ್ರತಿಬಿಂಬಿಸಬೇಕು. ನಮ್ಮ ಸರ್ಕಾರ ಮಾಡಿದಂಥ ಸಾಧನೆಗಳೇನಿದೆ ಆರೋಗ್ಯ, ಶಿಕ್ಷಣ, ಹಸಿರು ಕಾರ್ಡು, ಬಡವರಿಗೆ ಅಕ್ಕಿ, ಅನ್ನ, ವೈದ್ಯಕೀಯ ಕ್ಷೇತ್ರ ಇವೆಲ್ಲ ನಮ್ಮ ಆದ್ಯತಾ ವಲಯಗಳಾಗಿವೆ.

ಎತ್ತರಕ್ಕೆ ನಮ್ಮ ರಾಜ್ಯವನ್ನು ತೆಗೆದುಕೊಂಡು ಹೋಗುವ ದಿಸೆಯಲ್ಲಿ ಕೆಲಸಗಳಾಗಲಿ ಎಂದು ತಿಳಿಸಿ ನನಗೆ ಮಾತನಾಡಲು ಬಹಳಷ್ಟು ಸಮಯವನ್ನು ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ಈ ನಿರ್ಣಯವನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವೈಸ್‌ಛೇರ್ಮನ್: ಈಗ ಸದನವನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆಯವರೆಗೆ ಮುಂದೂಡಲಾಗಿದೆ.

ಸದನವು ಸಂಜೆ 6 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 29 ನೇ ಅಕ್ಟೋಬರ್ ಮಾಹೆ, 1999 ರ ಶುಕ್ರವಾರದಂದು, ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು:

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನಸಭೆ

ಶುಕ್ರವಾರ 29ನೇ ಅಕ್ಟೋಬರ್ 1999ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.